ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೩೧, ಸಂಚಿಕೆ : ೦೧

ಜನವರಿ-ಜೂನ್ ೨೦೧೭

ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಕಲಾಭವನ (ರಿ.)

೩ನೇ ಮುಖ್ಯ ರಸ್ತೆ, ನರಸಿಂಹರಾಜ ಕಾಲೋನಿ

ಬೆಂಗಳೂರು ೫೬೦೦೧೯

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೩೧, ಸಂಚಿಕೆ : ೦೧

ಜನವರಿ–ಜೂನ್ ೨೦೧೭

ಸಂಪಾದಕ

ಡಾ. ಎಚ್.ಎನ್. ಮುರಳೀಧರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ. ಕಲಾಭವನ (ರಿ)

೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ

ಬೆಂಗಳೂರು–೫೬೦೦೧೯.

ದೂರವಾಣಿ : ೨೬೬೧೫೮೭೭, ೨೬೬೭೬೭೭೩

ವಿ–ಅಂಚೆ : bmsritrust@gmail.com bmsrilochana@gmail.com

KARNATAKA LOCHANA
Half yearly Research Journal
Edited by Dr. H.N. Muralidhara and
Published by B.M.Sri. Smaraka Prathistana
M.V.Si. P.G. Research Centre
B.M.Sri. Kalabhavana(R), 3rd Main Road
Narasimharaja Colony, Bangalore 560 019.
Ph.No. 080-26615877, 26676773
e-mail
bmsritrust@gmail.com
bmsrilochana@gmail.com

Jan-June 2017 (Vol. 31, No. 1)

Pages: viii + 136

Subscription Details :

Annual : Rs. 100/-

Life : Rs. 1500/-

ಚಂದಾ ವಿವರ:
ವಾರ್ಷಿಕ : ರೂ. ೧೦೦/-
ಆಜೀವ : ರೂ. ೧೫೦೦/-

Published with Financial Assistancie from the Central Institute of Indian Languages (Department of Higher Education, Ministry of Human Resource Development, Government of India)- Manasagangotri, Mysuru-570006 sanctioned vide letter No. 53-4(1)2014-15/KAN/LM/GRNT dated 5th December 2016 under the Little Magazine scheme of Grant-in-Aid.

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೬೫೨

ಸಂಪಾದಕರ ನುಡಿ...

'ಕರ್ನಾಟಕ ಲೋಚನ' - ಷಾಣ್ಮಾಸಿಕ ವಿದ್ವತ್ ಪತ್ರಿಕೆ ಪ್ರಸ್ತುತ ಮೂವತ್ತೊಂದನೆಯ ಸಂಪುಟಕ್ಕೆ ಕಾಲಿಟ್ಟಿದ್ದು ಇದರ ಮೊದಲ ಸಂಚಿಕೆ ತಮ್ಮ ಮುಂದಿದೆ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಹಾಗೂ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಸಾಹಿತ್ಯಾನುಸಂಧಾನದ ಪ್ರಾತಿನಿಧಿಕ ಮಾದರಿಯಾಗಿ ಈ ಪತ್ರಿಕೆ ರೂಪುಗೊಳ್ಳುತ್ತಿದೆ. ಇಲ್ಲಿ ವಿಮರ್ಶೆ ಸಂಶೋಧನೆಯೊಂದಿಗೆ ಕೈಜೋಡಿಸಿದೆ. ಭಾಷಾ ವೈಜ್ಞಾನಿಕವಾದ ಅನುಸಂಧಾನವೂ ಕೂಡ ಒಟ್ಟಾರೆಯಾಗಿ ಸಾಹಿತ್ಯಸತ್ಯದ ಶೋಧವೊಂದನ್ನು ತನ್ನ ಕೇಂದ್ರದಲ್ಲಿರಿಸಿಕೊಂಡಿದೆ. ಐತಿಹಾಸಿಕ ಪರಿಶೀಲನೆಗಳು ಸಾಂಸ್ಕೃತಿಕ ಚಹರೆಗಳನ್ನು ಮರುಶೋಧಿಸುವ ಪ್ರಯತ್ನದಲ್ಲಿವೆ. ಹೀಗೆ ಮೇಲ್ನೋಟಕ್ಕೆ ಇಲ್ಲಿನ ಬರಹಗಳು ಭಿನ್ನ ವಲಯಗಳನ್ನು ಸ್ಪರ್ಶಿಸಿದರೂ ಕೇಂದ್ರದಲ್ಲಿ ಸಾಹಿತ್ಯ ಪರಂಪರೆಯೊಂದರ ಮೂಲಸತ್ತ್ವವನ್ನು ಶೋಧಿಸುವ ಉಮೇದು ಅವುಗಳ ಆಳದಲ್ಲಿ ಕೆಲಸ ಮಾಡುತ್ತಿರುವುದನ್ನು ಗಮನಿಸಬಹುದು ಈ ದೃಷ್ಟಿಯಿಂದ ಸಾಹಿತ್ಯ-ಭಾಷೆಗಳ ಅನುಸಂಧಾನದ ಹಲವು ಮಾದರಿಗಳ ಸಮನ್ವಯವನ್ನು ಇಲ್ಲಿ ಗುರುತಿಸಬಹುದು.

ಈ ಸಂಚಿಕೆ ಹೀಗೆ ರೂಪುಗೊಳ್ಳುವಂತೆ ಲೇಖನಗಳನ್ನು ನೀಡಿದವರಿಗೂ, ಪ್ರಕಟಣೆಗೆ ಬೆಂಬಲ ನೀಡುತ್ತ ಬಂದಿರುವ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಪಿ.ವಿ. ನಾರಾಯಣ ಅವರಿಗೂ, ಅಚ್ಚುಕಟ್ಟಾಗಿ ಮುದ್ರಿಸಿದ ಲಕ್ಷ್ಮೀಮುದ್ರಣಾಲಯದ ಗೆಳೆಯರಿಗೂ ನಾನು ಆಭಾರಿಯಾಗಿದ್ದೇನೆ.

-ಎಚ್.ಎಸ್. ಮುರಳೀಧರ

ಲೇಖಕರಿಗೆ ಸೂಚನೆಗಳು...

೧. ಸಾಹಿತ್ಯ-ಸಂಸ್ಕೃತಿಗಳಿಗೆ ಸಂಬಂಧಿಸಿದ ಸಂಶೋಧನೆ ವಿಮರ್ಶೆಗಳ ಅಪ್ರಕಟಿತ ಬರಹಗಳನ್ನು 'ಕರ್ನಾಟಕ ಲೋಚನ' ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಸ್ವೀಕರಿಸಲಾಗುವುದು.

೨. ಲೇಖನಗಳು ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಬೆರಳಚ್ಚು ಮಾಡಿದವಾಗಿರಬೇಕು ಅಥವಾ ಸ್ಫುಟವಾದ ಕೈಬರಹದಲ್ಲಿರಬೇಕು.

೩. ಲೇಖನಗಳು ಒಪ್ಪಿತವಾದ ಮಾದರಿಯಲ್ಲಿ ಸೂಕ್ತ ಉಲ್ಲೇಖಗಳು ಮತ್ತು ಟಿಪ್ಪಣಿಗಳಿಂದ ಕೂಡಿರಬೇಕು.

೪. ಚಿತ್ರಗಳು, ನಕ್ಷೆಗಳು ಮೊದಲಾದುವನ್ನು ಸ್ಕ್ಯಾನ್ ಮಾಡಿದ ತಂತ್ರಾಂಶದಲ್ಲಿ ನೀಡಬೇಕು.

೫. ಲೇಖಕರು ತಮ್ಮ ವಿಳಾಸ, ದೂರವಾಣಿ ಸಂಖ್ಯೆ ಮತ್ತು ವಿ-ಅಂಚೆಗಳನ್ನು ತಪ್ಪದೆ ನೀಡಬೇಕು.

೬. ಅಸ್ವೀಕೃತ ಬರಹಗಳನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಈ ಬಗೆಗೆ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

೭. ಲೇಖನಗಳನ್ನು ಪ್ರತಿಷ್ಠಾನದ ಅಂಚೆವಿಳಾಸಕ್ಕೆ ಅಥವಾ bmsrilochana@gmail.com ಈ ವಿ-ಅಂಚೆಗೆ ಕಳುಹಿಸಬಹುದು.

೮. ಪ್ರಕಟವಾದ ಬರಹಗಳಿಗೆ ಪ್ರತಿಷ್ಠಾನವು ಸಾಂಕೇತಿಕ ಗೌರವ ಸಂಭಾವನೆಯನ್ನು ನೀಡುತ್ತದೆ.

೯. ಲೇಖನದಲ್ಲಿನ ಅಭಿಪ್ರಾಯಗಳು ಲೇಖಕರದೇ ಆಗಿದ್ದು ಪ್ರತಿಷ್ಠಾನದ ನಿಲುವುಗಳನ್ನು ಪ್ರತಿನಿಧಿಸುವುದಿಲ್ಲ.

ಈ ಸಂಚಿಕೆಯಲ್ಲಿ...

ಪಂಪನ ಕುಟುಂಬ ಹಾಗೂ ಅಣ್ಣಿಗೆರೆಯ ಸಂಬಂಧಗಳು

◆

ಸೀತಾರಾಮ ಜಾಗೀರ್‌ದಾರ್

ಪಂಪನ ಚರಿತ್ರೆಯು 'ಸಾಪೇಕ್ಷ ಸಂಪುಟ-೧ ಹಾಗೂ ೨' ಮತ್ತು ಕರ್ನಾಟಕ ಸರ್ಕಾರದ ಸಾಹಿತ್ಯ ಅಕಾಡೆಮಿಯು ಪ್ರಕಟಿಸಿದ 'ಪಂಪ-೧೧೦೦' ಎಂಬ ಪುಸ್ತಕಗಳು ಬಂದ ಮೇಲೆ ಒಂದು ಸ್ಥಿರ ಹಂತಕ್ಕೆ ಎಂದರೆ ಪಂಪನು ಆತನ ಆಶ್ರಯದಾತನು ಕೊಟ್ಟ ಆಸ್ತಿಯಲ್ಲಿ – ಇಮ್ಮಡಿ ಅರಿಕೇಸರಿಯ ರಾಜ್ಯದಲ್ಲಿ ತಮ್ಮ ಮುಂದಿನ ಜೀವನ ಕಳೆದರು ಎಂದು ಸಾಧಾರಣವಾಗಿ ನಿರೂಪಿಸಿದುದನ್ನು ಒಪ್ಪಿಕೊಂಡಿತ್ತು ; ಆದರೆ ಇತ್ತೀಚೆಗೆ ಶ್ರೀಯುತ ಸಂಜಯ ಎನ್. ಹಂಜೆ ಎಂಬವರು 'ಅಣ್ಣಿಗೇರಿಯ ದೇಸಗತಿ ಮನೆತನಗಳು' ಎಂಬ ಒಂದು ದೀರ್ಘ ಲೇಖನ ಬರೆಯುತ್ತ ಅದರಲ್ಲಿ ಅಣ್ಣಿಗೇರಿಯಲ್ಲಿ ಇದ್ದ ದೇಶಪಾಂಡೆ ಅವರ ಮನೆಯ ಪೂರ್ವಜರು ಎಂದು ಮುಂತಾಗಿ ಬರೆದಿದ್ದಾರೆ. ಜಿನವಲ್ಲಭನು ಸಬ್ಬಿನಾಡೊಳಗಣ ಧರ್ಮಪುರದಿಂದ ಅಣ್ಣಿಗೇರಿಗೆ ವಲಸೆ ಬಂದಿದ್ದಾನೆ ಎಂದು ಮುಂತಾಗಿ ಬರೆದಿದ್ದಾರೆ. ಜಿನವಲ್ಲಭನು ಹೀಗೆ ವಲಸೆ ಬರಲು ಕಾರಣ ಅವನು ಧರ್ಮಪುರದ ಆಗ್ರಹಾರದಲ್ಲಿ ಇದ್ದ ಬ್ರಾಹ್ಮಣ ಜನರ ಸಮುದಾಯದಿಂದ ಕಿರುಕುಳಕ್ಕೆ ಒಳಗಾದದ್ದು, 'ಮನನೊಂದು ಜಿನವಲ್ಲಭ ತನ್ನ ತಾಯಿಯ ತವರೂರು ಅಣ್ಣಿಗೇರಿಗೆ ೧೧-೧೨ನೆಯ ಶತಮಾನದ ಪೂರ್ವಾರ್ಧದಲ್ಲಿ ವಲಸೆ ಬಂದಂತೆ ತೋರುತ್ತದೆ.[೧]

ಶ್ರೀಯುತರ ಈ ಹೇಳಿಕೆಯನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಪಂಪನು ಪಡೆದ ಆಸ್ತಿ ಮತ್ತು ಜಿನವಲ್ಲಭನ ವ್ಯಕ್ತಿತ್ವ ಬಹಳ ಮಹತ್ವದ ಸಂಗತಿಗಳಾಗಿವೆ ; ಅವು ಅಡ್ಡ ನಿಲ್ಲುತ್ತವೆ.

ಪಂಪನು ಪಡೆದ ಆಸ್ತಿ : ಪಂಪಕವಿ ಶ್ರೇಷ್ಠಕವಿ ಎಂದು ಪ್ರಸಿದ್ಧನಾಗಿದ್ದ. ತತ್ಕಾರಣಕ್ಕಾಗಿಯೆ ಆತನನ್ನು ಇಮ್ಮಡಿ ಅರಿಕೇಸರಿ ರಾಜ ಆಸ್ಥಾನಕ್ಕೆ ಬರುವುದಕ್ಕೆ ಆಹ್ವಾನಿಸಿ-ಪ್ರೀತಿಯಿಂದಲೇ 'ಪಿರಿದನಿತ್ತು'-ಕರೆಯಿಸಿಕೊಂಡಿದ್ದಾನೆ, ರಾಜಮರ್ಯಾದೆ

ಯಿಂದ ಬರಮಾಡಿಕೊಂಡಿದ್ದಾನೆ. ಅದಕ್ಕೆ ಕಾರಣ ಪಂಪ 'ಕವಿವೃಷಭರ' ವಂಶದಲ್ಲಿ ಹುಟ್ಟಿದವನು ಎಂಬುದು:

ಆತಂಗರಿಕೇಸರಿ ಸಂ
ಪ್ರೀತಿಯೆ ಬಟೆಯಟ್ಟಿ ಪಿರಿದನಿತ್ತು ನಿಜಾಭಿ ।
ಖ್ಯಾತಿಯನಿಳೆಯೊಳ್ ನಿಜೆಸ
ಲ್ಕೀ ತೆಱದಿತಿಹಾಸ ಕಥೆಯನೊಪ್ಪಿಸೆ ಕುಱಿತಂ ॥ ೧೪-೫೧

ಸ್ರೋತಮಿದು ತನಗೆ ಗಂಗಾ
ಸ್ರೋತದವೊಲಳಂಬಮಾಗಿಗೆಡೆಗೊಳ್ಳದೆ ವಿ ।
ಖ್ಯಾತ ಕವಿವೃಷಭ ವಂಶೋ
ದ್ಭೂತಮೆನಲ್ ಬರಿಸದೊಳಗೆ ಸಮೆವಿನೆಗಮಿದಂ ॥ ೧೪-೫೨

ಒಂದು ವರ್ಷದಲ್ಲಿ ಗ್ರಂಥವನ್ನು ಬರೆಯಲು ಆಶ್ರಯದಾತ ಗಡುವನಿತ್ತಿದ್ದಾನೆ. ಪಂಪನ ದೈತ್ಯ ಪ್ರತಿಭೆ ಆರು ತಿಂಗಳಲ್ಲೊಂದು ಮೂರು ತಿಂಗಳಲ್ಲೊಂದು – ಒಂದೇ ವರ್ಷದಲ್ಲಿ ಎರಡು ಕೃತಿಗಳನ್ನು ರಚಿಸಿ ಮುಗಿಸಿದೆ.[೨] 'ವಿಕ್ರಮಾರ್ಜುನ ವಿಜಯಂ' ಗ್ರಂಥದಲ್ಲಿ ಲೌಕಿಕ ಸಂಗತಿಗಳನ್ನು ತಿಳಿಸಿದರೆ ತನ್ನ ಜೀವನಕ್ಕೆ[೩] ಸಂಬಂಧಿಸಿದಂತೆ ಆಧ್ಯಾತ್ಮಿಕ ಸಂಗತಿಗಳನ್ನು 'ಆದಿಪುರಾಣಂ' ಕಾವ್ಯದಲ್ಲಿ ತಿಳಿಸಿದ್ದಾನೆ. ಒಪ್ಪಿಕೊಂಡಂತೆ ಒಂದು ವರ್ಷದೊಳಗೇ 'ವಿಕ್ರಮಾರ್ಜುನ ವಿಜಯಂ' ಗ್ರಂಥ ಮುಗಿಸಿದಾಗ ರಾಜಾರ್ಪಣೆಯಾದಾಗ ಅರಿಕೇಸರಿ ದೊರೆ ಸಾಲಂಕೃತ ವ್ಯಕ್ತಿ ಮಡಿಯುಟ್ಟು ಆಸ್ಥಾನಕ್ಕೆ ಕವಿಯನ್ನು (ಪಂಪನನ್ನು) ಸ್ವಾಗತಿಸಿ ಸನ್ಮಾನಿಸಿದ್ದಾನೆ :

ತುಡುಗೆ ನಿಚ್ಚಲುಂ ಪಂಚರತ್ನಂಗಳುಂ ಪೊರಮಡೆ ತನ್ನುಡುವುಪ್ಪಟಂಗಳ್ ।
ಮಡಿಯೊಳಾಗೆಯುಮಟ್ಟಿಱಿಂ ಕಂಡಾಗಳ್ ಪಿರಿಯ ಬಿತ್ತರಿಗೆಯಂ ಕೆಲದೊಳಿಕ್ಕಿ।
ಕುಡುವ ಬಾಡಕ್ಕಂ ಜೀವಧನಂಗಳ್ಗಂ ಬಿಡು[ವೊಜ್ಜಳ್ಗಂ] ಲೆಕ್ಕಮಿಲ್ಲೆನಿಸಿ ರಾಗಂ ।
ಗಿಡದೆ ಕೊಂಡಾಡಿದಂ ಬಲನಱಿಯೆ ಗುಣಾರ್ಣ್ಣವಂ ಕವಿತಾಗುಣಾರ್ಣ್ಣವನಂ ॥
೧೪-೫೫

ಪಂಪನಿಗೆ ಸ್ವಾಗತಿಸಿ ಪಕ್ಕದಲ್ಲೇ ಲೋಹಾಸನವನ್ನು ಹಾಕಿ (ಕೂಡಿಸಿ) ಲೆಕ್ಕವಿಡಲು ಬಾರದಷ್ಟು ಬಾಡ(ಹಳ್ಳಿ-ಊರು)ಗಳನ್ನು ಜೀವಧನಂ (ಪ್ರಾಣಿ/ಹಸು ಕರು ಇತ್ಯಾದಿಗಳನ್ನು) ಗಳನ್ನು ಮತ್ತು ಬಿಡಿ ಹೊನ್ನುಗಳನ್ನು ಕೊಟ್ಟು ಗೌರವಿಸಿದ. ಇದರ ಜೊತೆಗೆ ಸಬ್ಬಿನಾಡೊಳಗಿನ ಊರು ಧರ್ಮಪುರ/ಧರ್ಮವುರ; ಇದು ವೃಷಭಗಿರಿಗೆ ದಕ್ಷಿಣದಲ್ಲಿ ಇದ್ದಿತ್ತು ಅಥವಾ ಧರ್ಮಪುರದ ಉತ್ತರಕ್ಕೆ ವೃಷಭಗಿರಿ ಇದ್ದಿತ್ತು.[೩]

ಶ್ರೀ ಸಂಜಯ ಹಂಜೆ ಅವರ ಲೇಖನದಲ್ಲಿ ಜಿನವಲ್ಲಭನ ವ್ಯಕ್ತಿತ್ವವು ಸರಿಯಾಗಿ ಮೂಡಿಬಂದಿಲ್ಲ ಅಷ್ಟೇ ಅಲ್ಲ ಅದನ್ನು ತಿರುಚಲಾಗಿದೆ, ಮತ್ತೆ ಅವರು ಸರಿಯಾದ ಮಾಹಿತಿಯನ್ನೂ ನೀಡಿಲ್ಲ. ವ್ಯಕ್ತಿತ್ವವು ಪರಿಚಯ ಆಗಬೇಕಾದರೆ, ಆತನನ್ನು

ತಿಳಿದುಕೊಳ್ಳಬೇಕಾದರೆ ಇಡೀ ಶಾಸನದ ಪಾಠವು ಕಣ್ಣ ಮುಂದೆ ಇರಬೇಕು, ಕಾರಣ ಶಾಸನ ಪಾಠ ನೋಡಿ :

ಜಿನವಲ್ಲಭನ ವೃಷಭಾದ್ರಿಯ ಶಿಲಾಶಾಸನ[೪]

೧

ಪಂಪನ ಜೀವನಚರಿತ್ರೆಯನ್ನು ಬರೆಯುವಲ್ಲಿ ಜಿನವಲ್ಲಭನ ಶಾಸನವು ಒಂದು ಹೊಸ ತಿರುವನ್ನು ಕೊಟ್ಟಿತು. ಇದು 'ಜಿನವಲ್ಲಭನ ಗಂಗಾಧರದ ಶಾಸನ'[೫] 'ಜಿನವಲ್ಲಭನ ಕುರ್ಕ್ಯಾಲಶಾಸನ'[೬] ಹಾಗೂ 'ಪಂಪನ ತಮ್ಮ ಜಿನವಲ್ಲಭನ ಶಿಲಾಶಾಸನ'[೭] ಎಂದು ಮುಂತಾಗಿ ವಿದ್ವಾಂಸರಿಂದ ಕರೆಯಲ್ಪಟ್ಟಿದೆ. ವಾಸ್ತವದಲ್ಲಿ ಇದು ಶಾಸನದ ಪ್ರಕಾರ ವೃಷಭಾದ್ರಿಯ ಸಿದ್ಧಶಿಲೆ ಎಂಬ ಸ್ಥಳದಲ್ಲಿ ಇರುವುದರಿಂದ ಇದನ್ನು ವೃಷಭಾದ್ರಿಯ ಶಿಲಾಶಾಸನ ಎಂದು ಕರೆಯಬಹುದು. ಈ ಶಾಸನವನ್ನು ಮೊದಲು ನೋಡಿದ ಡಾ॥ ಬಿ. ರಾಮರಾಜು ಅವರು ಆಂಧ್ರ ಪ್ರದೇಶದ ಸರ್ಕಾರದ ಪುರಾತತ್ವ ಇಲಾಖೆಯಲ್ಲಿ ಉಪನಿರ್ದೇಶಕರೂ ಶಾಸನ ವಿಭಾಗದ ಮುಖ್ಯಸ್ಥರೂ ಆಗಿದ್ದ ಡಾ॥ ಎನ್. ವೆಂಕಟರಮಣಯ್ಯನವರಿಗೆ ತಿಳಿಸಿದರು. ಗಂಗಾಧರಂ ಕಡೆಯಿಂದ ಬೆಟ್ಟಕ್ಕೆ ಹೋದ ಅವರು 'ಜಿನವಲ್ಲಭನ ಗಂಗಾಧರದ ಶಾಸನ' ಎಂದು ಕರೆದರು. ಅನಂತರ ಇನ್ನಷ್ಟು ವಿಚಾರಣೆಗೈದು ಈ ಸ್ಥಳ ಕುರ್ಕ್ಯಾಲಗ್ರಾಮಕ್ಕೆ ಸೇರಿದುದೆಂದು ಇದಕ್ಕೆ 'ಬೊಮ್ಮಲಗುಟ್ಟ' ಎಂದು ಹೇಳುತ್ತಾರೆ ಎಂಬುದನ್ನು ತಿಳಿದುಕೊಂಡು 'ಕುರ್ಕ್ಯಾಲ ಶಾಸನ' ಎಂದೂ ಕರೆದರು. ಈ ವೃಷಭಾದ್ರಿ ಬಳಿಯ 'ಗಂಗಾಧರ' ಈಗಿನ ಹಾಗೇ ಆಗಲೂ ಪ್ರಸಿದ್ಧ ಸ್ಥಳವಾಗಿದ್ದ ಕಾರಣ ಮತ್ತು ಇಮ್ಮಡಿ ಅರಿಕೇಸರಿಯ ಹಿರಿಯ ಪುತ್ರ ವಾಗ್ರಾಜನಿಗೆ ರಾಜಧಾನಿಯೂ ಆಗಿದ್ದ ಕಾರಣ[೮] ಆ ಊರಿನ ಬಳಿಯಲ್ಲಿರುವ ಈ ಶಾಸನವನ್ನು 'ಗಂಗಾಧರಂ ಶಾಸನ' ಎಂದು ಹೇಳಿದರೂ ಏನೇನೂ ತಪ್ಪಾಗುವುದಿಲ್ಲ. 'ಬೊಮ್ಮಲಗುಟ್ಟದ ಶಾಸನ' ಎಂದೂ ಹೇಳಬಹುದು. ಬೊಮ್ಮಲಗುಟ್ಟವೇ ಪ್ರಾಚೀನ ವೃಷಭಾದ್ರಿ, 'ಬೊಮ್ಮಲಗುಟ್ಟ' ಆ ವೃಷಭಾದ್ರಿಯ ದಕ್ಷಿಣದ ತುದಿ ಎಂಬುದು ಶಾಸನದಲ್ಲಿ ಬಂದಿರುವ ವಾಕ್ಯ "ವೃಷಭಗಿರಿಯ ಸಿದ್ಧಶಿಲೆ" ಎಂಬುದರಿಂದ ಸುಸ್ಪಷ್ಟವಿದೆ.

ವೃಷಭಾದ್ರಿಯ ಆಂಧ್ರ ಪ್ರದೇಶದ ಕರೀಮ್‌ನಗರ ಜಿಲ್ಲೆಯಲ್ಲಿ ಕರೀಮ್‌ನಗರದಿಂದ ಜಗತ್ಯಾಲಕ್ಕೆ ಹೋಗುವ ಮಾರ್ಗದ ಮಧ್ಯದಲ್ಲಿ ಕುರ್ಕ್ಯಾಲಗ್ರಾಮದ ಬಳಿಯಲ್ಲಿ. ಆ ಊರಿನ ಸೀಮೆಗೆ ಸೇರಿದ 'ಬೊಮ್ಮಲಗುಟ್ಟ' ಎಂಬ ಬೆಟ್ಟದ ಹೆಸರಿನಲ್ಲಿ ಪ್ರಸಿದ್ಧವಾಗಿದೆ. ಬೆಟ್ಟದ ಶ್ರೇಣಿ ಬೊಮ್ಮಲಗುಟ್ಟದಿಂದ ಉತ್ತರಕ್ಕೆ ಹಬ್ಬಿದೆ. ಶಾಸನವನ್ನು ಒಂದು ದೊಡ್ಡ ಗಂಡಶಿಲೆಯ (Boulder) ಮೇಲೆ ಕೆತ್ತಿದೆ. ಆ ಶಾಸನದ ಮೇಲೆ ಗರುಡವಾಹನೆಯಾದ ಚಕ್ರೇಶ್ವರಿಯು, ಪಕ್ಕದಲ್ಲಿ ಚಾಮರಧಾರಿಣಿಯರೂ ಕೆಲವು ಜಿನಬಿಂಬಗಳೂ ಇವೆ. ಚಕ್ರೇಶ್ವರೀಮೂರ್ತಿಯಿಂದ ಇನ್ನಷ್ಟು ಎತ್ತರದ ಮೇಲೆ ಕೂಡ ಎರಡು ಜಿನಬಿಂಬಗಳಿವೆ. ಹೀಗೆ ಹಲವು ಬೊಂಬೆಗಳಿರುವುದರಿಂದ (ಬೊಮ್ಮಲು ಉನ್ನ ಗುಟ್ಟ>ಬೊಮ್ಮಲಗುಟ್ಟ)

ಅದು ಬೊಮ್ಮಲಗುಟ್ಟ ಶಾಸನದ ವಿಷಯಗಳನ್ನು ವಿಮರ್ಶೆ ಮಾಡುವುದಕ್ಕಿಂತ ಮುಂಚೆ ಅದರ ಪೂರ್ಣಪಾಠ ನಮ್ಮ ಮುಂದೆ ಇರುವುದು ವಿಹಿತ.

ಶಾಸನಪಾಠ

೧. ಓಂ ನಮಃ ಸಿದ್ಧೇಭ್ಯಃ ಸ್ವಸ್ತಿ ಸಕಳಕಳಾಳಾಪಪ್ರವೀಣಂ ಭವ್ಯರತ್ನಾಕರ ಗುಣ ಪಕ್ಷಪಾತಿ ಬೆಂಗಿನಾಡ ಸಪ್ತಗ್ರಾಮಗಳೊಳಗಣ ವಂಗಿಪಱ್ಱು ಕಮ್ಮೆಬ್ರಾಹ್ಮಣಂ ಜಮದಗ್ನಿಪಂಚಾರ್ಷೇಯಂ ಶ್ರೀವತ್ಸಗೋತ್ರಂ ಗುಣ್ಡಿಕಱ್ಱು ನಿಡುಂಗೊಣ್ಡೆಯಭಿ ಮಾನಚನ್ದ್ರನ ಮರ್ಮ್ಮಂ ಭೀಮಪಯ್ಯನಾ ಬೆಳ್ವೊಲದಣ್ಣಿಗೆಱೆಯ ಜೋಯಿಸ ಸಿಂಘನ ಮರ್ಮ್ಮ

೨. ಳಬ್ಬಣಬ್ಬೆಯ[೧೦] ಮಗಂ ಕೊಣ್ಡಕುನ್ದೆಯ ದೇಸಿಗಗಣದ ಪೊತ್ಥಗೆಯಬಟಿಯ ಪಣ್ಡರಂಗವಲ್ಲಿಯ ಜಯಣನ್ದಿಸಿದ್ಧಾನ್ತಭಟಾರರಗುಡ್ಡಂ ಜಿನವಲ್ಲಭಂ ಸಬ್ಬಿನಾಡ ನಟ್ಟನಡುವಣ ಧರ್ಮ್ಮಪುರದುತ್ತರದಿಗ್ಭಾಗದ ವೃಷಭಗಿರಿಯೆಂಬನಾದಿ ಸಂಸಿದ್ಧ ತೀರ್ತ್ಥದ ದಕ್ಷಿಣ ದಿಶಾಭಾಗದೀ ಸಿದ್ಧಶಿಲೆಯೊಳ್ತಮ್ಮ ಕುಲದೈವಮಾದ್ಯನ್ತ ಜಿನಬಿಂಬಂಗಳುಮಂ ಚಕ್ರೇಶ್ವರಿಯುಮಂ ಪೆಱವುಂ ಜಿನಪ್ರತಿ

೩. ಮೆಗಳುಮಂ ತ್ರಿಭುವನತಿಲಕಮೆಂಬ ಬಸದಿಯುಮಂ ಕವಿತಾಗುಣಾರ್ಣ್ನವ ಮೆಂಬ ಕೆಱೆಯುಮಂ ಮದನವಿಳಾಸವೆಂಬ ಬನಮುಮಂ ಮಾಡಿಸಿದಂ। ೦ ವೃತ್ತಂ ॥ ಭ್ರಾತ[ರ್ದ್ಧ]ರ್ಮ್ಮಪುರಂ ಪ್ರಯಾಮ ಕಿಮತೋ ಜೈನಾಭಿಷೇಕೋತ್ಸವ ಕ್ಷೀರಪ್ಲಾವಿತ ತುಂಗ ಶೃಂಗ ವೃಷಭಕ್ಷೋಣೀ ಧ್ರಮೀಕ್ಷಾಮಹೇ ಯಾತ್ರಾಯಾತ ಸಮಸ್ತ ಭವ್ಯಜನತಾ ಸನ್ಮಾನ ದಾನೋದ್ಯತಂ ಪಂಪಾರ್ಯ್ಯಾ

೪. ನುಜಮತ್ರ ಭೀಮತನುಜಂ ಸಮ್ಯಕ್ತ್ವರತ್ನಾಕರಂ ॥[೧॥*] ಗೀತಂ ಗಾತುಮನೇಕ ಭೇದಸುಭಗಂ ಕಾವ್ಯಾನಿ ಸೋಚ್ಛ್ವಾವಚಂ ವಾಚಾವಾಚಯಿತುಂ ಪ್ರಿಯಾಣಿ ವದಿತುಂ ಸಾಧೂಪಕರ್ತುಂ ಸತಾಂ ಭೋಗಾನ್ಸೇವಿತುಮಂಗನಾ ರಮಯಿತುಂ ಪೂಜಾಂ ವಿಧಾತುಂ ಜಿನೇ ಜಾನೀತೇ ಜಿನವಲ್ಲಭಱ್ಪರಮಿದಂ ಪಂಪಾಭಿಧಾನಾನುಜಃ॥ [೨॥*] ಅಜಸ್ರಜಿನವನ್ನಾಗತ ಮುನೀ

೫. ಶ್ವರ ಶ್ರಾವಕ ಪ್ರಜಾಸ್ತವರವ ಪ್ರತಿಧ್ವನಿತ ಶಬ್ದಕೋಳಾಹಳೈ ಅಧಿಷ್ಠಿತ ದಿಗಂಬರೋ ವೃಷಭಶೈಲ ಏಷಸ್ವಯಂ ಪರಾಂವದತಿ ವಾಚಕಾಭರಣ ಕೀರ್ತ್ತಿಮಾಕಳ್ಪತಃ॥ [೩॥*] ಬಗೆಯಲಳುಂಬಮೀ ಬಗೆಯನಾರ್ಬ್ಬಗೆವೊರ್ಬ್ಬಗೆಗೊಸೆಯಲ್ಬು ದಿಟ್ಟಿಗೆ ಪೊಲನಲ್ತು ನೀಳ್ದ ಸಱೆಯೊಳ್ಜಿನಬಿಂಬಮನೀತನೀಗಳೆನ್ತಗಟಿಸಿದಪ್ಪೊನೆನ್ದು ಬಗೆವನ್ನ ವರಂ ಜಿನಬಿಂಬ

೬. ಮಲ್ಲಿ ತೊಟ್ಟಿಗೆ ನೆಗಟ್ದಿಟ್ಟವೇಂ ಚರಿತಮಚ್ಚರಿಯೋ ಜಿನವಲ್ಲಭೇನ್ದ್ರನಂ ॥ [೪॥*] ಇದು ಕವಿತಾಗುಣಾರ್ಣ್ನವನ ಕೀರ್ತ್ತಿಯ ಮೂರ್ತ್ತಿವೊಲಾಗಿ ದಕ್ಷಿಣಾರ್ದ್ಧದ ವೃಷಭಾದ್ರಿಯ[ಕ್ಕೆ] ವೃಷಭೇಶ್ವರಬಿಂಬ ಸನಾಥಮೆಂಬಲಂಪೊದವೆ

ನಿಜದ್ವಿಜಾವಸಥಪರ್ವ್ವತಮಂ ಜಿನಚೈತ್ಯಮಾಗೆ ಮಾಡಿದ ಜಿನವಲ್ಲಭಂಗೆ ಜಿನವಲ್ಲಭನಪ್ಪುದುಮೊನ್ದು ಚೋದ್ಯಮೋ ॥[೫॥*] ಚದುರಮಯ್ಮೆಯ ಸತ್ಕ

೭. ವಿತ್ವದ ಸನ್ದ ಪಂಪನ ತಮ್ಮನೋರ್ವ್ವದೆ ಪೊಗಟ್ತೆಯ ಬಾಜಿಸಲ್ಪರೆಯಲ್ಕವಿತ್ವದ ತತ್ವದೊಳ್ಪುದಿದು ನೇರ್ವ್ವಡೆ ಪೇಟಲುರ್ವ್ವಿಗಪೂರ್ವ್ವಮಾಗಿರೆ ಬಲ್ಲೋನಪ್ಪುದಜಿ ನೊರ್ವ್ವನೆ ವಾಗ್ವಧೂವರವಲ್ಲಭಂ ಜಿನವಲ್ಲಭಂ ॥[೬॥*] ವಿನುತ ಚಳುಕ್ಯ ವಂಶಪತಿ ಮಿಕ್ಕರಿಕೇಸರಿ ಸನ್ದ ವಿಕ್ರಮಾರ್ಜುನ ವಿಜಯಕ್ಕೆ ಧರ್ಮ್ಮಪುರಂಮೆನ್ದು ಮದೇಯಮಿದೆನ್ದು ಕೀರ್ತ್ತಿಶಾಸನಮನೆ ಕೊಟ್ಟ ಶಾಸನದ ಪಂಪ

೮. ನ ನಂಬಿದುದೊನ್ದು ಜೈನಶಾಸನದ ನೆಗಟ್ತೆಯಂ ವೃಷಭಪರ್ವ್ವತಮನ್ತದು ತಾನೆ ಪೇಟದೇ ॥[೭॥*] ಎಸಲ್ಗಾಳಿ ಪುಗಲ್ಪತಂಗ ಕಿರಣಂ ಸಾರಲ್ಮಿಗಂ ಪಾಱಲಾಗಸ ದೊಳ್ಪಕ್ಕಿಗಳಲ್ಲಿ ಸಲ್ಲವೆನಿಸಿಜ್ಜಿನ್ನ್ಯೋದಯಂ ಧರ್ಮ್ಮದೊಳ್ಪಕ್ಕಿಗಳಲ್ಲಿ ಸಲ್ಲವೆನಿಸಿಜ್ಜಿನ್ನ್ಯೋದಯಂ **ಧರ್ಮ್ಮದೊಳ್ಪಸಮಂ** ಪೊಂಪುಟ ಮಾಡೆ ಮೆಚ್ಚಿ ಹರಿಗಂ ಪಂಪಂಗೆಗೊಟ್ಟಾದ್ವಿಜಾವಸಥ ಗ್ರಾಮುಮದೇವನ್ನೆಗಟ್ತೆಯ ಕಳಾಪಗ್ರಾಮವಂ ಪೋಲ್ತುದೋ ॥[೮॥*] ಬರೆದುದೆ

೯. ತಾಂಬ್ರಶಾಸನಮದೇಯಮೆ ಧರ್ಮ್ಮಪುರಂ ನೆಗಟ್ತೆವೆತ್ತರಿಗನ ಕೊಟ್ಟುದೇ ನೆಗಟ್ದಿ ಪಂಪನ ಪೆತ್ತುದೆ ಪೇಟಿಮೆನ್ದುನೀಮ್ಮರಳೆ ಪಲರ್ಮ್ಮೆಯುಂ ಪಲಬರಂ ಬೆಸಗೊಳ್ಳದೆ ಪೋಗಿ ನೋಡ ಸುನ್ದರ ವೃಷಭಾಚಳೋನ್ನತ ಶಿಲಾತಳದೊಳ್ಬರೆದಕ್ಕರಂಗಳಂ ॥[೯॥*] ಕನ್ದಂ । ಜಿನಭವನಂಬುಲೆತ್ತಿಂಚುಟ ಜಿನಪೂಜಲ್ಸೆಯುಚುನ್ನಿ ಜಿನಮುನುಲಕುನತ್ತಿನಯನ್ನದಾನಂಬೀವುಟಂ ಜಿನವಲ್ಲಭುಬೋಲಂಗಲರೆ

೧೦. ಜಿನಧರ್ಮ್ಮಪರುಲ್ ॥[೧೦॥*] ದಿನಕರು ಸರಿವೆಲ್ಗುದುಮುನಿ ಜಿನವಲ್ಲಭುನೊಟ್ಟನೆತ್ತು ಜಿತಕವಿನನನುಂ ಮನುಜುಲ್ಗಲರೆ ಧಾತ್ರಿಂ ವಿನಿತಿಚ್ಚೆದುನನಿಯವತ್ರ[೧೧] ವಿಬುಧಕವಿನ್ದುಲ್ ॥೧೧॥*] ಒಕ್ಕೊಕ್ಕೆ ಗುಣಂ [ಬು]ಕಲ್ಗುದು ವೊಕ್ಕೊಣ್ಣಿಂಗಾ ವೊಕ್ಕೋ ಲಕ್ಕಲ್‌ವೆವ್ವರಿಕಿಂ ಲೆಕ್ಕಿಂಪನೊಕ್ಕ ಲಕ್ಕಕು ಮಿಕ್ಕಿಲಿಗುಣಪಕ್ಷಪಾತಿ ಗುಣಮಣಿಗಣಂಬುಲ್ ॥[೧೨॥*][೧೨] ಎನ್ದು ಲೋಕಮೆಲ್ಲಂ ಪೊಗಟ್ ನೆಗಟ್ದಿ ಜಿನವಲ್ಲಭನ ಸುಧರ್ಮ್ಮಸನ್ತತಿಯೊ

೧೧. ಳ್ದೊಟ್ಟ[೧೩] ಗುಣಾವಳಿಯನೀ ವೃಷಭಗಿರಿಯ ಸಿದ್ಧಶಿಲೆಯೊಳೆಱೆಯಮ್ಮಂ ಟಂಕೋ[೧೪]ತ್ಕೀರ್ಣ್ಣಮ್ಮಾಡಿದಂ ॥

೨

ಶಾಸನವನ್ನು ಜಿನವಲ್ಲಭನ ಗುಣಾವಳಿಯನ್ನು ತಿಳಿಸುವುದಕ್ಕೆ ಹಾಕಲಾಗಿದೆ. ಇದರಲ್ಲಿ ಆರಂಭದಲ್ಲಿ ಪಂಚಪರಮೇಷ್ಠಿಗಳಲ್ಲಿ ಒಬ್ಬರಾದ ಸಿದ್ಧರ ಸ್ತುತಿಯಿದೆ. ಅನಂತರ

ಜಿನವಲ್ಲಭನ ಪೂರ್ವಜರ ಪ್ರಸ್ತಾಪವಿದೆ. ಯಾವುದೇ ರಾಜವಂಶದ ಅಥವಾ ಅಧಿಕಾರಿಯ ವಂಶದ ಉಲ್ಲೇಖ ಇದರಲ್ಲಿ ಇಲ್ಲ. ಕಾರಣ ಇದನ್ನು ರಾಜಶಾಸನ ಎಂದು ಹೇಳಲು ಬರುವುದಿಲ್ಲ. ಆದುದರಿಂದ ಇದೊಂದು ಖಾಸಗಿ ಶಾಸನ. ಎಱೆಯಮ್ಮ ಎಂಬ ವ್ಯಕ್ತಿಯು ಇದನ್ನು ಕೆತ್ತಿದ್ದಾನೆ. ಜಿನವಲ್ಲಭನ ತಾಯಿ ಅಬ್ಬಣಬ್ಬೆ. ತಂದೆ ಭೀಮಪಯ್ಯ. ಅಬ್ಬಣಬ್ಬೆಯ ಅಜ್ಜ ಅಣ್ಣಿಗೆಱೆಯ ಜೊಂಯಿಸಸಿಂಘ; ಭೀಮಪಯ್ಯನ ಅಜ್ಜ ಅಭಿಮಾನಚಂದ್ರ. ಎರಡು ಮನೆಗಳ ಹಿರಿಯರ ಉಲ್ಲೇಖ ಆರಂಭದಲ್ಲಿದೆ. ಅಭಿಮಾನಚಂದ್ರ ನಿಡುಂಗೊಣ್ಡೆಯವನು. ಆ ನಿಡುಂಗೊಣ್ಡೆಯು ಗುಣ್ಡಿಕಜ್ಜಿ (ಗುಂಡಿನದೀ) ಬಳಿಯಲ್ಲಿದೆ; ಆತನದು ಶ್ರೀವತ್ಸಗೋತ್ರ ; ಆತ ವಂಗಿಪಜ್ಜಿ ಕಮ್ಮೆಬ್ರಾಹ್ಮಣ ಜಮದಗ್ನಿ ಪಂಚಾರ್ಷೆಯ. 'ವಂಗಿಪಜ್ಜಿ' ಎಂಬ ಗ್ರಾಮ ಬೆಂಗಿನಾಡ ಸಪ್ತಗ್ರಾಮಗಳೊಳಗೆ ಒಂದು. ಆತ 'ಗುಣಪಕ್ಷಪಾತಿ', 'ಭವ್ಯರತ್ನಾಕರ' ಹಾಗೂ 'ಸಮಸ್ತಸಕಳಕಳಾಳಾಪ'. ಮತ್ತೆ ಇನ್ನೊಬ್ಬ ಹಿರಿಯ ವ್ಯಕ್ತಿ ಅಣ್ಣಿಗೆರೆಯ ಜೋಯಿಸ ಸಿಂಘ, ಈ ಅಣ್ಣಿಗೆರೆ ಬೆಳ್ವೊಲದ ಅಣ್ಣಿಗೆರೆ. ಈ ಇಬ್ಬರೂ ಹಿರಿಯರು ತಮ್ಮ ತಮ್ಮ ಸ್ವಗ್ರಾಮಗಳಾದ 'ನಿಡುಂಗೊಣ್ಡೆ' ಹಾಗೂ 'ಅಣ್ಣಿಗೆರೆ' ಇವುಗಳಲ್ಲಿ ಇದ್ದಿಲ್ಲವೆಂದೇ ಅವರನ್ನು ಅವರವರ ಬಿಟ್ಟುಬಂದ ಊರುಗಳಿಂದ ಗುರುತಿಸಲಾಗಿದೆ. ಆಯಾ ವ್ಯಕ್ತಿಗಳು ತಮ್ಮ ತಮ್ಮ ಊರುಗಳಲ್ಲಿ ಇದ್ದಾಗ ಆ ಊರಿನವರೆಂದು ಹೇಳಲ್ಪಡುವುದಿಲ್ಲ. ಉದಾ : ಡಾ॥ ಎಂ.ಎಂ. ಕಲ್ಬುರ್ಗಿ, ಶ್ರೀ ಶಂಕರ ಮೊಕಾಶಿ ಪುಣೇಕರ್, ಶ್ರೀ ಆಲೂರು ವೆಂಕಟರಾವ್, ಪ್ರೊ॥ ವಿ.ಕೃ. ಗೋಕಾಕ್ ಇತ್ಯಾದಿ. ಇತ್ಯಾದಿ. ಕಲ್ಬುರ್ಗಿ ಅವರು ಅವರು ವಾಸ್ತವವಾಗಿ ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ವರಗಲ್ಲಿನವರು. ಪ್ರೊ. ಗೋಕಾಕ್ ಅವರು ಸವಣೂರಿನವರು. ಅವರ ಪೂರ್ವಜರು ಆಯಾ ಊರುಗಳನ್ನು ಬಿಟ್ಟು ಬಂದು ಬೇರೊಂದು ಸ್ಥಳದಲ್ಲಿ ನೆಲಸಿದಾಗ ಅಂಟಿಕೊಂಡಿದೆ. ಅಂತೆಯೇ ಅಭಿಮಾನಚಂದ್ರನಿಗೆ 'ನಿಡುಂಗೊಣ್ಡೆ' ಮತ್ತು ಜೋಯಿಸ ಸಿಂಘನಿಗೆ 'ಅಣ್ಣಿಗೆಱೆ' ಎಂಬ ಗ್ರಾಮನಾಮ ಉಪಾಧಿಗಳು ಅಂಟಿಕೊಂಡಿವೆ. ಸಬ್ಬಿನಾಡಿನ ಆ ವೃಷಭನಗರಿಯ ಹತ್ತಿರದ ಗ್ರಾಮದಲ್ಲಿ ನೆಲಸಿವೆ. 'ವೃಷಭಗಿರಿ' ಬಹಳ ಪ್ರಾಚೀನ ಅನಾದಿಸಂಸಿದ್ಧ ತೀರ್ಥ –ಜೈನರ ಪವಿತ್ರ ಕ್ಷೇತ್ರ ವೃಷಭನಾಥ (ಆದಿನಾಥ) ತೀರ್ಥಂಕರನ ಹೆಸರಿನಿಂದಲೇ ಆ ಬೆಟ್ಟಕ್ಕೆ ಆ ಹೆಸರು ಬಂದಿದೆ. ಆ ಬೆಟ್ಟದ ಗಂಡಶಿಲೆಯಲ್ಲಿ ಇಂದಿಗೂ ಇರುವ ಎರಡು ಜಿನಬಿಂಬಗಳು ವೃಷಭನಾಥ ಹಾಗೂ ವೀರನಾಥ (ಆದಿನಾಥ ಹಾಗೂ ಅಂತಿಮ ತೀರ್ಥಂಕರ) ತೀರ್ತ್ಥಂಕರರನ್ನು ಪ್ರತಿನಿಧಿಸುತ್ತವೆ, ಜೈನಮೂರ್ತಿಶಾಸ್ತ್ರ (Jain Iconography) ಇದಕ್ಕೆ ತನ್ನ ಮುದ್ರೆಯನ್ನು ಒತ್ತುತ್ತದೆ. ಈ ತೀರ್ಥಕ್ಷೇತ್ರದ ಬಳಿಯಲ್ಲೇ ಜಿನವಲ್ಲಭನು ತಮ್ಮ ಕುಲದೈವಕ್ಕೆ ಸಂಬಂಧಪಟ್ಟ ದೇವತೆಗಳನ್ನು ಮಾಡಿಸಿದ್ದಾನೆ. ಚಕ್ರೇಶ್ವರಿದೇವಿಯ ಬಿಂಬ ಮತ್ತು ಹಾಕಿಸಿದ ಶಾಸನ ಇನ್ನೂ ಇದೆ. ಆತ ಕಟ್ಟಿಸಿದ 'ತ್ರಿಭುವನ ತಿಲಕ' ಎಂಬ ಬಸದಿ, 'ಕವಿತಾಗುಣಾರ್ಣ್ಣವ' ಎಂಬ ಕೆರೆ ಮತ್ತು 'ಮದನ ವಿಳಾಸ' ಎಂಬ ವನ ಈಗ ಕಾಣದೊರೆಯುತ್ತಿಲ್ಲ. ಅವುಗಳನ್ನು ಸಾಕ್ಷಿಗಳಿಲ್ಲದೆ ಗುರುತಿಸಲು ಆಗುವುದಿಲ್ಲ. ಊಹೆಯ ಕುದುರೆಯನ್ನು ಯಾರು ಬೇಕಾದರೂ ಮನಸ್ಸಿಗೆ ಬಂದಂತೆ ಓಡಿಸಬಹುದು ! ಅಷ್ಟೇ. ಜಿನವಲ್ಲಭ ಇಂದು ಕೆಲವರು ತಿಳಿದಂತೆ ಸಾಮಾನ್ಯ ವ್ಯಕ್ತಿ. ವೃಷಭಗಿರಿಯಲ್ಲಿ – ತಾನೇ ಕಟ್ಟಿಸಿದ ಆ

ಜಿನಾಲಯದಲ್ಲಿ ಆಗಾಗ ಅತಿಥಿಗಳನ್ನು ಆಹ್ವಾನಿಸಿದ್ದಾನೆ, ತಾವೇ ಬಂದವರಿಗೆ ಕೂಡ ಸನ್ಮಾನಗಳನ್ನು ನೀಡಿದ್ದಾನೆ.

ಅಜಸ್ರ ಜಿನವನ್ದನಾಗತ ಮುನೀಶ್ವರ ಶ್ರಾವಕ
ಪ್ರಜಾಸ್ತವರವಪ್ರತಿಧ್ವನಿತಶಬ್ದಕೋಳಾಹಳ್ಳೈ
ಅಧಿಷ್ಠಿತ ದಿಗಂಬರೋ ವೃಷಭಶೈಲ ಏಷಸ್ವಯಂ
ಪರಃವದತಿ ವಾಚಕಾಭರಣ ಕೀರ್ತಿಮಾಕಳ್ಪತಃ ॥

ಈ ಪೃಥ್ವೀವೃತ್ತ ಜಿನವಲ್ಲಭನ ಬಿರುದು 'ವಾಚಕಾಭರಣ' ಅರ್ಥಾತ್ 'ಗಮಕಭೂಷಣ' ಎಂಬುದರಿಂದ ಆತನೊಬ್ಬ ಪ್ರಸಿದ್ಧ ವ್ಯಕ್ತಿ ಆಗಿದ್ದನೆಂಬುದನ್ನು ತಿಳಿಸಿದರೆ ಇನ್ನೊಂದು ಬಿರುದು 'ವಾಗ್ವಧೂವರ ವಲ್ಲಭ' ಅವನೊಬ್ಬ ಪ್ರಸಿದ್ಧ ಕವಿಯಾಗಿದ್ದನೆಂದು ಸಾರುತ್ತದೆ. ಅಷ್ಟೇ ಅಲ್ಲ ಅವನ ತೆಲುಗು ಪದ್ಯಗಳು ಅಲ್ಲಿನ ಜನತೆ ಅವನಿಗೆ ಪ್ರೀತಿಯಿಂದ 'ಗುಣಪಕ್ಷಪಾತಿ' ಎಂದು ಕರೆದುದಾಗಿ ತಿಳಿಸುತ್ತವೆ. ಅವನದು ಸುಧರ್ಮ ಸಂತತಿ ಆಗಿತ್ತು. ಅರ್ಥಾತ್ ಸರ್ವಜನರಿಂದ ಸದ್ವಿನಯದ ಮೂರ್ತಿ ಎಂದು ಲೋಕವೆಲ್ಲವು ಹೊಗಳುವಂತೆ ಬಾಳಿ ಬದುಕಿದ. ಜಿನವಲ್ಲಭನ ಜೀವನದಲ್ಲಿ ಅವನು ಅಷ್ಟು ದೊಡ್ಡ ಆಸ್ತಿಯನ್ನು ಬಿಟ್ಟು ವಲಸೆ ಹೋಗುವ ಸನ್ನಿವೇಶವೇ ಇಲ್ಲ.

ವಸ್ತುಸ್ಥಿತಿಯನ್ನು ಇನಿತು ಪರಿಶೀಲಿಸದೆ ಸಂಜಯ ಹಂಜೆಯವರು ಸ್ವಕಪೋಲ ಕಲ್ಪನೆಯ ಶಕ್ತಿಯಿಂದ ಜಿನವಲ್ಲಭನನ್ನು ಅಣ್ಣಿಗೆರೆಯ ಸ್ಥಳಕ್ಕೆ ವಾಸ ಮಾಡಲು ಕರೆದೊಯ್ದಿದ್ದಾರೆ–ಲೇಖನದಲ್ಲಿ. ಅವರ ಲೇಖನದಲ್ಲಿ ವಲಸೆಯ ಘಟನೆ "೧೧–೧೨ನೇ ಶತಮಾನದಲ್ಲಿ ನಡೆದಿದೆ.[೧೫] ಶ್ರೀಯುತರ ಲೇಖನದಲ್ಲಿ ಖಚಿತತೆ ಇಲ್ಲ. ಜಿನವಲ್ಲಭನು ಬದುಕಿದ ಕಾಲಮಾನ ಎಷ್ಟು? ಕ್ರಿ.ಶ. ೧೨ನೇ ಶತಮಾನವಂತೂ ಅಲ್ಲ. ಪಂಪನ ಮೊಮ್ಮಗನೆಂದು ಹೇಳಿಕೊಂಡ ಬ್ರಹ್ಮಶಿವನ ಕಾಲದವರೆಗೆ ಇದು ನಡೆದಿಲ್ಲ; ಏಕೆಂದರೆ ಆತ ಪೊಟ್ಟಲಕೆರೆಯಲ್ಲಿ ಇದ್ದ:

ಇಳೆಯೊಳ್ಸಲೆ ನೆಲಸಿದ ಪೊ
ಟ್ಟಳಗೆಱೆಯೊಳ್ನೆಗಳ್ದ ಸಿಂಗರಾಜನ ಸುತನ
ಗ್ಗಳದೇವನ ಕೆಳೆಯಂ ದ್ವಿಜ
ಕುಳರತ್ನಂ ವತ್ಸಗೋತ್ರತಿಳಕಂ ಬ್ರಹ್ಮಂ ॥ ೧–೫೭

ಪರಿದರ್ತ್ಥಿ ಮುನ್ನ ಮಾಹೇ
ಶ್ವರದೊಳ್ತನಗದಱೊಳೊಳ್ಪುಗಾಣದೆ ನೆಗಳ್ದೀ
ಪರಮ ಜಿನಧರ್ಮ್ಮದೊಳಪೊ
ಕ್ಕು ರಾಗಿಪಂ ಸುಕವಿ ಪಂಪರಾಜನ ಮೊಮ್ಮಂ ॥ ೧–೫೮

'ಸಮಯಪರೀಕ್ಷೆ' ಗ್ರಂಥವನ್ನು ಸಂಪಾದಿಸಿರುವ ದಿವಂಗತ ಪ್ರೊ. ಬಿ.ಎಸ್. ಕುಲಕರ್ಣಿ ಅವರು ಇಲ್ಲಿನ ಪೊಟ್ಟಳಕೆರೆ ಊರನ್ನು ಹೈದರಾಬಾದ್ ಪಟ್ಟಣದ ಬಳಿಯ

ಪಟ್ಟಣಚೆ ಊರು ಎಂದೇ ಸ್ವೀಕರಿಸಿದ್ದಾರೆ (ಮುನ್ನುಡಿ-ಪು. xx), ಜಿನವಲ್ಲಭ ಕವಿಯು ಅಣ್ಣಿಗೆರೆ ಊರಲ್ಲಿ ನಿಂತಿದ್ದ ಎನ್ನುವುದಕ್ಕೆ ಆಗಲೂ ಏನೂ ಸಾಕ್ಷಿ ಇಲ್ಲ, ಈಗಲೂ ಏನೂ ಸಾಕ್ಷಿ ಇಲ್ಲ. ಪೊಟ್ಟಲ (೪<೫) ಕೆರೆ ಚಾಳುಕ್ಯ ಚಕ್ರವರ್ತಿ ಜಯಸಿಂಹ (II) ಜಗದೇಕಮಲ್ಲ (I) ರಾಜನಿಗೆ ರಾಜಧಾನಿ ಆಗಿತ್ತು. ಅರ್ಥಾತ್ ಕರ್ಣ್ನಾಟಕ ಸಾಮ್ರಾಜ್ಯದ ರಾಜಧಾನಿ ಆಗಿತ್ತು. ಅದೇ ವತ್ಸಗೋತ್ರದಲ್ಲಿ ಹುಟ್ಟಿದ ಇಮ್ಮಡಿ ನಾಗವರ್ಮ 'ಛಂದೋವಿಚಿತಿ', 'ಅಭಿದಾನ ವಸ್ತುಕೋಶ', 'ಕಾವ್ಯಾವಲೋಕನ' ಮತ್ತು 'ವರ್ಧಮಾನ ಪುರಾಣ' ಕೃತಿಗಳನ್ನು ಕಳಿಸಿ ಜಯಸಿಂಹನ ಕಟಕಕ್ಕೆ ಆಚಾರ್ಯನಾಗಿದ್ದ (ಕಟಕಾಚಾರ್ಯ). ಸುಮಾರು ಕ್ರಿ.ಶ. ೧೦೩೩-೧೦೪೨ರ ಅವಧಿಯಲ್ಲಿ (ವರ್ಧಮಾನ ಪುರಾಣವನ್ನು ಬರೆದ ಕಾಲದಲ್ಲಿ) ಪೊಟ್ಟಳ ಕೆರೆಯಲ್ಲೇ ಇದ್ದ (ಇದು ಈಗಿನ ಪಟ್ಟಣ ಚೆರು). ಮಥಿತಾರ್ಥವಿಷ್ವೇ -ಬ್ರಹ್ಮಶಿವನ ಕಾಲದವರೆಗೆ ಪಂಪನ ಕುಟುಂಬದವರು ತೆಲಂಗಾಣ ಪ್ರದೇಶವನ್ನು ಬಿಟ್ಟು ಎಲ್ಲಿಯೂ ಹೋಗಿಲ್ಲ. ಇದನ್ನು ಪಂಪನ ಮಾತಿನಲ್ಲಿ ಹೇಳುವುದಾದರೆ 'ಟಾಠಡಾಢಣ' ನಿರ್ಣ್ಣಯ-ನಿತ್ಯಸತ್ಯ (ವಿ.ವಿ., ಆಶ್ವಾಸ, ೬ ಪದ್ಯ-೨೬).

ಏನಾದರೂ ಮಾಡಿ ಪಂಪಕವಿಯನ್ನು ಬನವಾಸಿ, ಪುಲಿಗೆರೆಗೆ ಒಂದಷ್ಟು ಕಾಲ ಎಳೆದು ನಿಲ್ಲಿಸಿದರು. ಆ ಮಾತು ಪೊಳ್ಳು ಎನಿಸಿದಾಗ, ಈಗ, ಜಿನವಲ್ಲಭನ ಶಾಸನದಲ್ಲಿ ಬಂದಿರುವ 'ಅಣ್ಣಿಗೆರೆ' ಊರ ಪ್ರಸ್ತಾಪವನ್ನು ಹಿಡಿದುಕೊಂಡು ಆ ಊರಿಗೆ ಎಳೆದು ಒಯ್ಯುತ್ತಿದ್ದಾರೆ, ಇದಕ್ಕಾಗಿ ಒಂದು ಸುವ್ಯವಸ್ಥಿತ ಯೋಜನೆಯನ್ನೇ ಹಾಕಿದರು. ಡಾ. ಎಂ.ಎಂ. ಕಲ್ಬುರ್ಗಿ ತಮಗೆ ಬಂದ ಪಂಪ ಪ್ರಶಸ್ತಿ ಹಣವನ್ನು ಅಣ್ಣಿಗೆರೆಯಲ್ಲಿ ಸ್ಮಾರಕ ಕಟ್ಟಿಸಲು ದಾನ ನೀಡಿದರು. ನನಗೂ ಪಂಪ ಪ್ರಶಸ್ತಿಯೊ ಇಲ್ಲವೇ ನೃಪತುಂಗ ಪ್ರಶಸ್ತಿಯೋ ಬಂದರೆ ಆ ಹಣವೆಲ್ಲವನ್ನೂ ಪಂಪ 'ಕವಿತಾ ಗುಣಾರ್ಣ್ಣವ' ಎಂಬ ಬಿರುದಿನಿಂದ ಮೆರೆದ ಆಸ್ಥಾನ ಇದ್ದ ಊರು ಇಮ್ಮಡಿ ಅರಿಕೇಸರಿಯ ರಾಜಧಾನಿ ಬೋಧನದಲ್ಲಿ ಸ್ಮಾರಕವನ್ನು ಕಟ್ಟಲು ಕೊಡುತ್ತೇನೆ. ಇದು ಕೂಡ 'ಟಾಠಡಾಢಣ' ಉಕ್ತಿ; ನಾಡು ಕೊಟ್ಟು ನೋಡಲಿ.

ಪಂಪನು ಕ್ರಿ.ಶ. ೧೦ನೇ ಶತಮಾನದಲ್ಲಿ ಇದ್ದ.

(೧) ಜನನದ ತೇದಿ : ದುಂದುಭಿಸಂವತ್ಸರ : ಕ್ರಿ.ಶ. ೯೦೨.

(೨) ಸನ್ಮಾನ ಪಡೆದ ಕೃತಿಗಳನ್ನು ರಚಿಸಿದ ಕಾಲ

ಶಕವರ್ಷ ೮೬೩, ಪ್ಲವ ಸಂವತ್ಸರ ಕಾರ್ತಿಕ ನಂದೀಶ್ವರ ಪರ್ವದಲ್ಲಿ=ಕ್ರಿ.ಶ. ೯೪೧, ನವ್ವೆಂಬರ ೭ರ ಒಳಗೆ. ಆದಿಪುರಾಣವನ್ನು ರಚಿಸಿ ಮುಗಿಸಿದುದು ಕ್ರಿ.ಶ. ೯೪೧ ನವ್ವೆಂಬರ್ ೭, ಆದಿತ್ಯವಾರದಂದು.

ಅಣ್ಣಿಗೆರೆ ದೇಶಗತಿ-ದೇಶಪಾಂಡೆ-ಮನೆತನಕ್ಕೆ ಸಂಬಂಧಪಟ್ಟ ದಾಖಲೆ ಕ್ರಿ.ಶ. ೧೬೪೬ರದು; ಅದೂ ಕವಲು ನಾಮಪತ್ರ !

ಪಂಪನ ಕಾಲಕ್ಕೂ ಈ ಕವಲು ನಾಮಾ ಕಾಲಕ್ಕೂ ಮಧ್ಯ ಅಂತರ (೧೭-೧೦) ಸುಮಾರು ೭೦೦ ವರ್ಷ (ಖಚಿತವಾಗಿಯೂ ೧೬೪೬-೯೪೬= ೭೦೦ ವರ್ಷಗಳು.

ಕರೀಂ ನಗರ ಶಾಸನ). ೭೦೦ ವರ್ಷದ ಇತಿಹಾಸ ಕತ್ತಲೆಯಲ್ಲಿ ಇದೆ. ಇಲ್ಲಿ ಸಂಬಂಧಗಳು ಇವೆ ಎಂದು ಹೇಳಲು ಆಧಾರಗಳೇ ಇಲ್ಲ – Q.E.D. ಈ ಸ್ವಕಪೋಲ ಕಲ್ಪನೆಗಳನ್ನೂ ಯಾರೂ ನಂಬಬೇಕಾಗಿಲ್ಲ.

■

ಅಡಿ ಟಿಪ್ಪಣಿಗಳು

೧. ಕರ್ನಾಟಕ ಲೋಚನ, ಸಂಪುಟ ೩೦, ಸಂಚಿಕೆ ೦೨, ಜುಲೈ-ಡಿಸೆಂಬರ್ ೨೦೧೬, ಪು. ೪೦, ವಾಸ್ತವದಲ್ಲಿ ಕಲಹದ ಈ ಚಳುವಳಿ ಆರಂಭವಾದದ್ದು ಊಕಲ್ಲು-ಅಣ್ಣಿಗೇರಿ ಮುಂತಾದ ಆ ಬೆಳುವಲ ನಾಡಿನಲ್ಲಿ, ತೆಲಂಗಾಣದ ಸಬ್ಬಿನಾಡಿನಲ್ಲಿ ಅಲ್ಲ.

೨. ಪಂಪಭಾರತ ಎಂಬ 'ವಿಕ್ರಮಾರ್ಜುನ ವಿಜಯಂ' ಮೈ.ವಿ.ವಿ. ಪ್ರಸಾರಾಂಗ, ಪ್ರಕಟಣೆ ಆ. ೧೪ ಪದ್ಯಗಳು, ೫೮-೬೧.

೩. ಜಿನವಲ್ಲಭನ ವೃಷಭಾದ್ರಿಯ ಶಿಲಾಶಾಸನ, ಪಂಕ್ತಿ, ಸಿನ್ನು ನೋಡಿ.

೪. 'ಸಾಪೇಕ್ಷ' ಕೃತಿಯಿಂದ (ಕ್ರಿ.ಶ. ೨೦೦೦) ಎತ್ತಿ ಕೊಟ್ಟಿದ್ದೇನೆ.

೫. 'ಜಿನವಲ್ಲಭುನಿ ಗಂಗಾಧರಂ ಶಿಲಾಶಾನಮು' (ಡಾ॥ ಎನ್. ವೆಂಕಟರಮಣಯ್ಯ) ತೆಲುಗು ಮಾಸಪತ್ರಿಕೆ 'ಭಾರತಿ' ಮಾರ್ಚ್ ೧೯೬೭ರ ಸಂಚಿಕೆ. ಇದರ ಅನುವಾದ ಕನ್ನಡದಲ್ಲಿ ಬಂದಿದೆ, ನೋಡಿ : ಪ್ರಬುದ್ಧ ಕರ್ನಾಟಕ, ಸಂಪುಟ-೫೦, ಸಂಚಿಕೆ-೩, ಪು. ೨೭-೪೧.

೬ Dr. N. Venkataramanayya "The Kurkyala Inscription of Jinavallabha", Ep. Andhrica Vol. II. pp. 21-30.

೭. ಡಾ॥ ಜಿ.ಎಸ್. ಗಾಯಿ, "ಪಂಪನ ತಮ್ಮ ಜಿನವಲ್ಲಭನ ಶಿಲಾಶಾಸನ" ಪ್ರ.ಕ. ಸಂಪುಟ-೫೩, ಸಂಚಿಕೆ-೪, ಪು. ೭೩-೮೩.

೮. ಯಶಸ್ತಿಲಕ ಚಂಪು :......ಚಾಲುಕ್ಯಕುಲಜನ್ಮನಃ ಸಾಮನ್ತಚೂಡಾಮಣೇಃ ಶ್ರೀಮದರಿಕೇಸಿರಿಣಃ ಪ್ರಥಮಪುತ್ರಸ್ಯ ಶ್ರೀಮದ್ವಾಗ್‌ರಾಜ ಪ್ರವರ್ಧಮಾನ ವಸುಧರಾಯಾಂ ಗಂಗಾಧರಾಯಾಂ ವಿನಿರ್ಮಾಪಿತಮಿದಂ ಕಾವ್ಯಮಿತಿ ॥ Yasastilaka And Indian Culture (Dr. K.K. Handiqui) p. 3.

೯. ಶಾಸನಪಾಠವನ್ನು ಡಾ॥ ಎನ್. ವೆಂಕಟರಮಣಯ್ಯನವರು ಮೊದಲು ಪ್ರಕಟಿಸಿದರು; ಅನಂತರ ಡಾ॥ ಜಿ.ಎಸ್. ಗಾಯಿ ಅವರು ಅಲ್ಲಲ್ಲಿ ಆಗಿದ್ದ ತಪ್ಪುಗಳನ್ನು ಸೂಕ್ತ ರೀತಿಯಲ್ಲಿ ತಿದ್ದಿ ಪ್ರಕಟಿಸಿದರು. ಇನ್ನೂ ಉಳಿದ ತಪ್ಪುಗಳನ್ನು ಈಗ ಇಲ್ಲಿ ತಿದ್ದಿದೆ.

೧೦. ಡಾ॥ ವೆಂಕಟರಮಣಯ್ಯನವರು 'ವಬ್ಬಣಬ್ಬೆ' ಎಂದು ಓದಿದ್ದರು ; ಅದನ್ನು ಡಾ॥ ಎಂ.ಎಂ. ಕಲ್ಬುರ್ಗಿ ಅವರು 'ಅಬ್ಬಣಬ್ಬೆ' ಎಂದು ಮೊದಲ ಬಾರಿಗೆ ತಿದ್ದಿದರು.

೧೧. 'ವೃತ್ತ' ಎಂದು ಇಬ್ಬರೂ ತಪ್ಪಾಗಿ ಓದಿದ್ದಾರೆ. ನೋಡಿ :
(a) ಪ್ರಬುದ್ಧ ಕರ್ನಾಟಕ, ಸಂಪುಟ-೫೩, ಸಂಚಿಕೆ-೪, ಪು. ೮೩
(b) Epigraphia Andhrica, Vol. II, p 30
(c) 'ಭಾರತಿ' (ತೆಲುಗು) ೧೯೬೭ರ ಮಾರ್ಚ್ ತಿಂಗಳ ಸಂಚಿಕೆ, ಪು. ೨೧.

೧೨. ibid.

೧೩. ಡಾ॥ ಎನ್. ವೆಂಕಟರಮಣಯ್ಯ ಅವರೇ ಸರಿಯಾಗಿ ಓದಿದ್ದಾರೆ.

೧೪. ಡಾ॥ ಜಿ.ಎಸ್. ಗಾಯಿ ಅವರು 'ಪ್ರಬುದ್ಧ ಕರ್ನಾಟಕ' ಸಂಪುಟ-೫೩, ಸಂಚಿಕೆ-೪, ಪು. ೮೩ರಲ್ಲಿ 'ಕ್ಕೋ' ಎಂದು ಓದಿ 'ಕೋ' ಎಂದು ತಿದ್ದಿಕೊಳ್ಳಲು ಸೂಚಿಸಿದ್ದಾರೆ. ವಾಸ್ತವದಲ್ಲಿ ದ್ವಿತ್ವ 'ಕ್ಕೋ' ಅಲ್ಲಿ ಇಲ್ಲವೇ ಇಲ್ಲ. ಡಾ॥ ಎನ್. ವೆಂಕಟರಮಣಯ್ಯನವರೇ ಸರಿಯಾಗಿ ಓದಿದ್ದಾರೆ.

೧೫. ಅವರ ಲೇಖನ, ಪು. ೪೦.

ಪಂಪ ಪೆರುಂದೇವನಾರ್ ಕಾವ್ಯದಿಂದ ಪ್ರೇರಿತನೇ?

◆

ಎಸ್. ಬಿಳಿಗಿರಿವಾಸನ್

"ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ" ಎಂದು ಕೀರ್ತಿಸಲ್ಪಟ್ಟು ಆದಿಕವಿ. ಅಗ್ರಕವಿ ಎಂದು ಪ್ರಖ್ಯಾತನಾಗಿರುವ ಪುರಾಣಕವಿ, ನಾಡೋಜನಾಗಿ 'ಸುಕವಿಜನಮಾನಸೋತ್ತಂಸಹಂಸ' 'ಸಂಸಾರ ಸಾರೋದಯ', 'ಸರಸ್ವತಿ ಮಣಿಹಾರ' ಎಂದು ಬಿರುದಾಂಕಿತನಾದ ಮಹಾಕವಿ ಕವಿತಾಗುಣಾರ್ಣವ ಪಂಪನು ಬಹು ಭಾಷೆಗಳಲ್ಲಿ ಪರಿಣತಿ ಹೊಂದಿದ್ದನೆಂಬುದು ಹೆಮ್ಮೆಯ ಸಂಗತಿಯಾಗಿದೆ. ಅವನಿಗೆ ಪರಿಚಯವಿದ್ದ ಭಾಷೆಗಳಲ್ಲಿ ಪ್ರಾಕೃತ, ಸಂಸ್ಕೃತ, ಕನ್ನಡ, ತೆಲುಗು, ತಮಿಳು ಇದರೊಂದಿಗೆ ಮಲೆಯಾಳಂ ಭಾಷೆಯನ್ನೂ ಸೇರಿಸಬಹುದೇನೋ ! ಪ್ರಾಚೀನ ಕವಿಗಳಲ್ಲಿ ಸಾಮಾನ್ಯವಾಗಿ ಎಲ್ಲರೂ ಉಭಯ ಭಾಷಾವಿಶಾರದರಾಗಿರುವುದು ಸರ್ವವಿದಿತವಾದುದು. ಆದರೆ ಪಂಪನು ಪ್ರಾಕೃತ ಭಾಷೆಯೊಂದಿಗೆ ಬಹುಭಾಷಾ ಸರಸ್ವತಿಯ ಕೃಪೆಯನ್ನು ಎಷ್ಟರಮಟ್ಟಿಗೆ ಹೊಂದಿದ್ದನೆಂಬುದನ್ನು ಚಿಂತಿಸಿದಾಗ ಪಂಪನ ಮತ್ತೊಂದು ಮುಖದ ವಿಶ್ವರೂಪದರ್ಶನವಾಗುತ್ತದೆ.

ಪಂಪನ ಪ್ರಾಕೃತದ ಗಾಢ ಪರಿಚಯಕ್ಕೆ ಈ ಪ್ರಸಂಗ ಒಂದು ನಿದರ್ಶನ: ನಾರದನ ಬೋಧನೆಯಂತೆ ರಾಜಸೂಯಯಾಗವನ್ನು ಆರಂಭಿಸುವುದೆಂದರೆ ಮೂಢವಿಸಲನೆವೆಂದು ಶ್ರೀಕೃಷ್ಣನು ಯುಧಿಷ್ಠಿರನನ್ನು ಕುರಿತು ಹೇಳಿದನು. ಅದನ್ನು ಕೇಳಿ ಹುರುಪುಗೊಂಡ ಭೀಮನು ಹೇಳಿದ ಮಾತಿನೊಳಗಿನ ಭಾವವು ಈ ಪದ್ಯದಲ್ಲಿ ಹೀಗಿದೆ :

ಪನ್ನತರ ನಡುವನುಡಿಯ
ಲ್ಕೆನ್ನಭುಜಾರ್ಗಳಮೆ ಸಾಲ್ಗುಮೊಸೆ ಮೇಣ್ ಮುನಿ ಮೇ
ಣೆನ್ನ ನುಡಿ ಟಾಠಾಡಾಢಣ
ಮೆನ್ನಂ ಬೆಸಸುವುದು ರಾಜಸೂಯಂ ಬೇಳಲ್*

(ವಿಕ್ರಮಾರ್ಜುನ ವಿಜಯ, ೬.೨೬)

ಈ ಪದ್ಯಕ್ಕೆ ಮೂಲ ಪ್ರೇರಣೆ 'ಪ್ರಾಕೃತ ಪೈಂಗಲ'ದಲ್ಲಿರುವ ಪದ್ಯವೇ ಆಗಿದೆ ಎಂದು ಶ್ರೀ ಮುಳಿಯ ತಿಮ್ಮಪ್ಪಯ್ಯನವರು ತೋರಿಸಿದ್ದಾರೆ. ಅದೆಂದರೆ:

ಟಠ್ಠಡಢಾಣಹ ಮಜ್ಝೇ
ಗಣಭೇಓ ಹೊಂತಿ ಪಂಚ ಆಕ್ಖರ ಓ
ಛಪಚತದಾ ಜಹ ಸಂಖಂ
ಛಪ್ಪಂ ಚ ಉತ್ತಿ ದು ಕಲಾಸು

–ಪ್ರಾಕೃತ ಪೈಂಗಲ ಪುಟ ೧೬–೧೮

ಇದರ ಸಂಸ್ಕೃತ ಹೀಗಿದೆ :

ಟಠಡಢಾಣಾಂ ಮಧ್ಯೇ ಗಣಭೇದಾ ಭವರಿತಿ ಪಂಚ ಅಕ್ಷರಜ ರೂಪಾಃ ।
ಛಪಚತದಾಃ ಯಥಾಸಂಕ್ಯಂ ಘಟ್ಪಂಚ ಚತ್ವಾರಸ್ತ್ರಯೋ ದ್ವೌ ಕಲಾಸು ॥

ಇದರ ಕನ್ನಡ ರೂಪ :

ಟವರ್ಗ ಅಕ್ಷರ ಮಧ್ಯದೊಳಗೆ ಕ್ರಮವಾಗಿ ಟ–ಗಣ, ಠ–ಗಣ, ಡ–ಗಣ, ಢ–ಗಣ, ಣ–ಗಣಗಳೆಂದು ಗಣನಾಮಗಳು ಐದು ತಂತಮ್ಮಲ್ಲಿ ಅಡಕವಾಗುವ ಕಲಾ (ಮಾತ್ರ) ಸಂಖ್ಯೆಗಳಿಗನುಗುಣವಾಗಿ, ಅವುಗಳನ್ನು ಛ–ಗಣ, ಪ–ಗಣ, ಚ–ಗಣ, ತ–ಗಣ, ದ–ಗಣಗಳೆಂದು ಕರೆಯಬಹುದು.

ಮೇಲಿನ ವಿವೇಚನೆಯಿಂದ, ಭೀಮನ ಪ್ರಕೃತಿಗೊಪ್ಪುವ ಆತ್ಮವಿಶ್ವಾಸ ಯುಕ್ತವಾದ ದರ್ಪವೇ ಈ ಪದ್ಯದಲ್ಲಿ ಹೊಳೆಯುವಂತಾಗುತ್ತದೆ. "ರಾಜಸೂಯ ಯಾಗಕ್ಕೆ ವಿಘ್ನಕಾರಿಗಳಾದ ಜರಾಸಂಧಾದಿಗಳನ್ನು ಮುರಿಯುವುದು ಈ ನನ್ನ ಭುಜಾಜಾರ್ಗಳ; ಯಾಗಾಧಾರವಾದ ಛಂದಸ್ಸಿಗೆ ಆಸರೆಯೆನಿಸಿದ 'ಟಾಠಡಾಢಣ'ವೇ ಈ 'ಎನ್ನನುಡಿ'– ಹೀಗೆ ಭುಜರ್ಜಲ ವಾಗ್ಬಲಗಳೆರಡಕ್ಕೂ ನಾನೊಬ್ಬನೇ ಆಶ್ರಯವಾಗಿರುವಲ್ಲಿ ತಡೆ ಏನು? ಎನ್ನಂ ಬೆಸಸುವುದು ರಾಜಸೂಯಂ ಬೇಳಲ್ ಎಂಬುದಿದು ಭೀಮನ ದರ್ಪೋಕ್ತಿ".

ಪಂಪನ ಸಂಸ್ಕೃತ ಪಾಂಡಿತ್ಯವನ್ನು ಗಮನಿಸಿದಾಗ ಅವನಿಗೆ ಅತಿಶಯ ಪಾಂಡಿತ್ಯ ಸಂಸ್ಕೃತದಲ್ಲಿತ್ತು ಎಂದು ತಿಳಿಯುತ್ತದೆ. ಅವನೇ ಹೇಳಿಕೊಂಡಿರುವಂತೆ ಅವನ ಪೂರ್ವಜರು 'ಸಕಳ ಶಾಸ್ತ್ರವಿನಿಶ್ಚಯ ಮತಗಳಾಗಿ 'ವೇದವೇದಾಂಗ ಸಮುದ್ಯೋತಿತಮತಿಯುತ' ರಾಗಿದ್ದರು. ಇಂತಹ ಪರಂಪರೆಯಲ್ಲಿ ಜನಿಸಿದ ಪಂಪನು ವಂಶಪಾರಂಪರ್ಯವಾಗಿರುವ ಸಂಸ್ಕೃತ ಸಾಹಿತ್ಯದಲ್ಲಿ, ಪಾಂಡಿತ್ಯವನ್ನು ಪಡೆದಿದ್ದನೆಂಬುದು 'ವ್ಯಾಸಮುನೀಂದ್ರ ರುಂದ್ರ

---

* ಮದಾಂಧರಾದ ಹಗೆರಾಯರ ನಡುವನ್ನು ಮುರಿಯಲು, ಈ ನನ್ನ 'ಭುಜಾರ್ಗಳ' (ತೋಳಿನಲ್ಲಿರುವ ಅರ್ಗಳ ಎಂದರೆ ಗದೆ ಅಥವಾ ಅರ್ಗಳದಂತಿರುವ ಭುಜ) ಮಾತ್ರವೇ ಸಾಕು. ಎಲೈ ಕೃಷ್ಣನೇ ನೀನು ಅನುಕೂಲನಾಗು, ಅಲ್ಲವೇ ಪ್ರತಿಕೂಲನಾಗು; ಎನ್ನ ನುಡಿ 'ಟಾಠಡಾಢಣ' ಅದರಿಂದ 'ರಾಜಸೂಯಂ ಬೇಳಲ್ ಎನ್ನ ಬೆಸಸತಕ್ಕುದು"

ವಚನಾಮೃತವಾರ್ಧಿಯನೀಸುವೆನ್ ಕವಿ ವ್ಯಾಸನೆನೆಂಬ ಗರ್ವಮೆನಗಿಲ್ಲ' ಎಂಬ ಮಾತಿನಿಂದ ತಿಳಿದುಬರುತ್ತದೆ. ವ್ಯಾಸಭಾರತದೊಂದಿಗೆ, ಭಾರವಿ, ಭಟ್ಟನಾರಾಯಣರ ಹಾಗೂ ಇತರ ಪ್ರಖ್ಯಾತ ಸಂಸ್ಕೃತ ಕವಿ ನಾಟಕಕಾರರ ಕೃತಿಗಳ ಕೂಲಂಕಷವಾದ ಅಧ್ಯಯನದಿಂದ ಸಂಸ್ಕೃತ ಪಾಂಡಿತ್ಯವನ್ನು ಹೊಂದಿದ್ದನೆಂದು ಹೇಳಬಹುದು. ಈ ಕವಿಗಳ ಕೃತಿಗಳ ಪ್ರಭಾವವನ್ನು ಪಂಪ ಭಾರತದಲ್ಲಿ ಕಾಣಬಹುದು.

ಪಂಪನು ವಾಸವಾಗಿದ್ದದ್ದು ಆಂಧ್ರ ಪ್ರದೇಶದ 'ವೆಂಗಿಪಟು' ಎಂಬ ವೆಂಗಿಮಂಡಲದಲ್ಲಿ. ಈ ಭಾಗವು ಇಂದು ಆಂಧ್ರ ಪ್ರದೇಶವಾಗಿದ್ದರೂ ಅಂದು ಕನ್ನಡ ನಾಡೇ ಆಗಿತ್ತು. ಆದರೆ ವ್ಯಾವಹಾರಿಕ ಭಾಷೆ ತೆಲುಗು ಆಗಿತ್ತು. ತಿಂಬುಳಪಾಟಕವೆಂಬ ವೇಮುಲವಾಡದಲ್ಲಿ ಆಳುತ್ತಿದ್ದ ಚಾಲುಕ್ಯ ವಂಶದ ಎರಡನೆಯ ಅರಿಕೇಸರಿಯ ಆಸ್ಥಾನದಲ್ಲಿ ಕವಿ ಹಾಗೂ ಕಲಿಯಾಗಿ ಪಂಪನು ಆಶ್ರಯವನ್ನು ಪಡೆದಿದ್ದನು. ಪ್ರಾದೇಶಿಕ ಪ್ರಭಾವ ಹಾಗೂ ಅತೀವ ಸಾಹಿತ್ಯಾಸಕ್ತಿಯಿಂದ ಪಂಪನು ತೆಲುಗು ಸಾಹಿತ್ಯದ ಆಳವಾದ ಅಭ್ಯಾಸವನ್ನು ಮಾಡಿರುವ ಸಾಧ್ಯತೆಗಳಿವೆ. ಅಂದಿನ ದಿನಗಳಲ್ಲಿ ಕನ್ನಡ-ತೆಲುಗು ಲಿಪಿಗಳಲ್ಲಿ ಅಭೇದವಿದ್ದು ಅಧ್ಯಯನಾನುಕೂಲವಾಗಿದ್ದಿರಬಹುದು. ಅಲ್ಲದೆ ಅಂದು ಆಂಧ್ರ ಭಾಗದಲ್ಲಿ ವಾಸಿಸುತ್ತಿದ್ದ ಕನ್ನಡ ಕವಿಗಳು ಕನ್ನಡಾಂಧ್ರ ಭಾಷೆಯಲ್ಲಿ ಪಾಂಡಿತ್ಯವನ್ನು ಹೊಂದಿರುತ್ತಿದ್ದರೆನ್ನಬಹುದು. ಪಂಪನು ಆಂಧ್ರ ಪ್ರದೇಶದ 'ವೆಂಗಿಪಟು'ವಿಗೆ ಸೇರಿದವನಾದುದರಿಂದಲೂ, ಅರಿಕೇಸರಿಯ ರಾಜ್ಯವು ಆಂಧ್ರದಲ್ಲಿದ್ದುದರಿಂದಲೂ, ಪಂಪನು ಪ್ರತಿಭಾನ್ವಿತಾದುದರಿಂದ ತೆಲುಗು ಸಾಹಿತ್ಯದಲ್ಲಿಯೂ ಪ್ರಾವೀಣ್ಯತೆಯನ್ನು ಹೊಂದಿ, ತೆಲುಗಿನಲ್ಲಿಯೂ ಸಹ ಕಾವ್ಯ ರಚಿಸಿರಬಹುದೆಂದು ಹೇಳಬಹುದು. ಈ ವಿಚಾರಕ್ಕೆ ಪೂರಕವಾಗಿ ಪ್ರಸಿದ್ಧ ತೆಲುಗು ಪ್ರಾಚಾರ್ಯರಾದ ಡಾ॥ ತೆಂಗಿರಾಲ ವೆಂಕಟಸುಬ್ಬಾರಾವು ಎಂಬ ವಿದ್ವಾಂಸರು ತಮ್ಮ 'ಪಂಪ-ನನ್ನಯ' ಎಂಬ ಲೇಖನದಲ್ಲಿ ಎನ್. ವೆಂಕಟಾರಾವ್ ಅವರ 'Lives of Telugu Poets' ಎಂಬ ಕೃತಿಯಲ್ಲಿ ಪಂಪನು 'ಪದ್ಮಕವಿ' ಎಂಬ ಹೆಸರಿನಲ್ಲಿ 'ಜಿನೇಂದ್ರ ಪುರಾಣಮು' ಎಂಬ ತೆಲುಗು ಕಾವ್ಯ ರಚಿಸಿದಂತೆ ಕಂಡುಬರುವುದೆಂದೂ, ಈ ಕಾವ್ಯವು ಅನುಪಲಬ್ಧವಾಗಿದ್ದರೂ, ಈ ಕಾವ್ಯದಲ್ಲಿನ 'ಸೀಸಪದ್ಯ'ವೊಂದು 'ಪ್ರಬಂಧ ರತ್ನಾವಳಿ' ಎಂಬ ಗ್ರಂಥದಲ್ಲಿ ಉದಾಹರಿಸಲಾಗಿದೆಯೆಂದು ತಿಳಿಸುತ್ತಾರೆ. ಆ ಸೀಸ ಪದ್ಯದಲ್ಲಿ ಮಂದರ ಪರ್ವತವನ್ನು ಶ್ಲೇಷಾಲಂಕಾರದಲ್ಲಿ ವರ್ಣಿಸಲಾಗಿದೆಯೆಂದು ಈ ಸೀಸಪದ್ಯವನ್ನು ಹೀಗೆ ಉದ್ಧರಿಸುತ್ತಾರೆ :

ಸೀ॥ 'ಹರಿನಿಲಯಂಬುನು ಹರಿನಿಲಯಂಬುನು
ವಿಷಧರಾಢ್ಯಂಬುನು ವಿಷಧರಾಢ್ಯ
ಮಪ್ಸರೋಮಯಮುನುನಪ್ಸರೋಮಯಮುನು
ವನವಿಲಾಸಮುನು ಪಾವನವಿಲಾಸ
ಮುನ್ನತ ಕರಿಶೃಂಗ ಮುನ್ನತ ಕರಿಶೃಂಗ
ಮಿಂದು ಕಾಂತಸ್ರವಮಿಂದುಕಾಂತ

ಮುರುಕಲನ ಕುಲಂಬುನುರುಕಲನ ಕುಲಂಬು
ನಂಶು ಕಾಂತದ್ಯೋತಿ ನಾಂಶುಕಾಂತ

ಗೀ॥ ಮೊನರ ನವಶತ ಸಾಹಸ್ರಯೋಜನೋನ್ನ
ತಮುನು ಪದಿವೇಲ ಯೋಜನಲಮರುವಲಮು
ಗಲಿಗಿ ಕನಕಾದ್ರಿ ಕಿನ್ನೋಟ ಗಲಿಗತನರಿ
ಪ್ರಥಿತಮೆಯೊಪ್ಪ ಮಂದರ ಪರ್ವತಂಬು

ಶ್ರೀ ಮುಳಿಯ ತಿಮ್ಮಪ್ಪಯ್ಯನವರು 'ಪದ್ಮಕವಿ'ಯೇ ಪಂಪಕವಿ ಎಂದು ಸ್ಪಷ್ಟಗೊಳಿಸಿದ್ದಾರೆ. ಈ ಸಿದ್ಧಾಂತಕ್ಕೆ ಪಂಪಭಾರತದ ಪದ್ಯವೊಂದರಲ್ಲಿ ಮಾಹಿತಿಯಿರುವುದನ್ನು ಆಧಾರವಾಗಿ ನೀಡುತ್ತಾರೆ.

ಪಂಪಂ ಧಾತ್ರೀವಳಯ ನಿ
ಳಿಂಪಂ ಚತುರಂಗ ಬಲಭಯಂಕರಣಂ ನಿ
ಷ್ಕಂಪಂ ಲಲಿತಾಲಂಕರ
ಣಂ (ಪಂಚಶರೈ) ಕ ರೂಪನಪಗತ ಪಾಪಂ

–ವಿ.ವಿಜಯ ೧೪, ೪೯

"ಈ ಪದ್ಯದ ಕಡೆಯ ಪಾದದಲ್ಲಿ ಕಂಸದೊಳಗೆ ಇರುವ ಭಾಗವು ಕವಿಕೃತವೋ ಅಲ್ಲವೋ ಎಂಬಲ್ಲಿ ಕೃತಿಯ ಸಂಪಾದಕರಿಗೇ ಸಂಪೂರ್ಣವಾಗಿ ನಿರ್ಧಾರವಾಗಲಿಲ್ಲ. ಅದುದರಿಂದ ಉಪೋದ್ಘಾತದಲ್ಲಿ ಹೀಗೆ ಹೇಳುವರು :

'ಯಾವ ಪಾಠವನ್ನಾದರೂ ನಾವು ತಿದ್ದಬೇಕೆಂಬಿಪ್ರಾಯಪಟ್ಟರೆ, ಎಲ್ಲ ಪ್ರತಿಗಳ ಪಾಠವನ್ನೂ ಮುಂದಿಟ್ಟುಕೊಂಡು ಸಾಮಾನ್ಯವಾಗಿ ಆ ಪಾಠಗಳಲ್ಲಿಯ ಅಕ್ಷರಗಳನ್ನೇ ಅರ್ಥವಾಗುವ ರೀತಿಯಲ್ಲಿ ಮಾರ್ಪಡಿಸಿಕೊಂಡು, ಈ ಮಾರ್ಪಾಡಿನ ಪಾಠವನ್ನು ಪದ್ಯದಲ್ಲಿ ಕಂಸ ಚಿಹ್ನೆಗಳ ಮಧ್ಯೇ ಹಾಕಿ, ಇತರ ಪಾಠಗಳನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿರುವೆವು. ಆದುದರಿಂದ ನಮ್ಮ ಪಾಠವು ತೃಪ್ತಿಕರವಾಗಿಲ್ಲದಿದ್ದರೂ ಅಡಿಟಿಪ್ಪಣಿಯಲ್ಲಿಯ ಪಾಠಾಂತರಗಳಿಂದ ಪಂಡಿತರು ತಮಗೊಪ್ಪುವ ಮಾರ್ಪಾಡನ್ನು ಮಾಡಿಕೊಳ್ಳಲು ಯಾವ ಅಭ್ಯಂತರವೂ ಇರುವುದಿಲ್ಲ". (ವಿ. ವಿಜಯ ಉಪೋದ್ಘಾತ, ಪುಟ xvi) ಎಂದಿದ್ದಾರೆ.

ಅಡಿಟಿಪ್ಪಣಿಯಲ್ಲಿ ನೀಡಿರುವ ಪಾಠಗಳಲ್ಲಿ (ಕ) 'ಣಾಂಪದ್ವಿಪನೇ'–(ಖ.ಗ.ಘ) 'ಣಾಂಪ ದ್ವಿಪಮೇ'–(ಘ) 'ಣಾಂ ಪಂಚಶರಾನೀ' (ವಿ. ವಿಜಯ ಪು. ೪೧೪) ಎಂದು ಕ್ರಮವಾಗಿದೆ. ಇವುಗಳಲ್ಲಿ ಆದಿಯ ನಾಲ್ಕು ಪಾಠಗಳೂ, ಕಡೆಯ 'ನೇ–ಮೇ'ಗಳ ಕವಲನ್ನು ಬಿಟ್ಟರೆ ಒಂದೇ ರೀತಿಯಲ್ಲಿದೆ. ಆದರೆ ಒಂದೇ ರೀತಿಯಲ್ಲಿ ತಲೆದೋರಿರುವ 'ದ್ವಿಪ' ಎಂಬ ಅಕ್ಷರಗಳು ಅರ್ಥಾವಗಾಹಕ್ಕೆ ತೊಡಕಾಗಬಹುದೆಂಬುದಕ್ಕೆ ಸಂಪಾದಕರು ಆ ಮಾತೃಕೆಗಳನ್ನು ಅಲ್ಲಗಳೆದಿರಬಹುದು. ಜೈನ ತೀರ್ಥಂಕರರಲ್ಲಿ 'ಪದ್ಮಪ್ರಭ' ಎಂಬುದು

ಆರನೆಯ ತೀರ್ಥಂಕರನ ಹೆಸರು. ತೀರ್ಥಂಕರರ ಭವಾವಳಿಗಳಲ್ಲಿ 'ಪದ್ಮನಾಭ-ಪದ್ಮೋತ್ತರ-ಪದ್ಮಸೇನ-ಪದ್ಮರಥ' ಮೊದಲಾದ ಪದ್ಮಾಂಕಿತ ನಾಮಗಳು ಕಂಡುಬರುತ್ತವೆ. ಆ ಹೆಸರುಗಳಲ್ಲಿ ಬಹುಶಃ 'ಪದ್ಮಪ್ರಭ' ಅಥವಾ 'ಪದ್ಮನಾಥ' ಎಂಬುದೇ ಪಂಪನ ಹೆಸರಿನ ಮೂಲರೂಪವಾಗಿರಬಹುದು. 'ಪದ್ಮಪ್ರಭ'-ಪದ್ಮಪ್ಪ (ಪದ್ಮ+ಅಪ್ಪ) ಪದ್ಮಪ-ಪದ್ದಪ(ಪ್ಪ)-ಪಮ್ಮಪ ಎಂದಾಗಿ ಮಧ್ಯದ 'ಮ್ಮ'ಕಾರವು ಸೊನ್ನೆಯಾಗಿ 'ಪಂಪ' ಎಂದು ನೆಲೆಗೊಂಡಿರಬೇಕು ಎನ್ನುತ್ತಾ 'ಪಂಪ' ಎಂಬ ಹೆಸರು 'ಪದ್ಮಪ 'ಅಥವಾ 'ಪದ್ದಪ' ಎಂಬುದ ಸಂಗ್ರಹರೂಪವಾಗಿದ್ದು ಮೊದಲ ನಾಲ್ಕು ಮಾತೃಕೆಗಳನ್ನಾಧರಿಸಿದರೆ ತಿದ್ದುವುದು ಅತಿ ಸುಲಭವಾಗುವುದೆಂದು ಹೀಗೆ ತೋರಿಸಿದ್ದಾರೆ :

ಪಂಪಂ ಧಾತ್ರೀವಳಯನಿ
ಳಿಂಪಂ ಚತುರಂಗ ಬಲ ಭಯಂಕರಣಂ ನಿ
ಷ್ಕಂಪಂ ಲಲಿತಾಲಂಕರ
ಣಂ ಪದ್ಮ(ದ್ದ)ಪನೇಕರೂಪನಪಗತ ಪಾಪಂ

ಕವಿ ತನ್ನ ಹೆಸರನ್ನು 'ಪಂಪ' ಎಂದು ಈ ಪದ್ಯದ ಆದಿಯಲ್ಲಿಯೇ ಸೂಚಿಸಿದ್ದಾನೆ. ಕಡೆಯಲ್ಲಿ ಮತ್ತೊಮ್ಮೆ ರೂಪಾಂತರವಾಗಿಯೂ ಅದನ್ನೇ ಹೇಳಿದರೆ ಪುನರುಕ್ತಿಯಾಗುವುದಲ್ಲವೇ ಎಂಬುದಾಗಿ ಕೇಳಬಹುದು. ಈ ಆಕ್ಷೇಪದಲ್ಲಿ ಹುರುಳಿಲ್ಲವೆಂದಿದ್ದಾರೆ.

ಈ ಪದ್ಯದಲ್ಲೊಡಮೂಡಿದ ಜಾಣ್ಮೆಯನ್ನವಧಾರಿಸಿದರೆ 'ಧಾತ್ರೀವಳಯನಿಳಿಂಪ' ನೆಂಬುದರಿಂದ ಕವಿ ಬ್ರಾಹ್ಮಣಕುಲೋದ್ಭವನು. 'ಚತುರಂಗಬಲ ಭಯಂಕರಣ' ನೆಂಬುದರಿಂದ ಕ್ಷತ್ರಿಯ ವೃತ್ತಿಯವನು, 'ಲಲಿತಾಲಂಕರಣ'ನೆಂಬುದರಿಂದ ಆ ಬ್ರಾಹ್ಮಣ ಕ್ಷತ್ರಿಯ ಸ್ವಭಾವಯುಕ್ತನಾದ ಶೃಂಗಾರ ಪ್ರಿಯನು ಎಂಬ ನಾನಾ ರೂಪಶೀಲಗಳು ಪಂಪನಲ್ಲಡಕವಾಗುತ್ತಿವೆ. ಆದರೂ ಅವನು 'ಏಕರೂಪ'ನು ಎಂಬಲ್ಲಿ ಒಂದು ವಿರೋಧವೂ ಹೊಳೆಯುಬಹುದು. 'ಅಪಗತಪಾಪ' ಎಂಬಲ್ಲಿ 'ಪಾಪರಹಿತನು' ಎಂಬ ಬಾಹ್ಯಾರ್ಥದೊಡನೆ, ಆಂತರಿಕವಾದ ಆ ವಿರೋಧಾರ್ಥವೂ ಮಾಸಿಹೋಗಿರಬೇಕೆಂದು ತೋರುತ್ತಿದೆ. 'ಪದ್ಮಪ-ಪದ್ದೆಪ-ಪಮ್ಮಪ' ಎಂಬುವುಗಳೊಳಗೆ ಅನೇಕ ರೂಪಾಕ್ಷರಗಳಿವೆಯಷ್ಟೆ. ಅಪಗತವಾದ (ಹಿಂದೋದಲ್ಪಟ್ಟ)ರೆ, ಏಕರೂಪವಡೆದ ಆ 'ಪಾಪಂ' ಎಂಬ ಅಕ್ಷರದ್ವಯವೇ 'ಪಂಪಂ' ಎಂದಾಗುತ್ತದೆ. ಇದೇ ವಿರೋಧ ಪರಿಹಾರ. ಕವಿಯಾಶಯವಿದೇ ಆಗಿದ್ದರೆ, 'ಪಂಪಂ-ಪದ್ಮಪಂ' ಎಂಬಲ್ಲಿ ದ್ವಿರುಕ್ತಿ ಇದೆಯೋ ಎಂಬ ಹಿಂದಿನ ಸಂದೇಹಕ್ಕೂ ಆಸ್ಪದವಿಲ್ಲ. ಈ ಯುಕ್ತತೆಯನ್ನು ವೇಮುಲವಾಡ ಶಾಸನದ ೧೩ನೆಯ ಪದ್ಯವೂ ಉದ್ಧರಿಸುವಂತೆ ಕಾಣುತ್ತದೆ :

ಸಾಮಂತಾನ್ದಣ್ಣ ಮುಖ್ಯಾನ್ನಿಜಭುಜ ಪರಿಘಾಃ ಪ್ರಸ್ಫುರದ್ ಖಡ್ಗಧಾರಾಃ
ನೀರಾಂಭೋರಾಶಿಮಗ್ನಾಂಸ್ತುರಗ ಕರಿಘಟಾಪತ್ತಿ ಸಂಪತ್ತಿಯುಕ್ತಾನ್
ಕೃತ್ವಾಪದ್ಧಾರ್ಯಮಾರ್ಯಃ ಸ್ವಜನಪರಿಜನ್ಯೈ(ಃ) ಸನ್ನಿಹಂತ್ಯಾಜಿರಂಗೇ
ಕೃದ್ಧೇ ಗೋವಿಂದರಾಜ್ಯಹರಣಮುಪಗತೋ ರಕ್ಷಿತೋ ಯೇನ ವಿಜ್ಜಃ

-JAHRS, vol. VI, Parts 3 & 4 pages 186-187

ಈಗಿರುವಂತೆಯೇ ನೋಡಿದರೆ, ಈ ಪದ್ಯವು ದೋಷಪೂರಿತವಾಗಿದೆ ಎಂಬುದು ಸಂಸ್ಕೃತವನ್ನರಿತವರಿಗೆಲ್ಲಾ ತಿಳಿಯುವ ಸಂಗತಿ. ಆದುದರಿಂದ ಈ ಶಾಸನ ಭಾಗವನ್ನು ಸಾಧ್ಯವಾದಷ್ಟು ನಿಷ್ಪಕ್ಷಪಾತವಾದ ದೃಷ್ಟಿಯಿಂದ ಪರಿಶೀಲಿಸಿ ಹೀಗೆ ತಿದ್ದಬೇಕಾಯಿತು ಎಂದಿದ್ದಾರೆ ಶ್ರೀ ಮುಳಿಯ ತಿಮ್ಮಪ್ಪಯ್ಯನವರು.

'ಸಾಮಂತಾನ್ ದಂಡ ಮುಖ್ಯಾನ್ನಿಜಭುಜಪರಿಘಪ್ರಸ್ಫುರತ್ಖಡ್ಗಧಾರಾ
ನ್ನೀರಾಂಭೋರಾಶಿಮಗ್ನಾಂಸ್ತುರಗ ಕರಿಘಟಾಪತ್ತಿ ಸಂಪತ್ತಿಯುಕ್ತಾನ್
ಕೃತ್ವಾ ಪದ್ಮಾ(ದ್ದಾ)ರ್ಯಮಾಯಂ ಸ್ವಜನಪರಿಜನೈಸ್ಸನ್ನಿಹತ್ಯಾಜಿರಂಗೇ
ಕ್ರುದ್ಧೇ ಗೋವಿಂದರಾಜೇ ಶರಣಮುಪಗತೋ ರಕ್ಷಿತೋ ಯೇನ ಬಿಜ್ಜಃ

("ಗೋವಿಂದರಾಜನು ಕ್ರೋಧವಡೆದು ಆಜಿರಂಗದಲ್ಲಿದಿರಾಗಲು ತನ್ನ ಕಡೆಯ ಸಾಮಂತ ದಂಡಾಧಿಕಾರಿ ಪ್ರಭೃತಿಗಳನ್ನು ರಣಕುತೂಹಲಿತರನ್ನಾಗಿಯೂ ಪದ್ಮಾ(ದ್ದಾ)ರ್ಯನನ್ನು ಆ ಸಾಮಂತಾದಿ ಸೈನ್ಯಕ್ಕೆ ಆರ್ಯ(ನಾಯಕ)ನನ್ನಾಗಿಯೂ ಮಾಡಿ ಸ್ವಜನ ಪರಿಜನದೊಡಗೂಡಿ ಹೋರಾಡಿದ ಅರಿಕೇಸರಿಯಿಂದ ಶರಣಾಗತನಾದ ಬಿಜ್ಜನು ರಕ್ಷಿಸಲ್ಪಟ್ಟನು.")

ಹೀಗೆ ಶರಣಾಗತನಾದ ಬಿಜ್ಜನನ್ನು ರಕ್ಷಿಸುವ ಗುರಿಯಿದ್ದ ಅರಿಕೇಸರಿಗೂ ಗೋವಿಂದರಾಜನಿಗೂ ನಡೆದ ಹೋರಾಟವು 'ವಿಕ್ರಮಾರ್ಜುನ ವಿಜಯ'ದಲ್ಲಿಯೂ ಸೂಚಿತವಾಗುತ್ತಿದೆ. ಇದರಿಂದ ಕವಿಗೆ ರೂಢಿವಡೆದುದು ಪಂಪನೆಂಬ ಹೆಸರಾದರೂ 'ಪದ್ಮಪ–ಪದ್ದಪ (ಪದ್ದ+ಆರ್ಯ)' ಎಂಬುದೇ ತನ್ಮೂಲರೂಪವೆಂದು ಸಿದ್ಧವಾಗುತ್ತದೆ ಯಲ್ಲವೇ ಎಂದಿದ್ದಾರೆ ಶ್ರೀ ಮುಳಿಯ ತಿಮ್ಮಪ್ಪಯ್ಯನವರು. ಹೀಗೆ ಪದ್ಮಪನೇ ಪಂಪನಾಗಿದ್ದಾನೆ. ಈ ಪದ್ಮಕವಿಯೇ ತೆಲುಗಿನ ಕಾವ್ಯಕರ್ತೃ ಎನ್ನಬಹುದು.

ಈ ಹಿನ್ನೆಲೆಯಲ್ಲಿ ಪಂಪನಿಗೆ ತೆಲುಗು ಸಾಹಿತ್ಯವು ಕರತಲಾಮಲಕವಾಗಿದ್ದು ತೆಲುಗಿನಲ್ಲಿಯೂ ಪ್ರೌಢಕಾವ್ಯವನ್ನು ರಚಿಸಿರಬಹುದೆಂದು ತಿಳಿಯಬಹುದು. ಹೀಗೆ ಪಂಪನು ಕನ್ನಡಾಂಧ್ರ ಭಾಷೆಯಲ್ಲಿ ಕಾವ್ಯವನ್ನು ರಚಿಸಿದ ಸವ್ಯಸಾಚಿ ಎನ್ನಬಹುದು.

ಪ್ರಾಕೃತ ಸಾಹಿತ್ಯವನ್ನೂ, ವಂಶಪರಂಪರೆಯಿಂದ ಸಂಸ್ಕೃತ ಸಾಹಿತ್ಯವನ್ನೂ,ಪ್ರಾದೇಶಿಕ ಪ್ರಭಾವದಿಂದ ತೆಲುಗು ಸಾಹಿತ್ಯವನ್ನು ತನ್ನದಾಗಿಸಿಕೊಂಡ ಕವಿ. ತಮಿಳು ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿರುವುದನ್ನು ಊಹಿಸಲು ಸಾಧ್ಯವಿದೆ. ಹೆಮ್ಮೆಯೂ ಆಗುತ್ತದೆ. ತಮಿಳಿನ ಪೆರುಂದೇವನಾರ ಕ್ರಿ.ಶ. ೮೫೦ರಲ್ಲಿದ್ದ ಪಲ್ಲವದೊರೆ ಮೂರನೆಯ ನಂದಿವರ್ಮನ ಆಶ್ರಯದಲ್ಲಿದ್ದವನು. 'ಭಾರತವೆಂಬ' ('ವೆಂಬ' ಎಂಬುದು ತಮಿಳು ವೃತ್ತ ಜಾತಿಯ ಹೆಸರು) ಕಾವ್ಯವನ್ನು ರಚಿಸಿ ತನ್ನ ಆಶ್ರಯದಾತನ ಆಸ್ಥಾನದಲ್ಲಿ ಪ್ರಥಮ ಪ್ರವಚನವನ್ನು ನೀಡಿದನು. ಪಲ್ಲವ ದೊರೆ ಮೂರನೆಯ ನಂದಿವರ್ಮನು ಕ್ರಿ.ಶ. ೮೫೦ರ ಸುಮಾರಿಗೆ ಪಾಂಡ್ಯದೊರೆ ಶ್ರೀಮಾರಶ್ರೀ ವಲ್ಲಭನನ್ನು ಸೋಲಿಸಿದ ಕಾರಣದಿಂದ ಕವಿಯು ಅವನನ್ನು ಪ್ರಶಂಸಿಸಿ ತನ್ನ "ಭಾರತವೆಂಬ" ಕಾವ್ಯವನ್ನು ರಚಿಸಿರಬೇಕು.

ಪಂಪನು ವೇಮುಲವಾಡದ ಚಾಲುಕ್ಯ ರಾಜನಾದ ೨ನೆಯ ಅರಿಕೇಸರಿಯ ಆಸ್ಥಾನದಲ್ಲಿ ಕಲಿ ಹಾಗೂ ಕವಿಯಾಗಿದ್ದವನು. ಇವನ ಜನನವು ಕ್ರಿಶ. ೯೦೧ರಲ್ಲಿ ಆಗಿದ್ದು, ಇವನ ಭಾರತ 'ವಿಕ್ರಮಾರ್ಜುನ ವಿಜಯ'ವು ಕ್ರಿಶ. ೯೪೧ರಲ್ಲಿ ರಚಿತವಾಗಿದೆಯೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಪಂಪನಿಗೂ ಪೆರುಂದೇವ ನಾರನಿಗೂ ೮೦ ವರ್ಷಗಳ ಅಂತರವಿದೆ. ತಮಿಳು ಕವಿ ಪರಮ ವೈಷ್ಣವನಾಗಿದ್ದು ಕೃಷ್ಣನ ಪರಮ ಭಕ್ತನಾಗಿದ್ದನು. ಪಂಪನು ಜೈನಕವಿಯಾಗಿದ್ದು, ತನ್ನ ಭಾರತಕ್ಕೆ ಅರ್ಜುನನನ್ನು ನಾಯಕನನ್ನಾಗಿ ಮಾಡಿ ಅವನ ವ್ಯಕ್ತಿತ್ವವನ್ನು ತನ್ನ ಅರಸನ ಮೇಲೆ ಆರೋಪಿಸಿ 'ವಿಕ್ರಮಾರ್ಜುನ ವಿಜಯ'ವನ್ನು ರಚಿಸಿದ್ದಾನೆ. ಪಂಪನ ಕಾವ್ಯವು ಶೈಲಿಯ ಓಜೆ–ಓಜಗಳಲ್ಲಿ ಪ್ರೌಢಿಮೆಯಲ್ಲಿ ಪೆರುಂದೇವನಾರನ ವೈಖರಿಯನ್ನೇ ಹೋಲುತ್ತದೆ. ಎರಡೂ ಕಾವ್ಯಗಳು ಚಂಪೂಶೈಲಿಯಲ್ಲಿದ್ದು, 'ಭಾರತವೆಂಬ' ಪೆರುಂದೇವನಾರನ ನಿವೃತ್ತಿಪರ ಭಕ್ತಿಪ್ರಧಾನ ಕಾವ್ಯವಾಗಿದ್ದರೆ, ಪಂಪನ ಸಮಸ್ತಭಾರತವು ಪ್ರವೃತ್ತಿಕಾವ್ಯವಾಗಿದೆ. ಪಂಪನ ಭಾರತವು ಸಹಜವಾಗಿಯೇ ತಮಿಳು ಕವಿಯ ಭಾರತಕ್ಕಿಂತ ಗಾತ್ರದಲ್ಲಿ ಹಿರಿದಾದುದು. ಪೆರುಂದೇವನಾರನ ಕಾವ್ಯದ ಪದ್ಯಸಂಖ್ಯೆ ೮೩೦. ಆದರೆ ಪಂಪನ ಪದ್ಯಗಳು ೧೯೦೦.

ಡಾ॥ ಕಂಬಾಲೂರು ವೆಂಕಟೇಶ ಆಚಾರ್ಯರು (ಪ್ರಸ್ತುತ ತಂಬಿಹಳ್ಳಿ ಮಠಾಧೀಶರಾದ ವಿದ್ಯಾಸಾಗರ ಮಾಧವತೀರ್ಥರು) "ನಮ್ಮ ಆದಿಕವಿ ಪಂಪ ಮತ್ತೂ ತಮಿಳಿನ ಮಹಾಕವಿ ಪೆರುಂದೇವನಾರ ಇವರ ತುಲನಾತ್ಮಕ ಅಭ್ಯಾಸ" ಎಂಬ ಸಂಪ್ರಬಂಧವನ್ನು ರಚಿಸಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿಯನ್ನು ಪಡೆದಿರುವರು. ಈ ಗ್ರಂಥವು ೧೯೮೦ರಲ್ಲಿ ಪ್ರಕಟವಾಗಿದೆ. ಸಂಪ್ರಬಂಧದಲ್ಲಿ ಅತ್ಯಾಶ್ಚರ್ಯಕರವಾದ ವಿಚಾರಗಳನ್ನು ತಿಳಿಸಿದ್ದಾರೆ. ಅವರ ಕೂಲಂಕಷವಾದ ಅಧ್ಯಯನದಿಂದ ತಿಳಿದುಬರುವ ವಿಚಾರಗಳೆಂದರೆ ಪಂಪನು ಸಮಸ್ತ ಭಾರತದ ಕಥಾವಸ್ತುವನ್ನು ವ್ಯಾಸಭಾರತದಿಂದ ಆಯ್ದುಕೊಳ್ಳುವ ಜೊತೆಗೆ ತಮಿಳು ಕವಿ ಪೆರುಂದೆವನಾರನ 'ಭಾರತವೆಂಬ' ಎಂಬ ಕಾವ್ಯದಿಂದಲೂ ಕೆಲವು ಸಂಗತಿಗಳನ್ನು ಆರಿಸಿಕೊಂಡಿದ್ದಾನೆ. ಕಥಾವಸ್ತುವಿನಲ್ಲಿ ಅನೇಕ ಸಂಗತಿಗಳನ್ನು ಈ ತಮಿಳು ಮಹಾಕಾವ್ಯದಿಂದ ಸ್ವೀಕರಿಸಿದ್ದಾನೆ ಎನ್ನಬಹುದು. ಪಂಪನ ಭಾರತವು ವ್ಯಾಸಭಾರತ, ಭಾರವಿಯ 'ಕಿರಾತಾರ್ಜುನೀಯ', ಭಟ್ಟನಾರಾಯಣನ 'ವೇಣೀಸಂಹಾರ' ನಾಟಕಕ್ಕೂ ಋಣಿಯಾಗಿರುವುದು ಕಂಡುಬರುತ್ತದೆ.

ಪೆರುಂದೇವನಾರನ 'ಭಾರತ'ದಲ್ಲಿ ಉದ್ಯೋಗಪರ್ವ, ಭೀಷ್ಮಪರ್ವ ಮತ್ತು ಅಭಿಮನ್ಯು ವಧೆವರೆಗಿನ ದ್ರೋಣಪರ್ವವು ಲಭ್ಯವಿದ್ದು ಉಳಿದ ಪರ್ವಗಳು ಕಾಲಗರ್ಭದಲ್ಲಿ ಲೀನವಾಗಿದೆ. ಆದರೆ ಈ ಕಾವ್ಯವನ್ನು ಆಧರಿಸಿ ರಚಿತವಾದ ವಿಲ್ಲಿ ಪುತ್ತೂರರ ಭಾರತದಿಂದ ಪಂಪನು ಉಳಿದ ಮಹತ್ವದ ವಿಷಯಗಳನ್ನು ಪರ್ಯಾಯವಾಗಿ 'ಭಾರತವೆಂಬ' ಎಂಬಂತೆ ಸ್ವೀಕರಿಸಿರುವ ಸಾಧ್ಯತೆಗಳಿವೆ.

ಈ ಕವಿದ್ವಯರು ವ್ಯಾಸಭಾರತದಿಂದ ಮಾರ್ಪಡಿಸಿದ ವಿಚಾರಗಳು ನಮಗೆ ಗೌಣ. ತಮಿಳು ಕವಿ ಮತ್ತು ಕನ್ನಡ ಕವಿಗಳ ವಸ್ತುವಿನ ಸಾಮ್ಯ ಇಲ್ಲಿ ಗಮ್ಯವಾದುದು.

ಇದನ್ನು ಇದಕ್ಕೆ ಮೊದಲು ಯಾರೂ ಗುರುತಿಸಿರಲಿಲ್ಲ. ಈ ನಿಟ್ಟಿನಲ್ಲಿ ಡಾ॥ ಕೆ.ವಿ. ಆಚಾರ್ಯರ ಪ್ರಯತ್ನವು ಸ್ತುತ್ಯಾರ್ಹವಾದುದು. ಇದು ವಿಶೇಷ. ವಿಶಿಷ್ಟ ಹಾಗೂ ಆಶ್ಚರ್ಯಕರವಾದುದು. ಇಂತಹ ಅಪರೂಪವಾದ ವಿಚಾರವನ್ನು ಹೀಗೆ ವಿಶ್ಲೇಷಿಸಬಹುದು.

ಕರ್ಣನು ದುರ್ಯೋಧನನ ಪತ್ನಿ ಭಾನುಮತಿಯೊಂದಿಗೆ "ನೆತ್ತದಾಟವನ್ನು ಆಡುತ್ತಾನೆ. ಗೆಳೆಯನ ಪತ್ನಿಯಲ್ಲಿ ಅಷ್ಟೊಂದು ಸಲಿಗೆ ! ಈ ಪ್ರಸಂಗವು ವ್ಯಾಸರಲ್ಲಿಲ್ಲ. ಪಂಪಭಾರತ ಹಾಗೂ 'ಭಾರತವೆಂಬ' ದಲ್ಲಿದೆ. ವ್ಯಾಸರಲ್ಲಿ ದುರ್ಯೋಧನನ ಪತ್ನಿಯ ಹೆಸರಿಲ್ಲ. ಭಾರತವೆಂಬದಲ್ಲಿ ಅದು 'ಲಕ್ಷಣಾಯಿ'ಯಾದರೆ ಪಂಪನಲ್ಲಿ 'ಭಾನುಮತಿ' ಆಗಿದೆ. ಇದನ್ನು ಭಟ್ಟನಾರಾಯಣನ 'ವೇಣಿ ಸಂಹಾರ' ನಾಟಕದಿಂದ ಸ್ವೀಕರಿಸಿದ್ದಾನೆ.

ವ್ಯಾಸರಲ್ಲಿ ದೂರ್ವಾಸನು ಕುಂತಿಗೆ ಒಂದೇ ಮಂತ್ರವನ್ನು ನೀಡಿದರೆ ಪೆರುಂದೇವನಾರನಲ್ಲಿ ಐದು ಮಂತ್ರದ ಕಲ್ಪನೆಯಿದ್ದು ಪಂಪನು ಅವನನ್ನು ಅನುಸರಿಸಿದ್ದಾನೆ. ಮುಂದೆ ಕುಮಾರವ್ಯಾಸನೂ ಪಂಪನನ್ನು ಅನುಸರಿಸುತ್ತಾನೆ. (ಲಲನೆ ತಾ ಪಡೆದೈದು ಮಂತ್ರಗಳಲಿ).

ಕರ್ಣನ ಜನನ ವ್ಯಾಸರಲ್ಲಿ ಕುಂತಿ ಸೂರ್ಯರ ಸಂಮಿಲನದಿಂದ ಆದರೆ ಈ ಕವಿದ್ವಯರಲ್ಲಿ ಮಂತ್ರದ ಪ್ರಭಾವದಿಂದ ಒಡನೆ ಸಂಭವಿಸುತ್ತದೆ. ವ್ಯಾಸಭಾರತದಲ್ಲಿ ಕಾಣದ ಉತ್ಪತ್ತಿಯಂತೆ ಕುಂತಿಯ ಕಿವಿಯಿಂದ ಜನಿಸಿದ್ದರಿಂದ ಅವನು 'ಕರ್ಣ'ನೆನಿಸಿದೆ. ಇದು ತಮಿಳು ಕವಿಯ ಕಲ್ಪನೆಯಾದರೂ ಪಂಪನೂ ಕಣ್ಮುಚ್ಚಿ ಸ್ವೀಕರಿಸಿದ್ದಾನೆ.

ಕರ್ಣನಿಗೆ ತಾನು ಕೌಂತೇಯ ಎಂಬುದು ಕೃಷ್ಣನಿಂದ ತಿಳಿಯುತ್ತದೆ. ಕುಮಾರವ್ಯಾಸನೂ ಪಂಪನನ್ನು ಅನುಸರಿಸಿದ್ದಾನೆ. ಪಂಪನು 'ಭಾರತವೆಂಬ'ವನ್ನು ಅನುಸರಿಸಿದ್ದಾನೆ.

ಕುಂತಿಯು ಕರ್ಣನನ್ನು ಭೇಟಿಯಾಗಲು ಬಂದಾಗ ಸೂರ್ಯನ ಅಶರೀರ ವಾಣಿಯು ಕರ್ಣನನ್ನು ಎಚ್ಚರಿಸುತ್ತದೆ. ಕುಂತಿಯನ್ನು ಕೃಷ್ಣನೇ ಕಳುಹಿಸಿದ್ದಾನೆ. ಅವಳ ಮಾತನ್ನು ಒಪ್ಪಬೇಡವೆನ್ನುತ್ತಾನೆ. ಈ ಪ್ರಸಂಗವು ವ್ಯಾಸಭಾರತದಲ್ಲಿಲ್ಲ. ವ್ಯಾಸರಲ್ಲಿ ಕುಂತಿಯು ಸ್ವಯಂಪ್ರೇರಿತಳಾಗಿ ಬಂದ ಕರ್ಣನನ್ನು ಭೇಟಿಯಾಗುವಳು. ಈ ಸೂರ್ಯ ಪ್ರಸಂಗವು 'ಭಾರತವೆಂಬ' ದಲ್ಲಿದ್ದು ಪಂಪನು ಅನುಸರಿಸಿದ್ದಾನೆ.

ದುರ್ಯೋಧನನು ಅಶ್ವತ್ಥಾಮನ ಬಗೆಗೆ ಸಂಶಯವುಂಟಾಗುವಂತೆ ಕೃಷ್ಣನು ಹೂಡಿದನೆಂಬ 'ಕಪಟ ಪ್ರಪಂಚ' ವನ್ನು ಪೆರುಂದೇವನಾರನ ಮೂಲದಿಂದ ಪಂಪನು ಸ್ವೀಕರಿಸಿದ್ದಾನೆ. ಈ ಪ್ರಸಂಗವು ವ್ಯಾಸರಲ್ಲಿಲ್ಲ.

ಕೃಷ್ಣನು ಸಂಧಾನಕ್ಕಾಗಿ ಬಂದಾಗ ವ್ಯಾಸಭಾರತದಲ್ಲಿ ಮೊದಲು ಧೃತರಾಷ್ಟ್ರನಲ್ಲಿಗೆ ನೇರವಾಗಿ ಹೋಗಿ ಅನಂತರ ವಿದುರನಲ್ಲಿಗೆ ಬರುತ್ತಾನೆ. ಆದರೆ 'ಭಾರತವೆಂಬ' ಹಾಗೂ ಪಂಪಭಾರತದಲ್ಲಿ ಕೃಷ್ಣ ಮೊದಲು ವಿದುರನಲ್ಲಿಗೆ ಬರುತ್ತಾನೆ. ಇದು ಪೆರುಂದೇವನಾರನ ಮಾರ್ಪಾಡಾಗಿದೆ.

ವ್ಯಾಸಭಾರತದಲ್ಲಿ ದುರ್ಯೋಧನನ ಚುಚ್ಚುಮಾತಿಗೆ ರೋಸಿಹೋದ ವಿದುರನು ತನ್ನ ಬಿಲ್ಲನ್ನು ಮುರಿಯದೇ ಬಾಗಿಲಲ್ಲಿಯೇ ಇಟ್ಟುಹೋಗುವನು ಆದರೆ ಪೆರುಂದೇವನಾರನಲ್ಲಿ ವಿದುರನು ಬಿಲ್ಲನ್ನು ಮುರಿದು ಎದ್ದುಹೋಗುತ್ತಾನೆ. ಪಂಪನು ಅದನ್ನೇ ಅನುಸರಿಸಿದ್ದಾನೆ.

ಶ್ರೀಕೃಷ್ಣಸಂಧಾನ ಸಂದರ್ಭದಲ್ಲಿ ದುರ್ಯೋಧನನ ಸಭೆಯನ್ನು ವರ್ಣಿಸುವಾಗ ದುರ್ಯೋಧನನನ್ನು ಇಂದ್ರನಿಗೆ ಹೋಲಿಸಿ ವರ್ಣಿಸುವ ಪ್ರಸಂಗವು ಪೆರುಂದೇವ ನಾರನಲ್ಲಿರುವುದನ್ನು ಪಂಪನು ಅನುಸರಿಸಿದ್ದಾನೆ. ಅದರೊಂದಿಗೆ ಕೃಷ್ಣಭಕ್ತನಾದ ಪೆರುಂದೇವನಾರನು ದುರ್ಯೋಧನನಿಂದ ಕೃಷ್ಣಸ್ತುತಿಯನ್ನು ಮಾಡಿಸಿದ್ದಾನೆ. ಇದು ಅಸಂಗತವಾದರೂ ಕೃಷ್ಣಭಕ್ತನಾದ ಕವಿ ಯಾರಿಂದ ಬೇಕಾದರೂ ಕೃಷ್ಣಸ್ತುತಿ ಮಾಡಿಸಿದರೂ ಅದಕ್ಕೆ ಒಂದು ಅಪವಾದವಿದೆ. ಆದರೆ ಜೈನನಾದ ಪಂಪನು ತನಗೆ ಅಗತ್ಯವಿಲ್ಲದಿದ್ದರೂ ಈ ಪ್ರಸಂಗವನ್ನು ಪೆರುಂದೇವನಾರನಿಂದ ಸ್ವೀಕರಿಸಿದ್ದಾನೆ.

ವ್ಯಾಸರಲ್ಲಿ ಕರ್ಣನ ಉದಾತ್ತೀಕರಣವಿಲ್ಲ. ತಮಿಳು ಕವಿಯಲ್ಲಿ ಕಂಡುಬಂದುದನ್ನು ಪಂಪನು ಸ್ವೀಕರಿಸಿ ಕರ್ಣನನ್ನು ಮತ್ತಷ್ಟು ವೈಭವೀಕರಿಸಿದ್ದಾನೆ.

ದುರ್ಯೋಧನನು ಕೃಷ್ಣನನ್ನು ಕುರಿತು "ಇಂಥ ಕೆಳಜಾತಿಯ ಮನುಷ್ಯ ನನಗೆ ಉಪದೇಶ ಮಾಡುತ್ತಾನೆ !" ಎಂದು ಮೂದಲಿಸುವ ಪ್ರಸಂಗವು ತಮಿಳು ಕಾವ್ಯದಲ್ಲಿದ್ದು ಪಂಪನು ಅದನ್ನು ಸ್ವೀಕರಿಸಿರುವುದು ಕಂಡುಬರುತ್ತದೆ.

ವಿದುರನು ಬಿಲ್ಲು ಮುರಿಯುವ ಪ್ರಸಂಗದಲ್ಲಿ ವಿದುರನ ತಮಿಳು ಮಾತು ಪಂಪನ ಹಳಗನ್ನಡ ನುಡಿಗಳೂ ಸಮಾನವಾಗಿದೆ. ಪೆರುಂದೇವ ನಾರನಲ್ಲಿ "ವಿಲ್‌ಪಿಡಿಯೆನ್" ಎಂದಿದ್ದರೆ ಪಂಪನಲ್ಲಿ "ಇದಂ ಪಿಡಿಯೆನ್" ಎಂದಾಗಿದೆ.

ಒಂದು ಅಪೂರ್ವವಾದ ಸಂಗತಿಯೆಂದರೆ ವ್ಯಾಸಭಾರತದಲ್ಲಿ ದುರ್ಯೋಧನನ ಧ್ವಜದಲ್ಲಿ 'ಸರ್ಪ'ದ ಚಿಹ್ನೆಯಿತ್ತೆಂದು ಹೇಳಿರುವುದಿಲ್ಲ. ಆದರೆ ಪೆರುಂದೇವನಾರನು ದುರ್ಯೋಧನನ್ನು 'ಉರಗ ಪತಾಕ', 'ಫಣಿರಾಜಕೇತನ' ಎಂದು ವರ್ಣಿಸಿದ್ದಾನೆ. ಪಂಪನೂ ಇದನ್ನು ಯಥಾವತ್ತಾಗಿ ಸ್ವೀಕರಿಸಿದ್ದಾನೆ. (ಆಂಧ್ರದ ಚಂಪೂಕವಿ ತನ್ನ ಸಂಸ್ಕೃತ ಭಾಷೆಯ 'ಭಾರತಚಂಪು'ವಿನಲ್ಲಿ ಇದೇ ರೀತಿ ತಂದಿರುವನೆಂದು ತಿಳಿದುಬರುತ್ತದೆ.)

ತಮಿಳು, ಕನ್ನಡ ಕವಿಗಳ ಕಾವ್ಯಗಳಲ್ಲಿ ಪ್ರತಿ ಆಶ್ವಾಸದ ಅಂತ್ಯದಲ್ಲಿ ಸೂರ್ಯಾಸ್ತದ ರಮ್ಯ ಚಿತ್ರಣವಿರುತ್ತದೆ. ಸೂರ್ಯೋದಯವೂ ಹಾಗೆಯೇ ಬರುತ್ತದೆ.

ವ್ಯಾಸಭಾರತದಲ್ಲಿ ಭೀಷ್ಮಪರ್ವದ ಆರಂಭದಲ್ಲಿ ಬರುವ ಸುದೀರ್ಘವಾದ ಭೌಗೋಳಿಕ ವರ್ಣನೆಯು 'ಭಾರತವೆಂಬ'ದಲ್ಲಿ ಕಂಡುಬರುವುದಿಲ್ಲ, ಹಾಗೆಯೇ ಪಂಪನಲ್ಲಿಯೂ ಬರುವುದಿಲ್ಲ.

ಪೆರುಂದೇವನಾರನು ವೈಷ್ಣವನಾದರೂ ಗೀತೋಪದೇಶದ ಪ್ರಸಂಗದಲ್ಲಿನ 'ಭಗವದ್ಗೀತೆ'ಯನ್ನು ತೊರೆದಿದ್ದಾನೆ. ಇದಕ್ಕೆ ಕಾರಣ ತಿಳಿಯುವುದಿಲ್ಲ. ಜೈನನಾದ

ಪಂಪನು ಒಂದು ಪದ್ಯದಲ್ಲಿ ಭಗವದ್ಗೀತೆಯನ್ನು ಹೇಳಿ ಕೈತೊಳೆದುಕೊಂಡಿದ್ದಾನೆ. ವ್ಯಾಸಭಾರತದಲ್ಲಿ 'ಗೀತೆ'ಗಿರುವ ಪ್ರಾಶಸ್ತ್ಯ ಇವರಿಬ್ಬರ ಕೃತಿಗಳಲ್ಲಿಲ್ಲ.

ವ್ಯಾಸರಲ್ಲಿ ವಿರಾಟನ ಹಿರಿಯ ಮಗನಾದ ಶ್ವೇತನನ್ನು ಕುರಿತು ವಿವರಣೆಯಿಲ್ಲ. ಅದು ಪೆರುಂದೇವನಾರನಲ್ಲಿದ್ದು ಪಂಪನಲ್ಲಿಯೂ ಕಂಡುಬರುತ್ತದೆ.

ವ್ಯಾಸರಲ್ಲಿ ಅಭಿಮನ್ಯು ಸತ್ತ ಸುದ್ದಿಯನ್ನು ಅರ್ಜುನನಿಗೆ ಹೇಳುವ ಕೃಷ್ಣತಂತ್ರದ ಕಲ್ಪನೆಯಿಲ್ಲ. ಆದರೆ ಪೆರುಂದೇವನಾರನಿಂದ ಪಂಪನಲ್ಲಿಯೂ ಬಂದಿದೆ.

ಹೀಗೆ ಪಂಪನು ಅನೇಕ ಕಥಾಪ್ರಸಂಗಗಳಲ್ಲಿ ತಮಿಳು ಕವಿ ಪೆರುಂದೇವನಾರನಿಗೆ ಋಣಿಯಾಗಿದ್ದಾನೆ. ಇಂತಹ ಮಹತ್ವಪೂರ್ಣವಾದ ವಿಚಾರಗಳನ್ನು ಒಳಗೊಂಡಿರುವ ಡಾ॥ ಕೆ.ವಿ. ಆಚಾರ್ಯ ಅವರ ಕೃತಿಯು ಕನ್ನಡ ಸಾರಸ್ವತಲೋಕಕ್ಕೆ ಅನುವಾದದ ಮೂಲಕ ದೊರೆಯದಿರುವುದು ವಿಷಾದಕರವಾದುದು. ಈ ಕೃತಿಯನ್ನು ಡಾ॥ ಆರ್.ಸಿ. ಹಿರೇಮಠರು ಪ್ರೋತ್ಸಾಹಿಸಿದ್ದು, ಡಾ॥ ದೇಜಗೌ ಅವರು ಪ್ರಶಂಸಿರುವುದು ಕಂಡುಬರುತ್ತದೆ. ಈ ವಿಚಾರವನ್ನು ಕನ್ನಡದ ಹಿರಿಯ ವಿದ್ವಾಂಸರುಗಳಿಗೆ (ಬೆಂಗಳೂರಿನಲ್ಲಿ ಮಾತ್ರ) ತಿಳಿಸಿದಾಗಲೂ ಸಹಾ ಇದರ ಬಗ್ಗೆ ತಾತ್ಸಾರ ಭಾವವನ್ನು ವ್ಯಕ್ತಪಡಿಸಿರುವುದನ್ನು ಕಂಡಾಗ ಕನ್ನಡದ ಆದಿಕವಿ ಅನ್ಯಭಾಷಾ ಕವಿಯಿಂದ ಪ್ರಭಾವಿತನಾಗಿರುವುದನ್ನು ಕನ್ನಡ ಸಾರಸ್ವತ ಲೋಕವು ಸ್ವೀಕರಿಸಲು ಅಶಕ್ತವಾಗಿದೆಯೇ? ಅದೇ ಕವಿ ಚಕ್ರವರ್ತಿ ರನ್ನನು ಪಂಪನ ಕಾವ್ಯಗಳಿಂದ ಪ್ರಭಾವಿತನಾಗಿ ಪಂಪನ ಕಾವ್ಯಭಾಗಗಳನ್ನು ತನ್ನದಾಗಿಸಿಕೊಂಡಾಗ ಕನ್ನಡ ಸಾರಸ್ವತ ಲೋಕವು ರನ್ನನನ್ನು 'ಕೃತಿಚೋರ'ನೆಂದು ಪ್ರಚಾರಗೊಳಿಸಿತು. ಅದೇ ಆದಿಕವಿಯ ವಿಚಾರದಲ್ಲಿ ದಿವ್ಯಮೌನ ವಹಿಸಿರುವುದನ್ನು ಕಂಡಾಗ ಇದು ಕನ್ನಡ ಸಾರಸ್ವತ ಲೋಕಕ್ಕೆ ಅಪ್ರಿಯಸತ್ಯವಾಯಿತೇ, ಸತ್ಯವನ್ನು ಜೀರ್ಣಿಸಿಕೊಳ್ಳುವ ಶಕ್ತಿ ನಶಿಸಿತೇ ಎಂಬ ಅನುಮಾನ ಕಾಡುತ್ತದೆ. ಈ ವಿಚಾರ ಯಾವುದೇ ರಾಜ್ಯಮಟ್ಟದ ವಿಚಾರಗೋಷ್ಠಿಗಳಲ್ಲಾಗಲೀ, ವಿದ್ವತ್ತ್ವಲಯದಲ್ಲಾಗಲೀ, ವಿಶ್ವವಿದ್ಯಾನಿಲಯಗಳ ಸ್ತರಗಳಲ್ಲಾಗಲೀ ಚರ್ಚಿತವಾಗದಿರುವುದು ಶೋಚನೀಯವಾದುದು. ಸಾಹಿತ್ಯಲೋಕದಲ್ಲಿ ಒಬ್ಬ ಕವಿ ಮತ್ತೊಬ್ಬ ಕವಿಯಿಂದ ಪ್ರಭಾವತಿನಾಗುವುದು ಸರ್ವೇ ಸಾಮಾನ್ಯವಾದುದು. ಕೆಲವು ಬಹಿರಂಗವಾಗುತ್ತವೆ; ಕೆಲವು ಅಂತರಂಗದಲ್ಲಿಯೇ ಲೀನವಾಗುತ್ತವೆ. ಈಗ ಪಂಪನಿಂದ ತೆಲುಗು ಕವಿ ನನ್ನಯನು ಪ್ರಭಾವಿತನಾಗಿರುವ ವಿಷಯವನ್ನು ತೆಲುಗು ಸಾರಸ್ವತ ಲೋಕವು ಒಪ್ಪಿಕೊಂಡಿದೆ. ಒಬ್ಬ ಕವಿ ಮತ್ತೊಬ್ಬ ಕವಿಯಿಂದ ಪ್ರಭಾವಿತನಾದ ಮಾತ್ರಕ್ಕೆ ಕವಿಯ ಸ್ಥಾನಮಾನಗಳಿಗೆ ಯಾವುದೇ ರೀತಿಯಾದ ಚ್ಯುತಿಯಾಗುವುದಿಲ್ಲ. ಸ್ವೀಕರಿಸಿರುವುದನ್ನು ಕವಿ ಎಷ್ಟರಮಟ್ಟಿಗೆ ತನ್ನದನ್ನಾಗಿಸಿಕೊಂಡಿದ್ದಾನೆ ಎಂಬುದರ ಮೇಲೆ ಕವಿಯ ಸ್ಥಾನಮಾನಗಳು ನಿರ್ಧಾರವಾಗುತ್ತವೆ ಅಲ್ಲವೇ? ಪಂಪನು ತಮಿಳು ಕಾವ್ಯಕ್ಕೆ ಮಾತ್ರವಲ್ಲದೆ ಸಂಸ್ಕೃತ ಕಾವ್ಯ ನಾಟಕಗಳಿಗೂ ಋಣಿಯಾಗಿರುವುದು ದೃಢಪಟ್ಟಿದೆ. ಶ್ರೀ ಗೌರೀಶ ಕಾಯ್ಕಿಣಿಯವರು "ಪಂಪನು ಅನೇಕ ಕಥಾ ಪ್ರಸಂಗಗಳಲ್ಲಿ ಪೆರುಂದೇವನಾರ್‌ಗೆ ಋಣಿಯಾಗಿದ್ದರೂ 'ವರಕವಿ'ಗಳಲ್ಲಿ ಇಂಥ ಸಾಮ್ಯಗಳಿಗೆ, "Great minds think

alike" ಎಂದು ನಾವು ವ್ಯಾಖ್ಯಾನಿಸುತ್ತೇವೆ. ಆದರೆ 'ನರಕವಿ' ಗಳಲ್ಲಿ ಮಾತ್ರ ಇದು ಕೃತಿಚೌರ್ಯವಾಗುತ್ತದೆ" ಎಂಬ ಮಾತು ಗಮನಾರ್ಹವಾದುದು.

ಇದೇನೇ ಇರಲಿ ಒಟ್ಟಿನಲ್ಲಿ ನಮ್ಮ ಆದಿಕವಿ ಪಂಪನಿಗೆ ಪ್ರಾಕೃತ. ಸಂಸ್ಕೃತ, ಕನ್ನಡ, ತೆಲುಗು, ತಮಿಳು, ಭಾಷಾ ಸಾಹಿತ್ಯ ಸರಸ್ವತಿಯರು ಒಲಿದು ಅನುಗ್ರಹಿಸಿರುವುದನ್ನು ಕಂಡಾಗ ಪಂಪನ ವ್ಯುತ್ಪತ್ತಿಯ ವೈಶಾಲ್ಯವು ಪರಿಚಯವಾಗದಿರದು. ಇಂತಹ ಬಹುಭಾಷಾ ವಿಶಾರದ ಕವಿ ನಮ್ಮ ಕನ್ನಡ ಸಾಹಿತ್ಯದಲ್ಲಿರುವುದು ಕನ್ನಡ ಸಾರಸ್ವತಲೋಕದ ಸೌಭಾಗ್ಯ, ನಾಡಿನ ಪುಣ್ಯವೆನ್ನಬಹುದು. ಸಂಸ್ಕೃತ-ಪ್ರಾಕೃತಗಳ ಪ್ರಭಾವ ಪಂಪನ ಕೃತಿಗಳಲ್ಲಿ ಎಷ್ಟರಮಟ್ಟಿಗೆ ಆಗಿದೆಯೋ ಅಷ್ಟರಮಟ್ಟಿಗೆ ಕನ್ನಡೇತರರ ಭಾಷೆಯಲ್ಲಿ ಮುಖ್ಯವಾಗಿ ತೆಲುಗಿನ ಕೃತಿಯ ಮತ್ತು ತಮಿಳು ಕೃತಿಯ ಪ್ರಭಾವವು ಎಷ್ಟರಮಟ್ಟಿಗೆ ಆಗಿದೆಯೆಂಬುದರ ಬಗ್ಗೆ ಆಳವಾದ ಅಧ್ಯಯನ ಇನ್ನೂ ಸಾಕಷ್ಟು ಆಗಬೇಕಾಗಿದೆ. ಪೆರುಂದೇವನಾರ್ ಕೃತಿಗೂ ಪಂಪನ ಕೃತಿಗೂ ಯಾವುದಾದರೂ ಬೇರೆ ಕೃತಿ ಮೂಲಾಧಾರವಾಗಿತ್ತೇ ಎಂಬುದು ವಿಚಾರಣೀಯ ಸಂಗತಿಯಾಗಿದೆ.

■

ಗ್ರಂಥಋಣ

೧. ನಾಡೋಜ ಪಂಪ-ಮುಳಿಯ ತಿಮ್ಮಪ್ಪಯ್ಯ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಣೆ) ಸಂಪಾದಕರು ಎಂ. ಕೇಶವಭಟ್ಟ.

೨. ಪಂಪ : ಒಂದು ಅಧ್ಯಯನ-ಸಂ. ಪ್ರೊ॥ ಜಿ.ಎಸ್. ಶಿವರುದ್ರಪ್ಪ (ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ).

೩. ಆದಿಪುರಾಣ ಸಂಗ್ರಹ – ಎಲ್. ಗುಂಡಪ್ಪ (ಪ್ರಸಾರಾಂಗ, ಮೈಸೂರು ವಿ.ವಿ.).

೪. ಪಂಪನ ಸಮಸ್ತ ಭಾರತ ಕಥಾಮೃತ-ಡಾ॥ ಎಲ್. ಬಸವರಾಜು (ಕನ್ನಡ ಪುಸ್ತಕ ಪ್ರಾಧಿಕಾರ)

೫. ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ, ಪ್ರಸಂ. ಕುವೆಂಪು, (ಪ್ರಸಾರಾಂಗ, ಮೈ.ವಿ.ವಿ.).

೬ ಪಂಪ-ತೀನಂಶ್ರೀ (ಪ್ರಸಾರಾಂಗ, ಮೈ.ವಿ.ವಿ.)

೭. Mahabharata and Variations.
Perumdevaru and Pampa.
(a comparative study) -Dr. K.V. Acharya.
(Vyasaraja publication, Kurnool)

೮. ಪಂಪಭಾರತಂ-ಎನ್. ಅನಂತರಂಗಾಚಾರ್ ಗದ್ಯಾನುವಾದ, ಕ.ಸಾ.ಪ. ೧೯೭೭.

ಲೇಖನಗಳು

೧. ತಮಿಳು 'ಭಾರತವೆಂಬ' : ಪಂಪಭಾರತದ ಸ್ಫೂರ್ತಿಯ ಸೆಲೆ-ಗೌರೀಶಕಾಯ್ಕಿಣಿ (ಕನ್ನಡಪ್ರಭ ೧೯-೪-೧೯೯೨).

೨. ಪಂಪ-ನನ್ನಯ-ತೆಂಗಿರಾಲ ವೆಂಕಟಸುಬ್ಬಾರಾವು (ಪಂಪ: ಒಂದು ಅಧ್ಯಯನ.

೩. Preseve Samadhi of Pampa -Dr. D.V.G., Deccan Hearld, Sept 2, 1971.

ಹರಣ, ಸ್ವೀಕರಣ ಮತ್ತು ಪ್ರಭಾವ ವಿಚಾರಗಳು

◆

ಡಾ. ಸುರೇಶ ಪಾಟೀಲ

'ಕದಿಯದ ಕವಿಯಿಲ್ಲ, ಕದಿಯದ ವರ್ತಕನಿಲ್ಲ, ಒಬ್ಬನ ಕೈ ಇನ್ನೊಬ್ಬನ ಜೇಬಿನಲ್ಲಿ' ಎಂಬುದು ಸಂಸ್ಕೃತ ಕಾವ್ಯ ಮೀಮಾಂಸೆಯಲ್ಲಿ ಪ್ರಸಿದ್ಧವಾದ ಸೂಕ್ತಿ. ಆದರೆ ಇಲ್ಲಿ 'ಕದಿಯುವಿಕೆ'ಯ ಪ್ರಮಾಣ-ಪರಿ-ಸ್ವರೂಪಗಳನ್ನು ಆಧರಿಸಿ ಅದು ಹರಣವೊ ಸ್ವೀಕರಣವೊ ಪ್ರಭಾವವೊ ಎಂಬುದನ್ನು ತೀರ್ಮಾನಿಸಬೇಕಾಗುತ್ತದೆ. ಸ್ಥೂಲವಾಗಿ ಹೇಳುವುದಾದರೆ ಇನ್ನೊಬ್ಬರ ಕಥಾವಸ್ತುವನ್ನೊ, ಸನ್ನಿವೇಶವನ್ನೊ ಯಥಾವತ್ತಾಗಿ ತೆಗೆದುಕೊಂಡು ತನ್ನದೆಂಬಂತೆ ಬಿಂಬಿಸಿಕೊಳ್ಳುವುದು ಹರಣ ಎನ್ನಿಸಿಕೊಳ್ಳುತ್ತದೆ. ಆದರೆ ಸ್ವೀಕರಣದ ವಿಚಾರ ಹಾಗಲ್ಲ. ಯಾವುದೇ ಅಥವಾ ಇನ್ನೊಬ್ಬ ಕವಿಯಲ್ಲಿ ನಿರ್ವಹಣೆಗೊಂಡ ಕಥಾವಸ್ತು, ಸನ್ನಿವೇಶ, ಭಾವ ನಿರೂಪಣೆಯನ್ನು ಸಹ ತನ್ನದೇ ರೀತಿಯಲ್ಲಿ ಶೈಲಿಯಲ್ಲಿ ಪುನರ್ ನಿರೂಪಿಸುವ, ಮುರಿದು ಕಟ್ಟುವ ಸೃಜನಶೀಲ ಕ್ರಿಯೆಯನ್ನು 'ಸ್ವೀಕರಣ' ಎನ್ನಬಹುದು. ಇನ್ನು ಮೂರನೆಯದು ಪ್ರಭಾವ. ನಮಗೆ ಪಾಶ್ಚಾತ್ಯ ಸಾಹಿತ್ಯ ಮತ್ತು ಮೀಮಾಂಸೆಗಳ ಸಂಪರ್ಕದ ಸಂದರ್ಭದಲ್ಲಿ ಬಳಸಿಕೊಂಡ ಪರಿಕಲ್ಪನೆ ಇದು.

ಪೊನ್ನನು 'ಶಾಂತಿಪುರಾಣ'ದಲ್ಲಿ ಕಾಳಿದಾಸ ಕವಿಯ ರಘುವಂಶದಲ್ಲಿ ವರ್ಣಿತವಾದ 'ವಿವಾಹ ಪ್ರಸಂಗವೊಂದನ್ನು ತದ್ವತ್ತಾಗಿ ಅನುವಾದಿಸಿಕೊಂಡ ಪ್ರಸಂಗವನ್ನು ಸಾಹಿತ್ಯ ಚರಿತ್ರೆಕಾರರು ವಿದ್ವಾಂಸರು ಗುರುತಿಸುತ್ತಾರೆ. ಆದರೆ ತಾನು ಕಾಳಿದಾಸನಿಗಿಂತ ತುಂಬ ದೊಡ್ಡವನು ಎಂಬರ್ಥದಲ್ಲಿ ಪೊನ್ನನು ಹೇಳಿಕೊಳ್ಳುತ್ತಾನೆ. ಆದರೆ ಈ ಬಗೆಯ ಪ್ರಸಂಗಗಳು 'ಹರಣ'ಕ್ಕೆ ದೃಷ್ಟಾಂತ.

ರನ್ನನ 'ಗದಾಯುದ್ಧ'ಕ್ಕೆ ಮೂಲ ಆಧಾರ 'ವಿಕ್ರಮಾರ್ಜುನ ವಿಜಯ' (ವ್ಯಾಸಭಾರತವಂತೂ ಸರಿಯೆ). ಪಂಪಭಾರತದ ಹದಿಮೂರು ಮತ್ತು ಹದಿನಾಲ್ಕನೆಯ ಆಶ್ವಾಸಗಳನ್ನು ಆಧಾರವಾಗಿಟ್ಟುಕೊಂಡೇ ಗದಾಯುದ್ಧ ರಚಿತವಾಗಿದೆ. ಪಂಪನಿಂದ ರನ್ನನು ಸಾಕಷ್ಟು ಉಪಕೃತ ಆಗಿದ್ದಾನೆ. ಹಾಗೆ ನೋಡಿದರೆ ಭೀಮನನ್ನು 'ಸಾಹಸ ಭೀಮ' ಎಂದು ಗುರುತಿಸಿದವನು ಪಂಪ ! ಪಂಪಭಾರತದಿಂದ ಸಾಕಷ್ಟು ಅಂದರೆ

ಎಷ್ಟೆಲ್ಲವನ್ನು ಪಡೆಯಬಹುದೊ ಅಷ್ಟೆಲ್ಲವನ್ನೂ ಸಾಹಸಭೀಮ ವಿಜಯವು ಪಡೆದಿದೆ. ಆದರೆ ಅದು ಹರಣವಾಗದೆ ಸ್ವೀಕರಣ. ಏಕೆಂದರೆ ಅಲ್ಲಿನ ಭಾವ, ಘಟನೆ, ಸನ್ನಿವೇಶಗಳನ್ನು ರನ್ನನು ತನ್ನದೆ ದೃಷ್ಟಿಕೋನ ಸ್ವಂತಿಕೆಯ ಛಾಪುಗಳಿಂದ ಮುರಿದು ಕಟ್ಟುವ ಪುನಾರೂಪಿಸುವ ಕೆಲಸವನ್ನು ಮಾಡಿದ್ದಾನೆ. ಅಂತೆಯೇ ಕುವೆಂಪುರವರು ಅವನನ್ನು 'ಶಕ್ತಿ ಕವಿ' ಎಂದಿದ್ದಾರೆ. ಇಲ್ಲಿಯೇ ಅವನ ಸ್ವೋಪಜ್ಞತೆ ಸೃಜನಶೀಲತೆ ವ್ಯಕ್ತವಾಗಿವೆ.

'ವ್ಯಾಸೋಚ್ಛಿಷ್ಟಂ ಜಗತ್ಸರ್ವಂ' ಎಂಬ ಮಾತಿದೆ. ಹಾಗೆ ನೋಡಿದರೆ ಮೂಲ ಮಹಾಭಾರತ – ರಾಮಾಯಣಗಳನ್ನು ಎಲ್ಲ ದೇಸೀ ಕವಿಗಳೂ ಮುರಿದು ಕಟ್ಟುವ ಕೆಲಸ ಮಾಡಿದ್ದಾರೆ, ಪಂಪ–ಕುಮಾರವ್ಯಾಸರೂ ಸೇರಿ ಸಂಸ್ಕೃತದ ಅನೇಕ ನಾಟಕಕಾರರೂ ಸಹ. ಇದೂ ಒಂದು ವಿಧದ ಸ್ವೀಕರಣವೆ !

ಮೂರನೆಯದಾಗಿ ಕವಿಯೊಬ್ಬನ ಭಾವ ಅಥವಾ ಭಾಷೆಯ ಮೇಲೆ ಇನ್ನೊಬ್ಬ ಹಿರಿಯ (ಕಾಲದ ದೃಷ್ಟಿಯಲ್ಲಿ) ಛಾಯೆ ಬೀಳುವುದು ಎಷ್ಟೋ ಸಂದರ್ಭದಲ್ಲಿ ಕಂಡುಬರುತ್ತದೆ. ಸಾಹಿತ್ಯ ಪರಂಪರೆಯಲ್ಲಿ ಇದು ಸಹಜ ಅನಿವಾರ್ಯ ಪ್ರಕ್ರಿಯೆಯೂ ಹೌದು. ಈ ಪ್ರಭಾವದ ಅರಿವು ಬೆಳವಣಿಗೆಯ ಒಂದು ಹಂತದಲ್ಲಿ ಆ ಕವಿಗೇ ಉಂಟಾದಾಗ ಅವನು ಅದರಿಂದ ಬಿಡಿಸಿಕೊಳ್ಳುವ, ತನ್ಮೂಲಕ ತನ್ನತನವನ್ನು ಕಂಡುಕೊಳ್ಳುವ ಸಾಧನೆಯನ್ನು ಮಾಡುತ್ತಾನೆ. ಇನ್ನೆಷ್ಟೊ ಸಂದರ್ಭಗಳಲ್ಲಿ ಒಬ್ಬ ಕವಿಯ ಮೇಲೆ (ಸಾಹಿತಿ) ನಿರ್ದಿಷ್ಟ ಕವಿಯೊಬ್ಬನ ಮೇಲೆ ನೇರವಾಗಿ ಅಲ್ಲದಿದ್ದರೂ ಪರಂಪರೆಯಲ್ಲಿ ಅಂತರ್ಗತವಾಗಿ ಯಾವುದೊ ಒಂದು ಹಂತದಲ್ಲಿ ಕಾಣಿಸಿಕೊಳ್ಳಬಹುದು. ತಲೆಮಾರುಗಳ ವಂಶವಾಹಿಯ ತರಹ ಇಂಥ ಸಂದರ್ಭದಲ್ಲಿ ಪ್ರಭಾವ ಅನ್ನುವುದು ನೇತ್ಯಾತ್ಮಕ ಅಲ್ಲ ! ಅಷ್ಟಕ್ಕೂ ಪ್ರತಿಯೊಬ್ಬ ಸಮರ್ಥ ಕವಿಗೂ ಪರಂಪರೆಯಲ್ಲೂ ತನ್ನತನವನ್ನು ಸ್ಥಾಪಿಸುವ ತುಡಿತ ಇದ್ದೇ ಇರುತ್ತದೆ, ಗೋಪಾಲಕೃಷ್ಣ ಅಡಿಗರ 'ನನ್ನ ನುಡಿ' ಕವಿತೆಯಲ್ಲಿ ಕಾಣುವ ಹಾಗೆ. ಈ ಹಿನ್ನೆಲೆಯಲ್ಲಿ ನಾವು ಪ್ರಭಾವದ ಪರಿಕಲ್ಪನೆಯನ್ನು ಹೆಚ್ಚು ಸೂಕ್ಷ್ಮವೂ ವ್ಯಾಪಕವೂ ಆದ ಅರ್ಥದಲ್ಲಿ ವಿಶ್ಲೇಷಣೆ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಾನು ಇಲ್ಲಿ ಎರಡು ಪ್ರಸಂಗಗಳನ್ನು ಆಯ್ದುಕೊಂಡಿದ್ದೇನೆ. ಒಂದು, ರುದ್ರಭಟ್ಟನ 'ಜಗನ್ನಾಥ ವಿಜಯ'ದಲ್ಲಿ ಪಂಪನ ಪ್ರೇರಣೆಯನ್ನು ಕುರಿತದ್ದು. ಇನ್ನೊಂದು ಪುರಂದರದಾಸರ 'ಈ ಪರಿಯ ಸೊಬಗು' ಕೀರ್ತನೆಗೂ ಜಗನ್ನಾಥ ವಿಜಯದ ಒಂದು ಪದ್ಯಕ್ಕೆ ಇರುವ ಹೋಲಿಕೆ. 'ಪರಂಪರೆ'ಯಲ್ಲಿ ಅಂತರ್ಗತವಾದ ಪ್ರಭಾವದ ಹಿನ್ನೆಲೆಯಲ್ಲಿ ನಾನು ಈ ಮೂಲಕ 'ಪ್ರಭಾವ'ದ ಪರಿಕಲ್ಪನೆಯನ್ನು ಹರಣ–ಸ್ವೀಕರಣಗಳಿಗಿಂತ ಭಿನ್ನ ನೆಲೆಯಲ್ಲಿ ಗುರುತಿಸುತ್ತೇನೆ. ಮತ್ತು ಈ ಎರಡು ಉದಾಹರಣೆಗಳ ಮೂಲಕವೆ 'ಪ್ರಭಾವ'ದ ಪ್ರಭಾಮಯದ ವಿಭಿನ್ನ ಆಯಾಮಗಳನ್ನು ಕಾಣಬಹುದಾಗಿದೆ.

ಪಂಪನನ್ನು ಮಾರ್ಗಕವಿ ಎಂದೂ ಮಾರ್ಗನಿರ್ಮಾಪಕನೆಂದೂ ಕರೆಯಲಾಗಿದೆ. ವಿಶೇಷವಾಗಿ ನಂತರದ ಜೈನಕವಿಗಳು ಅವನ ಮಾರ್ಗವನ್ನು ಆದರಿಸಿದರು. ಪೊನ್ನ–ರನ್ನ ಜನರನ್ನೇ ಇಲ್ಲಿ ಹೆಸರಿಸಬಹುದು. ಆದರೆ ರುದ್ರಭಟ್ಟನೂ ಈ ಪರಂಪರೆಯಿಂದ

ಪ್ರಭಾವಿತನಾಗಿದ್ದಾನೆ. ಪೂರ್ವಕವಿ ಸ್ಮರಣೆಯಲ್ಲಿ ಪಂಪನನ್ನು ಇವನು ಸ್ಮರಿಸುತ್ತಾನೆ. ಪಂಪನ ಕಾವ್ಯದ ಓದು ಅವನ ಕಾವ್ಯರಚನೆಯ ಹಿಂದೆ ಇದ್ದಿರಲೂ ಸಾಧ್ಯ. 'ವಿಕ್ರಮಾರ್ಜುನ ವಿಜಯ'ದ ಆರಂಭದಲ್ಲಿ.

ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾ
ರತಮನಪೂರ್ವಮಾಗೆ ಸಲೆ ಪೇಟ್ದ ಕವೀಶ್ವರರಿಲ್ಲ ವರ್ಣಕಂ
ಕತೆಯೊಳೊಡಂಬಡೆಯೆ ಪೇಳ್ವೊಡೆ ಪಂಪನೆ ಪೇಟ್ಗುಮೆಂದು ಪಂ
ಡಿತರೆ ಪಗುಳ್ದು ಬಿಚ್ಚವಿಸೆ ಪೇಳಲೊಡರ್ಚಿದೆನೀ ಪ್ರಬಂಧಮಂ

ಎಂಬ ಮಾತು ಬರುತ್ತದೆ.

ಜಗನ್ನಾಥ ವಿಜಯದ ಪೀಠಿಕೆಯಲ್ಲೂ ಇಂಥದ್ದೆ ಒಂದು ಮಾತಿದೆ.

ಇನಿಯಳ ಸೋಂಕಿನಂತೆ ಪೊಸಪೂರ್ವಿ ಜೊಂಪಿನಂತೆ ಚಂ
ದನರಸದಣ್ಪಿನಂತೆ ನನೆಯೇಱಿದ ಮಲ್ಲಿಗೆಯಂತೆ ಪೂರ್ಣಚಂ
ದ್ರನ ಸಿರಿಯಂತೆ ಬಂದೆಸೆಪ ತೆಂಕಣ ತಂಬೆಲರಂತೆ ರುದ್ರಭ
ಟ್ಟನ ಕವಿತಾರಸಂ ಮನಮನಿರ್ಕುಳಿಗೊಳ್ವುದು ಸಜ್ಜನರ್ಕಳಾ

ಈ ತೆಱದಿಂ ಬುಧರ್ ಪೊಗೞ್ದು ಮತ್ಕತಿಯಂ ನೆರೆ ಶಾರದಾಭ್ರಚಂ
ದ್ರಾತಪ ರುದ್ರಕೃಷ್ಣ ಕಥೆವೇೞ್ನೆ.......
ಪೇೞಲೊಡರ್ಚಿದೆನೀ ಪ್ರಬಂಧಮಂ

ಪಂಪನ ತೆಂಕಣಗಾಳಿಯು ಇಲ್ಲಿಯೂ ಸೋಂಕಿದ್ದನ್ನು ನೋಡಬಹುದು. ಹಾಗೆಯೇ ಭಾಷಾ ಪ್ರೌಢಿಮೆ. ಮಾರ್ಗಶೈಲಿಯಲ್ಲಿ ಪಂಪನ ಪರಂಪರೆಯು ರುದ್ರಭಟ್ಟನಲ್ಲಿ ಮುಂದುವರಿದುದನ್ನು ಕಾಣುತ್ತೇವೆ.

ಇಂಥ ರುದ್ರಭಟ್ಟ ಕವಿಯ ಒಂದು ವೃತ್ತವು ಪುರಂದರದಾಸರ 'ಈ ಪರಿಯ ಸೊಬಗು' ಕೀರ್ತನೆಯೊಂದಿಗೆ ಆಶ್ಚರ್ಯಕರ ಸಾಮ್ಯತೆಯನ್ನೂ ಹೊಂದಿದೆ.

ಆ ಪದ್ಯ ಇದು.

ಏ ದೊರೆ ಪೆಂಪೊ ಲಕ್ಷ್ಮಿ ನಿಜವಲ್ಲಭೆ ಜಾಹ್ನವಿ ತನ್ನ ಪಾದ ಪ
ದ್ಮೋದಕಮಿಂದ್ರ ಮುಖ್ಯದಿವಿಜರ್ ಸ್ವಪರಿಗ್ರಹಮಬ್ಜಜಂ ಸ್ವಕೀ
ಯೋದರ ಪದ್ಮಯೋನಿಭವನಾತ್ಮತನೂಭವನೆಂದಿಪ್ಪುದು
ಗ್ಧೋದಧಿತಲ್ಪನಂ ನರನಭಿಷ್ಟುತಿಗೆಯ್ವುದು ಧಾರ್ಷ್ಟ್ಯಮಲ್ಲವೆ ?

ಇದಕ್ಕೆ ಸಂವಾದಿಯಾಗಿ ಈ ಕೀರ್ತನೆಯನ್ನು ನೋಡಿ.

ಈ ಪರಿಯ ಸೊಬಗಾವ ದೇವರಲಿ ನಾ ಕಾಣೆ
ಗೋಪಿಜನಪ್ರಿಯ ಗೋಪಾಲಗಲ್ಲದೆ

ದೊರೆಯತನದಲಿ ನೋಡೆ ಧರಣಿದೇವಿಗೆ ರಮಣ
ಸಿರಿಯತನದಲಿ ನೋಡೆ ಶ್ರೀಕಾಂತನು
ಹಿರಿಯತನದಲಿ ನೋಡೆ ಸರಸಿಜೋದ್ಭವನಯ್ಯ
ಗುರುವು ತನದಲಿ ನೋಡೆ ಜಗದಾದಿ ಗುರುವು

ಪಾವನತ್ವದಿ ನೋಡೆ ಅಮರ ಗಂಗಾಜನಕ
ದೇವತ್ವದಲಿ ನೋಡೆ ದಿವಿಜರೊಡೆಯ
ಲಾವಣ್ಯದಲಿ ನೋಡೆ ಲೋಕಮೋಹಕನಯ್ಯಾ
ಆವ ಧೈರ್ಯದಿ ನೋಡೆ ಅಸುರಾಂತಕ

ಗಗನದಲಿ ಸಂಚರಿಪ ಗರುಡದೇವನೆ ತುರಗ
ಜಗತೀಧರ ಶೇಷಪರಿಯಂಕಶಯನ
ನಿಗಮಗೋಚರ ಪುರಂದರವಿಠಲಗಲ್ಲದೆ
ಮಿಗಿಲಾದ ದೈವಗಳಿಗೀ ಭಾಗ್ಯವುಂಟೆ ?

ರುದ್ರಭಟ್ಟನ 'ಪೆಂಪು' ಇಲ್ಲಿ ಹೇಗೆ ಸೊಬಗಾಗಿ ಪರಿಣಮಿಸಿದೆ ಎಂಬುದಕ್ಕೆ ಬೇರೆ ವಿವರಣೆ ಬೇಕಿಲ್ಲ ಎನ್ನಿಸುತ್ತದೆ.

'ಜಗನ್ನಾಥ ವಿಜಯ'ದ ಪ್ರಸ್ತುತ ಪದ್ಯಭಾವವು ಈ ಕೀರ್ತನೆಯಲ್ಲಿ ಧ್ವನಿತವಾಗಿರುವುದು ಕೇವಲ ಪ್ರಭಾವವೊ ಅನುಕರಣೆಯೊ ಅಲ್ಲ. ಏಕೆಂದರೆ ಇಲ್ಲಿ ಪ್ರತಿಪಾದಿತ ಅಂಶಗಳು ಪುರಾಣ ಪ್ರಸಿದ್ಧ. ಎಲ್ಲ ಭಕ್ತಜನಕ್ಕೂ ವೇದ್ಯ. ಜಗನ್ನಾಥ ವಿಜಯದ ಈ ಪದ್ಯವನ್ನು ಪುರಂದರದಾಸರು ಓದಿರಬಹುದು, ಓದಿಲ್ಲದೆಯೂ ಇರಬಹುದು. ಭಾಷಾಶೈಲಿ ಛಂದೋ ವಿಚಾರಗಳಲ್ಲಿ ಇಲ್ಲಿ ಹೋಲಿಕೆಯ ಪ್ರಶ್ನೆ ಉದ್ಭವಿಸದು. ಇವೆರಡಕ್ಕೂ ಮೂಲಾಧಾರವನ್ನು ಇಬ್ಬರೂ ಮೂಲ ಪುರಾಣ ಗ್ರಂಥದಿಂದಲೇ ಗ್ರಹಣ ಮಾಡಿರಬಹುದು. ಜೊತೆಗೆ ಸಮಾನ ಸಾಧಕರ ಚಿಂತಕರ ಆಲೋಚನಾ ಲಹರಿಯೂ ಕಾಲದ ಪರಿವೆ ಇಲ್ಲದೆ ಸಮಾನ ನೆಲೆಯಲ್ಲಿ ಪ್ರವಹಿಸುವ ಸಾಧ್ಯತೆಯೂ ಇದೆ. ಈ ಎಲ್ಲ 'ಸಾಧ್ಯತೆ'ಗಳ ಹಿನ್ನೆಲೆಯಲ್ಲಿ ನಾವು ಪ್ರಭಾವದ ಪರಿಕಲ್ಪನೆಯನ್ನು ಮತ್ತೆ ಮತ್ತೆ ವಿವರಿಸಿಕೊಳ್ಳಬೇಕಾಗುತ್ತದೆ.

ಒಟ್ಟಿನಲ್ಲಿ ಆ ಪದ್ಯ ಮತ್ತು ಈ ಕೀರ್ತನೆಗಳ ಮಧ್ಯ ಆಶ್ಚರ್ಯಕರ ಸಾಮ್ಯತೆ ಇರುವುದು ನಿಜ. ಭಾವವಾಗಲಿ ಭಾಷೆಯಾಗಲಿ ಅನುಭವವಾಗಲಿ ಯಾರೊಬ್ಬರ ಸ್ವತ್ತು ಅಲ್ಲ. ಅವು ಯಾವುದೊ ಒಬ್ಬ ವ್ಯಕ್ತಿಯ ಹಕ್ಕು ಸ್ವಾಮ್ಯ (ಪೇಟೆಂಟ್‌ಗೆ)ಕ್ಕೆ ಒಳಪಟ್ಟವು ಅಲ್ಲ. ಆದರೆ ತಿಳಿದೊ ತಿಳಿಯದೆಯೊ ಪರಂಪರೆ ಹೇಗೆ ಎಲ್ಲವನ್ನೂ ಒಂದು ನೆಲೆಯಲ್ಲಿ ಜೋಡಿಸುತ್ತದೆ. ಮತ್ತು ಒಬ್ಬ ಲೇಖಕ/ಕವಿ ತನ್ನದೆ ಆದ ಅನುಭವವನ್ನು ಪರಂಪರೆಯ ಛಾಯೆಯಲ್ಲಿ ಹೇಗೆ ರೂಪಿಸಿಕೊಳ್ಳುತ್ತಾನೆ ಎಂಬುದು ಅಂತಿಮವಾಗಿ ಮುಖ್ಯವಾಗುತ್ತದೆ. ಈ ದೃಷ್ಟಿಯಿಂದ 'ಈ ಪರಿಯ ಸೊಬಗು' ಕೀರ್ತನೆಯನ್ನು ಪರಿಶೀಲಿಸಬಹುದಾಗಿದೆ.

■

ರಾಮಚಂದ್ರ ಚರಿತ ಪುರಾಣ : ಪರಿಷ್ಕರಣದ ಚರಿತ್ರೆ

◆

ಡಾ. ವೀರೇಶ ಬಡಿಗೇರ

ನಾಗಚಂದ್ರನ ರಾಮಚಂದ್ರ ಚರಿತೆ ಪುರಾಣವು (ಕ್ರಿ.ಶ.೧೧೪೦) ಶೀರ್ಷಿಕೆಯೇ ಹೇಳುವಂತೆ ರಾಮಾಯಣದ ಕಥೆಯೇ ಆಗಿದೆ. ಮೌಖಿಕ ರೂಪದ ರಾಮಾಯಣ ಕಥೆ ವೈದಿಕ, ಜೈನ, ಬೌದ್ಧದಂಥ ಬೇರೆ ಬೇರೆ ಸಂಸ್ಕೃತಿಗಳಲ್ಲಿ ಹರಿದು ಮಹಾಕಾವ್ಯವಾಗಿ ಮೈ ತಳೆದಿದೆ. ಹೀಗಿದ್ದರೂ ಎಲ್ಲದಕ್ಕೂ ವಾಲ್ಮೀಕಿ ರಾಮಾಯಣವೇ ಮೂಲವೆಂದು ನಂಬಲಾಗಿದೆ.

ಸಾಹಿತ್ಯ ಸಂಪ್ರದಾಯದಲ್ಲಿ ರಾಮಾಯಣದ ಕಥೆ ಎರಡು ಶಾಖೆಗಳಲ್ಲಿ ಬೆಳೆದುಬಂದಿದೆ. ಒಂದು: ವಿಮಲಸೂರಿಯ (ಕ್ರಿ.ಶ.೨ನೇ ಶತಮಾನ) ಸಂಪ್ರದಾಯದ ಪಉಮಚರಿಯ ಕೃತಿ. ಇನ್ನೊಂದು ಗುಣಭದ್ರರ (ಕ್ರಿ.ಶ.೮೭೮) ಸಂಪ್ರದಾಯದ ಉತ್ತರ ಪುರಾಣ. ವಿಮಲಸೂರಿಯ ಕೃತಿ ಪ್ರಾಕೃತದಲ್ಲಿದ್ದರೆ ಗುಣಭದ್ರರ ಕೃತಿ ಸಂಸ್ಕೃತದಲ್ಲಿದೆ. ನಾಗಚಂದ್ರನ ಕೃತಿ ವಿಮಲಸೂರಿಯ ಪಉಮಚರಿಯ ಸಂಪ್ರದಾಯಕ್ಕೆ ಸೇರಿದೆ ಎಂದು ಹಲವು ವಿದ್ವಾಂಸರು ಹೇಳಿದ್ದರೂ ತನ್ನ ಕಾಲದ ಹಾಗೂ ಆ ಪೂರ್ವದ ಇನ್ನಿತರ ರಾಮಾಯಣಗಳಿಂದಲೂ ಪ್ರೇರಣೆ ಪಡೆದುಕೊಂಡಿದ್ದನ್ನು ಅಲ್ಲಗಳೆಯಲಾಗದು. ಕಾರಣ ಶೈಲಿ, ನಿರೂಪಣೆ ಮತ್ತು ಪಾತ್ರ ಸೃಷ್ಟಿಯಲ್ಲಿ ನಾಗಚಂದ್ರ ಮಾಡಿಕೊಂಡ ಹಲವು ಕ್ರಿಯಾತ್ಮಕ ಬದಲಾವಣೆಗಳು ಇದನ್ನು ಖಚಿತಪಡಿಸುತ್ತವೆ.

ಭಾರತೀಯ ಸಾಹಿತ್ಯದಲ್ಲಿ ಬಲದೇವ ವಾಸುದೇವರ ಕಥೆಯಾದ ರಾಮಾಯಣ ಜನಪ್ರಿಯವಾಗಿದೆ. ಕನ್ನಡ ಜೈನ ಸಾಹಿತ್ಯದಲ್ಲಿ ತೀರ್ಥಂಕರ ಚರಿತ್ರೆಗಳಿಗಿಂತಲೂ ರಚನೆಯಲ್ಲಿ ಭಿನ್ನವಾದ ಕೃತಿ ಪಂಪ ರಾಮಾಯಣವಾಗಿದೆ. ಇದರಿಂದಾಗಿ ಕನ್ನಡ ಜೈನ ಸಾಹಿತ್ಯದಲ್ಲಿ ಅದಕ್ಕೆ ಚಾರಿತ್ರಿಕ ಮಹತ್ವವಿದೆ. ಚಾವುಂಡರಾಯ ಪುರಾಣ ಬಿಟ್ಟರೆ ಮೊದಲ ಬಾರಿಗೆ ಬಲದೇವ ವಾಸುದೇವರ ಚರಿತ್ರೆಯನ್ನು ಸ್ವತಂತ್ರವಾಗಿ ರಚನೆ ಮಾಡಿರುವುದು ಅಭಿನವ ಪಂಪನೆಂದು ಹೆಸರಾದ ನಾಗಚಂದ್ರ ಮಾತ್ರ. ನಾಗಚಂದ್ರನ ಮತ್ತೊಂದು ವಿಶೇಷತೆ ಎಂದರೆ ಅದೂವರೆಗೂ ರೂಢಿಯಲ್ಲಿದ್ದ ಲೌಕಿಕ ಮತ್ತು

ಆಗಮಿಕ ಎನ್ನುವ ರಚನೆಯ ಮಾರ್ಗವನ್ನು ಮೀರಿದ್ದು. ಇದು ಕನ್ನಡ ಜೈನ ರಾಮಾಯಣಗಳಲ್ಲಿಯೇ ಮೊದಲನೆಯದಲ್ಲದೆ ಕನ್ನಡದಲ್ಲಿ ಜೈನ ರಾಮಾಯಣ ಪರಂಪರೆಗೆ ಬುನಾದಿ ಹಾಕಿತು. ಇಲ್ಲಿಂದ ಮುಂದೆ ಕುಮುದೇಂದು (ಸು.೧೨೭೫) ದೇವಪ್ಪಕವಿ (ಕ್ರಿ.ಶ.೧೬ನೇ ಶತಮಾನ) ದೇವಚಂದ್ರ (೧೮೦೦) ಮತ್ತು ಚಂದ್ರಸಾಗರವರ್ಣಿ(ಸು.೧೮೦೦) ಮುಂತಾದವರು ನಾಗಚಂದ್ರನ ಶೈಲಿಯನ್ನು ಅನುಸರಿಸಿದರು.

ಸಂಸ್ಕೃತ ಹಾಗೂ ಪ್ರಾಕೃತಗಳಲ್ಲಿ ಪ್ರಚುರವಾಗಿದ್ದ ಈ ಕೃತಿ ಕನ್ನಡಕ್ಕೆ ಬಂದಿದ್ದಲ್ಲದೆ ರಾವಣನ ಪಾತ್ರವನ್ನು ವಿಭಿನ್ನವಾಗಿ ಚಿತ್ರಿಸಿದ್ದು ಪಂಪ ರಾಮಾಯಣದ ವಿಶೇಷತೆಯಾಗಿದೆ. ೧೬ ಆಶ್ವಾಸಗಳಿಂದ ಕೂಡಿದ ಈ ಚಂಪೂ ಗ್ರಂಥ ೬೩ ಜನ ತ್ರಿಷಷ್ಠಿ ಶಲಾಕಾಪುರುಷರ ವರ್ಗಕ್ಕೆ ಸೇರುವ ಬಲದೇವ ವಾಸುದೇವ ಪ್ರತಿವಾಸುದೇವರಲ್ಲಿ ರಾಮ ಲಕ್ಷ್ಮಣ ಮತ್ತು ರಾವಣ ಎಂಟನೆಯವರಾಗಿ ಬರುತ್ತಾರೆ. ಇವರ ಕಥೆಯನ್ನು ನಿರೂಪಿಸುವಲ್ಲಿ ಕವಿ ಜೈನ-ಸಂಪ್ರದಾಯವನ್ನು ಅನುಸರಿಸಿದ್ದಾನೆ. ರಾಮ ಲಕ್ಷ್ಮಣರ ಜನನ, ವನವಾಸಾಗಮನ, ರಾವಣನ ದಿಗ್ವಿಜಯ, ಸೀತಾಪಹರಣ, ರಾಮಚಂದ್ರನ ಶೋಕ, ನಳಕೂಬರಾದಿಗಳ ಸನ್ನಿವೇಶಗಳನ್ನು ಸಮರ್ಥವಾಗಿ ಕಟೆದು ನಿಲ್ಲಿಸಿದ್ದಾನೆ. ರಾಮಾಯಣದಂಥ ವಿಸ್ತಾರವಾದ ಕಾವ್ಯವನ್ನು ಮೈಗೆಡದಂತೆ ಕಟ್ಟುವಲ್ಲಿ ನಾಗಚಂದ್ರನ ಕವಿ ಪ್ರತಿಭೆ ಉಜ್ವಲವಾಗಿ ಮೂಡಿಬಂದಿದೆ. ತನ್ನ ಕಾವ್ಯಗುಣದಿಂದಾಗಿಯೇ ಪಂಪರಾಮಾಯಣ ಅತ್ಯಂತ ಜನಪ್ರಿಯ ಕಾವ್ಯವಾಯಿತು.

ಪರಿಷ್ಕರಣ ಚರಿತ್ರೆ

ನಾಗಚಂದ್ರನನ್ನು ಆಧುನಿಕ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಮೊದಲು ಪರಿಚಯಿಸಿದ ಕೀರ್ತಿ ಹರ್ಮನ್ ಮೋಗ್ಲಿಂಗ್ ಅವರದ್ದು. ಬಿಬ್ಲಿಯಾಥಿಕಾ ಕರ್ನಾಟಕ ಕಾವ್ಯ ಮಾಲಿಕೆಯಲ್ಲಿ ೧೮೪೮ರಲ್ಲಿ ಪಂಪ ರಾಮಾಯಣವನ್ನು ಮೊದಲ ಸಲ ಪ್ರಕಟಿಸಿದರು. ನಂತರ ೧೮೭೦ರಲ್ಲಿ ಡಾ. ವಿ. ಶೇಖರ್ ಮತ್ತು ಡಾ. ಎ.ಸಿ. ಬರ್ನಲ್ ಅವರು ಪಂಪ ರಾಮಾಯಣವನ್ನು ಸಂಪಾದಿಸಿ ಪ್ರಕಟಿಸಿದರು. ತರುವಾಯ ಬಿ.ಎಲ್. ರೈಸ್ ಅವರು ೧೮೭೪ರಲ್ಲಿ ಪಂಪ ರಾಮಾಯಣದ ಐದು ಆಶ್ವಾಸಗಳನ್ನು ಶಾಸ್ತ್ರಬದ್ಧವಾಗಿ ಸಂಪಾದಿಸಿ ಪ್ರಕಟಿಸಿದರು. ಇದು ಮದರಾಸು ವಿಶ್ವವಿದ್ಯಾಲಯದ ಬಿ.ಎ. ತರಗತಿಗೆ ಪಠ್ಯಪುಸ್ತಕವಾಗಿತ್ತು. ೧೮೭೪ ಮತ್ತು ೧೮೭೫ರಲ್ಲಿ ಎರಡು ಭಾಗಗಳಲ್ಲಿ ಪ್ರಕಟವಾಗಿದ್ದ ಪಂಪ ರಾಮಾಯಣವನ್ನು ಎಂಟು ವರುಷ ಕಳೆದ ಮೇಲೆ ಅಂದರೆ ೧೮೮೨ರಲ್ಲಿ ಬಿ.ಎಲ್. ರೈಸ್ ಅವರೇ ಸಂಪಾದಿಸಿ ಪ್ರಕಟಿಸಿದರು. ಇದಕ್ಕೆ ಬರೆದ ವಿದ್ವತ್ಪೂರ್ಣ ಪ್ರಸ್ತಾವನೆ ನಾಡಿನ ವಿದ್ವಾಂಸರ ಗಮನ ಸೆಳೆಯಿತು.

ಈ ಮರು ಪರಿಷ್ಕರಣೆಗೆ ಬಿ.ಎಲ್. ರೈಸ್ ಅವರು ಮೂರು ಹಸ್ತಪ್ರತಿಗಳನ್ನು ಬಳಸಿಕೊಂಡಿದ್ದಾರೆ. ಕಾಲದ ದೃಷ್ಟಿಯಿಂದ ೧೪೨೮ರ ತೇದಿ ನಮೂದಿತ ಪ್ರತಿ ಇದ್ದಾಗಲೂ ೧೫೧೭ರಲ್ಲಿ ದೊರೆತ ಪ್ರತಿಯ ಪಾಠಗಳಿಗೆ ಪ್ರಾಧಾನ್ಯತೆ ನೀಡಿದ್ದಾರೆ.

ಇಷ್ಟಾಗಿಯೂ ಬಳಸಿದಿ ಹಸ್ತಪ್ರತಿಗಳಿಗೆ ಸಂಕೇತ ನೀಡದಿರುವುದು ಪಾಠಾಂತರಗಳನ್ನು ಕೊಡದಿರುವುದು ಈ ಪರಿಷ್ಕರಣದ ಕೊರತೆಯಾಗಿದೆ.

ಆದರೆ ಬಿ.ಎಸ್. ಸಣ್ಣಯ್ಯ ಅವರು ರೈಸ್ ಅವರು ತಮಗೆ ದೊರೆತ ಏಕೈಕ ಹಾಗೂ ಕಾಲ ನಮೂದಿತ (ಕ್ರಿ.ಶ.೧೪೨೮) ತಾಳೆಪ್ರತಿಯ ಸಹಾಯದಿಂದ ಪಂಪ ರಾಮಾಯಣವನ್ನು ಸಂಪಾದಿಸಿ ಪ್ರಕಟಿಸುತ್ತಾರೆಂದು ಅಭಿಪ್ರಾಯಪಡುತ್ತಾರೆ. (ಪ್ರಾ.ಕ.ಗ್ರಂ.ಸಂ.ಪು.೩೯; ೨೦೦೨)

೧೯೨೧ರಲ್ಲಿ ಅಂದರೆ ಸುಮಾರು ಐವತ್ತು ವರುಷದ ನಂತರ ರಾಮಚಂದ್ರ ಚರಿತ ಪುರಾಣವನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿತು. ಇದರ ಪರಿಷ್ಕರಣಕ್ಕೆ ಕಾನಕಾನಹಳ್ಳಿ ವರದಾಚಾರ್ಯ ಮತ್ತಿತರರು ಸಹಕರಿಸಿದರು. ಕ, ಖ, ಚ ಎಂಬ ಸಂಕೇತವುಳ್ಳ ಮೂಲ ಹಸ್ತಪ್ರತಿಗಳ ಜೊತೆಗೆ ಗ ಮತ್ತು ಘ ಸಂಕೇತದ ಎರಡು ಪ್ರಕಟಿತ ಕೃತಿಗಳ ನೆರವನ್ನು ಪಡೆಯಲಾಗಿದೆ. ಅವಶ್ಯವೆನಿಸಿದ ಪಾಠಾಂತರಗಳನ್ನು ಮಾತ್ರ ನೀಡಿದ್ದು ಕವಿ ಕೃತಿ ಪರಿಚಯ ನೀಡಲಾಗಿದೆ.

ನಂತರ ೧೯೫೧ರಲ್ಲಿ ಡಿ.ಎಲ್.ನರಸಿಂಹಾಚಾರ್ಯ ಅವರು 'ಪಂಪರಾಮಾಯಣ ಸಂಗ್ರಹ'ವೆಂದು ಸಂಪಾದಿಸಿಕೊಟ್ಟರು. ಇವರಿಗೆ ತಿರುವಳ್ಳೂರು ಶ್ರೀನಿವಾಸ ರಾಘವಾಚಾರ್ಯರು ಸಹಾಯ ಮಾಡಿದರು. ಮೈಸೂರು ವಿಶ್ವವಿದ್ಯಾನಿಲಯ ಇದನ್ನು ಪ್ರಕಟಿಸಿತು. ಇದೂವರೆಗೂ ಇದು ಒಟ್ಟು ೫ ಮುದ್ರಣಗಳನ್ನು ಕಂಡಿದೆ.

ಡಿ.ಎಲ್.ಎನ್. ಅವರು ೧೯೨೧ರಲ್ಲಿ ಪರಿಷತ್ತಿನಿಂದ ಪ್ರಕಟವಾದ ಪಂಪರಾಮಾಯಣವನ್ನು ಆಧಾರವಾಗಿಟ್ಟುಕೊಂಡು ಸಂಗ್ರಹ ಮಾಡಿದ್ದಾರೆ. ಪೀಠಿಕೆಯಲ್ಲಿ ಜೈನರಾಮಾಯಣ, ವಿಮಲಸೂರಿಯ ರಾವಣನ ಕುರಿತು ಮಾಹಿತಿ ನೀಡಿದ್ದಾರೆ. ರಾವಣನ ಪಾತ್ರಕ್ಕೆ ಸಂಬಂಧಿಸಿದಂತೆ ಪಉಮಚರಿಯ ಕೆಲವು ಭಾಗಗಳನ್ನು ಉದ್ಧರಿಸಿದ್ದಾರೆ.

ಉಪಯುಕ್ತ ಶಬ್ದಕೋಶ ನೀಡಿದ್ದಾರೆ. ಪರಿಷತ್ತು ಪಾಠಾಂತರ ರೂಪದಲ್ಲಿ ಕೊಟ್ಟಿದ್ದ ಕೆಲವು ಪಾಠಗಳು ಕವಿಯ ಮೂಲಪಠ್ಯವೆನಿಸಿದ್ದರಿಂದ ಡಿ.ಎಲ್.ಎನ್. ಅಂಥವುಗಳನ್ನು ಪಠ್ಯಭಾಗದಲ್ಲಿ ಸೇರಿಸಿದ್ದಾರೆ. ಮುಖ್ಯ ಕಥೆಗೆ ಭಂಗಬಾರದಂತೆ ಮತ್ತು ಸೊಗಸಾದ ಕಾವ್ಯ ಭಾಗಗಳು ಕೈ ಬಿಟ್ಟು ಹೋಗದಂತೆ ಡಿ.ಎಲ್.ಎನ್. ಎಚ್ಚರಿಕೆ ವಹಿಸಿದ್ದು ವಿಶೇಷ. ಡಿ.ಎಲ್.ಎನ್. ಸಂಪಾದಿತ ಈ ಕೃತಿಯ ವೈಶಿಷ್ಟ್ಯಗಳನ್ನು ಕೆಳಗಿನಂತೆ ಗುರುತಿಸಬಹುದು.

* ಕಾವ್ಯದ ಮೂಲಕೃತಿಯನ್ನು ಓದಿ ಪ್ರಕ್ಷಿಪ್ತ ಭಾಗಗಳನ್ನು ಗುರುತಿಸಿ ಕೈ ಬಿಡಬಹುದಾದ ಭಾಗಗಳನ್ನು ಕೈ ಬಿಟ್ಟು ಸೂಕ್ತ ಪಾಠವನ್ನು ಗುರುತಿಸುವ ಕೆಲಸ ಮಾಡಿದ್ದಾರೆ.

* ವಿಸ್ತೃತವಾದ ಕವಿಪಾಠವನ್ನು ಶೋಧಿಸಿ ಸಂಗ್ರಹಿಸಿದ್ದಲ್ಲದೆ ಮೌಲಿಕ ಪೀಠಿಕೆ ಬರೆದಿದ್ದಾರೆ.

* ಕವಿಯ ಕಾಲ ಕುರಿತ ಚರ್ಚೆಯೊಂದಿಗೆ ಜೈನ, ವೈದಿಕ ಮತ್ತು ಬೌದ್ಧ ರಾಮಾಯಣಗಳ ಕುರಿತ ವಿಸ್ತೃತ ಚರ್ಚೆ ಮಾಡಿದ್ದಾರೆ.

* ಜೈನ ರಾಮಾಯಣದಲ್ಲಾದ ಮಾರ್ಪಾಟು, ವಿಮಲಸೂರಿಯ ಪಉಮ ಚರಿಯವು ಜೈನ ರಾಮಾಯಣಗಳಲ್ಲಿಯೇ ಪ್ರಾಚೀನವಾದುದು., ಗುಣಭದ್ರಾಚಾರ್ಯ ಇನ್ನೊಂದು ರಾಮಾಯಣ ಕಥಾ ಪರಂಪರೆ ಜೈನರಲ್ಲಿರುವುದು, ಪಂಪರಾಮಾಯಣ ವಿಮಲಸೂರಿಯ ಸಂಪ್ರದಾಯಕ್ಕೆ ಸೇರಿರುವುದು ನಾಗಚಂದ್ರನ ರಾವಣನ ಪಾತ್ರಕ್ಕೆ ವಿಮಲಸೂರಿಯ ರಾವಣನ ಪಾತ್ರವೇ ಮೂಲವೆಂದು ಗುರುತಿಸಿರುವ ಸಂಗತಿಗಳು ವಿಶಿಷ್ಟವಾದಂಥವು.

* ನಾಗಚಂದ್ರನ ಸಂಗ್ರಹ ದೃಷ್ಟಿಯನ್ನು, ಪಾತ್ರಗಳಿಗೆ ನೀಡಿದ ಹೊಸತನಗಳನ್ನು, ನಾಗಚಂದ್ರ ಸೇರಿಸಿದ ಹೊಸ ಪ್ರಸಂಗಗಳು, ಅವಕ್ಕೆ ಜೀವ ತುಂಬಿದ ಬಗೆಗಳು, ನಾಗಚಂದ್ರನ ಕಾವ್ಯಶೈಲಿ ಕುರಿತು ಸುದೀರ್ಘ ಚರ್ಚೆ ಮಾಡಿದ್ದಾರೆ.

* ಏಕಕಾಲಕ್ಕೆ ಸಂಶೋಧಕ ಮತ್ತು ವಿಮರ್ಶಕರೂ ಆಗಿ ಕೆಲಸದ ಮಾಡಿದ ಡಿ.ಎಲ್.ಎನ್. ಅವರು ಪಂಪ ರಾಮಾಯಣಕ್ಕೆ ಬರೆದ ಮುನ್ನುಡಿಯನ್ನು ಹೋಲು ವಂಥದ್ದು ಕನ್ನಡದಲ್ಲಿ ಮತ್ತೊಂದಿಲ್ಲ ಎಂದು ಡಾ. ಎಂ. ಚಿದಾನಂದಮೂರ್ತಿಯವರು ಅಭಿಪ್ರಾಯಪಟ್ಟಿದ್ದು ಅವರ ಸಂಪಾದನ ವೈಧಾನಿಕತೆಯ ಹೆಗ್ಗುರುತಾಗಿದೆ.

ಡಿ.ಎಲ್. ನರಸಿಂಹಾಚಾರ್ಯರ ನಂತರ ನಡೆದ ಮತ್ತೊಂದು ಉಪಯುಕ್ತ ಕೆಲಸವೆಂದರೆ ಡಾ.ಆರ್.ಸಿ.ಹಿರೇಮಠ ಅವರದು. ನಾಗಚಂದ್ರ ವಿರಚಿತ ರಾಮಚಂದ್ರ ಚರಿತ ಪುರಾಣವೆಂದು ೧೯೭೩ರಲ್ಲಿ ಡಾ. ಆರ್.ಸಿ. ಹಿರೇಮಠ ಸಂಪಾದಿಸಿ ಪ್ರಕಟಿಸಿದರು.

ಕೃತಿಯ ಶೀರ್ಷಿಕೆಯಲ್ಲಿಯೇ ಸಂಶೋಧನಾತ್ಮಕ ರೀತಿಯಿಂದ ಪರಿಷ್ಕೃತ, ಮೂಲ, ಪಾಠ ಹಾಗೂ ಪಾಠಾಂತರ ಮತ್ತು ಕನ್ನಡ ಅನುವಾದ ಇತ್ಯಾದಿ ಸಹಿತ ಸಂಪಾದಿತ ಎಂದು ಹೇಳಲಾಗಿದೆ. ಇದು ಈ ಸಂಪಾದನೆಯ ವಿಶಿಷ್ಟತೆಯಾಗಿದೆ. ಹೊಸಗನ್ನಡ ಅನುವಾದದೊಂದಿಗೆ ವಿಮರ್ಶಾತ್ಮಕವಾಗಿ ಸಂಪಾದಿಸಿ ಭಾರತೀಯ ಜ್ಞಾನಪೀಠ ಪ್ರಕಾಶನದ ಮೂಲಕ ಪ್ರಕಟಿಸಿದರು. ೩೬ ಪುಟಗಳು ವಿಸ್ತೃತ ಪ್ರಸ್ತಾವನೆಯಿದೆ. ಇದರಲ್ಲಿ ನಾಗಚಂದ್ರನ ಕೃತಿಗಳು, ಪಉಮಚರಿಯ ಕಥಾಸಾರ, ಕೃತಿ ವಿಮರ್ಶೆ ಮೊದಲಾದ ಸಂಗತಿಗಳ ಚರ್ಚೆಯಿದೆ. ಆ.ನೇ ಉಪಾಧ್ಯೆಯರು ಈ ಕೃತಿಗೆ ಬರೆದ ಸಂಪಾದಕೀಯ ರೂಪದ ಬರಹ ಪಂಪ ರಾಮಾಯಣದ ಪರಿಷ್ಕರಣದ ಸಂಕ್ಷಿಪ್ತ ಚರಿತೆಯನ್ನು ಹೇಳುತ್ತದೆ. ರಾಮ ಕಥೆಯು ಪ್ರಾಕೃತದ ಕ್ರಿ.ಶ. ೫-೬ನೇ ಶತಮಾನದ ವಸುದೇವ ಹಿಂಡಿ ಕೃತಿಯಲ್ಲಿ ಬಂದಿರುವುದರ ಬಗ್ಗೆ ಉಪಾಧ್ಯಾಯರು ಮೊದಲಬಾರಿಗೆ ಇಲ್ಲಿ ಗಮನಸೆಳೆದಿದ್ದಾರೆ. ಭಾರತದಲ್ಲಿ ವಿವಿಧ ರೂಪದಲ್ಲಿ ಹರಡಿದ ರಾಮ ಕಥೆಯ ಅಧ್ಯಯನವಾಗಬೇಕೆಂದು ಉಪಾಧ್ಯಾಯ ಅವರು ಸಲಹೆ ನೀಡಿದ್ದು ಇಲ್ಲಿನ ಪರಿಷ್ಕರಣ ವಿಶಿಷ್ಟತೆಯಾಗಿದೆ.

ಪಾಠ ನಿರ್ಣಯ ವಿಧಾನ

ಡಾ. ಆರ್.ಸಿ. ಹಿರೇಮಠ ಅವರು ಪರಿಷ್ಕರಣ ಪಾಠ ನಿರ್ಣಯ ಸಂದರ್ಭದಲ್ಲಿ ಮೂಡಬಿದಿರೆಯ ಹಸ್ತಪ್ರತಿ ಮತ್ತು ಪರಿಷತ್ತಿನ ಆವೃತ್ತಿಗಳ ನೆರವು ಪಡೆದಿದ್ದಾರೆ. ಅವುಗಳಿಗೆ ಕ್ರಮವಾಗಿ ಅ, ಆ ಎಂಬ ಸಂಕೇತ ನೀಡಿದ್ದಾರೆ.(ದಿಬ್ಬದ ಪು. xviii) ಪಾಠಾಂತರಗಳನ್ನು ಮೂಡಬಿದಿರೆಯ ಹಸ್ತಪ್ರತಿಯಿಂದ ಸ್ವೀಕರಿಸಿದ್ದಾರೆ. ಹೊಸಗನ್ನಡ ಅನುವಾದದ ಅಗತ್ಯದ ಬಗ್ಗೆಯೂ ಅನುವಾದದ ಅಡಚಣೆಯ ಬಗ್ಗೆಯೂ ಬರೆದಿದ್ದಾರೆ. ಆ ಮೂಲಕ ಸಂಪಾದಕ ಎದುರಿಸುವ ಅಗ್ನಿ ದಿವ್ಯಗಳನ್ನು ಡಾ. ಆರ್.ಸಿ. ಹಿರೇಮಠರು ಹೇಳಿದ್ದಾರೆ.

ಆದರೆ ಬಿ.ಎಸ್.ಸಣ್ಣಯ್ಯನವರು ಈ ಪರಿಷ್ಕರಣದ ಮಿತಿಯನ್ನು ಗುರುತಿಸುವಾಗ ೧. ಪರಿಷ್ಕರಣಕ್ಕೆ ಬಳಸಿದ ಹಸ್ತಪ್ರತಿಗಳ ವಿವರ ನೀಡಿಲ್ಲ. ೨. ಆ ಪೂರ್ವ ಪ್ರಕಟವಾದ ಆವೃತ್ತಿಗಳ ಬಗ್ಗೆಯೂ ಮಾಹಿತಿ ನೀಡದಿರುವುದು ಇದರ ದೋಷವೆಂದು ಗುರುತಿಸುತ್ತಾರೆ (ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ). ಕೃತಿಯ ಶಿರೋನಾಮೆಯಲ್ಲಿ ಪರಿಷ್ಕೃತ. ಮೂಲ, ಪಾಠಾಂತರದ ಮೂಲಕ ಸಂಪಾದಿಸಲಾಗಿದೆ ಎಂದು ಹೇಳುತ್ತಾರೆ. ಆದರೆ ಎಲ್ಲಿಯೂ ಹಿಂದಿನ ಕ್ಲಿಷ್ಟಪಾಠಗಳನ್ನು ಹೇಳಿಲ್ಲ. ಹೊಸ ಪ್ರತಿಯಿಂದ ಇಂಥದ್ದನ್ನು ಪರಿಷ್ಕರಿಸಲಾಗಿರುವ ಸಂಗತಿಗಳನ್ನು ಸೂಚಿಸುವುದಿಲ್ಲ. ಆದರೆ ಪರಿಷ್ಕರಿಸಿದ ಪದಗಳನ್ನು ಗುರುತಿಸಿದ್ದಾರೆ. ಡಿ.ಎಲ್.ಎನ್. ಪ್ರತಿಯೊಡನೆ ಹೋಲಿಸಿ ಱ, ೞ (ಶಕಟರೇಫೆಗಳನ್ನು) ಸರಿಪಡಿಸಿದ್ದಾರೆ. ಇದನ್ನು ಬಿಟ್ಟರೆ ಹಿಂದಿನ ಪ್ರತಿಯ ಇನ್ನೊಂದು ರೂಪ ಇದಾಗಿದೆ. ಪಲುಮಚರಿಯ ಕಥಾಸಾರವನ್ನು ನೀಡಿರುವುದು ಕವಿ–ಕೃತಿ ಬಗ್ಗೆ ಸಂಕ್ಷಿಪ್ತವಾಗಿ ಹೇಳಿರುವುದು ಪದ್ಯಗಳ ಅಕಾರಾದಿ ನೀಡಿರುವುದು ಓದುಗರಿಗೆ ಅನುಕೂಲವಾಗಿದೆ. ವೃತ್ತಗಳ ಹೆಸರುಗಳನ್ನು ಉಳಿಸಿಕೊಳ್ಳಲಾಗಿದೆ ಎಂಬುದನ್ನು ಹೇಳುತ್ತಾರೆ.

ಡಾ. ಶಾಂತಿನಾಥ ದಿಬ್ಬದ ಮತ್ತೆ ಡಾ.ಎಸ್.ಶಿವಾನಂದ ಅವರ ಸಂಪಾದಿಸಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ೨೦೦೪ರಲ್ಲಿ ಸಂಪಾದಿಸಿ ಪ್ರಕಟಿಸಿದ ರಾಮಚಂದ್ರ ಚರಿತ ಪುರಾಣ ಸಂಗ್ರಹ ಎಂಬ ಸಂಗ್ರಹ ಕೃತಿಯ ಗಮನಾರ್ಹವಾಗಿದೆ.

ಅದಕ್ಕಾಗಿ ಅವರು ಡಿ.ಎಲ್.ಎನ್. ಹಾಗೂ ತಿರುವಳ್‌ವರ್ ಶ್ರೀನಿವಾಸ ರಾಘವಾಚಾರ್ಯ ಹಾಗೂ ಡಾ. ಆರ್.ಸಿ. ಹಿರೇಮಠವರು ಪರಿಷ್ಕರಿಸಿ ಪ್ರಕಟಿಸಿದ ಕೃತಿಗಳನ್ನು ಬಳಸಿಕೊಂಡಿದ್ದಾರೆ. ಆಸಕ್ತ ಓದುಗ ಹಾಗೂ ವಿದ್ಯಾರ್ಥಿಗಳಿಗೆ ಅನುವಾಗು ವಂತೆ ಕಥೆಯ ಮುಖ್ಯ ಭಾಗಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಇದು ಸಂಗ್ರಹಿತ ಭಾಗವೇ ಹೊರತು ಮೂಲ ಸಂಪಾದನೆ ಅಲ್ಲವೆಂದು ಸಂಪಾದಕರೇ ಹೇಳಿಕೊಂಡಿದ್ದಾರೆ. ವಿಶೇಷ ವೆಂದರೆ ಎರಡು ಪುಟಗಳ ವಿಸ್ತಾರ ಪ್ರಸ್ತಾವನೆ ಇದೆ. ಗದ್ಯಪದ್ಯ ಭಾಗಗಳ ಆಯ್ಕೆಯಲ್ಲಿ ಹೆಚ್ಚಿನ ಸ್ವಾತಂತ್ರ್ಯ ವಹಿಸಿದ್ದಾರೆ. ಆಶ್ವಾಸಗಳನ್ನು ಹೊಸದಾಗಿ ನಿರ್ಮಿಸಿಕೊಳ್ಳಲಾಗಿದೆ. ಏಳು ಆಶ್ವಾಸಗಳಲ್ಲಿ ಮುಖ್ಯ ಕಥೆಯನ್ನು ಸಂಗ್ರಹಿಸಲಾಗಿದೆ. ಕವಿಯ ಕಾಲ, ಸ್ಥಳ, ಪರಿಸರ, ವ್ಯಕ್ತಿತ್ವ, ಕೃತಿಯ ಪರಿಚಯ, ವಿವಿಧ ರಾಮಾಯಣಗಳ ಪರಂಪರೆ, ಕನ್ನಡ

ಜೈನ, ರಾಮಾಯಣ ಪರಂಪರೆ, ರಾಮಚಂದ್ರ ಚರಿತ ಪುರಾಣದ ಆಕರ, ವಸ್ತು, ಆಯ್ದು ಪಠ್ಯಭಾಗ ಕಥಾಸಾರದಂತಹ ವಿವರಗಳನ್ನು ನೀಡಲಾಗಿದೆ.

ಡಾ. ಶಾಂತಿನಾಥ ದಿಬ್ಬದ ಅವರ ಸಂಪಾದಕತ್ವದಲ್ಲಿ ೨೦೦೬ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ರಾಮಚಂದ್ರ ಚರಿತೆ ಪುರಾಣ ಪ್ರಕಟವಾಗಿದೆ. ಇದಕ್ಕೆ ಡಾ.ಆರ್.ಸಿ. ಹಿರೇಮಠ ೧೯೭೫ರಲ್ಲಿ ಸಂಪಾದಿಸಿದ ನಾಗಚಂದ್ರ ವಿರಚಿತ ರಾಮಚಂದ್ರ ಚರಿತ ಪುರಾಣವನ್ನು ಪ್ರಧಾನ ಆಕರವನ್ನಾಗಿಯೂ ೧೯೮೦ರಲ್ಲಿ ಪ್ರಕಟವಾದ ಡಿ.ಎಲ್.ಎನ್. ಅವರ ಆವೃತ್ತಿಯನ್ನು ಪೂರಕ ಆಕರವನ್ನಾಗಿ ಬಳಸಿಕೊಂಡಿದ್ದಾರೆ. ಓದುಗರಿಗೆ ಅನುಕೂಲವಾಗಲೆಂದು ಪಾಠಾಂತರ ಮತ್ತು ಅಡಿಟಿಪ್ಪಣಿಯ ವಿವರಗಳನ್ನು ಕೈ ಬಿಡಲಾಗಿದೆ ಎಂದು ಸಂಪಾದಕರೇ ಹೇಳಿದ್ದಾರೆ. ಸಂಧಿಗಳ ವಿಂಗಡಣೆ ಮತ್ತು ಪದ್ಯ ಸಂಖ್ಯೆಗಳನ್ನು ಮೂಲದಂತೆ ಉಳಿಸಿಕೊಳ್ಳಲಾಗಿದೆ. ಪದ್ಯಗಳ ಅಕಾರದಿ ಕಠಿಣ ಶಬ್ದಕೋಶಗಳನ್ನು ಮೂಲದಂತೆ ಇರಿಸಲಾಗಿದೆ.

ಒಟ್ಟಿನಲ್ಲಿ ಹರ್ಮನ್ ಮೊಗ್ಲಿಂಗ್‌ನಂದ ಆರಂಭಗೊಂಡ ರಾಮಚಂದ್ರ ಚರಿತೆ ಪುರಾಣ ಕೃತಿಯ ಸಂಪಾದನಾ ಪ್ರಕ್ರಿಯೆಯು ಬಿ.ಎಲ್.ರೈಸ್, ಡಿ.ಎಲ್.ಎನ್. ಆರ್.ಸಿ.ಹಿರೇಮಠ ಅವರಿಂದ ಗಟ್ಟಿಗೊಂಡು ಶಾಂತಿನಾಥ ದಿಬ್ಬದ ಅವರ ವರೆಗೂ ಹರಿದು ಬಂದಿರುವುದು ಪಂಪ ರಾಮಾಯಣ(ರಾಮಚಂದ್ರ ಚರಿತೆ ಪುರಾಣ)ದ ಪರಿಷ್ಕರಣದ ಚಾರಿತ್ರಿಕ ಸಂಗತಿಯಾಗಿದೆ. ಹಾಗೂ ಅದಕ್ಕಿರುವ ಸಾಂಸ್ಕೃತಿಕ ವೈಶಿಷ್ಟ್ಯದ ಸಂಗತಿಯೂ ಆಗಿದೆ.

ಸಂಗ್ರಹಗಳು

ಪೂರ್ಣ ಗ್ರಂಥದ ಅವಶ್ಯಕತೆ ಇಲ್ಲದವರಿಗೆ ಹಾಗೂ ಪಠ್ಯ ಪುಸ್ತಕದ ಕಲ್ಪನೆಯನ್ನು ಮುಂದಿಟ್ಟುಕೊಂಡು ರಾಮಚಂದ್ರ ಚರಿತ ಪುರಾಣ ಸಂಗ್ರಹ ಆವೃತ್ತಿಯನ್ನು ೧೯೨೩ರಲ್ಲಿ ಬಿ.ಕೃಷ್ಣಪ್ಪನವರು ಮೊದಲಬಾರಿ ಪ್ರಕಟಿಸಿದರು. ಕವಿ ಕಾವ್ಯದ ಬಗೆಗಿನ ೨೬ ಪುಟಗಳ ಪೀಠಿಕೆ ಉಪಯುಕ್ತವಾಗಿದೆ.

ನಂತರ ಶಾಂತಿನಾಥ ದಿಬ್ಬದ ಅವರು ವಿದ್ಯಾರ್ಥಿಗಳನ್ನು ಓದುಗರನ್ನು ಗಮನಿಸಿಕೊಂಡು ಬಿ.ಕೃಷ್ಣಪ್ಪ (೧೯೨೩) ರಾಮಚಂದ್ರ ಉಚ್ಚಿಲ ಅವರ ಸಂಗ್ರಹಗಳು ಗದ್ಯಾನುವಾದಗಳು ಪ್ರಕಟಗೊಂಡಿರುವುದುಂಟು. ಅಲ್ಲದೆ ಡಾ. ವಿಜಯಾ ದಬ್ಬೆ ಅವರು ನಾಗಚಂದ್ರ ಒಂದು ಅಧ್ಯಯನ ಎಂಬ ವಿಷಯದ ಮೇಲೆ ಸಂಶೋಧನೆ (ಪಿಎಚ್.ಡಿ.) ಮಾಡಿದ್ದು ಅದರ ಅಧ್ಯಯನ ಚರಿತ್ರೆಗೆ ಸಾಕ್ಷಿಯಾಗಿದೆ.

ಪಂಪರಾಮಾಯಣ ಸಂಪಾದನೆಯ ತೌಲನಿಕತೆ

ಕಸಾಪ	ಆರ್.ಸಿ. ಹಿರೇಮಠ	ದಿಬ್ಬದ
ವೃತ್ತಗಳ ಹೆಸರು ಉಳಿಸಲಾಗಿದೆ	ಕೈ ಬಿಡಲಾಗಿದೆ	ಕೈ ಬಿಡಲಾಗಿದೆ.
ಪಾಠಾಂತರಗಳು ಮೆಯ್ಯಿಂದೇನಾಗು ಕುಂದೆ (ಪದ್ಯ.೨) ದಿವ್ಯ ಭಾಕ್ಷಾರಸ ಪೂರ್ಣಮಂ	ಪಾಠಾಂತರವಿಲ್ಲ 'ದಿವ್ಯಾಭಾಷಾರ ಮಣೀಸ ಸಂಪೂರ್ಣ' ನೀಡಲಾಗಿದೆ ಮಾಹಿತಿಯಿದೆ.	ಕೈ ಬಿಡಲಾಗಿದೆ.
ಅಧ್ಯಾಯ ೪-೬೩ ಗತ ಜೀವಿತಮಾಯ್ತು ಕಿರಾತ ಸಾಧನಂ ಎನ್ನುವುದನ್ನು ಕಿರಾತ ಸಂಕುಲಂ ಎಂದು ತಿದ್ದಲಾಗಿದೆ. (ಡಿ.ಎಲ್.ಎನ್.) ೧೪-೧೨೨ ಮೇಗೋಗೆ ದಂತಾಗಿರ್ಪುದಂ ಮೆಯ್ಗೆರೆದಂತಾಗಿ ರ್ಪುದಂ (ಡಿ.ಎಲ್.ಎನ್.)	ಈ ಭಾಗ ಬಿಟ್ಟು ಹೋದ ಬಗ್ಗೆ ಮೆಯ್ಗೆರೆ	ಕೈ ಬಿಡಲಾಗಿದೆ.
ಶಬ್ದಸೂಚಿ ಮತ್ತು ಪದ್ಯಸೂಚಿಯಿಲ್ಲ	ಪದ್ಯಸೂಚಿಯಿದೆ ಕ್ಲಿಷ್ಟಪದಗಳ ಅರ್ಥ ನೀಡಲಾಗಿದೆ.	ಕೈ ಬಿಡಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ಪಾರ್ವತೀ ಪರಮೇಶ್ವರ ವಿವಾಹ ಸಂಬಂಧವಾದ ಕೆಲವು ಉಲ್ಲೇಖಗಳು ಮತ್ತು ಕೃತಿಗಳು

◆

ಡಾ. ಪ್ರಮೀಳಾ ಮಾಧವ್

ಪಾರ್ವತೀ ಪರಮೇಶ್ವರರ ವಿವಾಹ ಸಂಬಂಧವಾದ ಕೃತಿಗಳಲ್ಲಿ ೧೩ನೆಯ ಶತಮಾನದ ಹರಿಹರನ 'ಗಿರಿಜಾಕಲ್ಯಾಣ'ವೇ ಕನ್ನಡ ಸಾಹಿತ್ಯದ ಮೊತ್ತಮೊದಲಉಪಲಬ್ಧ ಕೃತಿ. ಆದರೆ ಅದಕ್ಕಿಂತ ಪೂರ್ವೋತ್ತರಗಳಲ್ಲಿ ಈ ವಸ್ತುವನ್ನುಳ್ಳ ಅನೇಕ ಕೃತಿಗಳು ರಚಿತವಾಗಿರುವುದಕ್ಕೆ ಖಚಿತವಾದ ಸಾಕ್ಷ್ಯಾಧಾರಗಳಿವೆ. ಸಂಕಲನ ಮತ್ತು ಶಾಸ್ತ್ರ ಕೃತಿಗಳಲ್ಲಿ, ವೀರಶೈವಕಾವ್ಯಗಳಲ್ಲಿ, ಶಾಸನ, ಜನಪದಗಳಲ್ಲಿ 'ಗಿರಿಜಾಕಲ್ಯಾಣ'ಕ್ಕೆ ಸಂಬಂಧಿಸಿದ ಅನೇಕ ಉಲ್ಲೇಖಗಳು ಲಭ್ಯವಾಗಿದ್ದು ಅವುಗಳಲ್ಲಿ ಕೆಲವನ್ನು ಇಲ್ಲಿ ಅವಲೋಕಿಸಬಹುದು.

ಸಂಕಲನ ಮತ್ತು ಶಾಸ್ತ್ರ ಗ್ರಂಥಗಳು

ಕವಿರಾಜ ಮಾರ್ಗ, ಕಾವ್ಯಾವಲೋಕನ, ಶಬ್ದಮಣಿದರ್ಪಣ ಮುಂತಾದ ಶಾಸ್ತ್ರ ಗ್ರಂಥಗಳಲ್ಲಿ ಸೂಕ್ತಿ ಸುಧಾರ್ಣವ, ಕಾವ್ಯಸಾರವೇ ಮೊದಲಾದ ಸಂಕಲನ ಗ್ರಂಥಗಳಲ್ಲಿ ರಸರತ್ನಾಕರದಂಥ ಅಲಂಕಾರ ಗ್ರಂಥಗಳಲ್ಲಿ ಗಿರಿಜೆಯ ವಿವಾಹ ಸಂಬಂಧವಾದ ಕೆಲವು ಪದ್ಯಭಾಗಗಳು ಲಭಿಸುತ್ತವೆ. ಈ ಪದ್ಯಗಳನ್ನು ಕುರಿತು ಶ್ರೀ. ಎನ್. ಅನಂತರಂಗಾಚಾರ್ ಅವರು'ಸೂಕ್ತಿಸುಧಾರ್ಣವ'ದ ಪೀಠಿಕೆಯಲ್ಲಿ '..ಇವು ಹರಿಹರನ 'ಗಿರಿಜಾಕಲ್ಯಾಣ'ದ ಭಾಗಗಳಲ್ಲ. ಇದುವರೆಗೆ ಪರಿಚಿತವಾಗಿರುವ ಕನ್ನಡ ಸಾಹಿತ್ಯ ಚರಿತ್ರೆಗೆ ಅಗೋಚರವಾದವು.' ಎನ್ನುತ್ತಾರೆ. ಇದುನಿಜ. 'ಕಾವ್ಯಸಾರದಲ್ಲಿ ಹರಿಹರನ 'ಗಿರಿಜಾಕಲ್ಯಾಣ'ದ ಬಹಳಷ್ಟು ಪದ್ಯಗಳಲ್ಲದೆ ಅಲ್ಪಸ್ವಲ್ಪ ವ್ಯತ್ಯಾಸವಿರುವ ಇತರ ಪದ್ಯಗಳೂ ಗೋಚರಿಸುತ್ತವೆ. ಅಲ್ಲದೆ ಕಾಳಿದಾಸನ 'ಕುಮಾರಸಂಭವ'ದ ಛಾಯೆಯಿರುವ ಪದ್ಯಗಳು ಕ್ವಚಿತ್ತಾಗಿವೆ. ಹರಿಹರನ 'ಗಿರಿಜಾಕಲ್ಯಾಣ'ಕ್ಕೆ ಹೊರತಾಗಿರುವ ಪದ್ಯಗಳನ್ನು ಕುರಿತು ಅವು ಅಸಗನ 'ಕುಮಾರಸಂಭವ'ದ ಭಾಗಗಳಾಗಿರಬಹುದೇನೋ ಎಂಬ ಅನುಮಾನವನ್ನೂಅವರು ವ್ಯಕ್ತಪಡಿಸುತ್ತಾರೆ. ಆದರೆ ಅವುಗಳ ಭಾಷೆ ಅಸಗನದೆಂದು ಊಹಿಸುವಷ್ಟು ಪ್ರಾಚೀನವಾಗಿಲ್ಲದಿರುವುದೂ ಮುಖ್ಯವಾಗಿ ಅಸಗನ 'ಕುಮಾರಸಂಭವ'ದ

ಕಥಾವಸ್ತುವಿನ ಬಗ್ಗೆಯೇ ಭಿನ್ನಾಭಿಪ್ರಾಯವಿರುವುದೂ ಕಾರಣವಾಗಿ ಆ ಪದ್ಯಗಳ ಆಕರದ ಬಗ್ಗೆ ನಿಖರತೆಯಿಲ್ಲವೆಂದು ಎಂ.ಎಂ. ಕಲ್ಬುರ್ಗಿಯವರು ಅಭಿಪ್ರಾಯಿಸುತ್ತಾರೆ. (ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪು. ೨೦೭) ಅದಾಗ್ಯೂ ಈ ಸಂಕಲನದ ಪೂರ್ವದಲ್ಲಿ ಹರಿಹರನ 'ಗಿರಿಜಾಕಲ್ಯಾಣ'ವಲ್ಲದೆ ಈ ವಸ್ತುವನ್ನು ಕುರಿತ ಗ್ರಂಥವಿತ್ತು ಎಂಬುದು ಮಾತ್ರ ನಿರ್ವಿವಾದ.

ಸೂಕ್ತಿ ಸುಧಾರ್ಣವ

ಮಲ್ಲಿಕಾರ್ಜುನನ 'ಸೂಕ್ತಿ ಸುಧಾರ್ಣವ' ಒಂದು ಸಂಕಲನ ಗ್ರಂಥ. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾದ ಅಷ್ಟಾದಶವರ್ಣನೆಗಳನ್ನು ಆರಿಸಿ ಕೋದ ಪದ್ಯಮಾಲೆ ಇದು. ಇದರಲ್ಲಿನ ಕೆಲವು ವರ್ಣನೆಗಳು ಅವುಗಳ ಸಾದೃಶ್ಯ ಸಂಪತ್ತಿನಿಂದ ಶಿವಕಥಾ ಸಂಬಂಧವಾದ ತುಣುಕುಗಳಾಗಿರಬಹುದೇನೋ ಎಂಬ ಅನುಮಾನವನ್ನು ಹುಟ್ಟಿಸದೆ ಇಲ್ಲ. ಪರ್ವತ ವರ್ಣನದಲ್ಲಿ ತಪಸ್ಸು ಮಾಡುವ ಯೋಗಿಯ ಚಿತ್ರಣ, (ಪ. ೧೮೨, ೮೩, ೮೪) 'ಋತುವರ್ಣನದಲ್ಲಿ ಶಿವನ ತಪೋಭಂಗ ಹಾಗೂ ಕಾಮದಹನಕ್ಕೆ ಸಂವಾದಿಯಾಗಬಲ್ಲ ವರ್ಣನೆ(ಪ. ೨೦೬)ಗಳನ್ನು ನೋಡಬಹುದು. ಸಮುದ್ರ ವರ್ಣನೆಯ ಪದ್ಯವೊಂದು (ಪ. ೬) 'ಗಿರಿಜಾಕಲ್ಯಾಣ'ದ ಪದ್ಯವನ್ನು ಧ್ವನಿಸಿದರೆ ಸೂಳೆಗೇರಿಯ ವರ್ಣನೆಯಲ್ಲಿ ಬರುವ 'ಮನಸಿಜನಾಣೆ ಸೂಳೆಗೇರಿಯೊಳ್' (ಪ. ४) 'ಗಿರಿಜಾಕಲ್ಯಾಣ'ದ 'ಸಕಲ ನಿಕೇತನಂಗಳೊಳೆ ದರ್ಪಕನುನ್ನತಿ (४-೧೨೦) ಪದ್ಯವನ್ನು ನೆನಪಿಸುತ್ತದೆ.

ಕಾವ್ಯಸಾರ

'ಕಾವ್ಯಸಾರ'ದ ಕರ್ತೃ ಮಲ್ಲಕವಿ.'ಕಾವ್ಯಸಾರ' ಅಷ್ಟಾದಶ ವರ್ಣನೆಗಳಿಗೆ ಮೀಸಲಾದ ಕೃತಿ.ಕನ್ನಡದ ಪ್ರಾಚೀನ ಕಾವ್ಯಗಳಲ್ಲಿರುವ ವರ್ಣನೆಯ ಭಾಗಗಳನ್ನು ಈತ ಆರಿಸಿದ್ದಾನೆ. ಸಂಕಲನಕಾರ ಕೇವಲ ವರ್ಣನಾಭಾಗವನ್ನಷ್ಟೇ ಆರಿಸಿ ಕಥಾಂಶವಿರುವ ಪದ್ಯಗಳನ್ನು ಉದ್ದೇಶಪೂರ್ವಕವಾಗಿಯೇ ಕೈಬಿಟ್ಟಿರುವುದರಿಂದ ಆಕರಗಳು ಸಿಗದ ಹಲವು ಪದ್ಯಗಳನ್ನು ಯಾವ ಕಾವ್ಯಕಥೆಯಿಂದ ಆರಿಸಿರಬಹುದೆಂದು ಹೇಳಲಾಗುವುದಿಲ್ಲ. ಏಕೆಂದರೆ 'ಗಿರಿಜಾಕಲ್ಯಾಣ'ದ ಪದ್ಯಗಳಲ್ಲಿ 'ಅಗಜೆ' (೫-೬೫) ಮತ್ತು 'ಪಾರ್ವತಿ' (೯-೬೧) ಎಂದು ಉಕ್ತವಾಗಿರುವ ಎರಡೇ ಎರಡು ಪದ್ಯಗಳಲ್ಲದೆ ಉಳಿದ ಯಾವ ಪದ್ಯದಲ್ಲೂ 'ಗಿರಿಜಾಕಲ್ಯಾಣ'ದ್ದೆಂದು ಗುರುತಿಸುವ ಎಳೆಯೂ ಕಾಣಿಸದಂತೆ ಜಾಗ್ರತೆ ವಹಿಸಿದ್ದಾನೆ. ಆದರೆ 'ಗಿರಿಜಾಕಲ್ಯಾಣ' ಮತ್ತು 'ಕಾವ್ಯಸಾರ'ವನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ 'ಗಿರಿಜಾಕಲ್ಯಾಣ'ದ ಒಟ್ಟು ಪದ್ಯಗಳಲ್ಲಿ ೧/೩ಕ್ಕಿಂತ ಪದ್ಯಗಳು ಕಾವ್ಯಸಾರದಲ್ಲಿ ಉದ್ಧೃತವಾಗಿವೆ. ಪ್ರಾರ್ಥನಾಪದ್ಯವೂ ಸೇರಿದಂತೆ 'ಗಿರಿಜಾ ಕಲ್ಯಾಣ'ದಲ್ಲಿ ಒಟ್ಟು ೧೧೯೪ ಪದ್ಯಗಳಿದ್ದು ಅವುಗಳಲ್ಲಿ ೩೭೨ ಪದ್ಯಗಳು 'ಕಾವ್ಯಸಾರ'ದಲ್ಲಿವೆ.

ಗಿರಿಜಾಕಲ್ಯಾಣದ ಆಶ್ವಾಸಗಳು	ಪದ್ಯಗಳು	ಕಾವ್ಯಸಾರದಲ್ಲಿಉದ್ಧೃತವಾದ ಪದ್ಯಗಳು
೧	೧೩೦	೮೩
೨	೧೦೭	೮೪
೩	೧೨೦	೨೬
೪	೧೬೨	೯೬
೫	೯೨	೧೨
೬	೮೫	-
೭	೭೩	೧೭
೮	೮೮	೦೪
೯	೧೨೧	೪೮
೧೦	೧೧೬	೦೨
ಒಟ್ಟು	೧೦೯೪	೩೭೨

ಕಾವ್ಯಾವಲೋಕನ

೨ನೆಯ ನಾಗವರ್ಮನ ಈ ವ್ಯಾಕರಣ ಕೃತಿಯಲ್ಲಿ 'ಗಿರಿಜಾಕಲ್ಯಾಣ'ಕ್ಕೆ ಸಂಬಂಧಿಸಿದ ೧೩ ಪದ್ಯಗಳಿವೆಯೆಂದು ವಿದ್ವಾಂಸರು ಗುರುತಿಸಿದ್ದರು. ಆದರೆ ಕೃತಿಯನ್ನು ಇನ್ನಷ್ಟು ಪರಿಶೀಲನೆ ಮಾಡಿದಾಗ ೧೬ ಪದ್ಯಗಳಿರುವುದು ಗೋಚರಿಸುತ್ತದೆ. ಮತ ಸಂಬಂಧವಾದ ತೀವ್ರ ಪೈಪೋಟಿ ಇದ್ದ ಕಾಲದಲ್ಲಿ ಜೈನಕವಿಯೊಬ್ಬ ಶಿವಪಾರ್ವತಿಯರ ವಿವಾಹ ಸಂಬಂಧಿತ ಪದ್ಯಗಳನ್ನು ಉಲ್ಲೇಖಿಸಿರುವುದು ಕುತೂಹಲಕಾರಿಯಾಗಿದೆ. ಇವುಗಳಲ್ಲಿ ಕೆಲವು ಕಾಳಿದಾಸನ 'ಕುಮಾರಸಂಭವ'ದ ಪದ್ಯಗಳನ್ನು ನೆನಪಿಸುತ್ತಿದ್ದು ಈ ಅಂಶ ಜೈನನಾದ ಅಸಗ ಕಾಳಿದಾಸನ 'ಕುಮಾರಸಂಭವ'ಕ್ಕೆ ಮನಸೋತು ಕನ್ನಡದಲ್ಲಿ ಅದನ್ನೇ ರಚಿಸಿರಬಹುದೆಂಬ ಪ್ರಮೇಯಕ್ಕೆ ಹೆಚ್ಚಿನ ಒತ್ತು ನೀಡುತ್ತದೆ. (ನೋಡಿ: ಕುಮಾರಸಂಭವ ಮತ್ತು ಗಿರಿಜಾ ಕಲ್ಯಾಣ-ಒಂದು ತೌಲನಿಕ ಅಧ್ಯಯನ. ಪು. ೨೫೭)

ಶಬ್ದಮಣಿದರ್ಪಣ

ಇದು ಕೇಶೀರಾಜ ಕೃತ ವ್ಯಾಕರಣ ಗ್ರಂಥ. ಈ ಕೃತಿಯಲ್ಲಿ ಲಕ್ಷ್ಯವಾಗಿ ಉದಾಹೃತವಾದ ಕೆಲವು ಪದ್ಯಗಳು 'ಗಿರಿಜಾಕಲ್ಯಾಣ' ಸಂಬಂಧವಾದ ಪದ್ಯಗಳೆಂದು ವಿದ್ವಾಂಸರು ಅನುಮಾನಿಸಿದರೂ ಖಚಿತವಾಗಿ ನಿರ್ಧರಿಸತಕ್ಕ ಸಾಕ್ಷ್ಯಾಧಾರಗಳು ಅವುಗಳಲ್ಲಿ ಕಾಣಿಸುವುದಿಲ್ಲ. (ನೋಡಿ: ಅದೇ. ಪು. ೨೫೮)

ರಸರತ್ನಾಕರ

ಗಿರಿಜಾಕಲ್ಯಾಣ ಸಂಬಂಧವಾದ ಕಾವ್ಯಭಾಗಗಳೆಂದು ಖಚಿತವಾಗಿ ಊಹಿಸಬಹುದಾದ ಎರಡು ಪದ್ಯಗಳು ಸಾಳ್ವಕವಿಯ 'ರಸರತ್ನಾಕರ' ವೆಂಬ ಅಲಂಕಾರ ಗ್ರಂಥದಲ್ಲಿವೆ. ಹಾಸ್ಯಕ್ಕೂ ಮೋಹಕ್ಕೂ ಉದಾಹರಣೆಯಾಗುವ ಈ ಪದ್ಯಗಳ ಭಾವ ಉತ್ತಮ ಸಾಹಿತ್ಯಾಭಿರುಚಿಯಿಂದ ಕೂಡಿದೆ.

ನೋಡಿ:

ತೊಟ್ಟಹಿಯನಿಟ್ಟು ಬೂದಿಯ
ನುಟ್ಟಜಿನವನೀಶನೆಯ್ದೆ ತನ್ನಿರವಂ ತಾಂ
ದಿಟ್ಟಿಸಿ ಮನದೊಳೆ ನಕ್ಕಂ
ಬೆಟ್ಟದ ಮಗಳಕ್ಷಿಗಿನಿದನೀಗುಮೆನುತ್ತುಂ (ಸೂ. ೪೯, ಲಕ್ಷ್ಯ ೧೦೦)

ಉರಿಗಣ್ಣಿಂ ನೆನೆವಿಲ್ಲನಂ ತಿಸುಳಿ ಸುಟ್ಟಂದಾಗಳೆಯ್ತಂದು ತ
ತ್ಸ್ಮರ ದೇಹಾಕೃತಿಯಿಂದೆ ಭಸ್ಮವಿರೆ ಕಂಡಾಲಿಂಗಿಸಲ್ ಬೀಳ್ದು ಶೋ
ಕರಸಾವೇಶದೆ ಮೂರ್ಛೆವೆತ್ತು ರತಿ ತಾಂ ಪಂಚೇಂದ್ರಿಯೋನ್ಮೋಹದಿಂ
ದಿರೆ ಲೇಸಾದುದೀಕೆಗೆಳ್ಚರು ವಿಷಂ ತಾವೆಂದರಾ ಪ್ರೇಕ್ಷಕರ್ (ಪ. ೨೦)

ಶಾಸನಗಳು

ತಾಮ್ರಶಾಸನ

ರಾಯಚೂರು ಜಿಲ್ಲೆಯ ಗಂಗಾವತಿ ತಾಲೂಕಿನ ಆನೆಗೊಂದಿ ಊರಿನ ಉತ್ತರಕ್ಕಿರುವ ಕಡೆಬಾಗಿಲು ಎಂಬಲ್ಲಿನ ಹೊಲವೊಂದರಲ್ಲಿ ಪತ್ತೆಯಾದ ತಾಮ್ರಶಾಸನಗಳಲ್ಲಿ ಶಿವಪಾರ್ವತಿಯರ ವಿವಾಹಕ್ಕೆ ಸಂಬಂಧಿಸಿದ ವಿವರಗಳಿವೆ. ಇಲ್ಲಿ ದೊರಕಿದ ಎಂಟು ತಾಮ್ರಶಾಸನಗಳಲ್ಲಿ ೨, ೫, ೮ ತ್ರುಟಿತವಾಗಿದ್ದು ಉಳಿದವುಗಳಲ್ಲಿ ವಿವಾಹ ಪುರಾಣ, ಸಮಯಶಾಸನ ಪುರಾಣ ಮತ್ತು ಅಮೃತಮಂಥನದ ಕಥಾನಕಗಳಿವೆಯೆಂದು ತಿಳಿದುಬರುತ್ತದೆ. (ಚೆನ್ನಬಸಪ್ಪ ಎಸ್. ಪಾಟೀಲ: ಎಫಿಗ್ರಾಫಿಕಲ್ ಸ್ಟಡೀಸ್, ಪು. ೧೫)

ಈ ಶಾಸನದಲ್ಲಿ ನಿರೂಪಿತವಾಗಿರುವ ಕಥಾವಸ್ತು ಹರಿಹರನ 'ಗಿರಿಜಾಕಲ್ಯಾಣ'ಕ್ಕೆ ಸಂವಾದಿಯಾಗಿದೆಯೆಂದೂ ಆದರೆ ಯಾವುದು ಯಾವುದರಿಂದ ಪ್ರಭಾವಿತವಾಗಿದೆಯೆಂದು ಹೇಳಲಾಗದೆಂದೂ ಸಂಪಾದಕರು ತಿಳಿಸುತ್ತಾರೆ. (ಅದೇ) ಆದರೆ ತಾಮ್ರಶಾಸನವನ್ನು ಪರಿಶೀಲಿಸಿದಾಗ ಅದರಲ್ಲಿರುವ ವಿವಾಹವಿಷಯ 'ಗಿರಿಜಾಕಲ್ಯಾಣ' ವನ್ನು ಹೋಲುವುದಿಲ್ಲ. ಹರಿಹರನಾದರೂ ಅದನ್ನು ಗಮನಿಸಿರುವ ಸಾಧ್ಯತೆಯಿಲ್ಲ. ಯಾಕೆಂದರೆ ಇದರ ಭಾಷೆ ೧೩ನೆಯ ಶತಮಾನದ ಭಾಷೆಗಿಂತ ತೀರಾ ಅರ್ವಾಚೀನವಾಗಿದೆ. (ಈ ಅನುಮಾನವನ್ನು ಖಚಿತಗೊಳಿಸಿದ ಡಾ. ಕೆ.ಆರ್. ಗಣೇಶ್ ಅವರಿಗೆ ಆಭಾರಿಯಾಗಿದ್ದೇನೆ) ಶಾಸನಕಾರ ಹರಿಹರನ ಕಾವ್ಯವನ್ನು ಗಮನಿಸಿರಬಹುದಾದ ಸಾಧ್ಯತೆ ಒಂದೆರಡು ಕಡೆಗಳಲ್ಲಿ ಭಾಸವಾದರೂ ಅವುಗಳಲ್ಲಿ ಕಥಾಂಶಗಳು ಕಡಿಮೆಯಿವೆ.

ಬರಹದ ಉದ್ದೇಶವೂ ವಿವಾಹವಲ್ಲ. ಐಶಾವಂತ ಕುಟುಂಬದ ಹೆಸರು, ಪ್ರಶಸ್ತಿಗಳನ್ನು ಜಾಹೀರುಗೊಳಿಸುವುದೇ ಶಾಸನಕಾರನ ಗುರಿ. ಅದಕ್ಕಾಗಿ ಶಿವಪಾರ್ವತಿಯರ ವಿವಾಹಕತೆಯನ್ನು ನೆಪವಾಗಿಸಿದ್ದು ವಿವಾಹಕತೆಯ ಜನಪ್ರಿಯತೆಯನ್ನು ಗುರುತಿಸಬಹುದು.

ಶಿಲಾಶಾಸನ

ಮೇಲೆ ಉಲ್ಲೇಖಿಸಿದ ತಾಮ್ರಶಾಸನಕ್ಕೆ ಸಮಾನವಾದ ಶಿಲಾಶಾಸನವೊಂದು ಧಾರವಾಡದ ಶ್ರೀಹರಿ ಪ್ರಕಾಶನದಿಂದ ೧೯೮೮ರಲ್ಲಿ ಪ್ರಕಟವಾಗಿದೆ. (Inscriptions from Solar District, ಶ್ರೀಹರಿ ಪ್ರಕಾಶನ, ಧಾರವಾಡ, ೧೯೮೮, ಶಾಸನ ಸಂಖ್ಯೆ ೪೦, ಪು. ೬೫) ಇದು ಉಳಿದ ಶಾಸನಗಳಿಗಿಂತ ದೊಡ್ಡದಾಗಿದ್ದು ಇದನ್ನು ವಿವಾಹಪುರಾಣವೆಂದು ಹೆಸರಿಸಲಾಗಿದೆ. ಇದರಲ್ಲಿ ೬೮ ಸಾಲುಗಳಿವೆ. ಬಹಳಷ್ಟು ಭಾಗಗಳು ತ್ರುಟಿತವಾಗಿವೆ. ಲಭ್ಯ ಮಾಹಿತಿಗಳನ್ನು ಪರಿಶೀಲಿಸಿದಾಗಶಾಸನಕಾರ ಕಥೆಯ ವಿವರಗಳಿಗೆ ಪುರಾಣಗಳನ್ನಷ್ಟೇ ಅವಲಂಬಿಸಿರುವುದು ಸ್ಪಷ್ಟವಾಗುತ್ತದೆ.ಇದರಲ್ಲೂ ಶಿವಪಾರ್ವತಿಯರ ವಿವಾಹ ನೆಪದಲ್ಲಿ ಕುಂಬಾರ ಕುಲವನ್ನು ಅತಿಶಯಿಸುವುದೇ ಶಾಸನಕಾರನ ಉದ್ದೇಶ. ಎರಡೂ ಶಾಸನಗಳ ಉದ್ದೇಶ ಒಂದೇ ಆಗಿದ್ದು ನಿರೂಪಣೆಯಲ್ಲೂ ತುಂಬ ಹೋಲಿಕೆಯಿರುವುದರಿಂದ ಎರಡೂ ಒಬ್ಬರೇ ಬರೆದಿರುವ ಅಥವಾ ಒಂದರ ಪಡಿಯಚ್ಚು ಇನ್ನೊಂದಾಗಿರುವ ಸಾಧ್ಯತೆಯಿದೆ.

ಜನಪದ ಸಾಹಿತ್ಯ

ಜಾನಪದದಲ್ಲೂ ಗಿರಿಜೆಯ ಕಲ್ಯಾಣಕ್ಕೆ ಸಂಬಂಧಿಸಿದ ಅಸಂಖ್ಯಾತ ಹಾಡುಗಳಿದ್ದು ಕತೆಯ ಜನಪ್ರಿಯತೆಗೆ ಸಾಕ್ಷಿಯಾಗಿವೆ. ಕನ್ನಡದಲ್ಲಿ ಹರಿಹರನ ಗಿರಿಜಾಕಲ್ಯಾಣಕ್ಕೆ ಪೂರ್ವಭಾವಿಯಾಗಿಯೇ ಈ ಕಥೆ ಜನಪದ ಗೀತೆಯಾಗಿ ಬೆಳೆದುಕೊಂಡು ಬಂದಿರಬಹು ದೆಂದೂ ಮದುವೆ ಮುಂತಾದ ಸಂದರ್ಭಗಳಲ್ಲಿ ಇವುಗಳನ್ನು ಹಾಡುತ್ತಿದ್ದಿರಬೇಕೆಂದೂ ಊಹಿಸಲಾಗಿದೆ. ಶ್ರೀಯುತ ಟಿ. ಕೇಶವಭಟ್ಟರಿಂದ ಸಂಪಾದಿತವಾದ 'ಹವ್ಯಕರ ಶೋಭಾನೆಗಳು' ಈ ನಿಟ್ಟಿನಲ್ಲಿ ಅಗ್ರಗಣ್ಯ.ಇದರಲ್ಲಿ ಮದುವೆಯ ವಿಷಯವನ್ನೊಳಗೊಂಡ ೯೩ ಹಾಡುಗಳಿವೆ. ಇವುಗಳಲ್ಲಿ ಗಿರಿಜಾ ಕಲ್ಯಾಣಕ್ಕೆ ಸಂಬಂಧಿಸಿದ್ದೇ ಹಲವಿದ್ದು ಒಂದು ಹಾಡು ಬಹುದೀರ್ಘವಾಗಿದ್ದು ಗಿರಿಜೆಯ ವಿವಾಹವೇ ಇದರ ಪ್ರಮುಖ ವಿಷಯವಾಗಿದೆ.

ಗಿರಿಜಾ ಕಲ್ಯಾಣ

ಈ ಹಾಡಿನಲ್ಲಿ ೫ ಸಾಲುಗಳ ೭೫ ಸೊಲ್ಲುಗಳಿವೆ. ಸಂಪಾದಕರು ಇದು ಕಾಳಿದಾಸನ 'ಕುಮಾರಸಂಭವ'ವನ್ನು ಬಹಳಮಟ್ಟಿಗೆ ಹೋಲುವ ಒಂದು ರಸವತ್ತಾದ ಲಘುಕಾವ್ಯ ದಂತಿದೆಯೆಂದು ಅಭಿಪ್ರಾಯಿಸಿದ್ದಾರೆ. (ಟಿ. ಕೇಶವ ಭಟ್ಟ, 'ಪರಾಮರ್ಶೆ' ಹವ್ಯಕರ ಶೋಭಾನೆಗಳು. ಪು. ೫೯೨) ಆದರೆ ಕಾವ್ಯವನ್ನು ಓದಿದಾಗ ಅದು ರಸದೃಷ್ಟಿಯಿಂದ ಸೊಗಸಾಗಿರುವುದು ನಿಜವಾದರೂ ಸಂಪಾದಕರು ಅಭಿಪ್ರಾಯಿಸಿದಂತೆ 'ಕುಮಾರ ಸಂಭವ'ವನ್ನು ಹೋಲದೆ 'ಗಿರಿಜಾಕಲ್ಯಾಣ'ವನ್ನೇ ಹೋಲುತ್ತದೆನ್ನುವುದು ಸ್ಪಷ್ಟವಾಗುತ್ತದೆ.

ಪಾರ್ವತಿ ಹುಟ್ಟುವ ಮೊದಲು ಮೇನೆ ತಪಸ್ಸು ಮಾಡುವುದು, ಜಗನ್ಮಾತೆ ಅವಳನ್ನು ಅನುಗ್ರಹಿಸುವುದು (ಪ. ೪), ಶಿಶು ಪಾರ್ವತಿ ಶೈಶವದ ಆಟಗಳನ್ನು ನಟಿಸುವುದು, ಯುವತಿ ಪಾರ್ವತಿಯ ಸೌಂದರ್ಯ ವರ್ಣನೆ (ಪ. ೧೨) ನಾರದ ಪಾರ್ವತಿಗೆ ಸಾಷ್ಟಾಂಗವೆರಗುವುದು (ಪ. ೧೫), ಹಿಮವಂತನಗೆ ಪಾರ್ವತಿಯ ಪೂರ್ವವೃತ್ತಾಂತವನ್ನು ತಿಳಿಸುವುದು(ಪ. ೧೭) ಶಿವತಪೋಭಂಗಕ್ಕೆ ಮನ್ಮಥನಿಗೆ ಆಹ್ವಾನ ನೀಡಲು ಬೃಹಸ್ಪತಿಯೇ ಕಾಮನಲ್ಲಿಗೆ ಬರುವುದು, ಮನ್ಮಥನ ಸಂದಿಗ್ಧಸ್ಥಿತಿ, ಅನಿವಾರ್ಯ ಸಮ್ಮತಿ (ಪ. ೨೬) ಅನಾಥಳಾದ ರತಿಯ ರಕ್ಷಣೆಗೆ ಪಾರ್ವತಿ ತಾನೇ ಧಾವಿಸಿ ಸಾಂತ್ವನ ನೀಡುವುದು (ಪ. ೨೭) ಇವೆಲ್ಲ 'ಕುಮಾರಸಂಭವ'ದಲ್ಲಿಲ್ಲದ ಆದರೆ 'ಗಿರಿಜಾಕಲ್ಯಾಣ'ದಲ್ಲಿರುವ ಅಂಶಗಳು.

ಕೃತಿಕಾರ 'ಗಿರಿಜಾಕಲ್ಯಾಣ'ವನ್ನಲ್ಲದೆ ಪುರಾಣಗಳನ್ನೂ ಆಧರಿಸಿದ್ದಾನೆ. ನಾರದನಿಂದ ಶಿವನ ವೃತ್ತಾಂತವನ್ನು ತಿಳಿದ ಗಿರಿಜೆ ತಪಸ್ಸಿಗೆ ತೆರಳುವುದು (ಪ. ೨೧) ಶಿವನ ತಪೋಭಂಗವನ್ನು ಮಾಡಲು ಬೃಹಸ್ಪತಿಯೇ ಕಾಮನಿಗೆ ಆದೇಶಿಸುವುದು (ಪ. ೨೫), ವಟುವಾಗಿ ತನ್ನನ್ನು ಪರೀಕ್ಷಿಸಲು ಬಂದಾತನ ನಿಂದೆಯನ್ನು ಅಲ್ಲಗಳೆದು ಶಿವ ಸಮರ್ಥನೆ ಮಾಡುವುದು, ಮದುವಣಿಗನಾದ ಶಿವನನ್ನು ಹಿಮವಂತ 'ಎರಗಿ' ಎದುರುಗೊಳ್ಳುವುದು (ಪ. ೪೯) ದೇವತಾಸ್ತ್ರೀಯರು ಪಾರ್ವತಿಯನ್ನು ಅಲಂಕರಿಸುವುದು–ಇವೆಲ್ಲ ಪುರಾಣೋಕ್ತ ವಿವರಗಳು.

ಹರಿಹರನ 'ಗಿರಿಜಾಕಲ್ಯಾಣ'ದಲ್ಲಿರುವಂತೆ ಗಿರಿಜೆಯ ವಿವಾಹಕ್ಕೆ ಕತೆ ಮುಕ್ತಾಯವಾಗಿ ತಾರಕವೃತ್ತಾಂತ ಒಂದೇ ಒಂದು ಪದ್ಯದಲ್ಲಿ ಬರುತ್ತದೆ. 'ಹರನು ಪಾರ್ವತಿಯರು ಪರಮ ವೈಭವದಿ ಮೆರೆವ ಕೈಲಾಸಾದ್ರಿಯ ಮಂದಿರದಿ ತೆರಳಿ ವಿಲಾಸದೊಳಿರ್ದರು ಸುಖದಿ ಶರಜನ್ಮ ಪುಟ್ಟಿ ತಾರಕನನಾಹವದಿ ಶಿರವ ಚೆಂಡಾಡಿ ಮೊರೆದಳು (ಪ. ೭೫)

ಈ ಹಾಡಿನ ಕೊನೆಯಲ್ಲಿ ಕರ್ತೃ ರಾಜೇಂದ್ರನೆಂದೂ ಊರು ಪಂಜವೆಂದೂ ತಿಳಿಯುತ್ತದೆ.

ಗೌರಮ್ಮನ ಮದುವೆ

ಶ್ರೀಯುತ ಜೀ.ಶಂ. ಪರಮಶಿವಯ್ಯನವರು ತಮ್ಮ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು' ಎಂಬ ಕೃತಿಯಲ್ಲಿ ಕನ್ನಡ ಜನಪದ ಸಾಹಿತ್ಯದಲ್ಲಿ ಈ ಬಗೆಯ ಕೃತಿಗಳು ಹಲವಿವೆ ಎಂದು ಕೆಲವು ಸಂಕಲನ ಕೃತಿಗಳನ್ನು ಹೆಸರಿಸಿದ್ದಾರೆ. 'ಗೌರಮ್ಮನ ಮದುವೆ' ಅವರೇ ಸಂಪಾದಿಸಿದ ಹಾಡು. ಈ ಹಾಡು ಸ್ಥೂಲವಾಗಿ ಹರಿಹರನ 'ಗಿರಿಜಾಕಲ್ಯಾಣ'ದ ಕಥೆಯನ್ನು ಹೋಲುತ್ತಿದ್ದರೂ ಜನಪದ ಕಾವ್ಯದ ಆವರಣಕ್ಕೆ ತಕ್ಕಂತೆ ಕೆಲವು ವಿಶಿಷ್ಟ ವ್ಯತ್ಯಾಸಗಳನ್ನು ಒಳಗೊಂಡಿವೆಯೆಂದು ಸಂಪಾದಕರು ತಿಳಿಸುತ್ತಾರೆ. (ಜೀ. ಶಂ. ಪರಮಶಿವಯ್ಯ (ಸಂ) ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು. ಪು. ೨೯೭)

ಅವರ 'ಜನಪದ ಕಾವ್ಯಕಥೆಗಳು' ಕೃತಿಯಲ್ಲಿ ಸಂಕಲಿತವಾದ ಕತೆ ಹೀಗಿದೆ:

ಈಶ್ವರನೇ ಮೇನೆಯ ಕನಸಿನಲ್ಲಿ ಬಂದು ಮಗಳಾದರೆ ತನಗೆ ಕೊಡಬೇಕೆನ್ನುತ್ತಾನೆ. ಜಗದೀಶ್ವರಿಯನ್ನು ಪಡೆಯುವ ಭಾಗ್ಯವಂತರೆಂದು ಹಿಮವಂತ ದಂಪತಿಗಳು ಹಿಗ್ಗುತ್ತಾರೆ. ಅವರಿಗೆ ಇಬ್ಬರು ಹೆಣ್ಣುಮಕ್ಕಳು ಹುಟ್ಟುತ್ತಾರೆ. ಅಶುಭ ಲಕ್ಷಣಗಳುಳ್ಳ ಒಬ್ಬಳನ್ನು ಹಿರಿಯರ ಹೇಳಿಕೆಯಂತೆ ಕಣ್ಣೀರ್ಗರೆದು ನದಿಯಲ್ಲಿ ತೇಲಬಿಡುತ್ತಾರೆ. ಆಕೆ ಗಂಗೆ ಎಂಬ ಅಭಿದಾನದಿಂದ ಅಂಬಿಗರ ಮನೆಯಲ್ಲಿ ಬಳೆಯುತ್ತಾಳೆ. ಇನ್ನೊಬ್ಬಳು ಗಿರಿಜೆ ಎಂಬ ನಾಮಧೇಯದಿಂದ ಅರಮನೆಯ ಸುಪ್ಪತ್ತಿಗೆಯಲ್ಲಿ ಮೆರೆಯುತ್ತಾಳೆ. ರೂಪ ಲಾವಣ್ಯಾತಿಶಯದಿಂದ ತುಂಬು ತಾರುಣ್ಯವನ್ನು ಪಡೆದ ಕಾಲಕ್ಕೆ ಈಶ್ವರ ಅವರ ಮನೆಗೆ ಭಿಕ್ಷಕ್ಕೆ ಬರುತ್ತಾನೆ. ಭಿಕ್ಷೆ ನೀಡಬಂದ ತರುಣಿಯನ್ನು ಕಂಡು ಪರವಶನಾಗುತ್ತಾನೆ. ಆತನ ತುಂಟ ಆಕರ್ಷಕ ನೋಟಕ್ಕೆ ಗಿರಿಜೆಯೂ ಮೈಮರೆಯುತ್ತಾಳೆ. ತಾಯಿಯೊಂದಿಗೆ ತನ್ನ ಹೃದಯದಾಶೆಯನ್ನು ತಿಳಿಸಿ ಆತನಿಗೇ ತನ್ನನ್ನು ಕೊಡುವಂತೆ ಪ್ರಾರ್ಥಿಸುತ್ತಾಳೆ. ಗೊರವನಂಥ ನಿರ್ಗತಿಕನಿಗೆ ಮನತೆತ್ತ ಮಗಳನ್ನು ಮೇನೆ ಆಕ್ಷೇಪಿಸುತ್ತಾಳೆ; ಗಿರಿಜೆಯ ಮೊಂಡುತನಕ್ಕೆ ಕೆಂಡವಾಗುತ್ತಾಳೆ. ಶಿವರಾಯಿ ಬೇರೆ ದಾರಿಯಿಲ್ಲದೆ ಗಿರಿಜೆಯ ಉದ್ದಕ್ಕೆ ಹೊನ್ನರಾಶಿಯನ್ನು ಅಳೆದು ಸಾಲುಬಂಡಿಗಳಲ್ಲಿ ತರುತ್ತಾನೆ. ಕನ್ಯಾರ್ಥಿಯಾಗಿ ಸುವರ್ಣ ದಾನವೀಯಲು ಬಂದರೂ ಗತಿಗೋತ್ರವಿಲ್ಲದವನೆಂದು ಜರೆಯುತ್ತಾಳೆ ಮೇನೆ. ಶಿವರಾಯಿ ತನ್ನ ಸರ್ವಸ್ವಾಮಿತ್ವವನ್ನು ಶ್ರುತಪಡಿಸಿದರೂ ಅವಳ ಆತಂಕ ನಿವಾರಣೆಯಾಗುವುದಿಲ್ಲ. ಶಿವರಾಯಿ ಅತ್ತೆಯನ್ನೇ ಒತ್ತಾಯಿಸುತ್ತಾನೆ. ಕೊನೆಗೆ ಕನಸಿನಲ್ಲಿ ಬಂದವನೇ ಇವನೆಂದು ತಿಳಿದು ಮೇನೆ ಹರ್ಷಪುಳಕಿತಳಾಗುತ್ತಾಳೆ. ವಿವಾಹ ನಡೆಯುತ್ತದೆ. ಲೋಕಕಲ್ಯಾಣ ಕಾರಕರಾದ ಶಿವ ದಂಪತಿಗಳನ್ನು ದರ್ಶಿಸಿ ಸಮಸ್ತ ಜನರೂ ತೃಪ್ತಿ, ತುಷ್ಟಿಗಳನ್ನು ಪಡೆಯುತ್ತಾರೆ.'ಕುಮಾರ ಸಂಭವ'ವನ್ನಾಗಲೀ, 'ಗಿರಿಜಾಕಲ್ಯಾಣ'ವನ್ನಾಗಲೀ ನೇರವಾಗಿ ಅನುಸರಿಸದೆ ಸಮಕಾಲೀನ ಬದುಕಿನ ರೀತಿ, ನೀತಿ, ಸ್ವತಂತ್ರ ಕಲ್ಪನೆಗಳಿಂದ ಜನಪದ ಕಥಾರೂಪಕ್ಕನುಗುಣವಾಗಿ ರಚಿತವಾದ ಈ ಕತೆ ಸುರಮ್ಯವೂ ಆಕರ್ಷಕವೂ ದರ್ಶನಪೂರಕವೂ ಆಗಿದೆ.

ಮಲ್ಲೇಶ್ವರ ತಾರಾವಳೀ

ಡಾ. ವೀರಣ್ಣ ರಾಜೂರ ಸಂಪಾದಿಸಿದ ತಾರಾವಳೀ ಸಾಹಿತ್ಯದಲ್ಲಿ ಶಿವಪಾರ್ವತಿಯರ ವಿವಾಹದ ಕುರಿತಾದ ಉಲ್ಲೇಖಗಳಿವೆ. ಇದರಲ್ಲಿ ಶಿವನ ಮಹಿಮಾತಿಶಯ ವರ್ಣನೆಗೇ ಹೆಚ್ಚಿನ ಪ್ರಾಶಸ್ತ್ಯವಿದೆಯೆನ್ನುತ್ತಾರೆ ಇದರ ಸಂಪಾದಕರು. (ಗೌರವ: ಎಸ್.ಎಸ್. ಭುಸನೂರ ಮಠರ ಅಭಿನಂದನಾ ಗ್ರಂಥ. ಪು. ೪೨೧)

ಮಲ್ಲೇಶ್ವರ ತಾರಾವಳಿಯಲ್ಲಿ ೫೫ ನುಡಿಗಳಿವೆ. ಇದರ ಕರ್ತೃ ಚೆನ್ನಕವಿ ವೀರಶೈವ.

ಕೆಲವು ವೀರಶೈವ ಕೃತಿಗಳು

ರಾಜಶೇಖರ ವಿಳಾಸ

ಷಡಕ್ಷರದೇವನ 'ರಾಜಶೇಖರ ವಿಳಾಸ'ದಲ್ಲಿ ಶಿವನ ಪಂಚವಿಂಶತಿ ಲೀಲೆಗಳ ಪ್ರಸ್ತಾಪವಿದೆ. ಆ ಸಂದರ್ಭದಲ್ಲಿ ಕವಿ ಶಿವನ ವಿವಾಹ ಮತ್ತು ಕಾಮದಹನವನ್ನು ಕುರಿತು ಉಲ್ಲೇಖಿಸುತ್ತಾನೆ. ಒಂದು ಪದ್ಯ ಮತ್ತು ಇನ್ನೊಂದು ಪದ್ಯಭಾಗದಲ್ಲಿ ಇವು ಉಪಲಬ್ಧವಾಗುತ್ತವೆ (೩-೯೦, ೯೨)

ಪದ್ಮರಾಜ ಪುರಾಣ

ಪದ್ಮಣಾಂಕ ಕವಿಯ 'ಪದ್ಮರಾಜ ಪುರಾಣ'ದಲ್ಲಿ ವಿಷ್ಣುವನ್ನು ನಿಂದಿಸಿ ಶಿವನನ್ನು ಅತಿಶಯಿಸುವ ಪ್ರಸಂಗವಿದೆ. ಆ ಸಂದರ್ಭದಲ್ಲಿ ಕವಿ ಶಿವನ ವೈಶಿಷ್ಟ್ಯಗಳನ್ನು ಒಂದೊಂದಾಗಿ ವರ್ಣಿಸುತ್ತಾನೆ. ಆಗ ಅಲ್ಲಲ್ಲಿ ಶಿವನ ವಿವಾಹಕ್ಕೆ ಸಂಬಂಧಿಸಿದ ಅಂಶಗಳನ್ನು ನಿರೂಪಿಸುತ್ತಾನೆ. ಆದರೆ ನೇರವಾಗಿ ವಿವಾಹದ ಪ್ರಸ್ತಾಪವಿಲ್ಲ. ತಾರಕ ಸಂಹಾರ (೧೦-೨೪೪) ಮದನ ದಹನ (೧೧-೬೭) ಇತ್ಯಾದಿ ಅಂಶಗಳಿವೆ. ಮನ್ಮಥನನ್ನು ಶಿವನ ತಪೋಭಂಗಕ್ಕೆ ಕಳುಹಿಸುವಲ್ಲಿ ವಿಷ್ಣುವನ್ನು ಆಯ್ಕೆ ಮಾಡಿದ್ದು ಹರಿಹರನ 'ಗಿರಿಜಾಕಲ್ಯಾಣ'ಕ್ಕೆ ಸದೃಶವಾಗಿದ್ದರೂ ವಿಷ್ಣುವನ್ನು ನಿಂದಿಸುವುದೇ ಉದ್ದೇಶವಾಗಿ ಕವಿ ಈ ವಿಚಾರವನ್ನು ಬಳಸಿಕೊಂಡಿದ್ದಾನೆ. (೧೧-೬೭)

ಪಂಪಾಸ್ಥಾನ ವರ್ಣನಂ

ಅಷ್ಟಭಾಷಾ ಕವಿಯೆಂದು ಪ್ರಸಿದ್ಧವಾದ ಚಂದ್ರಶೇಖರ ಎಂಬವನಿಂದ ರಚಿತವಾದ ಈ ಕೃತಿಯಲ್ಲಿ ಮದನದಹನದ ಪ್ರಸ್ತಾಪ ಮಾತ್ರವಿದೆ. (ಪ. ೫೩)

ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ

ಶಾಂತಲಿಂಗ ದೇಶಿಕನ 'ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ' ಕೃತಿಯ ಮೊದಲನೆಯ ಸಂಧಿಯಲ್ಲಿ 'ಮನ್ಮಥ ದಹನ' (ಪು. ೧೮) ಹಾಗೂ 'ಗಿರಿಜಾ ಕಲ್ಯಾಣ' (ಪು. ೧೯೭ರಿಂದ ೧೯೯) ದಪ್ರಸಂಗಗಳಿವೆ. ಈತನಿಗೆ ಶೈವಕಥಾ ಪ್ರಸಂಗಗಳಿಗೆ ವಿವರಣೆ ನೀಡುವುದೇ ಪ್ರಧಾನ ಉದ್ದೇಶವಾಗಿರುವುದರಿಂದ ನಿರೂಪಣೆ ಭಿನ್ನವಾಗಿದೆ. ಈಶ್ವರನಿಗೆ 'ಕಾಮಮದಪ್ರಹಾರಿ' ಎಂಬ ಹೆಸರಿರುವುದಕ್ಕೆ ಕಾರಣವನ್ನು ನೀಡುವಲ್ಲಿ ಮದನದಹನವನ್ನು ವರ್ಣಿಸುತ್ತಾನೆ. ಇಲ್ಲಿನ ಗಿರಿಜಾ ಕಲ್ಯಾಣದ ವಿವರಗಳು ಹರಿಹರನ 'ಗಿರಿಜಾಕಲ್ಯಾಣ'ದ ಯಥಾಪ್ರತಿಯಾಗಿದೆ.

ಚೆನ್ನ ಬಸವಪುರಾಣ

ವಿರೂಪಾಕ್ಷ ಪಂಡಿತನ 'ಚೆನ್ನ ಬಸವಪುರಾಣ'ದ ನಾಲ್ಕು ಸಂಧಿಗಳು (೩೪ರಿಂದ ೩೭) ಗಿರಿಜೆಯ ಕಲ್ಯಾಣಕ್ಕೆ ಮೀಸಲಾಗಿವೆ. ೧೯೭ ವಾರ್ಧಕ ಷಟ್ಪದಿಗಳಲ್ಲಿ ನಿರೂಪಿತವಾಗಿರುವ ಈ ಪ್ರಸಂಗ ಕೆಲವೇ ಕೆಲವು ಅಂಶಗಳನ್ನು ಹೊರತುಪಡಿಸಿದರೆ ಆದ್ಯಂತವಾಗಿ ಹರಿಹರನ 'ಗಿರಿಜಾಕಲ್ಯಾಣ'ವನ್ನು ಹೋಲುತ್ತದೆ.

ಇದರಲ್ಲಿ ಮೇನೆಯ ಪುತ್ರೀದೋಹಳವಿಲ್ಲ. ಮೈನಾಕ ಪಾರ್ವತಿಯ ತಮ್ಮ. (೨–೫) ನಾರದ ನಗರದಲ್ಲಿ ಉಳಿಯದೆ ಅದೇ ದಿನ ಕೈಲಾಸಾಭಿಮುಖನಾಗುತ್ತಾನೆ. (೩೪–೧೨) ಪಾರ್ವತಿಯ ಶಿವಪೂಜೆ (೩೪–೩೧) ಕುಮಾರಸಂಭವವನ್ನು ಹೋಲುತ್ತದೆ. (ಕು. ಸಂ. ೧–೬೦) ತಾರಕನಿಗೆ ವರವೀಯುವಲ್ಲಿ ಈಶ್ವರನ ಪ್ರೇರಣೆ, ಮನ್ಮಥನನ್ನು ಒಪ್ಪಿಸುವಲ್ಲಿ ವಿಷ್ಣುವಿನ ಅನುಮತಿ (೩೪–೩೮) 'ಗಿರಿಜಾಕಲ್ಯಾಣ'ದಲ್ಲಿಲ್ಲದ ವಿಚಾರ. ಹರಿಹರ ಚಿತ್ರಿಸಿದ ಮನ್ಮಥನಿಗಿಂತ ಇಲ್ಲಿನ ಮನ್ಮಥ ಹೆಚ್ಚು ತ್ಯಾಗಮೂರ್ತಿಯಾಗಿದ್ದಾನೆ. ಭಕ್ತಿಭಾವದ ಸನ್ನಿವೇಶಗಳಿದ್ದರೂ ಭಕ್ತಿಯ ಆವೇಶವಿಲ್ಲ. ಮೂಲಕ್ಕಿಂತ ಹೆಚ್ಚಿನ ಔಚಿತ್ಯದೃಷ್ಟಿಯಿದೆ.

ಮನ್ಮಥ ದಹನದ ಬಳಿಕ ಈಶ್ವರ ಪಾರ್ವತಿಯನ್ನು 'ನೋಡಿ', 'ನುಡಿಯಿಸದೆ' ಅಂತರ್ಧಾನನಾದನೆನ್ನುವುದರಲ್ಲಿ (೩೫–೨೨) 'ಗಿರಿಜಾಕಲ್ಯಾಣ'ದ ಅನುಕರಣೆಯಿದ್ದರೂ ಅಲ್ಲಿನ 'ನೋಡದೆ', 'ನುಡಿಯಿಸದೆ' ಎಂಬ ಮಾತುಗಳ ಒಳಾರ್ಥವನ್ನು ಕವಿ ಗ್ರಹಿಸಿಲ್ಲವೆನಿಸುತ್ತದೆ.

ರತಿಯ ವಿಲಾಪ ನಾಗಚಂದ್ರ ಕವಿಯ 'ರಾಮಚಂದ್ರಚರಿತ ಪುರಾಣ'ದ ಶ್ರೀರಾಮ ವಿಲಾಪವನ್ನು ನೆನಪಿಸುವಂತಿದ್ದು ಸರ್ವಜೀವರಾಶಿಗಳಲ್ಲಿ ಭಗವಂತನನ್ನು ದರ್ಶಿಸುವ ಭಕ್ತಿಭಾವಕ್ಕೆ ಪೂರಕವಾಗಿದೆ. (೩೫–೩೩) ಇಲ್ಲಿ ರತಿಯೇ ಪಾರ್ವತಿಯಲ್ಲಿ ಪತಿಭಿಕ್ಷೆಯನ್ನು ಯಾಚಿಸುತ್ತಾಳೆ.

ಇಲ್ಲಿ ತಪಸ್ಸು ಮಾಡುವ ಪಾರ್ವತಿಯ ಮೇಲೆ ಕೃಪೆಯಿಟ್ಟು ಈಶ್ವರ ಬರುತ್ತಾನೆ. ಆದರೆ ಪ್ರಶ್ನೋತ್ತರಗಳು ತುಂಬ ನೀರಸವಾಗಿವೆ. (೩೬–೭)

ಪ್ರತ್ಯಕ್ಷನಾದ ಶಿವನನ್ನು ನೋಡಿ ಪಾರ್ವತಿ ಸ್ತುತಿಸುತ್ತಾಳೆ. (೩೬–೯) ಅರಮನೆಗೆ ಹಿಂತಿರುಗಿದ ಅವಳನ್ನು ಹೆತ್ತವರು ಪರಶಕ್ತಿಯೆಂಬ ಭಕ್ತಿಯಿಂದ ಆರಾಧಿಸುತ್ತಾರೆ. (೩೬–೧೯) ಪತಿಗೃಹಕ್ಕೆ ಹೊರಟ ಪಾರ್ವತಿಯನ್ನು ಬೀಳ್ಕೊಡುವಾಗ ಅವರಾಡುವ ಮಾತುಗಳೂ ಇದಕ್ಕೆ ಪೂರಕವಾಗಿವೆ.

ಒಟ್ಟಿನಲ್ಲಿ ಈ ಕೃತಿಯ ವಿವರಗಳು ಗಿರಿಜಾಕಲ್ಯಾಣಕ್ಕೆ ನಿಷ್ಠವಾಗಿವೆ. ಆದರೆ ಕವಿಗೆ ಗಿರಿಜೆಯ ವಿವಾಹವನ್ನು ಬರೆಯುವುದು ಪ್ರಧಾನ ಉದ್ದೇಶವಲ್ಲ.

ವೀರಶೈವಾಮೃತ ಪುರಾಣ

ಗುಬ್ಬಿಯ ಮಲ್ಲಣಾರ್ಯನ 'ವೀರಶೈವಾಮೃತ ಪುರಾಣ'ದಲ್ಲಿ ಗಿರಿಜೆಯ ವಿವಾಹದ ಕಥಾಭಾಗವಿದೆ. (ಕಾಂಡ ೨, ಸಂಧಿ ೧) ಇದಕ್ಕೆ ಮೂಲ ಆದಿತ್ಯಪುರಾಣವೆಂದು ಕವಿ ಹೇಳಿದರೂ ಇಲ್ಲಿನ ಪ್ರತಿಯೊಂದು ವಿವರವೂ ಚಾಚೂ ತಪ್ಪದೆ ಹರಿಹರನ 'ಗಿರಿಜಾ ಕಲ್ಯಾಣ'ವನ್ನೇ ಅನುಸರಿಸಿದೆ.

ಇದರಲ್ಲಿ ಕಾಮದಹನದ ಭಾಗವೂ ಇದ್ದು ಅದಕ್ಕೂ ಮೂಲ ಆದಿತ್ಯಪುರಾಣ ವೆನ್ನುತ್ತಾನೆ ಕವಿ. (ಕಾಂಡ ೨, ಸಂಧಿ ೪) ಈ ಭಾಗ ಹರಿಹರನ 'ಗಿರಿಜಾಕಲ್ಯಾಣ' ಭಾಗಕ್ಕಿಂತ ದೀರ್ಘವಾಗಿದ್ದು ಕತೆ, ಸನ್ನಿವೇಶ, ಸಂಭಾಷಣೆ, ವರ್ಣನೆಗಳೆಲ್ಲ 'ಗಿರಿಜಾಕಲ್ಯಾಣ'ಕ್ಕೆ ಸಂಪೂರ್ಣ ಋಣಿಯಾಗಿವೆ.

ಶಿವತತ್ವ ಚಿಂತಾಮಣಿ

ಲಕ್ಕಣದಂಡೇಶನ 'ಶಿವತತ್ವಚಿಂತಾಮಣಿ'ಯ ೧೪ ಮತ್ತು ೧೫ನೆಯ ಸಂಧಿಗಳಲ್ಲಿ ಗಿರಿಜಾಕಲ್ಯಾಣ ಮತ್ತು ಕಾಮದಹನದ ಕಥಾಭಾಗಗಳಿವೆ. ಕೃತಿಗೆ ಆಕರವಾಗಿ ಕವಿ ಆದಿತ್ಯಪುರಾಣವನ್ನೇ ಹೆಸರಿಸಿದರೂ ಸನ್ನಿವೇಶ, ಸಂಭಾಷಣೆಗಳಲ್ಲಿ ಹರಿಹರನ 'ಗಿರಿಜಾಕಲ್ಯಾಣ'ದ ಅನುಕರಣೆಯಿದೆ. ಕೆಲವೆಡೆ 'ಕುಮಾರಸಂಭವ'ದ ಛಾಯೆಯೂ ಕಾಣಿಸುತ್ತದೆ. ಎರಡರಿಂದ ಬೇರೆಯಾದ ಅಂಶಗಳೂ ಇವೆ.

ಇಲ್ಲಿ ಮೇನೆಯ ಪುತ್ರೀದೋಹಳವಾಗಲೀ ತಪಸ್ಸಾಗಲೀ ಇಲ್ಲ. ಹಿಮವಂತನೇ ತಪಸ್ಸು ಮಾಡಿ ಮಗಳನ್ನು ಪಡೆಯುತ್ತಾನೆ. (೧೪-೨)

ಇಲ್ಲಿ ಪಾರ್ವತಿ ಶಿಶುವಾಗಿರುವಾಗಲೇ ನಾರದನ ಆಗಮನವಾಗುತ್ತದೆ. ನಾರದ ಅದೇ ದಿನ ಹಿಂತಿರುಗುತ್ತಾನೆ. ಉಳಿದ ವಿವರಗಳು ಹರಿಹರನ ಗಿರಿಜಾಕಲ್ಯಾಣಕ್ಕೆ ಸಂವಾದಿಯಾಗಿವೆ. (೧೪-೧೦)

ಹಿಮಾಲಯದಲ್ಲಿ ತಪಸ್ಸು ಮಾಡುವ ಶಿವನನ್ನು ಪೂಜಿಸಲು ಬರುವ ಪಾರ್ವತಿ 'ಪರಿದಾಡುತ್ತಿರ್ಪ ಶಿಶು'ವಾಗಿರುತ್ತಾಳೆ. ಇದು ಯಾವುದೇ ಕಾವ್ಯ, ಪುರಾಣಗಳಲ್ಲಿ ಕಾಣಸಿಗದ ವಿಶೇಷ ಕಲ್ಪನೆ.(೧೪-೧೪)

ತಾರಕ ವೃತ್ತಾಂತ ಸ್ವಲ್ಪಮಟ್ಟಿಗೆ 'ಕುಮಾರಸಂಭವ'ವನ್ನು ಹೋಲುತ್ತದೆ. (೧೪-೧೬) ಬ್ರಹ್ಮನ ಮೂಲಕ ತಾರಕ ಪ್ರಸಂಗವನ್ನು ವಿವರಿಸುವ ಕವಿ ಶಿವನಿಗೆ ಪ್ರಾಧಾನ್ಯವಿತ್ತಿರುವುದು ಗಮನಾರ್ಹ(೧೪-೨೧)

ಇಂದ್ರ ಮತ್ತು ಮನ್ಮಥ ಭೇಟಿಯನ್ನು ಯೋಜಿಸಿದ ಹಿನ್ನೆಲೆಯಲ್ಲಿ 'ಕುಮಾರಸಂಭವ'ಕ್ಕೆ ಕವಿನಿಷ್ಠನಾಗಿರುವುದುಸ್ಪಷ್ಟವಾಗುತ್ತದೆ. ಇಲ್ಲಿಮನ್ಮಥ ಓರ್ವ ಸೇವಕನಂತೆಯೇ ವರ್ತಿಸುತ್ತಾನೆ. ಆದರೆ ಈ ಕವಿ ಹರಿಹರನ 'ಗಿರಿಜಾಕಲ್ಯಾಣ'ಕ್ಕೂ ಋಣಿಯಾಗಿದ್ದಾನೆಂಬುದಕ್ಕೆ ಮನ್ಮಥನ ಆತ್ಮಬಲಿದಾನದ ನಿರ್ಧಾರವನ್ನು ಗಮನಿಸಬೇಕು.(೧೪-೨೯) ಮಾತ್ರವಲ್ಲ ಸಂಭಾಷಣೆ, ವಿವರಣೆಗಳೂ'ಗಿರಿಜಾಕಲ್ಯಾಣ'ಕ್ಕೆ ತುಲ್ಯವಾಗಿವೆ. (೧೪-೩೮)

ಮನ್ಮಥ ಪಾರ್ವತಿಯನ್ನು ಭೇಟಿಯಾಗುವ ಸನ್ನಿವೇಶ 'ಗಿರಿಜಾಕಲ್ಯಾಣ'ಕ್ಕೆ ಸದೃಶವಾಗಿದ್ದರೂ ಇಲ್ಲಿ ಮನ್ಮಥನನ್ನು ಪ್ರಶ್ನಿಸುವವಳು ಪಾರ್ವತಿ. (೧೪-೪೭) ಉಳಿದ ವಿಚಾರಗಳು ಸಮಾನವಾಗಿದ್ದರೂ ಪಾರ್ವತಿ ಮನ್ಮಥನನ್ನು ಶಿವನಾಶ್ರಮದೊಳಗೆ ಸೇರಿಸಿದ ಬಳಿಕ ಹಿಂತಿರುಗುವುದಿಲ್ಲ.

ಮನ್ಮಥ ದಹನದ ಬಳಿಕ ಶಿವನು ಪಾರ್ವತಿಯನ್ನು ನೋಡದೆ ಮಾಯವಾದುದಕ್ಕೆ ಆಕೆ ಕಾಮನ ಸಹಾಯಿಯಾದುದೇ ಕಾರಣವೆಂಬುದು ಲಕ್ಕಣದಂಡೇಶನ ಕಲ್ಪನೆ. (೧೪-೫೪)ರತಿವಿಲಾಪ ಭಾಗ 'ಗಿರಿಜಾ ಕಲ್ಯಾಣ'ಕ್ಕೂ ಪಾರ್ವತಿಯ ತಪೋನಿರ್ಧಾರದ ಭಾಗ 'ಕುಮಾರಸಂಭವ'ಕ್ಕೂ ನಿಷ್ಠವಾಗಿವೆ.

ಮನೆಗೆ ಹಿಂತಿರುಗಿದ ಪಾರ್ವತಿ ತನ್ನ ತಪೋನಿರ್ಧಾರವನ್ನು ಹೆತ್ತವರಿಗೆ ತಿಳಿಸಿದಾಗ ಅವರು ಸಂತೋಷದಿಂದ ಅವಳನ್ನು ಕಳುಹಿಸುವುದು ಇಲ್ಲಿನ ವಿಶೇಷ. (೧೫-೩) ಪಂಚಾಗ್ನಿಗಳ ಮಧ್ಯೆ ಪಾರ್ವತಿ ತಪಗೈದಳೆಂಬ ಪುರಾಣ, ಕಾವ್ಯಗಳ ಪರಿಕಲ್ಪನೆಯನ್ನು ಒಪ್ಪಿಕೊಂಡರೂ ಪಂಚಾಗ್ನಿಯ ವಿವರಣೆಯನ್ನು ನೀಡಿದ್ದು ಸ್ವಾರಸ್ಯವೂ, ಅರ್ಥಪೂರ್ಣವೂ ಆಗಿದೆ. (೧೫-೫)

ಶಿವಸಾಕ್ಷಾತ್ಕಾರ ಮೊದಲಿನ ವಟು-ಪಾರ್ವತೀ ಸಂವಾದ ಕಾವ್ಯಗಳಿಗಿಂತ ಭಿನ್ನವಾಗಿ ನಿರೂಪಿತವಾಗಿದೆ. ಬಂದ ವಟು ಶಿವನ ಹೆಗ್ಗಳಿಕೆಯನ್ನು ಮಾಡಿ ಅವನು ಪಾರ್ವತಿಯನ್ನು ಒಲಿಯಲಾರನೆನ್ನುವುದೂ ತನ್ನನ್ನೇ ಒಲಿಯೆಂದು ಹೇಳುವುದೂ ಆ ಮಾತಿಗೆ ಕೆರಳಿದ ಪಾರ್ವತಿ ಶಾಪವೀಯಲು ಸಿದ್ಧಳಾಗುವುದೂ ಇಲ್ಲಿನ ಕಲ್ಪನೆ. (೧೫-೧೦, ೧೧)

ಮುಂದಿನ ವಿವರಗಳೆಲ್ಲ ಗಿರಿಜಾಕಲ್ಯಾಣಕ್ಕೆ ಸಂವಾದಿಯಾಗಿದೆ. ಆದರೆ ಮದುಮಗನಾದ ಶಿವ ನಿಜವೇಷದಲ್ಲೇ ತೊಳಗುವುದು ವಿಶೇಷ (೧೫-೨೦)

ಶ್ರೀ ಕುಮಾರ ವಿಜಯವಿಳಾಸಂ

ಕರಿಬಸವಾರ್ಯನೆಂಬ ಕವಿಯ 'ಶ್ರೀ ಕುಮಾರವಿಜಯವಿಳಾಸಂ' (ಕ್ರಿ.ಶ. ಸು. ೧೫೨೭) ಷಣ್ಮುಖನ ವಿಜಯವನ್ನು ಕುರಿತು ವಾರ್ಧಕಷಟ್ಪದಿಯಲ್ಲಿ ರಚಿತವಾದ ಕಾವ್ಯ. ಇದು ೭೫ ಪ್ರಕರಣಗಳ ೩೫೮೩ ಪದ್ಯಗಳ ಬೃಹತ್ ಕಾವ್ಯ. ಸ್ಕಂದ ಪುರಾಣಾಂತರ್ಗತ ಷಣ್ಮುಖ ವಿಜಯ ಇದರ ಕಥಾವಸ್ತು.

ಕಾವ್ಯದ ಪೂರ್ವಭಾಗದಲ್ಲಿ ಕುಮಾರ ಜನನಕ್ಕೆ ಹಿನ್ನೆಲೆಯಾಗಿ ಗಿರಿಜೆಯ ವಿವಾಹ ಕತೆ ಸುದೀರ್ಘವಾಗಿದೆ. ಇಡೀ ಕಾವ್ಯದ ಐದನೆಯ ಒಂದು ಭಾಗದಷ್ಟು ಭಾಗ ಇದಕ್ಕೆ ಮೀಸಲಾಗಿದೆ. ೧೪ ಪ್ರಕರಣಗಳಲ್ಲಿ ೭೦೪ ಪದ್ಯಗಳಲ್ಲಿ ವಿವಾಹಪ್ರಸಂಗ ಹರಡಿದೆ. ಈತನಿಗೆ ಪುರಾಣಗಳೇ ಆಕರಗಳಾಗಿರುವುದರಿಂದ 'ಗಿರಿಜಾ ಕಲ್ಯಾಣ'ಕ್ಕಾಗಲೀ 'ಕುಮಾರಸಂಭವ'ಕ್ಕಾಗಲೀ ಹೆಚ್ಚು ಋಣಿಯಾಗಿಲ್ಲ.

ಕಾವ್ಯಕ್ಕಿಂತ ಕತೆ ಹೇಳುವುದೇ ಕವಿಯ ಉದ್ದೇಶವಾಗಿದ್ದು ವಿವರಗಳು ಸರಸರನೆ ಸಾಗುತ್ತವೆ.ಕವಿ ಕಾವ್ಯಧರ್ಮದ ಯಾವುದೇ ಕಟ್ಟುಪಾಡಿಗೂ ಬದ್ಧನಾಗಿಲ್ಲದಿರುವುದರಿಂದ ಅಷ್ಟಾದಶ ವರ್ಣನೆಗಳನ್ನು ಪೂರ್ತಿ ಕೈಬಿಟ್ಟಿದ್ದಾನೆ.

ಕಥಾನಿರೂಪಣೆ ಪುರಾಣಗಳಿಗೆ ನಿಷ್ಠವಾಗಿದ್ದರೂ ಹೊಸ ಕಲ್ಪಕತೆಯೂ ಇಲ್ಲದಿಲ್ಲ. ದಕ್ಷಾಧ್ವರ ಪ್ರಸಂಗದಲ್ಲಿ ಅವಮಾನಿತಳಾದ ದಾಕ್ಷಾಯಿಣಿ ಶಿವನ ಬಳಿಗೇ ವಾಪಸ್ಸಾಗುತ್ತಾಳೆ.

ತಾನನ್ನು ದಕ್ಷನ ಮಗಳೆಂದು ಕರೆಸಿಕೊಳ್ಳಲಾರೆನೆಂದು ನೊಂದು ನುಡಿದ ಮಡದಿಯನ್ನು ಶಿವನೇ ಸಂತೈಸಿ ಹಿಮವಂತನ ಮಗಳಾಗೆಂದು ಸಲಹೆ ನೀಡುತ್ತಾನೆ. (೩-೧೧) ಅದೇ ಕಾಲದಲ್ಲಿ ಮಗಳಿಗಾಗಿ ಹಂಬಲಿಸಿ ಹಿಮವಂತ ದಂಪತಿಗಳು ತಪಸ್ಸು ಮಾಡುತ್ತಾರೆ. ಅವರಿಗೆ ಸತಿ ಮಗುವಾಗಿ ಗೋಚರಿಸುತ್ತಾಳೆ. ಇದು ಎಲ್ಲೂ ಇಲ್ಲದ ಕಲ್ಪನೆ. ಬ್ರಹ್ಮ, ವಿಷ್ಣು, ದೇವೇಂದ್ರಾದಿಗಳು ಸಪತ್ನೀಕರಾಗಿ ಬಂದು ಉತ್ಸವವಾಚರಿಸಿ ಹಿಂತಿರುಗುತ್ತಾರೆ. (೩-೨೦) ಶಿಶು ಜಗನ್ಮಾತೆಯಾಗಿ ಕಾಣುವ ಶಿವಪುರಾಣದ ಹೇಳಿಕೆ ಇಲ್ಲಿ ಸಾಕ್ಷಾತ್ಕಾರಗೊಂಡಿದೆ. ವಿವರಗಳಲ್ಲಿ ಕವಿ ಶಿವಪುರಾಣವನ್ನೇ ಅನುಸರಿಸಿದ್ದಾನೆ.

ಮನ್ಮಥನನ್ನು ಶಿವ ತಪೋಭಂಗ ಕಾರ್ಯಕ್ಕೆ ನೇಮಿಸುವಲ್ಲಿ ಬ್ರಹ್ಮ, ವಿಷ್ಣು ಎಲ್ಲರೂ ಒಂದಾಗುತ್ತಾರೆ. ಬ್ರಹ್ಮನ ಉಪದೇಶಗಳು ಲೋಕಾನುಭವ, ಲೋಕಾದರ್ಶಗಳ ಅತ್ಯುತ್ತಮ ಸಂದೇಶದಂತಿವೆ. (೬-೨೮) ಮನ್ಮಥ ಯಾರ ಮಾತಿಗೂ ಒಪ್ಪದಿರುವುದೂ ಕೋಪಾವೇಶದಿಂದ ಬ್ರಹ್ಮ ಶಾಪಕೊಡಲು ಮುಂದಾಗುವುದೂ ಅನಿವಾರ್ಯವಾಗಿ ಮನ್ಮಥ ಒಡಂಬಡುವುದೂ ಕವಿಯ ಸ್ವಂತಿಕೆಯನ್ನು ಸಾಬೀತುಪಡಿಸುತ್ತವೆ. ಮನ್ಮಥನ ಆತ್ಮತ್ಯಾಗದ ತೀರ್ಮಾನದಲ್ಲಿ ಕವಿ ತನ್ನ ಶಿವಭಕ್ತಿಯನ್ನು ಅಭಿವ್ಯಕ್ತಿಸುತ್ತಾನೆ. (೬-೪೧)

ನಂದಿಯಿಂದ ಮನ್ಮಥ ಸೈನ್ಯಕ್ಕೆ ತಡೆಯುಂಟಾಗುವುದು ಎಲ್ಲ ಕಾವ್ಯಪುರಾಣಗಳ ಹೇಳಿಕೆಯಾದರೂ ಇಲ್ಲಿ ಮನ್ಮಥ ನಂದಿಯನ್ನೇ ಒಪ್ಪಿಸಿ ಕಾರ್ಯೋನ್ಮುಖನಾಗುವುದು ವಿಶಿಷ್ಟವಾಗಿದೆ. ಈ ಭಾಗದಲ್ಲಿ ಪಾರ್ವತಿಯ ಉಪಸ್ಥಿತಿಯೇ ಇರುವುದಿಲ್ಲ. ಅವಳು ಶೈಶವದಲ್ಲೇ ಘೋರಕಾನನವನ್ನು ಸೇರಿ ಶಿವನಿಗಾಗಿ ತಪಸ್ಸು ಮಾಡುತ್ತಿದ್ದಳೆಂದು ತಿಳಿಸಿ ಕವಿ ತನ್ನ ಪುರಾಣದೃಷ್ಟಿಯನ್ನು ಸಮರ್ಥಿಸುತ್ತಾನೆ.

ಮನ್ಮಥದಹನದ ಬಳಿಕವೂ ಶಿವನು ಅಲ್ಲೇ ಸಮಾಧಿನಿಷ್ಠನಾಗಿರುವುದು ಅತ್ಯಂತ ನೂತನವೂ ಉಚಿತವೂ ಆದ ಕಲ್ಪನೆ. 'ಕುಮಾರಸಂಭವ'ದ ಶಿವ ಪಾತ್ರದ ನ್ಯೂನತೆಯೊಂದನ್ನು ಕವಿ ಇಲ್ಲಿ ಅಮೋಘವಾಗಿ ಪರಿಹರಿಸಿದ್ದಾನೆ.

ಮುಂದಿನ ಘಟನೆಗಳೆಲ್ಲ ಶಿವಪುರಾಣಕ್ಕೆ ಸದೃಶವಾಗಿದೆ. ವಟು-ಪಾರ್ವತೀ ಸಂವಾದ ಭಾಗದಲ್ಲಿ ಕಾವ್ಯಸೌಂದರ್ಯವಿದೆ. (೮-೪೦) ಸನ್ನಿವೇಶಗಳಲ್ಲಿ ಸ್ವಲ್ಪ ಮಟ್ಟಿಗೆ 'ಕುಮಾರಸಂಭವ'ವನ್ನು ಅನುಸರಿಸಿದೆ (೯-೧೬) ವಟು ತನ್ನನ್ನು ವರಿಸೆಂದು ಪಾರ್ವತಿಯನ್ನು ಅನುನಯಿಸುವುದರಲ್ಲಿ ಪುರಾಣ ಕಲ್ಪನೆಯಿದ್ದರೂ (೯-೩೧) ಪಾರ್ವತಿ ಅಲ್ಲಿಂದೆದ್ದು ಹೊರಡುವ ದೃಶ್ಯ 'ಕುಮಾರ ಸಂಭವವನ್ನು ಹೋಲುತ್ತದೆ. (೯-೩೭) ಸಾಕ್ಷಾತ್ಕಾರದ ಬಳಿಕ ಶಿವನನ್ನು ಕನ್ಯಾರ್ಥಿಯಾಗಲು ಪಾರ್ವತಿ ಹೇಳಿದಳೆಂದು ಪುರಾಣ, ಕಾವ್ಯಗಳಲ್ಲಿದ್ದರೆ ಇಲ್ಲಿ ಶಿವನೇ ಹೇಳುತ್ತಾನೆ. (೯-೪೪)

ಈ ಕವಿ ಹರಿಹರನ 'ಗಿರಿಜಾಕಲ್ಯಾಣ'ವನ್ನು ಓದಿ ಅಲ್ಪಸ್ವಲ್ಪ ಪ್ರಭಾವಿತನಾಗಿದ್ದರೂ ಬಹು ಅಂಶಗಳಲ್ಲಿ 'ಶಿವಪುರಾಣ'ಕ್ಕೆ ಕೆಲವಂಶಗಳಲ್ಲಿ 'ಕುಮಾರಸಂಭವ'ಕ್ಕೆ ಋಣಿಯಾಗಿದ್ದಾನೆ.

ಕೆಲವು ವೀರಶೈವೇತರ ಕೃತಿಗಳು

ಮೋಹನತರಂಗಿಣಿ

ಕನಕದಾಸರ 'ಮೋಹನತರಂಗಿಣಿ'ಯಲ್ಲಿ ಕಾಮದಹನ ಮತ್ತು ರತಿವಿಲಾಪ ಪ್ರಸಂಗಗಳಿವೆ. ಇವುಗಳಿಗೆ ಸ್ಕಂದಪುರಾಣ ಆಕರವಾದರೂ ಕೆಲವಂಶಗಳಲ್ಲಿ 'ಗಿರಿಜಾಕಲ್ಯಾಣ'ದೊಂದಿಗೆ ಹೋಲಿಕೆಯಿದೆ.

ಮನ್ಮಥನನ್ನು ಆಹ್ವಾನಿಸಲು ಬಂದಾತ ಗಿರಿಜಾಕಲ್ಯಾಣದಂತೆ ಬೃಹಸ್ಪತಿಯೇ ಆದರೂ ಆತ ಗಿರಿಜಾ ಕಲ್ಯಾಣದ ಬೃಹಸ್ಪತಿಗಿಂತ ವಿವೇಕಿಯೂ ಜವಾಬ್ದಾರಿಯುತನೂ ಆಗಿ ಕಾಣಿಸುತ್ತಾನೆ. ಮನ್ಮಥನಿಗೆ ಕಾರ್ಯಭಾರವನ್ನು ತಿಳಿಸುವವನೂ ಅವನೇ.

ಶಿವನಾಶ್ರಮದಲ್ಲಿ ಮನ್ಮಥನ ವ್ಯರ್ಥಪ್ರಯತ್ನವನ್ನು ಪಾರ್ವತಿ ಮೊದಲು ತಡೆಯುತ್ತಾಳೆ. (೩–೪೪) ಆದರೆ ಆತನ ಘನ ಉದ್ದೇಶಕ್ಕೆ ಕನಿಕರಿಸಿ ಸಹಾಯ ಮಾಡುತ್ತಾಳೆ. (೩–೪೬) ಪತಿವಿಹೀನೆಯಾದ ರತಿಗೆ ಆಶ್ವಾಸನೆಯನ್ನು ನೀಡಬೇಕೆಂದು ಪಾರ್ವತಿ ಶಿವನನ್ನೇ ಒಡಂಬಡಿಸುತ್ತಾಳೆನ್ನುವುದು ಇಲ್ಲಿನ ವೈಶಿಷ್ಟ್ಯ. (೩–೬೭)

ಕವಿಗೆ ಇಲ್ಲಿ ಶಿವಪಾರ್ವತಿಯರ ವಿವಾಹ ಕತೆಯನ್ನು ಹೇಳುವುದು ಉದ್ದೇಶವಲ್ಲ. ರತೀ ಮನ್ಮಥರ ಕತೆಗೆ ಉಪಷ್ಟಂಭಕವಾಗಿ ಮನ್ಮಥನ ಜನ್ಮಾಂತರದ ಕಥಾನಕಗಳು ಬಂದಿದ್ದು ಮನ್ಮಥ ದಹನ ಪೂರಕ ಕಥಾನಕವಾಗಿ ಮುಖ್ಯವಾಗುತ್ತದೆ.

ಕಬ್ಬಿಗರ ಕಾವಂ

ಆಂಡಯ್ಯನ 'ಕಬ್ಬಿಗರ ಕಾವ'ಕೃತಿ ಮನ್ಮಥ ವಿಜಯದ ಕಥಾನಕ. ಕವಿ ಜೈನನಾಗಿದ್ದು ಶಿವನನ್ನೇ ಅಲ್ಲಗಳೆಯುವ ಸಂದರ್ಭವನ್ನು ಸೃಷ್ಟಿಸಿಕೊಂಡು ಮನ್ಮಥ ವಿಜಯ, ಶಿವತಪೋಭಂಗಗಳನ್ನು ತನ್ನ ಕೃತಿಯೊಳಗೆ ಹೆಣೆದಿದ್ದಾನೆ. ಇದರಲ್ಲಿ ಮನ್ಮಥ ಈಶ್ವರನನ್ನು ಎದುರಿಸಿ ತಾನು ಸೋಲದೆ ಈಶ್ವರನನ್ನೇ ಸೋಲಿಸಿ ಅರೆವೆಣ್ಣಾಗಿಸುತ್ತಾನೆ. ಶಿವನ ಅರ್ಧನಾರೀಶ್ವರ ಕಲ್ಪನೆಯನ್ನು ತನ್ನ ಮತೀಯ ಹೆಗ್ಗಳಿಕೆಗಾಗಿ ಬಳಸಿಕೊಂಡುದು ಕುತೂಹಲಕಾರಿಯಾಗಿದೆ.

ಲೀಲಾವತಿ

ನೇಮಿಚಂದ್ರನ 'ಲೀಲಾವತಿ' ಕಾವ್ಯದಲ್ಲಿ ಈಶ್ವರನನ್ನು ಅರೆವೆಣ್ಣಾಗಿಸುವ ಕಬ್ಬಿಗರ ಕಾವದ ಭಾವದ ವಿಸ್ತೃತ ಪರಿಕಲ್ಪನೆಯಿರುವ ಪದ್ಯಭಾಗವೊಂದು ಗೋಚರಿಸುತ್ತದೆ. ಇಲ್ಲಿ ಶಿವವಿರೋಧೀ ನಿಲವು ಹೇಗೆ ಮೂರ್ತಗೊಂಡಿದೆ ಎಂಬುದನ್ನು ಪರಿಭಾವಿಸಬಹುದು:

ಪೂಸುವ ಬೂದಿಗಂಗಭವನಂ ಭವಸಾರನನಾರ್ದು ಸುಟ್ಟ ಭೂ
ತೇಶನ ಬುದ್ಧಿಗುದ್ದವರಿದಾಂ ಪೊಗಳೆಂ ಪೊಗಳೆಂ ಮನೋಜನಂ
ಕೇಸುರಿಯಂತೆ ಪೆರ್ಚಿ ಪಟುವಾಗಿ ಪೊದಳ್ದಳುರ್ದಂತರಂಗಮಂ
ಕಾಸಿ ಕಪಾಲಿಯಂ ಪಿಡಿದೊರಲ್ದರೆವೆಣ್ಣನಂ ಮಾಡಿಬಿಟ್ಟನಂ(೧–೮೫)

ಮಲ್ಲಿನಾಥ ಪುರಾಣ

ನಾಗಚಂದ್ರನ 'ಮಲ್ಲಿನಾಥ ಪುರಾಣ'ದ ಒಂದು ಭಾಗದಲ್ಲಿ 'ಆ ವೇಶ್ಯಾವಾಟದೊಳ್ ಧೂರ್ಜಟಿಯ ನೊಸಲಕಣ್ಣಿಂ ಸ್ಮರಂನಂದೆ ಪೊಯ್ದಂ' (೨-೫೬) ಎಂಬ ಪದ್ಯವಿದ್ದು ಅದೂ ಈ ಮೇಲಿನ ಶಿವದ್ವೇಷೀ ಧೋರಣೆಗೆ ಪೂರಕವಾಗುತ್ತದೆ.

ಧರ್ಮಪರೀಕ್ಷೆ

೧೪ನೆಯ ಶತಮಾನದ ವೃತ್ತವಿಲಾಸನೆಂಬ ಕವಿಯ ಜೈನಧಾರ್ಮಿಕ ಚಂಪೂಕಾವ್ಯ 'ಧರ್ಮಪರೀಕ್ಷೆ' ಇದರಲ್ಲಿ ಅನ್ಯಮತವಿಡಂಬನೆಯೇಬಹುಮುಖ್ಯವಾಗಿದೆ. ವೈದಿಕ ಧರ್ಮದ ಲೋಪದೋಷಗಳನ್ನುಹಳಿಯಲು ಕವಿ ಹಲವು ಪುರಾಣ ಗ್ರಂಥಗಳನ್ನು ಎತ್ತಿಕೊಳ್ಳುತ್ತಾನೆ. ಅವುಗಳಲ್ಲಿ ಶಿವಪಾರ್ವತಿಯರ ವಿವಾಹವೂ ಒಂದು. ಆದರೆ ವೃತ್ತವಿಲಾಸನ ಲೇಖನಿ ಅತ್ಯಂತ ವಿಚಿತ್ರವಾಗಿ ಈ ಕಥಾನಕವನ್ನು ನಿರೂಪಿಸಿದೆ.

ಕಥೆಯ ಸಾರಾಂಶ ಇದು:

ಒಂದು ದಿನ ಅಜನು ದೇವಾರಣ್ಯದಲ್ಲಿ ತಿರುಗಾಡುತ್ತ ಅಮೃತರಸಭರಿತವಾದ ಒಂದು ಹಣ್ಣನ್ನು ತಿಂದು ಮನ್ಮಥ ವಿಕಾರದಿಂದ ನದಿಯಾಗಿ ಹರಿಯುತ್ತಾನೆ. ಅದರೊಳಗೆ ಸತಿಯೇ ಮೊದಲಾದ ೩೩ ಕೋಟಿ ದೇವತಾಸ್ತ್ರೀಯರು ಜನಿಸುತ್ತಾರೆ. ಇನ್ನೊಮ್ಮೆ ಅವನಿಗೆ ಮಾಂಸಾಹಾರದ ಆಸೆಯಾಗುತ್ತದೆ. ಯಾಗಗಳನ್ನು ಮಾಡಿದರೆ ಇಷ್ಟಾರ್ಥ ಸಿದ್ಧಿಯಾಗಬಹುದೆಂದು ಯಾಗ ಸನ್ನದ್ಧನಾಗುತ್ತಾನೆ.

ಸಕಲ ದೇವತೆಗಳಿಗೂ ಆಹ್ವಾನ ಹೋಗುತ್ತದೆ. ಎಲ್ಲರೂ ಸಪತ್ನೀಕರಾಗಿ ಬರುತ್ತಾರೆ. ಈಶ್ವರನೂ ಸತಿಯೊಂದಿಗೆ ಸರ್ವ ಶೃಂಗಾರಗೊಂಡು ಅತ್ಯುತ್ಸಾಹದಿಂದ ಬರುತ್ತಾನೆ. ಸತಿಯ ಲಲಾಟ, ಕದಪು, ಕೊರಳು, ಕುಚಯುಗ್ಮಗಳಲ್ಲಿ ನಖಕ್ಷತವಿರುವುದನ್ನು ನೋಡಿ ದೇವತೆಗಳೆಲ್ಲ ನಗುತ್ತಾರೆ. (೩-೪೪) ಬ್ರಹ್ಮನಿಗೆ ಅವಮಾನವಾಗುತ್ತದೆ. ಲಜ್ಜಿತನಾದ ಆತ ಇಬ್ಬರಿಗೂ 'ತಗುಳ್ವೊಂದುಪಾಯ'ವನ್ನು ಆಲೋಚಿಸುತ್ತಾನೆ. ಅದರಂತೆ ಯಾಗಕ್ಕೆ ಬಂದಮಗಳನ್ನೂ ಅಳಿಯನನ್ನೂ ಅವಜ್ಞೆಗೈಯುತ್ತಾನೆ. ಸತಿ ಕೋಪಾವೇಶದಿಂದ ಸಭೆಯನ್ನು ಪ್ರವೇಶಿಸಿ ತಂದೆಯಾದ ಬ್ರಹ್ಮನ ಮೇಲೆ ನಾಲಗೆಯನ್ನು ಕಿತ್ತೆಸೆದು ಹೋಮಕುಂಡದಲ್ಲೇ ಬಿದ್ದು ಬೆಂಕಿಗೆ ಆಹುತಿಯಾಗುತ್ತಾಳೆ. ಪ್ರಾಣವಲ್ಲಭೆಯ ಸಾವನ್ನು ಕಂಡು ಶೂಲಿ ದುಃಖ, ಸಂಕಟಗಳಿಗೆ ತುತ್ತಾಗುತ್ತಾನೆ. ಬ್ರಹ್ಮನ ಮೇಲೆ ರೋಷಭಯಂಕರ ನಾಗಿ 'ಕೋಪಿಸಿ ಹೋಮಕುಂಡ ಶಿಖಿಯಂ ನೆರೆ ನಂದಿಸಿ ತನ್ನ ದೇಹದೊಳ್ ಲೇಪಿಸಿ ಕೊಂಡು ತದ್ಭಸಿತಮೆಲ್ಲಮನಾ ಸತಿಯಸ್ಥಿಯೆಲ್ಲಮಂ ಗೋಪತಿವಾಹನಂ ಶಿಖರಾಂಘ್ರಿ ಸುಕಂಠದೊಳಾಂತುಕೊಂಡು ವಿದ್ರೂಪನೆಯಾಗಿ ಹಾ ಸತಿ ಮಹಾಸತಿ ಯೆನುತುಂ' (೩-೪೬) 'ಅಳಲುತ್ತ, ಬಳಲುತ್ತ, ಕಳವಳಿಸುತ್ತ, ಸುಯ್ಯುತ್ತ, ವಿರಹಾನಳದಿಂ ಬೇಯುತ್ತ' ಅಲ್ಲಿಂದ ಹೊರಡುತ್ತಾನೆ.

ಹೀಗೆ 'ದಿಕ್ಕೆಟ್ಟು, ಕಣ್ಗೆಟ್ಟು, ಬಾಯಂಬಿಟ್ಟು ವಿಕಳನಾಗಿ' ದೇವಾರಣ್ಯಕ್ಕೆ ಬರುವಾಗಮನ್ಮಥ ಅವನನ್ನುನೋಡಿ ರತಿಯೊಡನೆ ಗೇಲಿಮಾಡಿ ನಗುತ್ತಾನೆ. ಅಲ್ಲಿಂದಮುಂದೆಹೋಗಲುಕಾಡಿನ ತಾಪಸರೆಲ್ಲರೂ ಅವಮಾನಿಸುತ್ತಾರೆ. ಶಿವನ ವಿಶೇಷ ಗುಣಗಳನ್ನೆಲ್ಲ ಅವಗುಣಗಳನ್ನಾಗಿ ತುಚ್ಛೀಕರಿಸಿ ಅವಮಾನಿಸಲು ಎಲ್ಲಿಯೂ ನೆಲೆ ಕಾಣದೆ ಹಳವಳಿಸಿ ಹಿಮಾಲಯಕ್ಕೆ ತೆರಳುತ್ತಾನೆ.

ಪರ್ವತಗಳಿಗೆಲ್ಲ ರೆಕ್ಕೆ ಇದ್ದ ಕಾಲವಾಗಿತ್ತದು. ಅವು ಆಹಾರ ಸಾಲದೆ ಅನ್ನಕ್ಕಾಗಿ ದೇವಲೋಕಕ್ಕೆ ಧಾಳಿಯಿಡುತ್ತವೆ. ವನಪಾಲಕರು ದೇವೇಂದ್ರನ ಮುಂದೆ ಹುಯ್ಯಲಿಟ್ಟಾಗ ಆತ ಕೆರಳಿ ಯಮನಂತೆ ಅವುಗಳ ರೆಕ್ಕೆಗಳನ್ನು ತನ್ನ ವಜ್ರಾಯುಧದಿಂದ ಕತ್ತರಿಸಿ ಸಾಗಹಾಕುತ್ತಾನೆ. ರೆಕ್ಕೆ ಕತ್ತರಿಸಿಕೊಂಡು ಅತ್ಯಂತ ದೀನಾವಸ್ಥೆಯಲ್ಲಿದ್ದ ಪುರುಷ ಪರ್ವತವೊಂದು ಮೇನಕೆಯೆಂಬ ಹೆಣ್ಣು ಪರ್ವತದ ಮೇಲೆ ಕೆಡೆದು ಬೀಳುತ್ತದೆ. ಗಿರಿಯುಗ್ಮಗಳ ಸಂಗಮದಿಂದ ಸತಿಯ ಪುನರ್ಜನ್ಮವಾಗುತ್ತದೆ.ಹೀಗೆ ಸತಿ ಪರ್ವತ ಪುತ್ರಿಯಾಗುತ್ತಾಳೆ. ಪರ್ವತಗಳ ಸಮಾಗಮದಿಂದ ಅವತರಿಸಿದುದರಿಂದ ಆಕೆ 'ಕಾಮಾಗ್ನಿ ಪ್ರಬಲೆಯುಂ ಮಹೋಗ್ರರೂಪೆಯುಮಾಗಿ ತತ್ ಕ್ಷಣದೊಳ್ ನವಯೌವನ ಪ್ರಾಪ್ತೆಯುಮಾಗಿ' ಆ ಗಿರಿಯಲ್ಲಿ ಸಂಚರಿಸುತ್ತಿರುವಾಗ ಸತೀವಿರಹದಿಂದ ಬಳಲುತ್ತಿದ್ದ ಪರಮೇಶ್ವರನ ಭೇಟಿಯಾಗುತ್ತದೆ. ಸತಿಯ ದರ್ಶನದಿಂದ ಶಿವ ಪರವಶನಾಗುತ್ತಾನೆ. ಬಳಿಗೆ ಬಂದು 'ನೀನಾರ ತನೂಭವೆಯೇನಿಲ್ಲಿರವೆಂದು ಬೆಸಗೊಳಲ್ಕಿಂತೆಂದಳ್ ನಾನುಮೆಯದ್ರಿತನೂಭವೆ ಭೂನುತನಪ್ಪೊರ್ವ ಪತಿಯಪೇಕ್ಷೆಯೊಳಿರ್ಪೆಂ' (೩-೫೬) ಎಂದುತ್ತರಿಸುತ್ತಾಳೆ. ಆಕೆಯ ಪ್ರತಿಕ್ರಿಯೆಯಿಂದ ಉತ್ತೇಜಿತನಾದ ಪರಶಿವ 'ನಾನೀಶ್ವರಂ ನೀನೆನಗೆವಲ್ಲಭೆಯಾದೊಡೆ ಜಗದ್ವಂದ್ಯೆಯಪ್ಪೆ' ಎಂದು ಹಲವು ಬಗೆಯಲ್ಲಿ ಒಲಿಸಿದಾಗ 'ನಾಂ ಪಿತನುಳ್ಳಸಿಸುವಪ್ಪುದರಿಂ ನೀನೆಮ್ಮ ತಂದೆಯಂ ಬೇಡೆಂತುಂ ಕೊಟ್ಟೊಡೆ ನಿನ್ನವಲ್ಲಭೆಯಪ್ಪೆನ್.' ಎನ್ನುತ್ತಾಳೆ. ಅದಕ್ಕೊಪ್ಪಿದ ಈಶ ಗಿರೀಶನಲ್ಲಿಗೆ ಬರುತ್ತಾನೆ. 'ಎನ್ನ ಸತಿಯಾಗೆ ತಕ್ಕಳ್‌ನಿನ್ನಸುತೆ' ಯೆಂದು ತಿಳಿಸಿದಾಗ ಗಿರಿರಾಜ ಪ್ರೀತಿಯಿಂದಲೇ ಮಗಳನ್ನು ಮದುವೆಮಾಡಿ ಕೊಡಲು ಒಪ್ಪುತ್ತಾನೆ (೩-೫೭)

ಒಡೆಯರ ಕಾಲದ ಕೆಲವು ಕೃತಿಗಳು

ಮೈಸೂರು ಒಡೆಯರ ಆಳ್ವಿಕೆಯ ಕಾಲದಲ್ಲಿ ಕನ್ನಡ ಸಾಹಿತ್ಯಕ್ಕೆ ಮಹಾಪೂರ ಒದಗಿತ್ತು.ಆ ಕಾಲದಲ್ಲಿ ಶಿವಪಾರ್ವತಿಯರ ವಿವಾಹ ಕತೆ ಚಂಪೂ, ನಾಟಕ, ಯಕ್ಷಗಾನ, ಸಾಂಗತ್ಯ ಇತ್ಯಾದಿ ಮಾಧ್ಯಮಗಳಲ್ಲಿ ತನ್ನ ರೂಪ ವೈವಿಧ್ಯವನ್ನು ತೋರಿಸಿತು. ಇವುಗಳಲ್ಲಿ ರಾಮಣ್ಣ ವೆಂಕಟಸುಬ್ಬಯ್ಯ ಎಂಬವರ 'ಗಿರಿಜಾ ಕಲ್ಯಾಣ' ನಾಟಕ (೧೯ನೆಯ ಶತಮಾನ), ರಾಚಯ್ಯನವರ 'ಗಿರಿಜಾ ಕಲ್ಯಾಣ' (ಕಾಲ ತಿಳಿಯದು), ದೇವಿದಾಸರ 'ಗಿರಿಜಾ ಕಲ್ಯಾಣ' ಯಕ್ಷಗಾನ (ಕ್ರಿ.ಶ. ೧೭೦೦), ಶಾಂತಯ್ಯನವರ 'ಗಿರಿಜಾ ಕಲ್ಯಾಣ' ಯಕ್ಷಗಾನ (ಕ್ರಿ.ಶ. ೧೮೩೦) ಹ. ರಾಮಭಟ್ಟರ 'ಗಿರಿಜಾ ಕಲ್ಯಾಣ' ಯಕ್ಷಗಾನ (೧೯ನೆಯ ಶತಮಾನ) ಶ್ರೀನಿವಾಸರ 'ಗಿರಿಜಾ ಪರಿಣಯ' ಹಾಡು, (ಕ್ರಿ.ಶ. ೧೮೮೧)

ಲಿಂಗಣ್ಣ ಕವಿಯ 'ಶಿವಕಲ್ಯಾಣ' ಯಕ್ಷಗಾನ ಮತ್ತು ಪಾರ್ವತೀ ಪರಿಣಯ'(ಚಂಪೂ), ಕರ್ತೃ ತಿಳಿಯದ 'ಪಾರ್ವತೀ ಕಲ್ಯಾಣ' ಯಕ್ಷಗಾನ, ಬಳಗಾನೂರು ಮರಿಸ್ವಾಮಿಯವರ 'ಗಿರಿಜಾಕಲ್ಯಾಣ' ಯಕ್ಷಗಾನ (ಕ್ರಿ.ಶ. ೧೮೬೦) ಗಂಗನೆಂಬವನ 'ಗಿರಿಜಾ ಕಲ್ಯಾಣ' ಯಕ್ಷಗಾನ (ಕ್ರಿ.ಶ. ೧೭೫೦) ಮುಂತಾದ ಕೃತಿಗಳನ್ನು ಹೆಸರಿಸಬಹುದು.

ಕರ್ನಾಟಕ ಕವಿಚರಿತೆಯ ಅನುಕ್ತ ಕೃತಿ ಸೂಚಿಯಲ್ಲಿ ಶ್ರೀ ಜವರೇ ಗೌಡರು ಇನ್ನೂ ಹಲವಾರು ಕಾವ್ಯಕೃತಿಗಳನ್ನು ಉಲ್ಲೇಖಿಸಿದ್ದಾರೆ. ಶಂಕರ ಕವಿಯ 'ಗಿರಿಜಾ ಕಲ್ಯಾಣ' ನಾಟಕ, ಶಾಂತಕವಿಯ 'ಗಿರಿಜಾ ಕಲ್ಯಾಣ' ಕಾವ್ಯ, ವೀರನಗೆರೆ ಪುಟ್ಟಣ್ಣರ 'ಗಿರಿಜಾ ಕಲ್ಯಾಣ' ನಾಟಕ, ದೇವಶಿಖಾಮಣಿ ಶ್ರೀನಿವಾಸ ಅಯ್ಯಂಗಾರರ 'ಗಿರಿಜಾ ಕಲ್ಯಾಣ' ಕಥೆ, ವಿಷ್ಣುಸಭಾಹಿತ 'ಗಿರಿಜಾ ಕಲ್ಯಾಣ' ಯಕ್ಷಗಾನ ಇವುಗಳಲ್ಲಿ ಕೆಲವು.

ಈ ಕಾಲದ ಗಿರಿಜಾಕಲ್ಯಾಣ ಕಥಾಸಂಬಂಧವಾದ ಪ್ರಸಿದ್ಧ ಕೃತಿಗಳೆಂದರೆ ಅಳಿಯ ಲಿಂಗರಾಜರಿಂದ ರಚಿತವಾದ 'ಗಿರಿಜಾ ಕಲ್ಯಾಣ' ಸಾಂಗತ್ಯ ಮತ್ತು ಅದೇ ಹೆಸರಿನ ಯಕ್ಷಗಾನ ಕೃತಿಗಳು. (ಕ್ರಿ.ಶ. ೧೮೨೩-೭೪)

ಗಿರಿಜಾ ಕಲ್ಯಾಣ ಸಾಂಗತ್ಯ

ಈ ಕೃತಿ ಶಿವಪುರಾಣವನ್ನು ಆಧರಿಸಿ ರಚಿತವಾಗಿದ್ದರೂ ಸ್ವತಂತ್ರವಾದ ಕಲ್ಪಕತೆಯಿಂದಲೂ ಸಮಕಾಲೀನ ಸಾಮಾಜಿಕ ರೀತಿ, ನೀತಿಗಳಿಂದಲೂ ಪುರಾಣಕತೆಗಿಂತ ಭಿನ್ನವಾಗಿದೆ. ಇದರಲ್ಲಿ ಜನಪದೀಯ ಶೈಲಿ ಮಿಂಚಿದೆ. 'ಕುಮಾರಸಂಭವ'ವನ್ನಾಗಲೀ 'ಗಿರಿಜಾಕಲ್ಯಾಣ'ವನ್ನಾಗಲೀ ಕವಿ ಅನುಸರಿಸಿಲ್ಲ. ಕಾವ್ಯವಾಗಿ ಯಶಸ್ವಿ ಅನ್ನಿಸದಿದ್ದರೂ ಶಿವಪಾರ್ವತಿಯರ ವಿವಾಹವನ್ನು ಕುರಿತಾದ ವಿನೂತನ ಕಥಾಮಾದರಿಯನ್ನು ಕನ್ನಡಕ್ಕೆ ನೀಡಿದ ಶ್ರೇಯಸ್ಸು ಇದಕ್ಕಿದೆ.

ಗಿರಿಜಾ ಕಲ್ಯಾಣ ಯಕ್ಷಗಾನ

ಅಳಿಯ ಲಿಂಗರಾಜ ರಚಿತ 'ಗಿರಿಜಾ ಕಲ್ಯಾಣ' ಯಕ್ಷಗಾನಸಾಂಗತ್ಯ ಕೃತಿಗಿಂತ ಭಿನ್ನವಾಗಿದೆ. ಇದರಲ್ಲಿ ಪುರಾಣೋಕ್ತ ಪ್ರಸಂಗಗಳಿದ್ದರೂ ಹರಿಹರನ 'ಗಿರಿಜಾಕಲ್ಯಾಣ'ವೇ ಇದಕ್ಕೆ ಪ್ರಮುಖ ಆಕರ.

ಈ ಕೃತಿಯಲ್ಲಿ ಕತೆ ದಕ್ಷಯಜ್ಞದಿಂದ ತಾರಕ ಸಂಹಾರದವರೆಗೆ ವಿಸ್ತೃತವಾಗಿದೆ.ಗಿರಿಜಾ ಕಲ್ಯಾಣ ಭಾಗದಲ್ಲಿ ಹರಿಹರನ ಪ್ರಭಾವ ದಟ್ಟವಾಗಿದೆ.

ಯುವತಿ ಪಾರ್ವತಿಯನ್ನು ನಾರದ ಭೇಟಿಯಾಗಿ ನಮಸ್ಕರಿಸುವುದು, ವಿಷ್ಣುವೇ ಮನ್ಮಥನಗೆ ಕಾರ್ಯಭಾರವನ್ನು ಅರುಹುವುದು ಹರಿಹರನ ಕೊಡುಗೆ. ಮುಂದಿನ ಘಟನೆಗಳು ಶಿವಪುರಾಣಕ್ಕೆ ಋಣಿಯಾಗಿವೆ.

ವಟುವಿನ ಶಿವನಿಂದೆಗೆ ಕನಲುವ ಪಾರ್ವತಿ ಸ್ಕಂದಪುರಾಣ ಮತ್ತು ಹರಿಹರನ 'ಗಿರಿಜಾಕಲ್ಯಾಣ'ದ ಪಾರ್ವತಿಯನ್ನು ಹೋಲುತ್ತಾಳೆ.

ಪುರಾಣಗಳನ್ನು ಬಿಡಲಾಗದ ಆದರೆ ಹರಿಹರನನ್ನು ಮರೆಚ್ಚಿಕೊಂಡಿರುವ ವಿಚಾರ ಇಲ್ಲಿ ಸ್ಪಷ್ಟವಾಗುತ್ತದೆ.ಯಕ್ಷಗಾನ ಕೃತಿಯಾಗಿರುವುದರಿಂದ ಪುರಾಣಗಳಿಗೇ ಹೆಚ್ಚು ನಿಷ್ಠವಾಗಿದೆ.

ಪಾರ್ವತೀ ಪರಿಣಯ

ಡಾ. ಸಾ.ಶಿ. ಮರುಳಯ್ಯನವರು 'ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ' ಎಂಬ ಮಹಾಪ್ರಬಂಧದಲ್ಲಿ ಲಿಂಗಣ್ಣ ಕವಿಯ 'ಪಾರ್ವತೀ ಪರಿಣಯ' ಮತ್ತು 'ಶಿವಕಲ್ಯಾಣ' ಗಳೆಂಬ ಚಂಪೂ ಮತ್ತು ಯಕ್ಷಗಾನ ಕೃತಿಗಳನ್ನು ಉಲ್ಲೇಖಿಸುತ್ತಾರೆ.(ಪು.೨೨೨) 'ಪಾರ್ವತೀ ಪರಿಣಯ'ದ ಬಗ್ಗೆ ಮಾತನಾಡುತ್ತ '...ಇದು ಕ್ರಿಶ. ೧೭೬೩ರ ಅನಂತರದಲ್ಲಿ ಹುಟ್ಟಿದ ಕಾವ್ಯವೆಂದು ಊಹಿಸಬಹುದಾಗಿದೆ. ಪಾರ್ವತೀ ಪರಿಣಯ ವಸ್ತುಕ ಕೃತಿ. ಚಂಪೂಕಾವ್ಯ. ೧೮ ಆಶ್ವಾಸಗಳಿವೆ. ಮಾಹಾಕಾವ್ಯದ ಎಲ್ಲ ಲಕ್ಷಣಗಳನ್ನೂ ತಂದು ತುಂಬಿದ್ದಾನೆ. ಕವಿಯ ಪಾಂಡಿತ್ಯ ಪ್ರದರ್ಶನ ಆಗಿದೆಯೇ ಹೊರತು ಮಹಾಕವಿಯ ಪ್ರತಿಭೆ ಮಿಂಚಿಲ್ಲ.'– ಎನ್ನುತ್ತಾರೆ. (ಪು. ೨೨೪)

ಈ ಕಾವ್ಯ ಹರಿಹರನ 'ಗಿರಿಜಾಕಲ್ಯಾಣ'ಕ್ಕೆ ಋಣಿಯಾಗಿದೆ. ಮೇನೆಯ ಪುತ್ರೀದೋಹಳ, ತಪಸ್ಸು, ಅವಳ ಇಷ್ಟಾರ್ಥಸಿದ್ಧಿಗಾಗಿಯೇ ಸರ್ವಮಂಗಳೆಯ ಜನನ, ಬಾಲ್ಯದ ಶಿವಪೂಜೆ– ಇವೆಲ್ಲ 'ಗಿರಿಜಾಕಲ್ಯಾಣ' ಕಾವ್ಯಕಥೆಗೆ ಅನುಗುಣವಾಗಿವೆ. ೧೩ನೆಯ ಆಶ್ವಾಸದಲ್ಲಿ ಶಿವನ ತಪೋಭಂಗಕ್ಕಾಗಿ ಮನ್ಮಥನನ್ನು ಅನುನಯಿಸುವವನು ಬ್ರಹ್ಮ. ಆದರೆ ಅವನ ಮಾತುಗಳು 'ಗಿರಿಜಾಕಲ್ಯಾಣ'ದ ವಿಷ್ಣುವಿನ ಮಾತುಗಳನ್ನು ನೆನಪಿಸುತ್ತವೆ. (ಪಾರ್ವತೀ ಪರಿಣಯ ೧೩–೨೧, ಗಿರಿಜಾ ಕಲ್ಯಾಣ ೭–೩೨) ಕಾವ್ಯಕ್ಕೆ ಆಕರ ಶಿವಪುರಾಣವೆಂದರೂ ಕವಿ ಪುರಾಣ ಕಾವ್ಯಗಳೆರಡರಿಂದಲೂ ಪ್ರಭಾವಿತನಾಗಿದ್ದಾನೆ. ಪುರಾಣ ವಿವರಗಳು ಹೇರಳವಾಗಿವೆ.

ಈಚಿನ ಕೆಲವು ಕೃತಿಗಳು

ಹೊಸಗನ್ನಡದಲ್ಲೂ ಗಿರಿಜಾಕಲ್ಯಾಣವನ್ನು ಕುರಿತು ಅನೇಕ ರಚನೆಗಳಿರುವುದು ತಿಳಿದುಬಂದಿದೆ. ಕರ್ನಾಟಕ ಕವಿಚರಿತೆಯ ಅನುಕ್ತಕೃತಿ ಸೂಚಿಯಲ್ಲಿ ಗಳಗನಾಥರು ಕಥೆಯ ರೂಪದಲ್ಲಿಯೂ ಶಾಂತಕವಿಗಳು ಕಾವ್ಯರೂಪದಲ್ಲಿಯೂ ರಚಿಸಿದ ಉಲ್ಲೇಖ ಗಳಿವೆ.

ಹೆಚ್.ಎಂ. ರಾಮಾರಾಧ್ಯರ 'ಗಿರಿಜಾಕಲ್ಯಾಣ' ಎಂಬ ಗಮಕ ರೂಪಕ ವಿದ್ವಾಂಸರ ಮೆಚ್ಚುಗೆಗೆ ಪ್ರಾಪ್ತವಾಗಿದೆ.'ಮದನ ದಹನ' ಅಥವಾ 'ಪಾರ್ವತೀ ಪರಿಣಯ'ವೆಂಬ ಕೃತಿ ಸತ್ಯದರ್ಶೀ, ಕಾಸರಗೋಡು ಎಂಬವರಿಂದ ರಚಿತವಾಗಿದೆ. 'ವಧೂವಿಜಯ' ಅಥವಾ 'ಪಾರ್ವತೀ ಪರಿಣಯ' ಎಂಬ ಗೀತರೂಪಕ 'ಮಂಡೋದರಿ'ಯವರಿಂದ ರಚಿತವಾಗಿದೆ.

ಕೃಷ್ಣಮೂರ್ತಿ ಪುರಾಣಿಕರ 'ರತಿವಿಲಾಪ' ಕಾಮದಹನದ ಕತೆಯನ್ನು ತಿಳಿಸುತ್ತದೆ. ಅಮರವಾಣಿಯವರ 'ಶಿವನ ಸೋಲು' ಒಂದು ಗೀತನಾಟಕ. ನಾಟಕ ರಚನೆಯ ಉದ್ದೇಶ ಸಮಕಾಲಿನವಾಗಿದ್ದು ಭಾರತವನ್ನು ಪರಕೀಯರಿಂದ ಮುಕ್ತಗೊಳಿಸುವ ಹಿನ್ನೆಲೆಯಲ್ಲಿ ಇದೊಂದು ಸಾಂಕೇತಿಕ ರಚನೆ.

ಕವಿ ಬೇಂದ್ರೆಯವರ 'ಶಿವದೃಷ್ಟಿ', ಕಂ.ಸು. ವೆಂಕಟಾದ್ರಿಶರ್ಮರ 'ಶಿವ-ಶೈಲಜೆ' ಮುಂತಾದ ಕವನಗಳಲ್ಲೂ ಗಿರಿಜಾಕಲ್ಯಾಣದವಸ್ತುವಿದೆ.

ಶಿವಪಾರ್ವತೀ ವಿವಾಹ ಸಂಬಂಧಿತ ಹರಿಹರ ಪೂರ್ವದ ಕನ್ನಡ ಕೃತಿಗಳೆಲ್ಲ ಕಾಲಗರ್ಭದಲ್ಲಿ ಅಡಗಿಹೋಗಿವೆ. ಅನಂತರವೂ ೧೯ನೆಯ ಶತಮಾನದವರೆಗೂ ಸ್ವತಂತ್ರ ಕೃತಿಗಳು ಕಾಣಿಸಿಲ್ಲ. ಅಪಾರ ಜನಪ್ರಿಯತೆಯನ್ನು ಪಡೆದು ಸಂಸ್ಕೃತದ ಪುರಾಣ, ಕಾವ್ಯಗಳಲ್ಲಿ, ಕನ್ನಡ ಶಾಸನ, ಜನಪದಗಳಲ್ಲಿ ವೈವಿಧ್ಯಪೂರ್ಣವಾಗಿ ಮೂಡಿಬಂದ ಈ ಕಥಾನಕ ಪೂರ್ಣ ಕಾವ್ಯವಸ್ತುವಾಗಿ ಅವತರಿಸದಿರುವುದು, ಅವತರಿಸಿದ್ದರೂ ಉಪಲಬ್ಧ ವಾಗದಿರುವುದು ಅಚ್ಚರಿಯೆನಿಸುತ್ತದೆ. ಹರಿಹರನನ್ನು ಅನುಸರಿಸಿದ ವೀರಶೈವ ಕವಿಗಳೂ ತಮ್ಮ ಕಾವ್ಯಗಳಲ್ಲಿ ಆನುಷಂಗಿಕವಾಗಿ ಮಾತ್ರ ಕತೆಯನ್ನು ಬಳಸಿದ್ದಾರೆ. ೧೯ನೆಯ ಶತಮಾನದಲ್ಲಿ ಈ ಕಥಾಪ್ರಸಂಗ ಇಡಿಯಾಗಿ ಅಭಿವ್ಯಕ್ತವಾಗಿದ್ದರೂ ಪುರಾಣ, ಧರ್ಮ, ಭಕ್ತಿಗಳನ್ನೂ ಕಾವ್ಯಸೌಂದರ್ಯವನ್ನೂ ಏಕತ್ರ ನೆಲೆಗೊಳಿಸಿ ಹರಿಹರ ರಚಿಸಿದ 'ಗಿರಿಜಾಕಲ್ಯಾಣ'ಕ್ಕೆ ಸಂವಾದಿಯಾಗಬಲ್ಲ ಇನ್ನೊಂದು ಕಾವ್ಯ ರಚನೆಯಾಗಿಲ್ಲ. ಈ ದೃಷ್ಟಿಯಿಂದ ಹರಿಹರನ 'ಗಿರಿಜಾ ಕಲ್ಯಾಣ' ನಿಜವಾಗಿಯೂ 'ನ ಭೂತೋ' ಎಂಬ ಹೆಗ್ಗಳಿಕೆಗೆ ಪಾತ್ರವಾಗುತ್ತದೆ.

■

ಇತ್ತೀಚಿನ ಕನ್ನಡ ವ್ಯಾಕರಣ ರಚನೆಯ ಕಟ್ಟು ಮತ್ತು ಬಿಕ್ಕಟ್ಟು

◆

ಎಂ.ಜಿ. ವಾರಿ

ಈಚೆಗೆ ನಾನು ಸರಿಯಾಗಿ ಈ ಆರು ತಿಂಗಳ ಅವಧಿಯ ಆಸು-ಪಾಸಿನಲ್ಲಿ ಕನ್ನಡ ಬಾಶೆಗೆ ಸಂಬಂಧಿಸಿದ ಎರಡು ವಿಚಾರ ಕಮ್ಮಟದಲ್ಲಿ ಭಾಗಿಯಾಗುವ ಅವಕಾಶ ದೊರಕಿದ್ದಿತು. ಒಂದು ಮೈಸೂರಲ್ಲಿ, ಇನ್ನೊಂದು ನನ್ನದೇ ಜಿಲ್ಲೆಯಾದ ಬಾಗಲ ಕೋಟೆಯಲ್ಲಿ.

೧.೧. ಮೈಸೂರು[೧] : ಇಲ್ಲಿ ಏರ್ಪಡಿಸಲಾದ ಹಲವಾರು ವಿಶಯಗಳಲ್ಲಿ (ದರ್ಮ, ಬುಡಕಟ್ಟು, ಸಮಾಜ ಇತ್ಯಾದಿ) ಬಾಷೆಯೂ ಒಂದಾಗಿತ್ತು. 'ಕನ್ನಡ ಬಾಶೆಯ ಇತ್ತೀಚಿನ ಬೆಳವಣಿಗೆ: ಸಮಸ್ಯೆ ಮತ್ತು ಸವಾಲುಗಳು' ಎಂಬ ವಿಶಯ ಅದಾಗಿತ್ತು. ಅಲ್ಲಿ 'ಕನ್ನಡದ ಮೂಲ ಪದಗಳು ಮತ್ತು ಪದಪ್ರಕಾರಗಳ ಒಳರಚನೆಯ ಸ್ವರೂಪ' ಎಂಬ ಪ್ರಬಂದವನ್ನು ಮಂಡಿಸುವ ಮೂಲಕ ನಾನು ನನ್ನನ್ನು ತೊಡಗಿಸಿಕೊಂಡಿದ್ದೆ. ಇದು ನಡೆದದ್ದು ಕಳೆದ ವರುಶ ಅಂದರೆ ೨೦೧೪ರ, ೧೨ ಮತ್ತು ೧೩ರ ಜುಲೈ ತಿಂಗಳು.

೧.೨. ಬಾಗಲಕೋಟೆ[೨] : ಇಲ್ಲಿ (ಬಸವೇಶ್ವರ ವಿಜ್ಞಾನ ಕಾಲೇಜು) ಏರ್ಪಡಿಸಲಾದ ವಿಶಯ 'ಹಳಗನ್ನಡ ಸಾಹಿತ್ಯ : ಅದ್ಯಯನ ಮತ್ತು ಅದ್ಯಾಪನ'. ಇಲ್ಲೂ ನಾನು ಒಬ್ಬ ಕುತೂಹಲದ ವಿದ್ಯಾರ್ತಿ ವೀಕ್ಶಕನಾಗಿ ಬಾಗವಹಿಸಿದ್ದೆ. ಇದು ಜನೆವರಿ ೧೦ ಮತ್ತು ೧೧ರ ೨೦೧೫ನೇ ಇಸವಿಯಲ್ಲಿ ನಡೆಯಿತು.

ಈ ಎರಡರ ಸಂದರ್ಬದಲ್ಲೂ ಚರ್ಚೆಗೊಂಡ ವಿಶಯ ಅಲ್ಪ-ಸ್ವಲ್ಪ (ಫರಕ್<) ಪರಕು ಇದೆ- ಎಂದು ಅನಿಸಿದರು, ಒಟ್ಟಾರೆ ವಿವೇಚನೆಗೆ ಒಳಗಾದ ವಿಶಯದ ಆಶಯ ಮಾತ್ರ ಒಂದೇ ಎಂಬುದು ನನ್ನ ತರ್ಕವಾಗಿದೆ.[೩] ಮತ್ತೊಂದು ರೀತಿ ಹೇಳುವುದಾದರೆ, ನಾನು (ನಾನು ಎಂದರೆ ಒಬ್ಬ ಕನ್ನಡ ಅದ್ಯಾಪಕನಾಗಿ) ಮೂರು ದಶಕಕ್ಕು (೧೯೮೨ ರಿಂದ ೨೦೧೪ರ, ವರೆಗೆ) ಮೇಲ್ಪಟ್ಟು ನಡೆದು ಬಂದ ಹಾದಿ ಇದಾದರೂ ನನಗಂತು ಎರಡು ವಿರುದ್ದ ದ್ರುವ ಎನಿಸಿದ ಚಲನವಲನ ಉಳ್ಳ ಪ್ರಕ್ರಿಯೆಗಳ ದರ್ಶನ ಆದಂತಾಯಿತು. ಒಂದು ರೀತಿ ಆಡುಮಾತಿನ ಶೈಲಿಯಲ್ಲಿ ಹೇಳುವುದಾದರೆ,

'ಎತ್ತು ಏರಿಗೆಳೆದರೆ, ಕ್ವಾಣ ಕೆರಿಯ ನೀರಿಗೆಳೆಯಿತು' ಎಂಬಂತಾಗಿದೆ, ನಮ್ಮ ಕನ್ನಡ ಬಾಶಾದ್ಯಯನದ ಪಾಡು.

ಮೈಸೂರಲ್ಲಿ ಚರ್ಚೆಗೊಂಡ ವಿಶಯ, ಕನ್ನಡ ಬಾಶೆಯ ಬಳಕೆಯಲ್ಲಿ (ಒಂದಿಸ್ಟು ಲಿಪಿ ಬಾಶೆಯು ಸೇರಿ) ಎದುರಿಸುತ್ತಿರುವ ಆಂತರಿಕ (ರಚನಾ ವಿದಾನ) ಬಿಕ್ಕಟ್ಟಿನ ವಿಚಾರಕ್ಕೆ ಸಂಬಂದಪಟ್ಟಿರುವುದೇ ಆಗಿತ್ತು. ಅದೇ ರೀತಿ ಇಲ್ಲೂ ಕನ್ನಡ ಬಾಶೆಯ ಒಂದು ಕಾಲಾವದಿಯ ಬಹುತೇಕ ಗ್ರಾಂತಿಕ ರೂಪವೇ ಆದ ಹಳಗನ್ನಡ ಸಾಹಿತ್ಯ ಓದಿನ ಅದ್ಯಯನದಲ್ಲಿ ತೊಡಗಿಸಿಕೊಳ್ಳುವಾಗಿನ ತೊಡಕು, ತೊಂದರೆ ಕುರಿತು ಗಂಬೀರ ಚಿಂತನ-ಮಂತನವೂ ನಡೆಯಿತು. ಈ ಎರಡರ ವಿಚಾರ ಕಮ್ಮಟದಲ್ಲಿ ಪರೋಕ್ಶವಾಗಿ ವಿಶ್ಲೇಶಣೆಗೆ ಒಳಗಾಗಿರುವುದು ಕನ್ನಡ ಬಾಶೆಯ ಆಂತರಿಕ ರಚನಾ ನಿಯಮಾವಳಿಗೆ ಸಂಬಂದಿಸಿರುವುದೆ ಆಗಿತ್ತು. ಇದೇ ಇಲ್ಲಿ ವಿಶೇಷ ಗಮನ ಸೆಳೆಯುವ ಅಂಶವಾಗಿದೆ. ಇದೀಗ ನಮ್ಮ ಮುಂದೆ ಕವಲುದಾರಿ ಕಾಣುತ್ತಿದೆ. ಇದನ್ನೆ ಇಲ್ಲಿ ಸ್ವಲ್ಪ ಮಟ್ಟಿಗೆ ಹಿಂಜಿ ಹಿಂಜಿ ವಿವರಿಸಬೇಕಾಗಿದೆ.

೨.೧. ಪ್ರಾಚೀನ ಕಾಲದಲ್ಲಿ ನಮ್ಮವರು ಅರಿತೊ-ಮರೆತೊ ಹೇಗೊ, ಬಾಶಾದ್ಯಯನದ ಕುರಿತು ಒಂದು ಹಾದಿಯನ್ನು ಆಯ್ಕೆ ಮಾಡಿಕೊಂಡು ಮುಳ್ಳು-ಕಂಟಿಯ ದಾರಿಯಲ್ಲಿ ಪಯಣಿಸಿಕೊಂಡು ಬಂದದ್ದಾಗಿದೆ. ಇದನ್ನೆ ಇನ್ನಸ್ಟು ನೇರವಾಗಿ ಹೇಳುವುದಾದರೆ, ಸಕ್ಕದ ವ್ಯಾಕರಣ ಚಕ್ಶುವಿನ ಮೂಲಕವೇ ಅಳತೆ ಮಾಡಿ, ತೂಗಿ ನೋಡಿ, ಆ ಲೆಕ್ಕಾಚಾರದ ಮುಕೇನ ಕನ್ನಡ ವ್ಯಾಕರಣವನ್ನು ಕಟ್ಟಿಕೊಂಡು ಅದ್ಯಯನ ಮಾಡುತ್ತ, ಕಣ್ಣು ಕಿವಿ ಮುಚ್ಚಿಕೊಂಡಿರುವ ಹಾಗೆ, ಅದನ್ನೆ ಅನುಸರಿಸುತ್ತ, ಈ ತನಕ ಬಂದಿದ್ದೇವೆ. ಅತವಾ ಬರುತ್ತಲೆ ಇದ್ದೇವೆ. ಸಂಸ್ಕ್ರುತ ಮತ್ತು ಕನ್ನಡ ಇವೆರಡು ಯಾವ ರೀತಿಯಲ್ಲೂ ಹೋಲಿಸಲಾಗದ ಬಿನ್ನ ಲಕ್ಶಣಗಳನ್ನು ಮೈಗೂಡಿಸಿಕೊಂಡ ಬಿನ್ನಬಾಶಾ ಕುಟುಂಬಕ್ಕೆ ಸೇರಿವೆ. ಬೇರು ಹಂತದಲ್ಲಿ ಸಂಸ್ಕ್ರುತ ಇಂಡೋ-ಆರ್ಯನ್ ಕುಟುಂಬಕ್ಕೆ ಸೇರಿದ ಬಾಶೆಯಾದರೆ, ಕನ್ನಡ ದ್ರಾವಿಡ ಕುಟುಂಬಕ್ಕೆ ಸೇರಿದ ಬಾಶೆ. ಆದರೆ ನಮ್ಮ ಪ್ರಾಚೀನ ಕವಿಗಳು, ವಿದ್ವಾಂಸರು ಮತ್ತು ಶಾಸ್ತ್ರಕಾರರೆಲ್ಲ ಸಂಸ್ಕ್ರುತವೆ ಬಾರತೀಯ ಬಾಶೆಗಳಿಗೆಲ್ಲ ತಾಯಿ ಮೂಲವಾದುದು ಎಂದುಕೊಂಡಿದ್ದಾರೆ. ಉತ್ತರ ಬಾರತದ ಬಹುತೇಕ ಬಾಶೆಗಳು ಸಂಸ್ಕ್ರುತ ಜನ್ಯವೇ. ಆ ಒಂದು ಕಲ್ಪನೆಯ ನಂಬಿಕೆಯಿಂದ ಕನ್ನಡವೂ ಅದೇ ರೀತಿ ಎಂದು ಬಾವಿಸಿಕೊಂಡು ಬಂದಂತೆ ತೋರುತ್ತದೆ. ಈ ಬಲವಾದ ನಂಬಿಕೆಯ ಒಂದೇ ಕಾರಣದಿಂದ ಅಲ್ಲಿರುವ ನಿಯಮಗಳೆಲ್ಲವನ್ನೂ ಇಲ್ಲೂ ಇವೆ ಎಂಬ ಬ್ರಮೆಯಿಂದ ಕಾಣಲು ತವಕಿಸಲಾಗಿದೆ; ಅಸ್ಟೆ ಅಲ್ಲ, ಆ ನಿಯಮಗಳನ್ನು ಒತ್ತಾಯಪೂರ್ವಕವಾಗಿ ಕಂಡರಿಸುವ ಒಂದು ಹಿಕಮತ್ತು ಇಲ್ಲಿ ನಡೆದಿದೆ.

ಕನ್ನಡದಲ್ಲಿ ಒಳರಚನೆಯುಳ್ಳ ಹಲವು ಪದ ಪ್ರಕಾರಗಳಿವೆ. ಅವುಗಳಲ್ಲಿ ಒಂದು ಈ ಸಮಾಸ ಅತವಾ ಸಮಸ್ತಪದಗಳು. ಸಂಸ್ಕ್ರುತದಲ್ಲಿ ಇರುವಂತೆ (ಅಂದರೆ ವಿಬಾಗಿಸಿ ವಿವರಿಸಿದಂತೆ) ಕನ್ನಡದಲ್ಲೂ ಇವೆ ಎಂದು ವಿವರಿಸಲು ಹೋಗಿ ಯದ್ವಾತದ್ವಾ

ಗುದಮುರಿಗೆ ಹಾಕಿಕೊಂಡು ಹಲವು ಎಡವಟ್ಟುಗಳನ್ನು ಮೈಮೇಲೆ ಎಳೆದುಕೊಂಡದ್ದನ್ನು ಕಣ್ಣಾರೆ ಇಲ್ಲಿ ನೋಡಬಹುದಾಗಿದೆ.

೩.೧. ಮೊದಲು ಸಮಾಸ ಅತವಾ ಸಮಸ್ತ ಪದ ಎಂದರೇನು? ಎಂಬುದನ್ನು ಸ್ಪಶ್ಟವಾಗಿ ತಿಳಿಯೋಣ -(ಎರಡಕ್ಕಿಂತ ಹೆಚ್ಚು ಪದಗಳು ಎಂದಿದ್ದರೂ) ವಿಶೇಷವಾಗಿ ಎರಡು ಅಂಗಪದಗಳು ಬಾಗಿದಾರರಾಗಿರುತ್ತವೆ.

- ಆ ಎರಡೂ ಅಂಗಪದಗಳು ಜೊತೆಗೂಡಿ ಏಕಪದ ಎನ್ನುವುದು ಸ್ರುಶ್ಟಿಗೊಳ್ಳುತ್ತದೆ.

- ಈ ರೀತಿ ಸ್ರುಶ್ಟಿಗೊಂಡ ಏಕಪದ ಮಾತ್ರ ಎರಡು ಅಂಗಪದಗಳ ತಿರುಳಿನಕ್ಕಿಂತ ಸಂಪೂರ್ಣ ಬಿನ್ನ ತಿರುಳನ್ನೆ ಹೊಂದಿರುತ್ತದೆ.

- ಇಂತಹ ಏಕಪದದ ನಡುವೆ ಅಪ್ಪಿ-ತಪ್ಪಿಯೂ ಯಾವುದೆ ಪದವನ್ನಾಗಲಿ ಇಲ್ಲವೆ ಒಂಟಕ್ಕರದ (ಒಂಟಿ+ಅಕ್ಕರ) ರೂಪವನ್ನಾಗಲಿ ತಂದು ತುರುಕಲು ಸಾದ್ಯವಾಗದು. (ಉದಾಹರಣೆಗೆ : ಆ, ಈ, ಇತ್ಯಾದಿ)

ಸಂಸ್ಕ್ರುತದಲ್ಲಿ ವರ್ಗೀಕರಿಸಿದ ಹಾಗೆ ಕನ್ನಡದಲ್ಲೂ ವಿಬಾಗಿಸಿ ನಿರೂಪಿಸಲಾಗಿದೆ. ಈ ರೀತಿ ವರ್ಗೀಕರಿಸಿ ಕೊಡಲಾದ ಉದಾಹರಣೆಗಳಿಗೂ ಹಾಗೆಯೆ ಆ ಪದಗಳು ರೂಪುಗೊಳ್ಳಲಿರುವ ಚಟುವಟಿಕೆ ಸ್ತಿತಿ-ಗತಿಯ ವಿವರಣೆಗೂ ಒಂದಕ್ಕೊಂದು ತಾಳ-ಮೇಳ ಇಲ್ಲದಿರುವುದು ಮೇಲ್ನೋಟದ ಪರಿಶೀಲನೆಯಿಂದ ಕಂಡುಬರುತ್ತದೆ.

೩.೨. ಒಂದು ಸಮಾಸವೆಂದು ಗುರುತಿಸಲಾದ ರೂಪವನ್ನು ಅದಕ್ಕೆ (ವ್ಯಕ್ತಿ ಸೂಚಕ) ಪ್ರತ್ಯಯ ಒಂದನ್ನು ಸೇರಿಸುವ ಮೂಲಕ ಆ ಮಗದೊಂದು ರೂಪವನ್ನು ಬೇರೊಂದು ಸಮಸ್ತಪದವಾಗಿ ಗುರುತಿಸಬಹುದೆಂಬ ರೀತಿ ಅಲ್ಲಿಯ (ಸಂಸ್ಕ್ರುತ ವ್ಯಾಕರಣದಲ್ಲಿ) ನಿರೂಪಣೆ ಇದೆ. ಇದು ಮತ್ತಸ್ಟು ಗೋಜಲನ್ನು ಉಂಟು ಮಾಡುವಂತಾಗಿದೆ.

ಕರ್ಮದಾರಯ ಸ. ಪದ	ಬಹುರ್ವ್ರೀಹಿ ಸ. ಪದ
ನಿಡು ಮೂಗು	ನಿಡುಮೂಗು+ಇ>ನಿಡುಮೂಗಿ
ಕಡುಚಾಗ	ಕಡುಚಾಗ+ಇ>ಕಡುಚಾಗಿ
ಅಲರ್ಗಣ್ಣು ಸೂ. ೧೮೯	ಅಲರ್ಗಣ್ಣು+ಅನ್>ಅಲರ್ಗಣ್ಣನ್ ಸೂ. ೧೯೭

ಕಲಿಯುವವರಿಗೂ ಕಲಿಸುವವರಿಗೂ ಇಲ್ಲಿ ಇರುಸು-ಮುರಿಸಿನ ಅನುಭವ ವಾಗುತ್ತದೆ.

೩.೩. ದ್ವಂದ್ವ ಸಮಸ್ತಪದ ಎನ್ನುವುದು ನಿಜಕ್ಕೂ ಕಲಿಕೆಯ ಹೊಸ್ತಿಲಲ್ಲಿ ಇರುವವರಿಗೆ (ಮತ್ತೂ ಇತರರಿಗೆ) ದ್ವಂದ್ವದ ಸಿಕ್ಕಿನಲ್ಲಿ ಸಿಕ್ಕಿಕೊಂಡ ಅನುಬವ ಆದರೆ ಆಶ್ಚರ್ಯವಿಲ್ಲ.

ಗಿಡಮರಬಳ್ಳಿಪುಲ್‌ಪೊದರ್‌ಪಕ್ಕಿ ಮಿಗಂಗಳ್ - ಇಲ್ಲಿ ೭ ಪದಗಳಿವೆ.

ಗಿಡಮರಬಳ್ಳಿಗಳ್ - ಇಲ್ಲಿ ಮೂರು ಪದಗಳಿವೆ.

ಪಕ್ಕಿಮಿಗಂಗಳ್ – ಇಲ್ಲಿ ಎರಡು ಪದಗಳಿವೆ.
ಆಟಪಾಠಕೂಟಂಗಳ್ – ಇಲ್ಲಿ ಮೂರು ಪದಗಳಿವೆ.
ಆಟಪಾಠಂಗಳ್ – ಎರಡು ಪದಗಳಿವೆ.

ಈ ಸಮಸ್ತ ಪದದಲ್ಲಿ ಎಸ್ಟು ಪದಗಳು ಬರುತ್ತದೆ. ಈ ಬಗ್ಗೆ ಕಚಿತ ವಿವರಣೆ ಇಲ್ಲಿಲ್ಲ.

೩.೪. ಅದೇ ರೀತಿ ಪ್ರಾಚೀನ ಗಣ್ಯ ವ್ಯಾಕರಣಕಾರನಾದ ಕೇಶಿರಾಜ ಇದೆ ನಿಟ್ಟಿನಲ್ಲಿ ಕಣ್ಣು ಹಾಯಿಸುತ್ತ ವ್ಯಾಕರಣದ ಇನ್ನೆರಡು ಅಂಶಗಳಾದ ಲಿಂಗ ಮತ್ತು ವಚನ ಕುರಿತು ವಿವರಣೆ ನೀಡುವಾಗಲೂ ಎಸ್ಟೆಲ್ಲಾ ಹೊಯ್ದಾಟ ಅನುಭವಿಸಿ ದ್ದಾನೆಂಬುದನ್ನು ಇಲ್ಲಿ ಗಮನಿಸಬೇಕು.

ವಿಶಯ	ಸಂಸ್ಕೃತ ವ್ಯಾಕರಣ ಚಕ್ಕು ಸೂತ್ರ – ೯೮	ಕನ್ನಡ ವಾಕ್ಯ ರಚನೆಯನ್ನು ಗಮನಿಸಿ ಸೂತ್ರ–೧೦೧
ಲಿಂಗ	ಲಿಂಗಮ್ ಒಂಬತ್ತು ತೆರಂ	ಮೊದಲಿನ ಮೂರು ಮಾತ್ರ ಇವೆ. (ಉಳಿದ ಲಿಂಗಮ್ ಒಳವಾಗಿ ರ್ದುಮ್ ಕನ್ನಡದೊಳ್ ಪರಿವರ್ತಿ ಸವು)
	ಸೂತ್ರ–೧೦೪	ಸೂತ್ರ–೧೦೪
ವಚನ	ಏಕದ್ವಿತ್ವ ಬಹುತ್ವಮನ್	ವಾಕ್ಯದಲ್ಲಿ ಪದ ಬಳಕೆ ಗಮನಿಸಿದಾಗ
	............ಆಚರಿಪರ್	(ದ್ವಿವಚನಮ್ ಉಚಿತದೆ ಬರ್ಕುಮ್)

೩.೫. ಸಂಸ್ಕೃತದಲ್ಲಿ ಎಂಟು ವಿಬಕ್ತಿ ಪ್ರತ್ಯಯಗಳನ್ನು ಗುರುತಿಸಲಾಗಿದೆ. ಆ ಪ್ರಕಾರ ಕೇಶಿರಾಜನ ವಿವರಣೆಯಲ್ಲಿ ಮೊದಲು ಏಳು ವಿಬಕ್ತಿ ಪ್ರತ್ಯಯಗಳ ಪ್ರಸ್ತಾಪ ಬರುತ್ತದೆ.

ಸಪ್ತವಿಧ ವಿಭಕ್ತಿಗಳ್ ಇವು ಇರ್ಪುವು–ಸೂತ್ರ–೧೦೩. ಮಮಿಂಕೆಯದದೊಳ್ [ಮ್, ಅಮ್, ಇಮ್, ಕೆ, ಅತ್, ಅದ್, (ಅ), ಒಳ್]

ಆಮೇಲೆ ಸುತ್ತು ಬಳಸಿದ ಹಾದಿಯನ್ನು ತುಳಿದು ಕೊನೆಗೆ ಸಂಬೋದನಾ ವಿಬಕ್ತಿ (ಸೂತ್ರ–೧೩೪, ೧೩೫) ಪ್ರತ್ಯಯದ ಕುರಿತು ಉಸಿರೆತ್ತುತ್ತಾನೆ. ಆದರೆ ಈ ಎಂಟೂ ವಿಬಕ್ತಿ ಪ್ರತ್ಯಯಗಳು ನಿಜವಾಗಿ ಕನ್ನಡದಲ್ಲಿ ಇವೆಯೆ? ಇದು ಸಾಕಷ್ಟು ಚರ್ಚೆಗೆ ಎಡೆ ಮಾಡಿ ಕೊಟ್ಟಿದೆ.

– ಕನ್ನಡದಲ್ಲಿ ಪ್ರತಮಾ ವಿಬಕ್ತಿ ಪ್ರತ್ಯಯ ಪ್ರತ್ಯೇಕವಾಗಿ ಇರಲಾರದು. ನಾಮಪದವೇ ತನ್ನಸ್ವಕ್ಕೆ ತಾನೆ ಪ್ರತಮೆಯನ್ನು ಪ್ರತಿನಿದಿಸುತ್ತದೆ.

– ಪಂಚಮಿ ವಿ. ಪ್ರ. ವನ್ನು ಪ್ರತ್ಯಯವೆಂದು ಪರಿಗಣಿಸಲಾಗದು. ಕಾರಣ ಪದ ಒಂದರ ಮೇಲೆ ತ್ರುತಿಯಾ ವಿಬಕ್ತಿ ಬರುತ್ತದೆ. ಅದೇ ಪಂಚಮಿ ಕಾರ್ಯವನ್ನು ನಿರ್ವಹಿಸುತ್ತದೆ.

– ಸಂಬೋದನೆಯೂ ಅಸ್ಟೆ. ವಾಕ್ಯದ ನೆಲೆಯಲ್ಲಿ ಮತ್ತು ಬಾವ ಸೂಚಕವಾಗಿ ಬರುತ್ತದೆ.

– ಶಶ್ಟಿ ವಿ. ಪ್ರ. ಕೇವಲ ಎರಡು ಪದಗಳ ಸಂಬಂದ ಸೂಚಕವಾಗಿ ಮಾತ್ರ ಬರುತ್ತದೆ. ಕಾರಣ ಇದೊಂದು ವಿ.ಪ್ರ ಆಗದು.

ಈ ರೀತಿ ವಾಕ್ಯ ರಚನೆ ಮತ್ತು ಬಳಕೆಯ ದ್ರುಶ್ಟಿಯಿಂದ ಗಮನಿಸಿ ಹೇಳುವುದಾದರೆ ಕೇವಲ ನಾಲ್ಕೇ ನಾಕು ಪ್ರತ್ಯಯಗಳಿವೆ ಎನ್ನಬೇಕು.

ವಿಭಕ್ತಿ ಪ್ರತ್ಯಯ	ಪ್ರಾಚೀನ ಕನ್ನಡ	ಹಳಗನ್ನಡ ನಡುಗನ್ನಡ	ಹೊಸಗನ್ನಡ
ದ್ವಿತಿಯಾ –	ಆನ್,	ಅನ್, ಅನು,	ಅನ್ನು,
ತ್ರುತಿಯಾ –	ಇಮ್,	ಇಂ, ಇಂದಂ, ಇಂದೆ, ಇಂದ,	ಇಂದ,
ಚತುರ್ತಿ–	ಕೆ, ಗೆ,	ಗೆ, ಕೆ ಗೆ, ಕೆ,	ಗೆ, ಕೆ, ಕ್ಕೆ,
ಸಪ್ತಮಿ–	ಉಳ್,	ಒಳ್, ಓಲ್, ಒಳು, ಅಲ್ಲಿ, ಅಲಿ	(ಒಳು) ಅಲ್ಲಿ,

ಪದ ಮತ್ತು ಪ್ರತ್ಯಯಗಳೊಂದಿಗೆ ಬಳಕೆಯಾಗುವ ಒಂದು ವಾಕ್ಯ ಅತವಾ ಒಂದು ವಾಕ್ಯದಲ್ಲಿಯ ಪದಗಳ ಜೋಡಣೆಯ ಕ್ರಮಾನುಸರಣೆಯಲ್ಲಿ ಇವೆಲ್ಲವೂ ಬಾಶೆಯೊಂದರ ಒಟ್ಟು ತಿರುಳಿನ ಇರುವಿಕೆಯನ್ನು ಬಿಂಬಿಸಬಲ್ಲುವಾಗಿವೆ. ಇದಕ್ಕೆ ಇಂಗ್ಲೀಶ ಮತ್ತು ಕನ್ನಡದ ವಾಕ್ಯ ರಚನಾ ವಿನ್ಯಾಸಗಳನ್ನು ಇದೀಗ ಉದಾಹರಣೆಯಾಗಿ ಗಮನಿಸೋಣ.

".........John saw Jim' ಇದನ್ನು 'Jim saw John' ಎಂದು ವ್ಯತ್ಯಾಸ ಮಾಡಿದರೆ ಅರ್ತವೇ ವ್ಯತ್ಯಾಸವಾಗುತ್ತದೆ. ಆದರೆ ಕನ್ನಡದಲ್ಲಿ 'ರಾಮನು ಭೀಮನನ್ನು ಕಂಡನು' ಎಂದರೂ 'ಭೀಮನನ್ನು ರಾಮನು ಕಂಡನು' ಎಂದರೂ ಒಂದೇ ಕನ್ನಡದ ಪದಗಳಿಗೆ ಪ್ರತ್ಯಯಗಳಿರುವುದರಿಂದ ಅವುಗಳ ಅರ್ತ ಖಚಿತ ಮತ್ತು ನಿರ್ದಿಷ್ಟ ಆದ್ದರಿಂದ ಕನ್ನಡದಲ್ಲಿ ಪದಾನುಕ್ರಮಣಿಕೆಯು ಅಸ್ಟು ಪ್ರದಾನವಲ್ಲವೆಂದು ಹೇಳಬಹುದು."[7] ಈ ದೆಸೆಯಿಂದ ನೋಡಿದರೆ 'ವಿಬಕ್ತಿಪಲ್ಲಟ' ಎನ್ನುವ ವ್ಯಾಕರಣ ಪ್ರಕ್ರಿಯೆ ಕನ್ನಡಕ್ಕೆ ಸಹಜವಾದುದಲ್ಲ.

ಕುದ್ದು (>ಖುದ್ದು=ಸ್ವಂತ) ಕಾಣುವ, ಇಸ್ಟೆಲ್ಲ ಎಡವಟ್ಟುಗಳಿಗೆ ಕಾರಣವಾಗುವ ಸಂಸ್ಕ್ರುತದ ಚೌಕಟ್ಟಿಗೆ ಬೆನ್ನುಹತ್ತದೆ ನಮ್ಮವರೆ ಈಗಾಗಲೇ ತೋರಿದ, ಇನ್ನೂ ತೋರಿಸುತ್ತಿರುವ, ದಾರಿಯತ್ತ ಮುಕ ಮಾಡಿ ಹೆಜ್ಜೆ ಇಡುತ್ತ ಸಾಗುವುದು, ಯಾವತ್ತು ಆರೋಗ್ಯದ ಲಕ್ಶಣ ಅಲ್ಲವೆ? ಹಾಗಾದರೆ ಇತ್ತ ಚಿತ್ತಗೊಟ್ಟು ಮುನ್ನಡೆಯೋಣ.

೪.೧. ಸಂಸ್ಕೃತ ಪದಗಳು ಮತ್ತು ಮಹಾಪ್ರಾಣಾಕ್ಕರ[೫]

ಪ್ರತಿಯೊಂದು ಬಾಶೆಗೂ ತನ್ನದೇ ಆದ ಉಚ್ಚಾರಣೆಯ ಉಲಿ ವ್ಯವಸ್ತೆಯುಳ್ಳ ಇರುವಿಕೆ, ಇದ್ದೆ ಇರುತ್ತದೆ. ಹಾಗೆ ನೋಡಿದರೆ ದ್ರಾವಿಡ ಬಾಶಾ ಗುಂಪಿನಲ್ಲಿ ಪ್ರಮುಕ ಎನಿಸಿದ ಕನ್ನಡದಲ್ಲಿ ಸಹಜವಾಗಿ ಉಚ್ಚಾರಣೆಯಲ್ಲಿ ಅಲ್ಪಪ್ರಾಣ ಸೆಳೆತವುಳ್ಳ ಅಕ್ಶರ ಜೋಡಣೆಯ ಪದಗಳೆ ಕಂಡು ಬರುತ್ತವೆ. ಬಾಶೆ ಎನ್ನುವುದು ತಮ್ಮ ಜೀವನದ ಎಲ್ಲ ಚಟುವಟಿಕೆಗಳಲ್ಲೂ ಬಳಸುವಂತಹ ಎಲ್ಲರ ಆಸ್ತಿ. ಇಂತಹ ಸದಾ ಬಳಕೆಯ ಬಾಶೆಯನ್ನು ನಮ್ಮರಿವಿನ ಅನುಕೂಲಕ್ಕಾಗಿ ಶಿಷ್ಟ ಮತ್ತು ಆಡುನುಡಿ ಎಂದು ವಿಬಾಗಿಸುವುದು ಒಂದು ರೂಡಿ ಇದೆ. ಹಾಗೆಯೆ ಶಿಸ್ಟಬಾಶೆ ಬಳಸುವವರನ್ನು ನಗರವಾಸಿಗಳೆಂದೂ ಆಡು ಬಾಶೆಯ ಒಡನಾಟ ಉಳ್ಳವರನ್ನು ಹಳ್ಳಿಗರೆಂದೂ ಕರೆಯುವುದೊಂದು (ಅತ್ಯಂತ ನಿಕರ ಅಲ್ಲದೆ ಹೋದರೂ) ವಾಡಿಕೆಯಿಂದ ಬೆಳೆದು ಬಂದಿದೆ. ಹಾಗೆ ನೋಡಿದರೆ ಪುಟಿದೇಳುವ ಜೀವಂತಿಕೆಯೊಂದಿಗೆ ಬೆಳೆದು ಬಂದಿರುವ ಬಾಶೆ ಕನ್ನಡ. ತನ್ನೆಲ್ಲ ತಾಜಾತನದೊಂದಿಗೆ ಇವತ್ತಿಗೂ ಬಳಕೆ ಇರುವುದು. ನಮ್ಮ ಗ್ರಾಮೀಣ ವಲಯದಲ್ಲೆ ಇರುವ ನಿಜವಾದ ವಾರಸುದಾರರು ಅವರೆ.

ಇಂದಿನ ಬರಹವನ್ನುಳ್ಳ ಬಳಕೆಯ ಕನ್ನಡವು ಮೇಲ್ವರ್ಗದವರಿಂದ ನಿರ್ಮಾಣಗೊಂಡುದು. ಅವರಲ್ಲೇ ಬಳಕೆಯಾಗುವ, ಅವರಲ್ಲಷ್ಟೆ ಉಳಿದು ಬಂದಿರುವ, ಸ್ವಲ್ಪ ಮಟ್ಟಿಗೆ ಎಲ್ಲರಿಗೂ ಎಟುಕಲಾಗದ ಬಾಶೆ ಎನಿಸಿದೆ. ಹೀಗಿರುವಾಗ ನಮ್ಮ ಹಳ್ಳಿ ವಲಯದಲ್ಲಿ ಮತ್ತೊಂದು ವಿಪರೀತ ಅವಸ್ತೆ ಇದೆ. ಇಲ್ಲಿ ಬಹು ಜನತೆ ಇನ್ನೂ ಶಾಲೆಯ ಮೆಟ್ಟಿಲನ್ನು ಹತ್ತದವರೆ ಇದ್ದಾರೆ. ಇದರಿಂದ ಹಳ್ಳಿ ವಲಯದ ಶ್ರೀಸಾಮಾನ್ಯನನ್ನು ತಲುಪುವ ಹಾಗೆ ಕನ್ನಡ ಬಾಶೆಯನ್ನು ಸರಳಗೊಳಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ದಿಟ್ಟ ಹೆಜ್ಜೆ ಇಡಬೇಕು. ಅವಶ್ಯಕತೆಯೆ ಇಲ್ಲದ ತತ್ಸಮ ರೂಪದ ಸಂಸ್ಕೃತ ಪದಗಳಿಗೆ ತುರ್ತು ಕಡಿವಾಣ ಹಾಕಲೇಬೇಕಿದೆ. ಯತಾ ರೀತಿಯ ಸಕ್ಕದ ಪದಗಳಿಗೆ ಬದಲಾಗಿ ನಮ್ಮದೇ ಆದ ಉಚ್ಚಾರದ ಉಲಿ ವ್ಯವಸ್ತೆಗೆ ಹೊಂದಿಕೊಂಡ, ಬದಲಾದ (ತದ್ಬವ) ರೂಪಗಳನ್ನೆ ಬಳಸುವುದು, ಹಿತವಾದುದು. ಇದಕ್ಕೆ ಒಂದು ಅಯ್ತಿಹಾಸಿಕ ಪರಂಪರೆ ಇರುವುದು ನಿಚ್ಚಳವಾಗಿದೆ. ಇದನ್ನೆಲ್ಲ ಒಳಹೊಕ್ಕು ಗಮನಿಸಿದ ಕೇಶಿರಾಜ ಆವಾಗಲೆ ಒಂದು ತೀರ್ಮಾನ ತೆಗೆದುಕೊಂಡು ಮುನ್ನಡೆದಿರುವುದು ಆಶ್ಚರ್ಯವೆನಿಸಿದರೂ ಸಮಾದಾನದ ನಿಟ್ಟುಸಿರು ಬಿಡುವ ವಾಸ್ತವ ಸತ್ಯ ಸಂಗತಿ. ಆತನೆ ಒಂದು ಕಡೆ ಮಹಾಪ್ರಾಣಗಳು ಬಳಕೆ ಇದೆ (ಸೂ.೨೫)– ಎಂದು ಹೇಳಿರುವನಾದರೂ ಮತ್ತೊಂದೆಡೆಯಲ್ಲಿ ಕನ್ನಡದ ಉಲಿ ವ್ಯವಸ್ತೆಯನ್ನು ನೋಡಿ ".....ಲೋಕರೂಢಿ ಕಿಡದವೊಲ್..... ಲಕ್ಷಿಪುದು ನುಡಿಗಳೊಳ್" (ಸೂ. ೨೬೬) ಎಂದಿರುವುದು.

ಗಮನೀಯ ಅಂಶ ಎಂದರೆ, ಅದೇ ರೀತಿ ಇದೆ ಸೂತ್ರಕ್ಕೆ ವಿಶ್ಲೇಶಣೆಯಿಂದ ಕೂಡಿದ ಎಲ್. ಬಸವರಾಜು ಅವರ ವಿವರಣೆಯ ಮಾತುಗಳು ಮತ್ತೂ ವಿಶೇಶ ಗಮನ ಸೆಳೆಯುತ್ತವೆ.

....ಕೇಶಿರಾಜನು ಅಪಭ್ರಂಶ ರೂಪಗಳನ್ನು ಪಟ್ಟಿ ಮಾಡುವಾಗ ಅವುಗಳ ಬಗ್ಗೆ ಅವನಿಗಿದ್ದ ಗೌರವವನ್ನೂ ಹಾಗೆ ಉಚ್ಚರಿಸುವ ಹಳ್ಳಿಯ ಕನ್ನಡ ಜನರ ಬಗ್ಗೆ ಅವನಿಗಿದ್ದ ಆಸಕ್ತಿಯನ್ನೂ ನಾವು ಕಾಣಬಹುದು. ಆದರೆ ಕಾಲ ಕಳೆದಂತೆಲ್ಲ, ಸಂಸ್ಕೃತಕ್ಕೆ ಸಲ್ಲಬೇಕಾದ ಪ್ರಾಶಸ್ತ್ಯ ಒಂದು ಮಿತಿಯನ್ನು ಮೀರಿದಂತೆಲ್ಲ ಮತ್ತು ಕನ್ನಡವು ಹುಟ್ಟಿದ್ದು ಸಂಸ್ಕೃತ ಭಾಷೆಯಿಂದಲೇ ಎಂಬ ಭ್ರಾಂತಿ ಬೆಳೆದಂತೆಲ್ಲ ಮತ್ತು ಸಂಸ್ಕೃತವನ್ನು ಯಥಾವತ್ತಾಗಿ ಉಚ್ಚರಿಸುವುದೇ ವಿದ್ಯಾವಂತಿಕೆಯ ಹೆಗ್ಗುರುತೆಂಬ ವಿದ್ಯಾಭಿಮಾನ ಕನ್ನಡ ವಿದ್ವಾಂಸರಲ್ಲಿ ದಟ್ಟವಾದಂತೆಲ್ಲ ಅಚ್ಚಗನ್ನಡವೆಂಬ ಅಪಭ್ರಂಶ ರೂಪಗಳೆಲ್ಲ ಸಂಸ್ಕೃತ ರೂಪಗಳಾಗಿ ಪರಿವರ್ತಿಸಲ್ಪಟ್ಟವು. ಈ ಮಾತು ಆ ಆಡುಮಾತಿಗೆ ಅಷ್ಟಾಗಿ ಅನ್ವಯಿಸದಿದ್ದರೂ ಅಚ್ಚಾದ ಹಳೆಯ ಕನ್ನಡ ಗ್ರಂಥಗಳ ಭಾಷೆಗೆ ಸಂಪೂರ್ಣವಾಗಿ ಅನ್ವಯಿಸುವುದು. ಅಂದರೆ ಹಳಗನ್ನಡ ಗ್ರಂಥಗಳನ್ನು ಸು-ಸಂಸ್ಕೃತ ವಿದ್ವಾಂಸರು ಪರಿಷ್ಕರಿಸುವ ಕಾರ್ಯ ನಡೆದ ೧೯-೨೦ನೇ ಶತಮಾನದಲ್ಲಂತೂ ಹಸ್ತಪ್ರತಿಗಳಲ್ಲಿ ರಾರಾಜಿಸುತ್ತಿದ್ದ ಈ ಅಪಭ್ರಂಶ (ಕನ್ನಡ) ಪದಗಳನ್ನೆಲ್ಲ ತಿದ್ದಿ-ತಿದ್ದಿ ಸಂಸ್ಕೃತವಾಗಿ ಪರಿವರ್ತಿಸಿ ಅಚ್ಚುಹಾಕಿಸಿರುವುದು. ಇದು ವ್ಯಾಕರಣ ವಿರುದ್ಧವಾದ ನಡೆವಳಿ. ಈ ಬಗ್ಗೆ ಇದನ್ನು ಒಪ್ಪಿಕೊಳ್ಳಲು ಹಲವರು ವಿದ್ವಾಂಸರು ಇನ್ನೂ ಹಿಂಜರಿಯುತ್ತಿದ್ದರೆ ಆಶ್ಚರ್ಯವಿಲ್ಲ. ಇಷ್ಟು ಸಂಸ್ಕೃತೀಕರಣ ವಾತಾವರಣದಲ್ಲಿ ನಾವಿದ್ದೇವೆ. ಈ ಸಂಸ್ಕೃತೀಕೃತ ಕನ್ನಡಕ್ಕೂ ಕನ್ನಡ ನಾಡಿನ ಜನ ಸಾಮಾನ್ಯರ ಕನ್ನಡಕ್ಕೂ ಇರುವ ಸಂಬಂಧ ತೀರ ಔಪಚಾರಿಕವಾದುದೇ ಹೊರತು ವಾಸ್ತವವಾದುದಲ್ಲ. ಸಂಸ್ಕೃತದಿಂದಲೇ ಹುಟ್ಟಿದ ಮರಾಠಿ, ಬಂಗಾಳಿ, ಒರಿಯಾ ಮುಂತಾದ ಭಾಷೆಗಳಲ್ಲಿ ಸಂಸ್ಕೃತದಿಂದ ಅಪಭ್ರಂಶವಾಗಿ ಬಂದ ಪದಗಳನ್ನು ಮತ್ತೆ ಸಂಸ್ಕೃತಕ್ಕೆ ಮರಳಿಸದೆ ಹಾಗೆ ಉಳಿದುಕೊಂಡು ಬಂದಿರುವುದನ್ನಿಲ್ಲಿ ಕನ್ನಡಿಗರು ಪರಿಭಾವಿಸಬೇಕು.

ಒಂದು ಭಾಷೆಯು ಅನ್ಯಭಾಷೆಯಿಂದ ಎರವಲು ಪಡೆದ ಪದಗಳನ್ನೆಲ್ಲ ಆ ಅನ್ಯಭಾಷೆಯ ರೂಪದಲ್ಲೆ ಉಚ್ಚರಿಸಬೇಕು, ಬರೆಯಬೇಕು ಎಂಬ ಪ್ರವೃತ್ತಿ ಕೇವಲ ಪಂಡಿತ ಶಾಠ್ಯವಷ್ಟೇ ಅಲ್ಲದೆ ಲೋಕರೂಢಿಗೆ ವಿರುದ್ಧವೂ ಆಗಿದೆ. ಆದ್ದರಿಂದ ಈ ಪ್ರವೃತ್ತಿ ವ್ಯಾಕರಣ ವಿರೋಧಿ. ಈ ಹಿನ್ನೆಲೆಯಲ್ಲಿ ಕೇಶಿರಾಜನ ಅಪಭ್ರಂಶ ಪ್ರಕರಣ ಎಂದಿಗಿಂತಲೂ ಹೆಚ್ಚು ಮಹತ್ವವನ್ನು ಪಡೆದುಕೊಳ್ಳುವುದು.....”[೬]

ಒಟ್ಟಾರೆ ಹೇಳುವುದಾದರೆ 'ಪಾವಿತ್ರ್ಯ' ಎಂಬ ಕಲ್ಪನೆಯೊಂದಿಗೆ ಚತುರ್ವರ್ಣ ಶ್ರೇಷ್ಠತೆ, ಮಡಿ, ಮೈಲಿಗೆ, ದೇವತ್ವ, ದೇವಮಾನವ, ದಮನಕಾರಿ ತಂತ್ರ, ಮೇಲು-ಕೀಳು ಎನ್ನುವ ಇವೆಲ್ಲ ಸಂಸ್ಕೃತ ಪಂಡಿತರ ಅತವಾ ಸಂಸ್ಕೃತ ವ್ಯಾಮೋಹಿಗಳ ಸುತ್ತ ಗಿರಕಿ ಹೊಡೆಯುವ ಗ್ರಹಗತಿಯ ಪದಗಳಾಗಿವೆ. ಇಂತಹ ಗ್ರಹಗತಿಯ ಮಡಿ-ಮೈಲಿಗೆಯಿಂದ ಹೊರಬರಬೇಕಿದೆ. ಇಲ್ಲದಿರೆ ನಮ್ಮ ಬಾಶೆಯ ನೇಣಿಗೆ ಗೊತ್ತಿದ್ದೂ ನಾವೇ ಕಾರಣರಾಗಬಾರದು ಅಲ್ಲವೆ!

ಈ ಅರಿವು, ಎಚ್ಚರ ನಮ್ಮನ್ನು ನಿಜಕ್ಕೂ ಮುನ್ನಡೆಸಬಲ್ಲುದು. ನಮ್ಮಲ್ಲಿಯ ಆಡುಬಾಶೆಯ ಒಳಾಂತರಂಗವನ್ನು ಒಮ್ಮೆ ಒಳಹೊಕ್ಕು ತಡಕಾಡಿದರೆ ಸಾಕು;

ಸಮಸ್ತಪದಗಳೊಂದಿಗೆ ಇನ್ನು ಹಲವು ಒಳರಚನೆಯುಳ್ಳ ಪದಗಳು ಕಣ್ಣಿಗೆ ರಾಚುವಂತೆ ನೇರವಾಗಿ ಕಾಣಿಸುತ್ತವೆ. ಅವುಗಳು ಈ ರೀತಿಯಲ್ಲಿ ಇವೆ. ಕೂಡುಪದಗಳು ಜೋಡುನುಡಿಗಳು, ಮರದನಿ ಪದಗಳು, ನುಡಿಗಟ್ಟುಗಳು, ಇತ್ಯಾದಿ. ಸಕ್ಕದದ ಮುಸುಕಿನಲ್ಲೆ ತೆವಳುತ್ತ ಹೋಗುವುದರಿಂದ (ಇವುಗಳ ಬಳಕೆ ಇದ್ದರೂ) ಇವುಗಳನ್ನು ಕಂಡೂ ಕಾಣದಂತೆ ಸಾಗುವ ಯಾನ ನಮ್ಮದಾಗಿದೆ. ಇದರ ಒಟ್ಟು ಪರಿಣಾಮವೆಂದರೆ, ನಮ್ಮ ಬಾಶೆಯ ಅಧ್ಯಯನದ ಸಾಗುವಿಕೆ ಎಡವುತ್ತ ಎಡವುತ್ತ ಕೊನೆಗೊಮ್ಮೆ ಮುಗ್ಗರಿಸಿ (ಬಕ್ಕ ಬೋರಲಾಗಿ<) 'ಬಕಬಾರ್ಲೆ' ಬೀಳುವಂತಾಗಿದೆ. ಅನಾಮತ್ತಾಗಿ ಬೋರಲಾಗಿ (=ಬುಡಮೇಲಾಗಿ) ಬಿದ್ದದ್ದರಿಂದ ಮುಕವೆಲ್ಲ ರಕುತಮಯ! ಇದರಿಂದ ಗಾಯಗೊಂಡದ್ದೂ ಆಯ್ತು. ಹದಗೆಟ್ಟು ಹಾದಿ ತಪ್ಪಿದ್ದೂ ಆಯ್ತು. ಹಾಗಾಗಿದೆ ನಮ್ಮ ಬಾಶಾ ವ್ಯಾಕರಣ ಅದ್ಯಯನದ ಸ್ತಿತಿ–ಗತಿ.

ಇರಲಿ ಇನ್ನಾದರೂ ನಾವು ನಮ್ಮದೇ ಕಾಲ್ದಾರಿಯಲ್ಲಿ ಹೆಜ್ಜೆ ನಡಿಗೆಯೊಂದಿಗೆ ಮುನ್ನಡೆಯಬಹುದಲ್ಲವೆ!

ಮೇಲೆ ತೋರಿಸಿದ ಒಳರಚನೆ ಇರುವ ಕನ್ನಡ ಪದಗಳನ್ನು ಅವುಗಳು ತೋರ್ಪಡಿಸುವ ರಚನೆ ಮತ್ತು ಅಯ್ತಿಹಾಸಿಕ ಪರಂಪರೆಯ ದ್ರುಶ್ಟಿಯಿಂದ ಮೂರು ಗುಂಪುಗಳಾಗಿ ಗುರುತಿಸಿಕೊಳ್ಳಬಹುದಾಗಿದೆ.

೧. ಸಮಸ್ತಪದಗಳು/ಕೂಡು ಪದಗಳು[೭] : ಎರಡು ಅಂಗ ಪದಗಳಿದ್ದರೂ ಒಂದು ಕಟ್ಟಿಗೆ ಸೇರುವ ಏಕ ಪದಗಳು

೨. ಜೋಡುನುಡಿಗಳು[೮]/ಮರುದನಿ ಪದಗಳು[೯] : ಕಾಣುವ ಹಾಗೆ ಬಿಡಿ ಬಿಡಿಯಾದ ಎರಡು ಅಂಗಪದಗಳುಳ್ಳ ವಿಶಿಸ್ಟ ರಚನೆಗಳು.

೩. ಜೋಡುನುಡಿಗಳು/ನುಡಿಗುಟ್ಟುಗಳು : ಒಂದು ಅಯ್ತಿಹಾಸಿಕ ಇಲ್ಲವೆ ಸಾಂಸ್ಕ್ರುತಿಕ ಪರಂಪರೆಯಿಂದ ರಚನೆಗೊಂಡು ಬಂದ ಪದಗಳು.

೪.೩. ಕನ್ನಡದ ಪ್ರತ್ಯಯಗಳು :

ವ್ಯಾಕರಣದ ಮತ್ತೊಂದು ಪ್ರಮುಕ ಅಂಶವೆನಿಸಿದ ಪದ, ಪ್ರತ್ಯಯ ಮತ್ತು ವಾಕ್ಯ ಇವುಗಳ ನಡುವಿನ ಸಂಬಂದವನ್ನು ಸ್ತೂಲವಾಗಿ ಅರಿಯುವುದೆ ಆಗಿದೆ. ಈ ಪ್ರತ್ಯಯಗಳು ಮೊದಲು ಪ್ರತ್ಯೇಕ ತಿರುಳುಳ್ಳ ಪದಗಳಾಗಿದ್ದು ಕ್ರಮೇಣ ಅವುಗಳ ಸವಕಳಿರೂಪವೇ ಪ್ರತ್ಯಯಗಳಾದುವೆಂದು ತಿಳಿಯಲಾಗುತ್ತದೆ.

ಮೊದಲು ಯಾವ ರೂಪಕ್ಕೆ ಯಾವ ಪ್ರತ್ಯಯ ಬರುತ್ತದೆ? ಒಂದರ ನಂತರ ಮತ್ತೊಂದು ಪ್ರತ್ಯಯ ಬರುವಾಗ ಅವುಗಳ ನಿಶ್ಚಿತ ಕ್ರಮಗತಿ ಎಂತಹುದು? ಈ ದ್ರುಶ್ಟಿಯಿಂದ ಕನ್ನಡ ಸಾಂಪ್ರದಾಯಿಕ ವ್ಯಾಕರಣದ ಮೊರೆ ಹೋದರೆ, ಮೊದ ಮೊದಲು ಗೊಂದಲದ ಗೂಡಾಗಿ ಪರಿಣಮಿಸಿದರೆ ಆಶ್ಚರ್ಯವಿಲ್ಲ.

ನಿಗದಿಪಡಿಸಿದಂತೆ ಈ ಪ್ರತ್ಯಯಗಳು ನಿರ್ದಿಷ್ಟಪಡಿಸಿದ ಪದಗಳೊಂದಿಗೆ ಬರುವುದು, ಇಲ್ಲಿನ ವಿಶಿಷ್ಟ ಸಂಗತಿ. ಈ ನಾಮರೂಪಗಳಿಗೆ ಹತ್ತುವ ಪ್ರತ್ಯಯಗಳಂತೆ ಕ್ರಿಯಾರೂಪಗಳಿಗೆ ಹತ್ತುವ ಪ್ರತ್ಯಯಗಳೆ ಬೇರೆ ಎಂದು ತಿಳಿಯಬೇಕಾಗುತ್ತದೆ. ಇದನ್ನೆ ಇನ್ನಷ್ಟು ನಮ್ಮ ಅರಿವಿಗೆ ಎಟುಕುವ ಹಾಗೆ ಸರಳಗೊಳಿಸಿಕೊಂಡು ಸಾಗುವ ಮತ್ತೊಂದು ಹಾದಿಯೂ ಇದೆ. ಹೊಸಪದ ಸ್ರುಶ್ಟಿಯಲ್ಲಿ ಬಳಕೆ ಆಗುವ ಪ್ರತ್ಯಯಗಳನ್ನು ಪದ ಪ್ರತ್ಯಯಗಳೆಂದು ಕರೆಯುತ್ತೇವೆ. ಅದೇ ರೀತಿ ವಾಕ್ಯದ ಸಂದರ್ಬದಲ್ಲಿ ಬಳಕೆ ಇರುವ (ನಾಮಪದ. ಪ್ರ + ಕ್ರಿಯಾಪದ. ಪ್ರ.) ಒಟ್ಟಾರೆ ಪ್ರತ್ಯಯಗಳನ್ನು ಪದರೂಪ ಪ್ರತ್ಯಯವೆಂದು ಗುರುತಿಸಿ ಕೊಳ್ಳುತ್ತೇವೆ.

ಹೀಗೆ ವೈಜ್ಞಾನಿಕವಾಗಿ ಪದಪ್ರತ್ಯಯ ಮತ್ತು ಪದರೂಪ ಪ್ರತ್ಯಯಗಳೆಂದು ಎರಡು ಬಾಗವಾಗಿ ವಿಶ್ಲೇಶಿಸಬೇಕಿದೆ.

ಸಾಂಪ್ರದಾಯಿಕ ವ್ಯಾಕರಣದ ನೆಲೆ

೧. ನಾಮರೂಪ ಅ) { ಹೊಸ ನಾಮಪದ ರಚನೆ-ತದ್ದಿತ ಪ್ರ. - ಪದಪ್ರತ್ಯಯ
ವಾಕ್ಯದ ನೆಲೆ { ಬಹುವಚನ ಪ್ರ. / ವಿಬಕ್ತಿ ಪ್ರ.

ವಾಕ್ಯ ಪ್ರಯೋಗದ ನೆಲೆ (ಪದರೂಪ ಪ್ರತ್ಯಯ)

ಕ್ರಿಯಾರೂಪ ಆ) { ಕಾಲಸೂಚಕ ಪ್ರ / ಆಕ್ಯಾತ ಪ್ರ.

-ಒಟ್ಟು ಕನ್ನಡದ ಪ್ರಮುಕ ಪ್ರತ್ಯಯಗಳು.

೨. ಅ. ಒಟ್ಟಿಗೆ ಎರಡು ಪ್ರ.ಗಳು ಬಂದಾಗ-ನಾಮರೂಪ: ಬಹುವಚನ ಪ್ರ+ವಿಬಕ್ತಿ ಪ್ರ.
ಒಟ್ಟಿಗೆ ಎರಡು ಪ್ರ.ಗಳು ಬಂದಾಗ-ಕ್ರಿಯಾರೂಪ : ಕಾಲವಾಚಕ ಪ್ರ.+ಆಕ್ಯಾತ ಪ್ರ.

ಆ. ಒಟ್ಟಿಗೆ ಎರಡು ಪ್ರ.ಗಳು ಬಂದಾಗ-ಕ್ರಿಯಾರೂಪ : ನಿಶೇದ ಸೂಚಕ ಪ್ರ.+ಆಕ್ಯಾತ ಪ್ರ.

ಅ) ಕಾಲವಾ. ಪ್ರ. { ಬೂತಕಾಲ ಪ್ರ. / ವರ್ತಮಾನ ಕಾ.ಪ್ರ. < ಸದ್ಯದ ವರ್ತಮಾನ / ಬವಿಶ್ಯತ್ತಿನ ವರ್ತಮಾನ

೩.
ಆ) ಆಕ್ಯಾತ ಪ್ರ.[೧೦] { ಉತ್ತಮ ಪುರುಶ - ಏಕವಚನ ಪ್ರ + ಬಹುವ. ಪ್ರ.
ಮದ್ಯಮ ಪುರುಶ - ಏಕವಚನ ಪ್ರ + ಬಹುವ. ಪ್ರ.
ಪ್ರತಮ ಪುರುಶ - ಏಕವಚನ ಪ್ರ + ಬಹುವ. ಪ್ರ.

ಆಧುನಿಕ ಬಾಶಾ ಅಧ್ಯಯನದ ನೆಲೆ

ಪದ ಪ್ರ.
- ನಾಮರೂಪ+ ಪ್ರ.–ನಾಮಪದ ರಚನೆ
- ಕ್ರಿಯಾರೂಪ+ಪ್ರ.–ನಾಮಪದ ರಚನೆ

ಕನ್ನಡದ ಒಟ್ಟು ಪ್ರ.ಗಳು

ಪದರೂಪ ಪ್ರ.
- ನಾಮಪದ
  - ಬ.ವ.ಪ್ರ.
  - ವಿ.ಪ್ರ.
- ಕ್ರಿಯಾಪದ
  - ಕಾ.ವಾ.ಪ್ರ.
  - ಆ.ಪ್ರ.

೪.೪. ಕರ್ನಾಟಕ ಅರಸರ ಆಳಿಕೆಯ ಅಯ್ತಿಹಾಸಿಕ ಕಾಲಗಟ್ಟದಲ್ಲಿ ಸಾಕಸ್ಟು ಏರು–ಪೇರುಗಳನ್ನು ಕಂಡಾಗಿದೆ. ಇದರೊಂದಿಗೆ ಕನ್ನಡ ಬಾಶೆಯ ಮೇಲೆ ಸಂಸ್ಕ್ರತದ ಬಿಗಿ ಹಿಡಿತವಿದ್ದರೂ–ಹಲವು ಏಳು–ಬೀಳುಗಳನ್ನು ಅನುಬವಿಸುತ್ತ ಎದೆ ಸೆಟೆಸಿ ನಿಂತುದು ಸಂತಸ ತರುವ ಸಂಗತಿ. ಇದೀಗ ನಾವು ಜನಪ್ರಬು ಆಡಳಿತದ ೨೦ನೇ ಶತಮಾನದಿಂದ ೨೧ನೇ ಶತಮಾನದಲ್ಲಿ ಹೊಸ ಬರವಸೆ ಆಶಾಕಿರಣದೊಂದಿಗೆ ಕಾಲಿರಿಸುತ್ತಿದ್ದೇವೆ. ೧೯ ಮತ್ತು ೨೦ರ ಆಂಗ್ಲರ ಆಡಳಿತದಲ್ಲಿ ಆವಾಗಲೇ ಕನ್ನಡ ಬಾಶೆ ಬೆಳವಣಿಗೆ ದ್ರುಶ್ಟಿಯಿಂದ ಹೇಳುವುದಾದರೆ ನಾವು ಸಿಹಿಯೊಂದಿಗೆ ಕಹಿಯನ್ನು ಅನುಬವಿಸಿಕೊಂಡು ಬಂದಾಗಿದೆ. ಈ ೨೧ನೇ ಶತಮಾನದಲ್ಲಿ ನಾವು ಸವಾಲೆನಿಸುವ ಹೊಸ ಸಾಂಸ್ಕ್ರುತಿಕ. ದಾರ್ಮಿಕ ಒಕ್ಕೂಟ ವ್ಯವಸ್ತೆಯಲ್ಲಿ ಬದುಕು ಸಾಗಿಸುತ್ತಿದ್ದೇವೆ. ಆಗ ಅಂದರೆ ಹಿಂದೆ ಸಂಸ್ಕ್ರುತವೇ ಗತಿ–ಮತಿ ಎನ್ನುವ ಬ್ರಮೆಯಲ್ಲಿ ಉಸಿರಾಡಿಯೂ ಸರಾಗವಾಗಿ ಉಸಿರಾಡಲಾಗದ ಬದುಕು ನಮ್ಮದಾಗಿತ್ತು. ಆದರೆ ಇದೀಗ ಎಲ್ಲವನ್ನು ನೋಡುವ, ಕಂಡರಿಸುವ ದ್ರುಶ್ಟಿಕೋನ ಬಹಳಶ್ಟು ಪಲ್ಲಟಗೊಳಿಸಿದೆ. ಬಾಶೆಗಳನ್ನು ತೂಗಿ ಅಳೆಯುವ ಮಾನದಂಡದಲ್ಲಾಗಲಿ, ಶಿಸ್ಟ ಇಲ್ಲವೆ ಗ್ರಾಮೀಣ ಬಾಶೆಯನ್ನು ನೋಡುವ ದ್ರುಶ್ಟಿಯಲ್ಲಾಗಲಿ ಸಾಕಶ್ಟು ಬದಲಾವಣೆ ಆಗಿದೆ. ಹಾಗೆ ನೋಡಿದರೆ ಪ್ರಾಚೀನ ಕನ್ನಡ ಬಾಶೆ ಬೇರೆ ಬೇರೆ ಕಾಲಗಟ್ಟದಲ್ಲಿ ಅನ್ಯ ಬಾಶೆಗಳ ಸಂಪರ್ಕದ ಸುಳಿಯಲ್ಲಿ ಸಿಕ್ಕೂ ತನ್ನ ಜೀವಂತಿಕೆಯ ಉಳಿವನ್ನು ಉಳಿಸಿಕೊಂಡು ಬಂದಿದೆ. ಈ ದಿಶೆಯಲ್ಲಿ ಕನ್ನಡ ಐತಿಹಾಸಿಕ ನೆಲೆಯಿಂದ ಹಲವು ಬಗೆಯ ಹಿಡಿತ, ಹೊಡೆತಗಳನ್ನೆಲ್ಲ ಸಹಿಸಿಕೊಂಡೂ ತನ್ನ ಇರುವಿಕೆಯಲ್ಲಿ ಹಲವು ಅನ್ಯಬಾಶೆಗಳ ಪದಗಳನ್ನು ತನ್ನ ಒಡಲಾಳದಲ್ಲಿ ಸೇರಿಸಿಕೊಂಡು ಅರಗಿಸಿಕೊಂಡು ಬಂದುದಾಗಿದೆ. ಈ ಕಾಲಗಟ್ಟವನ್ನು ಹೀಗೆ ಗುರುತು ಮಾಡಿಕೊಳ್ಳಬಹುದಾಗಿದೆ.

* ಪ್ರಾಚೀನ ಕಾಲ — ಸಂಸ್ಕೃತ, ಪ್ರಾಕ್ರುತ

* ಮಧ್ಯಕಾಲ — ಮರಾಟಿ, ಉರ್ದು

ಮರಾಟಿ ಮತ್ತು ಉರ್ದುಗಳ ಮುಕೇನ ಅರಬ್ಬಿ ಮತ್ತು ಪಾರಸಿ ಪದಗಳ ಸೇರ್ಪಡೆ, ಈ ಮದ್ಯಂತರ ಅವದಿಯಲ್ಲಿ (ಸಾಕಸ್ಟು ತಲ್ಲಣಗಳ ನಡುವೆ) ಕ. ಮತ್ತು ಮ. ನಡುವಣ ಸಂಬಂದ ಮತ್ತಸ್ಟು ಗಟ್ಟಿಗೊಂಡಿತು.

* ಆದುನಿಕ ಕಾಲ — ಇಂಗ್ಲಿಸ ಮತ್ತು ಪೊರ್ರುಗೀಜ, ಹಿಂದಿ

೪.೫ ದೇಸಿ ಪದ ಬಂಡಾರದ ಹಗೆ[೧೧]

ಇನ್ನಸ್ಟು ನಾವು ಮುಂದೆ ಹೋಗಿ ಕನ್ನಡ ಪದ ಸಂಪತ್ತಿನ ಹುಡುಕಾಟ-ತಡಕಾಟದ ಕುರಿತು ಸ್ವಲ್ಪ ಯೋಚಿಸಬೇಕಿದೆ. ಈವರೆಗೆ ಕಣ್ಣೆತ್ತಿಯೂ ನೋಡದ ಒಂದು ಜಾಗೆ ಎಂದರೆ ಜನ ಬಳಕೆಯ ನುಡಿ ಸಂಪತ್ತು. ಈಗಾಗಲೆ ಈ ಕುರಿತು ಎಸ್. ಎಂ. ಕತ್ರೆಯವರು ಆಡಿದ ಮಾತುಗಳು ಮನನೀಯವಾಗಿದೆ. "ಶಿಷ್ಟಬಾಷೆಗಳ ಮೂಲ ಪದರದಂತಿರುವ ಒಳನುಡಿಗಳೇ ಶಿಷ್ಟ ಭಾಷೆಗಳಿಗೆ ಜೀವನಾಡಿಗಳು, ಶಿಷ್ಟ ಭಾಷೆಗಳು ಉಳಿಯಬೇಕಾದರೆ ಈ ಒಳನುಡಿಗಳಿಂದ ಚೈತನ್ಯ ಸರಬರಾಜಾಗಬೇಕು." ಅವರು ಹೇಳುವ ಹಾಗೆ ಬಾಶೆಯ ನಿಕ್ಷೇಪ ಅಡಗಿರುವುದು ಜನಬಳಕೆಯ ಆಡುಬಾಶೆಯಲ್ಲಿ ಎಂಬುದಾಗಿದೆ.

ಇಂತಹ ನಿಕ್ಷೇಪದ ಗಣಿ ಎನಿಸಿದ ನಮ್ಮೆಲ್ಲ ಒಳನುಡಿಗಳ (ಉಪಬಾಶೆ) ವ್ಯಾಪಕವಾದ ಸರ್ವೇಕ್ಷಣ ಕಾರ್ಯ, ಸಂಗ್ರಹಣೆ, ವರ್ಗೀಕರಣ, ತಾತ್ವಿಕ ಚಿಂತನೆ ಇತ್ಯಾದಿ ಕಾರ್ಯಗಳಿಗೆ ನಾವಿನ್ನು ಕೈ ಹಚ್ಚಿಯೇ ಇಲ್ಲ. ಇಂತಹ ಕಾರ್ಯವನ್ನು ಯುರೋಪಿನ ದೇಶಗಳು ತಮ್ಮ ತಮ್ಮ ಬಾಶೆ ಕುರಿತು ೧೭, ೧೮ನೇ ಶತಮಾನಗಳಲ್ಲೆ ಪೂರೈಸಿಕೊಂಡು ಬಾಶಾ ಸಮ್ರುದ್ದಿಗೆ ಟೊಂಕಕಟ್ಟಿ ನಿಂತರೆಂದು ತಿಳಿಯುತ್ತದೆ. ನಾವು ಇದನ್ನು ಈಗಲಾದರೂ ಕೈಗೂಡಿಸಿಕೊಂಡು ಮುನ್ನಡೆಯಲು ಸಾದ್ಯವಿದೆ.

ಈ ಕುರಿತು ಸುಮಾರು ಅಯ್ದು ವರುಷಗಳ ಹಿಂದೆ ನಾನೇ ಬರೆದ ಒಂದು ಲೇಕನವನ್ನು ಇಲ್ಲಿ ಉಲ್ಲೇಕಿಸುವುದು ಸೂಕ್ತ ಎಂದು ತೋರುತ್ತದೆ.

ಬಾದಾಮಿ ವಲಯದ ಆಡುನುಡಿಯ (ಒಳನುಡಿಯಲ್ಲಿ) ‘ಬಹಳ’ ತಿರುಳುಳ್ಳ ಪದಗಳೆಸ್ಟಿವೆ? ಎಂಬ ಕೇವಲ ಒಬ್ಬ ಕುತೂಹಲಿಯಾಗಿ ಸಂಗ್ರಹ ಸ್ವರೂಪದಲ್ಲಿ ದಾಕಲಿಸುತ್ತ ಹೋದೆ. ಅದು ಬೆಳೆದಂತಹ ಪರಿ ನೋಡಿ; ಮೊದ ಮೊದಲು ಹತ್ತಾಯಿತು. ಹದಿನೈದು, ಇಪ್ಪತ್ತು, ಮುವತ್ತು! ಕೊನೆಗೊಮ್ಮೆ ನಲ್ವತ್ತಕ್ಕೆ ಬಂದು ತಲುಪಿತು. ನಮ್ಮೊಳಗೆ ಅಡಕಗೊಂಡಿರುವ ಗುಪ್ತನಿದಿಯ ಲೆಕ್ಕಾಚಾರದಿಂದ ನಾನೆ ದಂಗಾಗಿ ಹೋದೆ. ಆಮೇಲೆ ನಾನೇ ‘ಬಾದಾಮಿ ಒಳನುಡಿಯಲ್ಲಿ ‘ಬಹಳ’ ತಿರುಳಿನ ಪರ್ಯಾಯ ಪದಗಳು’[೧೨] ಎಂಬ ಹೆಸರುಳ್ಳ ಬಾಶಿಕ ವಿಶ್ಲೇಶಣೆಯೊಂದಿಗೆ ಒಂದು ಪುಟ್ಟ ಲೇಕನವನ್ನೆ ತಯಾರುಗೊಳಿಸಿದೆ. ಇದರ ಪ್ರಸ್ತಾಪ ಯಾಕೆಂದರೆ ನಮ್ಮೊಳಗೆ ಹುದುಗಿದ ಪದ ಸಂಪತ್ತಿನ ಬಗ್ಗೆ ನಮಗೆ ಅಲ್ಪ-ಸ್ವಲ್ಪವಾದರೂ ಅರಿವು ಇಲ್ಲವಲ್ಲಾ-ಎನ್ನುವುದೆ ಆಗಿದೆ. ಹೌದು, ಹಲವು ಶತಮಾನಗಳಿಂದ ಹಲವು ದಿಕ್ಕುಗಳಿಂದ ಹಲವು ಶಕ್ತಿಗಳು ನಮ್ಮನ್ನು ತುಳಿದು ತುಳಿದು ಸವಾರಿ ಮಾಡುತ್ತಲೆ ಬರಲಾಗಿದೆ. ಇದು ದೈಹಿಕ ಹಲ್ಲೆ ಅಸ್ಟೆ ಅಲ್ಲ; ಐಹಿಕ ಸಿರಿ ಸಂಪತ್ತಿನ ಲೂಟಿ ಅಸ್ಟೆ ಅಲ್ಲ; ನಮ್ಮವರ (ಅಂದರೆ ನಮ್ಮದು ಎಂಬ ಎಲ್ಲ ವಿಶಯದ, ಎಲ್ಲ ಪರಿಕರಗಳ ಬಗ್ಗೆ) ಯೋಚಿಸುವ ಶಕ್ತಿಯನ್ನು ದಮನಗೊಳಿಸಿದ್ದು; ಇಂತಹ ಕೀಳರಿಮೆಯಿಂದ ‘ಹಿತ್ತಲ ಗಿಡ ಮದ್ದಲ್ಲ’ ಎಂಬ ಹಳಸಲು ನುಡಿಯನ್ನು ಇಂದಿಗೂ ಜಪಿಸುತ್ತಲೆ ಬರುತ್ತಲಿದ್ದೇವೆ. ಈ ರೀತಿ ಸಾಂಸ್ಕ್ರುತಿಕವಾಗಿ ದಮನಕಾರಿ ಹಲ್ಲೆಯೂ ನಡೆದಿದೆ. ಇದನ್ನೆಲ್ಲ ಕೊಡವಿಕೊಂಡು ಎದೆ ಸೆಟೆಸಿ ಎದ್ದು ನಿಂತು, ಈ ಎಲ್ಲ ಸಮಸ್ಯೆಗಳನ್ನು ಸಮರ್ತವಾಗಿ ಸವಾಲಾಗಿ ತೆಗೆದುಕೊಳ್ಳಬೇಕಿದೆ. ಆದ್ದರಿಂದ ಭಟ್ಟರು ಹೇಳಿದ ‘ಕನ್ನಡಕ್ಕೆ ಬೇಕು ಕನ್ನಡದ್ದೆ ವ್ಯಾಕರಣ’ ಎನ್ನುವ ಈ ಮಾತು ನನ್ನಲ್ಲಿ ಸದಾ ಕಾಲ ‘ಗುಂಯ್ ಗುಡುತ್ತಲೆ’ ಇರುತ್ತದೆ.

ಸುದೈವದಿಂದ ನಮ್ಮ ಬಾಶೆ ಇನ್ನೂ ಜೀವಂತವಾಗಿದೆ. ಇದಕ್ಕೊಂದು ಅಯ್ತಿಹಾಸಿಕ ನೆಲೆಯುಳ್ಳ ಸಮ್ರುದ್ದ ಪರಂಪರೆಯೂ ಇದೆ. ಇಂತಹ ಐತಿಹಾಸಿಕ ಐಸಿರಿಯುಳ್ಳ ಇವತ್ತಿನ ಆಡುನುಡಿ ಒಂದರ ಪದಸಾಗರದ ಒಂದು ಹನಿ ಇಲ್ಲಿದೆ.

– ‘ಬಹಳ’ ಪರ್ಯಾಯ ಗುಣಪದಗಳ ಸ್ವರೂಪ ವರ್ಗೀಕರಣ

[ನಾಮ ವಿಶೇಶಣ – ನಾ.ವಿ. ಕ್ರಿಯಾ ವಿಶೇಶಣ–ಕ್ರಿ.ವಿ.]

೧. ರಗಡ–ನಾ.ವಿ.+ಕ್ರಿ.ವಿ.

೨. ಕಂಡಾಪಟಿ–ನಾ.ವಿ.

೩. ಸಿಕ್ಕಾಪಟ್ಟಿ–ನಾ.ವಿ.+ಕ್ರಿ.ವಿ.

೪. ಮನಗಂಡ/ಡ್–ನಾ.ವಿ.+ಕ್ರಿ.ವಿ.

೫. ಅಂದಾಕರ–ನಾ.ವಿ.

೬. ಗಾವಂಗ–ಕ್ರಿ.ವಿ.

೭. ದುಮ್‌ಶನ್–ನಾ.ವಿ.

೮. ಬ್ಯೆಂಕ್ರ/ಬಯಂಕ್ರ–ನಾ.ವಿ.

೯. ಬಲೆ–ನಾ.ವಿ.

೧೦. ಬಾಳ್–ನಾ.ವಿ.+ಕ್ರಿ.ವಿ.

೧೧. ನುಗ್–ಕ್ರಿ.ವಿ.

೧೨. ಜಗ್-ನಾ.ವಿ.

೧೩. ಯಗ್ಗಾಗಿ-ನಾ.ವಿ.

೧೪. ಬಕ್ಕಾಗಿ-ಕ್ರಿ.ವಿ.

೧೫. ಗನಾ-ನಾ.ವಿ.+ಕ್ರಿ.ವಿ.

೧೬. ದೊಡ್-ನಾ.ವಿ.

೧೭. ಬೇಫಾಮ್-ನಾ.ವಿ.

೧೮. ಅಗದಿ-ನಾ.ವಿ.

೧೯. ಅತಿ-ನಾ.ವಿ.+ಕ್ರಿ.ವಿ.

೨೦. 'ಹ್ವೊ'ಅಂತ/ಹುಯ್‌ಅಂತ-ನಾ.ವಿ.+ಕ್ರಿ.ವಿ.

೨೧. ನೂರಾಯೆಂಟ್-ನಾ.ವಿ.

೨೨. ಸಿಕ್ಕಂಗ್ - ಕ್ರಿ.ವಿ.

೨೩. ಬಲ್ಲಂಗ್-ಕ್ರಿ.ವಿ.

೨೪. ಬಾರಿ-ನಾ.ವಿ.

೨೫. ಅನಾಹುತ-

೨೬. ಅತೋನಾತ್-ನಾ.ವಿ.+ಕ್ರಿ.ವಿ.

೨೭. ಸಿಸ್ತ/ಸ್ತ್-ಕ್ರಿ.ವಿ.

೨೮. ಮಸ್ತ/ಸ್ತ್-ನಾ.ವಿ.

೨೯. ವಲು-ಕ್ರಿ.ವಿ.

೩೦. ವಜ್ಜ-ಕ್ರಿ.ವಿ.

೩೧. ಅಡು-ಕ್ರಿ.ವಿ.

೩೨. ನಾಡ್-ನಾ.ವಿ.

೩೩. ಕೆಟ್-ನಾ.ವಿ.

೩೪. ಜಟ್-ನಾ.ವಿ.

೩೫. ಜಾಸ್ತಿ-ಕ್ರಿ.ವಿ.

೩೬. ಜಬರ್-ಕ್ರಿ.ವಿ.

೩೭. ಈಡಾಗಿ-ನಾ.ವಿ.

೩೮. ತೆಕ್ಕಿಗಟ್ಲೆ-ಕ್ರಿ.ವಿ.

೩೯. ಹೆಡಿಗ್ಗಟ್ಲೆ-ನಾ.ವಿ.+ಕ್ರಿ.ವಿ.

೪೦. ದೆವ್ವನಂತಾ-ನಾ.ವಿ.

೪೧. ತೀರಾ-ನಾ.ವಿ.

ಇಷ್ಟೆಲ್ಲ ಸಂಗ್ರಹ ಕಾರ್ಯದ ನಂತರ ಆ ಕಾಳುಗಳನ್ನು ವಿಂಗಡಿಸಲು ತೂರುವ, ಕೇರುವ, ಒನೆಯುವ ಅತವಾ ಸೋಸುವ. ಜರಡಿ ಹಿಡಿಯುವ ಮೂಲಕ ಗಟ್ಟಿ ಕಾಳನ್ನು ಹೆಕ್ಕಿ ತೆಗೆಯುವ ಕಾಯಕವಿದೆಯಲ್ಲಾ ಬಹು ಕಸರತ್ತಿನದಾಗಿದೆ. ಆಗ ಮಾತ್ರ ಬಾಶೆಯ ಉನ್ನತೀಕರಣದ ಜೊತೆ ಜೊತೆಗೆ ನಮ್ಮ ಜೀವನವೂ ಸಮ್ರುದ್ದಿಯ ತಿರುವಿನತ್ತ ಸಾಗಲು ಅನುವು ಮಾಡಿ ಕೊಟ್ಟಂತಾಗುತ್ತದೆ.

ಅಡಿಟಿಪ್ಪಣಿ

೧. ಮೈಸೂರು ವಿ.ವಿ. ಮತ್ತು ವಿಸ್ಮಯ ಫೌಂಡೇಶನ್ (ರಿ). ಮೈಸೂರು, ಜಂಟಿ ಸಹಯೋಗದಲ್ಲಿ ೧೨, ೧೩ರ ಜುಲೈ ೨೦೧೪ರಲ್ಲಿ ರಾಸ್ತ್ರಮಟ್ಟದ ಸಂಶೋಧನಾ ಕಮ್ಮಟವನ್ನು ಏರ್ಪಡಿಸಲಾಗಿತ್ತು. ಇಲ್ಲಿ ಚರ್ಚೆಗೆ ಒಳಗೊಳ್ಳುವ ಹಲವು ವಿಶಯಗಳಲ್ಲಿ 'ಕನ್ನಡ ಬಾಶೆ' ಕುರಿತಾಗಿಯೂ ಇತ್ತು. ಇಲ್ಲಿ ನಾನು ಸಂಶೋದನಾ ಪ್ರಬಂದವೊಂದನ್ನು ಮಂಡಿಸುವ ಮೂಲಕ ಸಕ್ರಿಯವಾಗಿ ಬಾಗವಹಿಸಿದ್ದೆ.

೨. ವಿಶ್ವವಿದ್ಯಾಲಯ ದನ ಸಹಾಯ ಆಯೋಗ, ನವದೆಹಲಿ ಮತ್ತು ಕವಿಚಕ್ರವರ್ತಿ ರನ್ನ ಪ್ರತಿಶ್ಠಾನ ಮುದೋಳ, ಇವರ ಜಂಟಿ ಸಹಯೋಗದಲ್ಲಿ 'ಹಳಗನ್ನಡ ಸಾಹಿತ್ಯ : ಅದ್ಯಯನ ಮತ್ತು ಅದ್ಯಾಪನ' ವಿಶಯದ ಕುರಿತು, ರಾಸ್ಟ್ರಮಟ್ಟದ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಇಲ್ಲಿ ನಾನೊಬ್ಬ ಜವಾಬ್ದಾರಿ ಕುತೂಹಲ ವೀಕ್ಶಕನಾಗಿ ಬಾಗಿಯಾಗಿದ್ದೆ. ಇದು ೧೦, ೧೧ರ ಜನೆವರಿ ೨೦೧೫ರಲ್ಲಿ, ಬಸವೇಶ್ವರ ವಿಜ್ನಾನ ಮಹಾವಿದ್ಯಾಲಯದ, ಸಬಾಬವನ, ಬಾಗಲಕೋಟೆಯಲ್ಲಿ ನಡೆಯಿತು.

೩. ಚರ್ಚೆಗೊಂಡ ವಿಶಯ ಮಾತ್ರ ಮೇಲ್ನೋಟಕ್ಕೆ ಒಂದೆ ಆದರೂ ಅದನ್ನು ಬಗೆಹರಿಸಲು ಅತವಾ ತಲುಪುವ ಮಾರ್‍ಗ ತೀರ ಬಿನ್ನವಾದುದೇ ಆಗಿತ್ತು. ಒಂದು ರೀತಿ ಎಚ್ಚರಿಕೆಯನ್ನು ಕೊಡುವ ರೀತಿ ಚರ್‍ಚೆಗೆ ಒಳಗಾಗಿರುವುದು ಮೈಸೂರಿನ ಕಮ್ಮಟದಲ್ಲಿ; ಪಾಲನೆ–ಪೋಶಣೆ ಮಾಡಿದ ಸಂಸ್ಕ್ರುತವೇ ಕ್ರಮೇಣ ಕನ್ನಡದ ಉರುಳಾಗಿ ಪರಿಣಮಿಸಿದುದರ, ಅದಕ್ಕಾಗಿ ಅನುಸರಿಸಬೇಕಾದ ತನ್ನತನದ ಹಾದಿಯ ಹುಡುಕಾಟದ ಸಂಗತಿಗಳು ಇಲ್ಲಿ ಯಶಸ್ವಿಯಾಗಿ ಚರ್‍ಚೆಗೊಂಡಿತು.

ಆದರೆ ಬಾಗಲಕೋಟೆಯಲ್ಲಿ ಹಾಗಲ್ಲ. ಅಲ್ಲಿ ನನ್ನ ಗುರುಗಳೊಬ್ಬರು (೮೨ನ್ನು ಮುಗಿಸಿ ೮೩ರ ತುಂಬು ಜೀವನದಲ್ಲಿ ಕಾಲಿಡುತ್ತಿರುವ ಟಿ. ವಿ. ವೆಂಕಟಾಚಲಶಾಸ್ತ್ರಿ ಅವರು) ತಾವು ಹಿಂದೆ ಬರೆದ, ಎರಡು ಸಾರಿ ಮರುಮುದ್ರಣಗೊಂಡ ಪುಸ್ತಕವೊಂದರ ಮಾರಾಟ ವ್ಯವಸ್ತೆ ಮಾಡಿಕೊಂಡೆ ಬಂದಿದ್ದರೆಂದು ತೋರುತ್ತದೆ. ಆ ಸಾಂಪ್ರದಾಯಿಕ ವ್ಯಾಕರಣ ಹೊತ್ತಿಗೆ ನಮ್ಮ ನುಡಿಯಲ್ಲಿ ಹೇಳುವಂತೆ (ಮಸಾಲೆ ಹಚ್ಚಿದ ಹುರಿದ ಕಡಲೆ<) 'ಹುರಕಡ್ಲಿ' ಮಾರಾಟವಾದ ಹಾಗೆ (ಮೈಸೂರು ನುಡಿ:ಹುರಿದ ಕಳ್ಳೆಕಾಯಿ ಮಾರಾಟವಾದ ಹಾಗೆ) 'ನಾ– ನೀ' ಎನ್ನುವಂತೆ ಮುಕುರಿ ಮಾರಾಟಗೊಂಡವು.

೧) 'ಶಬ್ದಮಣಿದರ್‍ಪಣ'ವನ್ನು (ಕನ್ನಡ ಮತ್ತು ಸಂಸ್ಕ್ರುತಿ ಇಲಾಖೆ ವತಿಯಿಂದ) ೧೯೯೪ಳರಲ್ಲಿ ತಾವೆ ಸಂಪಾದಿಸಿ, ತಾವೆ ಪೀಟಿಕೆ ಸ್ವರೂಪದಲ್ಲಿ ಬರೆದ ಸಾಂಪ್ರದಾಯಿಕ ವ್ಯಾಕರಣ ವಿಶ್ಲೇಶಣಾ ವಿವರಣೆ ಅದಾಗಿತ್ತು.

೨) ಈ ಹಿಂದೆ ಬರೆದ ಪೀಟಿಕಾ ಸ್ವರೂಪದ ವಿಶ್ಲೇಶಣಾ ವಿವರಣೆಯನ್ನು ಪ್ರತ್ಯೇಕ ಗ್ರಂತವಾಗಿ 'ತ.ವೆಂ. ಸ್ಮಾರಕ ಗ್ರಂತಮಾಲೆ'ಯಿಂದ ೨೦೦೧ರಲ್ಲಿ ಮತ್ತೆ ಪ್ರಕಟಗೊಂಡಿದೆ. – 'ದರ್‍ಪಣವಿವರಣೆ' ಎಂಬ ಹೆಸರಿನೊಂದಿಗೆ.

೩) ಅದನ್ನೆ ಇವತ್ತಿಗೂ (೨೦೧೫ರಲ್ಲಿ) ಸಲ್ಲುವ? ವ್ಯಾಕರಣ ಗ್ರಂತ ಎನ್ನುವ ಹಾಗೆ ಆಕರ್‍ಶಕ ಮುಕಪುಟದೊಂದಿಗೆ. 'ಹಳಗನ್ನಡ ವ್ಯಾಕರಣ ಪ್ರವೇಶಿಕೆ' ಎಂಬ ಹೆಸರನ್ನ ಹೊತ್ತು (ಅಬಿನವ ಪ್ರಕಾಶನ, ಬೆಂಗಳೂರು.) ಪ್ರಕಟಗೊಂಡಿದೆ.

(ಇಲ್ಲಿ 'ಪ್ರಯೋಗ ಪಾಠ' ಎಂಬ ಒಂದು ಅದ್ಯಾಯ ಸೇರಿಸಲಾಗಿದೆ. 'ಅಪಬ್ರಂಶ ಪ್ರಕರಣ'ವನ್ನು ಬಿಡಲಾಗಿದೆ.)

ಇದನ್ನೆಲ್ಲ ನೋಡಿದರೆ ನನಗೆ 'An old wine in a new bottle' ಎನ್ನುವಂತೆ ತೋರಿತು.

೪. 'ಬಾಶಾ ವಿಜ್ನಾನದ ಮೂಲ ತತ್ವಗಳು', ಎಂ. ಚಿದಾನಂದಮೂರ್ತಿ. ಡಿ.ವಿ.ಕೆ. ಮೂರ್ತಿ. ಪ್ರಕಾಶನ, ಮೈಸೂರು. ನಾ.ಮು. ೧೯೯೩, ಪು–೧೩೨.

೫. ಒಂದು ಬಾಶೆಯಿಂದ ಮತ್ತೊಂದು ಬಾಶೆಗೆ ಎರವಲು ಪದಗಳು ಬಳಕೆ ಆಗುವುದು ಸಹಜ. ಈ ಕುರಿತು ಕೆಲವು ನಿಯಮ ಪಾಲನೆಗಳಿವೆ. ಎರವಲಾಗಿ ಪಡೆದ ಬಾಶೆಯು ಉಚ್ಚಾರಣೆಗೆ ಸಂಬಂಧಿಸಿದಂತೆ ಅದರದೆ ಆದ ಉಲಿ ಉಚ್ಚಾರಣೆಯ ನಿಯಮಾವಳಿ ಇದ್ದೆ ಇರುತ್ತದೆ. ಆ ಪ್ರಕಾರ ಕನ್ನಡದಲ್ಲಿ ಮಹಾಪ್ರಾಣಾಕ್ಕರದ ಉಚ್ಚಾರ ಇಲ್ಲವೆ ಇಲ್ಲ. ಹೀಗಿರುವಾಗ ಅದನ್ನು ಉಳಿಸಿಕೊಳ್ಳುವ ಜರುರತ್ತಾದರು ಯಾಕೆ?

ಕೇವಲ ಓದಿದ ವರ್ಗದವರಲ್ಲಿ ಈ ಮಹಾಪ್ರಾಣ ಬಳಕೆಯಾಗುತ್ತ ಬಂದಿದೆ. ಈ ಓದಿದ ವರ್ಗದ ಬಹುಜನತೆಯ ಜುಟ್ಟನ್ನು ಗಟ್ಟಿಯಾಗಿ ಹಿಡಿದವರು ಯಾರು? ಕೆಲವೇ ಕೆಲವು ಸಂಸ್ಕೃತದ ಕಡೆಗೆ ಪ್ರೀತಿಯಿಂದ ವಾಲುವ ಮತ್ತು ತಮ್ಮದೆ ಹಿತಾಸಕ್ತಿ ಉಳ್ಳವರಲ್ಲಿ ಇದು ಗಟ್ಟಿಯಾಗಿ ನೆಲೆಯೂರಿದೆ. ಇದರಿಂದ ಇದರ ಅವಶ್ಯಕತೆ ಕಾಣದು.

ಇದಕ್ಕೆ ಸಂಬಂಧಿಸಿದಂತೆ ಕನ್ನಡ ಮರಾಟಿಗಳ ಕೊಡು-ಕೊಳ್ಳುವಲ್ಲಿ ನನ್ನದೆ ಆದ ಅನುಭವ ಪ್ರಸಂಗವನ್ನು ಇಲ್ಲಿ ಹೇಳುವೆ.

ನನ್ನದೆ ಒಂದು ಲೇಕನ, ಸುಮಾರು ೨೦ ವರುಶಗಳ ಹಿಂದೆ ಪ್ರಕಟವಾಗಿತ್ತು. 'ಬಾದಾಮಿ ಒಳನುಡಿಯಲ್ಲಿ ಮರಾಟಿಯ ಕೆಲವು ಪದಗಳು : ಒಂದು ಪರಿಶೀಲನೆ, ಇಲ್ಲಿ ಮರಾಟಿಯ ಕೆಲವು ಪದಗಳು ಬಳಕೆಯಾಗುವಾಗ, ಸಹಜವಾಗಿ ಅಲ್ಪಪ್ರಾಣವಾಗಿ ಬದಲುಗೊಳ್ಳುತ್ತವೆ.

ಉದಾ : ಖೊಟ್ಟಿ<ಕೊಟ್ಟಿ, ಘೊಟಾಳಿ<ಗೊಟಾಳಿ, ಭಾಂಡೆ<ಬಾಂಡೆ
ಠಿಕಾಣಿ<ಟಿಕಾಣಿ, ಧಡಕಿ<ದಡಕಿ, ಸಂಭಾಳನೆ<ಸಂಬಾಳ್ಸು

ಹಾಗೆಯೇ ಕನ್ನಡದಿಂದ ಮರಾಟಿಗೆ ಹೋದಾಗ-

ಉದಾ : ಜೋಂಪ<[ಜಂಪ(ಆಡುನುಡಿ)]<ಝೊಂಪ್
ತೆಕ್ಕಿ-ಮುಕ್ಕಿ<ಧಕ್ಕಾ-ಮುಕ್ಕಿ
ಕಾಲ-ಮೇಲು<ಗಾಲ್‌ಮೇಲ್<ಘಾಲ್-ಮೇಲ್

ಇದನ್ನ ನೋಡಿದರೆ ಸಾಕು, ಯಾವ ಬಾಶೆಯ ಒಲವು ಯಾವುದರತ್ತ ಇದೆ- ಎಂಬುದು ನಿಚ್ಚಳವಾಗುತ್ತದೆ.

೬ 'ಶಬ್ದಮಣಿದರ್ಪಣ', ಸಂಪಾದಕರು : ಎಲ್. ಬಸವರಾಜು.
ಪ್ರಕಾಶಕರು : ಶ್ರೀ ಚಿನ್ಮೂಲಾದ್ರಿ ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ.
ಮೊ. ಮು. : ೧೯೮೬, ಪುಟ : ೩೭೦, ೩೭೧,

೭. ಹೆಚ್ಚಿನ ವಿವರಣೆಗೆ ನನ್ನದೇ ಆದ ಲೇಖನವೊಂದನ್ನು ನೋಡಿ-
'ಕನ್ನಡದಲ್ಲಿ ಕೂಡುಪದಗಳು'
ಕರ್ನಾಟಕ ಲೋಚನ, ಶಾಣ್ಮಾಸಿಕ ಪತ್ರಿಕೆ,
ಜುಲೈ-ಡಿಸೆಂಬರ್-೨೦೧೪, ಸಂ : ೨೮, ಸಂ. ೦೨,

೮. ಹೆಚ್ಚಿನ ವಿವರಣೆಗೆ ನನ್ನದೇ ಒಂದು ಬರಹವನ್ನು ನೋಡಿ-ಇಷ್ಟರಲ್ಲೆ ಕಸಾಪ ಬೆಂಗಳೂರಿನ ಶತಮಾನೋತ್ಸವ ವತಿಯಿಂದ ಪ್ರಕಟವಾಗಲಿರುವ ಪುಸ್ತಕ ಮಾಲೆಯಲ್ಲಿ ನನ್ನದೂ ಒಂದಿದೆ. ಶೀರ್ಶಿಕೆ 'ಬಾದಾಮಿ ಪರಿಸರದ ಜೋಡುನುಡಿಗಳು : ಒಂದು ಬಾಶಿಕ ವರ್ಗೀಕರಣದ ವಿಶ್ಲೇಶಣೆ.'

೯. ಎಂ. ಚಿದಾನಂದಮೂರ್ತಿ. ಪುಸ್ತಕ : 'ಭಾಷಾ ವಿಜ್ಞಾನ ಮತ್ತು ಛಂದಸ್ಸು'
ಲೇಕನ : 'ಕನ್ನಡದಲ್ಲಿ ಪ್ರತಿಧ್ವನಿ ಪದಗಳು'.
ಮೊ. ಮು. : ೨೦೦೧, ಪುಟ : ೯೬ ರಿಂದ ೯೮

೧೦. ಹೆಚ್ಚಿನ ವಿವರಣೆಗೆ ನನ್ನದೇ ಲೇಕನ ನೋಡಿ.
ಲೇಕನ : 'ಹ.ಗ.ದ. ಆಖ್ಯಾತ ಪ್ರತ್ಯಯ-ಒಂದು ಪರಿಶೀಲನೆ'
ಪುಸ್ತಕ : 'ಹ.ಗ.ವ್ಯಾಕರಣ ಮತ್ತು ಬಾದಾಮಿ ಒಳನುಡಿ'
೬೮ನೇ ಕಸಾಪ ಸಮ್ಮೇಳನ, ಬಾಗಲಕೋಟೆ.

೧೧. ಕಾಳು-ಕಡಿಯನ್ನು ಇಡುವ ಜಾಗವನ್ನು ಕಣಜ ಎನ್ನುತ್ತಾರೆ. ಆದರೆ ಇಲ್ಲಿಯ ಕಣಜ ಬೂಮಿ ಅಂದರೆ ನೆಲದ ಆಳದಲ್ಲಿರುತ್ತದೆ. ಅದನ್ನು ಹಗೇವು. ಹಗೆವು, ಹಗೆ-ಎಂದು ಪರ್ಯಾಯ ರೂಪಗಳಿವೆ. ಆದರೆ ಇದರಲ್ಲಿ 'ಹಗೆ' ಎಂಬ ರೂಪ ಹೆಚ್ಚು ಚಾಲ್ತಿಯಲ್ಲಿರುವ ರೂಪವಾಗಿದೆ.

೧೨. ಹೆಚ್ಚಿನ ಮಾಹಿತಿಗೆ ನನ್ನದೇ ಲೇಕನ ನೋಡಿ–
'ಬಾದಾಮಿ ಒಳನುಡಿಯಲ್ಲಿ 'ಬಹಳ' ತಿರುಳಿನ ಪರ್ಯಾಯ ಪದಗಳು'.
ಕನ್ನಡ ಜಾನಪದ ಪರಿಷತ್ತಿನ ರಜತ ಮಹೋತ್ಸವದ ಸಂಚಿಕೆ, ಬೆಳ್ಳಿ ಸಂಪುಟ. ಪ್ರ. ಮು. ೨೦೧೦

ಅನುಬಂಧ

ಈಚೆಗೆ ಸೆಮಿಸ್ಟರ ಪದ್ಧತಿಯು ಪದವಿ ಹಂತಗಳಲ್ಲಿ ಚಾಲ್ತಿಗೊಂಡಂದಿನಿಂದ ಪರೀಕ್ಷಾ ಮೌಲ್ಯ ಮಾಪನಕ್ಕಾಗಿ ವರ್ಷಕ್ಕೆರಡು ಸಾರೆ ಜೊತೆಗೂಡುವ, ಆ ಮೂಲಕ ಆಯಾ ವಿಷಯಕ್ಕೆ ಸಂಬಂಧಿಸಿ ಮಾತನಾಡುವ, ಚರ್ಚಿಸುವ ಅವಕಾಶ ಲಭಿಸಿದಂತಾಗಿದೆ. ಆದರೆ ಈ ಸಾರೆ ನಾನು ನನ್ನ ಇಚ್ಛಾನುಸಾರ 'ಸಾಂಪ್ರದಾಯಿಕ ವ್ಯಾಕರಣ ಮತ್ತು ಭಾಷಾ ವಿಜ್ಞಾನ' ಸಂಬಂಧಿ ಮೌಲ್ಯಮಾಪನ ಕಾರ್ಯವನ್ನು ಕೈಗೆತ್ತಿಕೊಂಡೆ.

ಆದರೆ ಈ ಸಂದರ್ಭದಲ್ಲಿ ನನ್ನನ್ನು ತಳಮಳಕ್ಕೆ ಈಡು ಮಾಡಿದ ಸಂಗತಿಗಳು ಹಲವು ಅವುಗಳಲ್ಲಿ ಬಹುಮುಖ್ಯವಾಗಿ ಆತಂಕಕ್ಕೆ ಕಾರಣವಾಗುವ ಅಂಶಗಳು ನಮ್ಮೊಳಗೆ ಇವೆ ಎನ್ನುವುದು. ಈಗ ನೇರವಾಗಿ ವಿಷಯಕ್ಕೆ ಬರೋಣ. ಪದವಿ ಮಟ್ಟದ ವಿದ್ಯಾರ್ಥಿಗಳಿಗೆ ಬೋಧಿಸುವ ನಾವು ಕನ್ನಡ ಅಧ್ಯಯನದಲ್ಲಿ ಇತ್ತೀಚಿನ ಹೊಸ ಹೊಸ ಸಂಶೋಧನೆಗಳು (ಏನೇನು ಮತ್ತು ಯಾವ್ಯಾವ ರೀತಿಯಲ್ಲಿ) ನಡೆಯುತ್ತಿವೆ ಎಂದು ತಿಳಿಯುವುದು ಅಗತ್ಯವಿದೆ ಎಂಬುದಾಗಿ ನಾನು ಭಾವಿಸುತ್ತೇನೆ. ಭಾವಿಸುವುದೇನು ಬಂತು! ಅದನ್ನೆಲ್ಲ ತಿಳಿದು ಪರಾಮರ್ಶಿಸುವುದು, ಪರಾಮರ್ಶೆಯ ವಿಷಯವನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳಿಗೆ ತಿಳಿಹೇಳುವುದು, ನಮ್ಮೆಲ್ಲರ ಆಧ್ಯ ಕರ್ತವ್ಯವೂ ಆಗಬೇಕು. ಈ ವಾತಾವರಣ ಬಹಳಷ್ಟು ನಮ್ಮಲ್ಲಿಲ್ಲದಿರುವುದು ನಮ್ಮಗಳ ಒಂದು ದೊಡ್ಡ ಕೊರತೆಯೆ ಹೌದು.

ಇದೆ ಸಂದರ್ಭದಲ್ಲಿ ವ್ಯಾಕರಣ ಮತ್ತು ಭಾಷಾ ವಿಜ್ಞಾನ ಮೌಲ್ಯಮಾಪನ ಮಾಡುವ ನನ್ನ ಸಹೋದ್ಯೋಗಿ ಮಿತ್ರನೊಬ್ಬನನ್ನು (ಹೆಸರು ಬೇಡ) 'ಸಮಾಸ ಎಂದರೇನು?' 'ಯಾವುದನ್ನು ಸಮಾಸವೆಂದು ಕರೆಯುತ್ತಾರೆ?' ಎಂದು ಪ್ರಶ್ನಿಸುತ್ತ ಇತ್ತೀಚೆಗೆ ಡಿ. ಎನ್. ಶಂಕರಭಟ್ಟರ (ಸದ್ಯ ಕನ್ನಡದ ಬಗ್ಗೆ ತೀವ್ರ ಕಳಕಳಿ ಇರುವ ಅಂತಾರಾಷ್ಟ್ರೀಯ ಮಟ್ಟದ ಖ್ಯಾತಿ ಪಡೆದ, ಮಿಗಿಲಾಗಿ ಕನ್ನಡಿಗರಾದವರು)

'ಕನ್ನಡಕ್ಕೆ ಬೇಕು ಕನ್ನಡದ್ದೆ ಆದ ವ್ಯಾಕರಣ'-ಎಂಬ ಪುಸ್ತಕ ನೋಡಿದ್ದೀರಾ? ಎಂದೆ.....

ಆಗ 'ಇಲ್ಲ, ತಂದು ಕೊಡಿ, ನೋಡುತ್ತೇನೆ!' ಎಂದ

ಈ ಮಾತು ನನ್ನನ್ನು ದಂಗು ಬಡಿಸಿತು. 'ನಾನೆಲ್ಲಿ ಕೂತಿದ್ದೇನೆ' ಎಂದು ತಿಳಿಯಲು ಸ್ವಲ್ಪ ಹೊತ್ತೆ ಬೇಕಾಯಿತು.

ಹೀಗೆ ಕನ್ನಡ ಭಾಷಾ ಭ್ಯಾಸದೊಂದಿಗೆ ನಮ್ಮ ಉನ್ನತ ವ್ಯಾಸಂಗ ಮತ್ತು ಸಂಶೋಧನೆ ಎತ್ತ ಸಾಗುತ್ತಿದೆ?

ಏಕೆಂದರೆ

ಮುತ್ತಜ್ಜ ನೆಟ್ಟ ಆಲದ ಮರಕ್ಕೆ ನೇಣು ಹಾಕಿಕೊಳ್ಳುವ ಭೂಪತಿಗಳು ನಾವಲ್ಲವೆ?

■

ಬಡಕನ್ನಡದಾಗ ಪ್ರತಮಪುರುಷ ಸರ್ವನಾಮಗಳು

◆

ಬಸವರಾಜ ಕೋಡಗುಂಟಿ

ಬಡಗನ್ನಡ ಹೆಚ್ಚು ವಯ್ವಿದ್ಯತೆಗಳನ್ನು ತೋರಿಸುವ ಒಂದು ಒಳನುಡಿಗಳ ಗುಂಪು. ಇದರಲ್ಲಿನ ಒಳನುಡಿಗಳಲ್ಲಿ ಮಾತಿನ ಹಲವು ಹಂತ ಮತ್ತು ರಚನೆಗಳಲ್ಲಿ ಸಾಕಶ್ಟು ವಯ್ವಿದ್ಯತೆಗಳನ್ನು ಗುರುತಿಸಬಹುದು. ಈ ವಯ್ವಿದ್ಯತೆ ಯಾಕೆ ಆಗಿರಬಹುದು ಎಂಬುದನ್ನು ವಿಶೇಶವಾಗಿ ತಿಳಿದುಕೊಳ್ಳುವುದಕ್ಕೆ ಸಾದ್ಯ. ಈ ಬರವಣಿಗೆಯಲ್ಲಿ ಪ್ರತಮ ಪುರುಶ ಸರ್ವನಾಮಗಳನ್ನು ತೆಗೆದುಕೊಂಡು ಬಡಗನ್ನಡದ ಒಳನುಡಿಗಳ ವಯ್ವಿದ್ಯತೆಯನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದೇನೆ. ಕನ್ನಡದ ಸರ್ವನಾಮಗಳನ್ನು ತಿಳಿದುಕೊಳ್ಳುವುದಕ್ಕೂ ಈ ಬರವಣಿಗೆ ಹೆಚ್ಚು ಸಹಾಯ ಮಾಡುತ್ತದೆ.

ನಾಮಪದಗಳ ಬದಲಿಗೆ ವಾಕ್ಯದಲ್ಲಿ ಬಳಕೆ ಆಗುವ ಪದಗಳನ್ನು ಸರ್ವನಾಮಗಳು ಎಂದು ಕರೆಯಲಾಗುತ್ತದೆ. ಈ ಬರವಣಿಗೆಯಲ್ಲಿ ಪುರುಶವಾಚಕ ಸರ್ವನಾಮಗಳನ್ನು ಮಾತ್ರ ಪರಿಗಣಿಸಿದೆ. ಕನ್ನಡದಾಗ ಸರ್ವನಾಮಗಳ ರಚನೆ ಈ ಕೆಳಗಿನಂತೆ ಇದೆ.

ಪಾರಂಪರಿಕವಾಗಿ ಪುರುಶವಾಚಕ ಸರ್ವನಾಮಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಉತ್ತಮ ಪುರುಶ	: ನಾನು, ನಾನು
ಮದ್ಯಮ ಪುರುಶ	: ನೀನು, ನೀನು
ಪ್ರತಮ ಪುರುಶ	: ಅವಳು, ಅವನು, ಅದು, ಅವರು, ಅವು
ಆತ್ಮಾರ್ತಕ ಸರ್ವಾನಾಮ	: ತಾನು, ತಾವು

ಪಾರಂಪರಿಕವಾಗಿ ಬಳಸುತ್ತಾ ಬಂದಿರುವ ಈ ಪದಗಳು ಇನ್ನೂ ಬಳಕೆಯಲ್ಲಿ ಇವೆ. ಇದರೊಂದಿಗೆ ಆದುನಿಕ ವ್ಯಾಕರಣದಲ್ಲಿ ಯುರೋಪಿನ ವ್ಯಾಕರಣ ಪರಂಪರೆಯ ಪ್ರಬಾವದಿಂದ ಕ್ರಮವಾಗಿ ಪ್ರತಮ ಪುರುಶ, ದ್ವಿತಿಯ ಪುರುಶ ಮತ್ತು ತ್ರುತಿಯ

ಪುರುಶ ಎಂಬ ಪದಗಳು ಕೂಡ ಬಳಕೆಯಲ್ಲಿ ಬಂದಿವೆ. ಈಗಿನ ಬರವಣಿಗೆಯಲ್ಲಿ ಪಾರಂಪರಿಕ ವಿವರಣೆಯನ್ನು ಬಳಸಿದೆ.

ಈ ಬರವಣಿಗೆಯ ಮುಕ್ಯ ಆಶಯವಾದ ಪ್ರತಮ ಪುರುಶ ಸರ್ವನಾಮಗಳತ್ತ ಇನ್ನು ಗಮನ ಹರಿಸಬಹುದು.

ಹೊಸಗನ್ನಡದ ಮತ್ತು ಹಳೆಗನ್ನಡದ ಪ್ರತಮ ಪುರುಶ ಸರ್ವನಾಮಗಳನ್ನ ಇಲ್ಲಿ ಪಟ್ಟಿ ಮಾಡಿದೆ.

	ಹಳೆಗನ್ನಡ	ಹೊಸಗನ್ನಡ
ಮಾನವ ಸ್ತ್ರೀಲಿಂಗ ಏಕವಚನ	: ಅವಳ್	ಅವಳು
ಮಾನವ ಪುಲ್ಲಿಂಗ ಏಕವಚನ	: ಅವನ್	ಅವನು
ನಪುಂಸಕಲಿಂಗ (ಮಾನವವಲ್ಲದ) ಏಕವಚನ	: ಅದು	ಅದು
ಮಾನವ ಬಹುವಚನ	: ಅವರ್	ಅವರು
ನಪುಂಸಕಲಿಂಗ (ಮಾನವವಲ್ಲದ) ಬಹುವಚನ	: ಅವು	ಅವು

ಈ ರೂಪಗಳನ್ನು ಸಾಮಾನ್ಯವಾಗಿ ವ್ಯಾಕರಣಗಳಲ್ಲಿ ವಿವರಿಸಲಾಗುತ್ತದೆ. ಆದರೆ, ಇವುಗಳ ಜೊತೆಗೆ ಮಾನವ ಸ್ತ್ರೀಲಿಂಗ ಮತ್ತು ಮಾನವ ಪುಲ್ಲಿಂಗಕ್ಕೆ ಬೇರೊಂದು ರೂಪಗಳೂ ಬಳಕೆಯಲ್ಲಿವೆ.

	ಹಳೆಗನ್ನಡ	ಹೊಸಗನ್ನಡ
ಮಾನವ ಸ್ತ್ರೀಲಿಂಗ ಏಕವಚನ	: ಆಕೆ	ಆಕೆ
ಮಾನವ ಪುಲ್ಲಿಂಗ ಏಕವಚನ	: ಆತನ್	ಆತ

ಇವುಗಳಿಗೆ ಇಂದಿನ ಕೆಲವು ಕನ್ನಡಗಳಲ್ಲಿ ಬಿನ್ನವಾದ ಅರ್ತದ ಆರೋಪವಿದೆ. ಕರಾವಳಿ ಮತ್ತು ಮಯ್ಸೂರು ಕನ್ನಡಗಳಾಗ ಈ ರೂಪಗಳು ಗವುರವಸೂಚಕ ಸರ್ವನಾಮಗಳಾಗಿ ವಿಶಿಶ್ಟ ಸಂದರ್ಬಗಳಲ್ಲಿ ಬಳಕೆಯಾಗುತ್ತವೆ.

ಹಳೆಗನ್ನಡದಿಂದ ಹೊಸಗನ್ನಡಕ್ಕೆ ಪ್ರತಮ ಪುರುಶ ಸರ್ವನಾಮಗಳ ಬೆಳವಣಿಗೆಯ ವಿವರಣೆ ಹೆಚ್ಚು ಸರಳವಾಗಿದೆ. ಹಳೆಗನ್ನಡ ಹೆಚ್ಚು ವ್ಯಂಜನಕೊನೆ ಪದಗಳನ್ನು ಒಳಗೊಂಡಿದ್ದಿತು ಅವು ಹೊಸಗನ್ನಡದಾಗ ಸ್ವರಕೊನೆಗಳಾಗಿ ಬೆಳೆದಿವೆ. ಹಾಗೆಯೆ ಸರ್ವನಾಮರೂಪಗಳೂ ಬೆಳೆದಿವೆ. ಇದರಲ್ಲಿ ಮಾನವವಾಚಕ ಪ್ರತಮ ಪುರುಶ ಸರ್ವನಾಮಗಳು ಮಾತ್ರ ಹಳೆಗನ್ನಡದಲ್ಲಿ ವ್ಯಂಜನಕೊನೆಗಳಾಗಿದ್ದವು ಮತ್ತು ಮಾನವವಲ್ಲದ ಸರ್ವನಾಮಗಳು ಸ್ವರಕೊನೆಗಳಾಗಿಯೆ ಬಳಕೆಯಲ್ಲಿ ಇದ್ದವು. ಆಕೆ ಎಂಬ ಒಂದು ಮಾನವ ಸ್ತ್ರೀಲಿಂಗ ರೂಪ ಮಾತ್ರ ಹಳೆಗನ್ನಡದಲ್ಲಿಯೆ ಸ್ವರಕೊನೆ ಆಗಿದ್ದಿತು.

ಇನ್ನು ಬಡಗನ್ನಡದ ಒಳನುಡಿಗಳಲ್ಲಿ ಬಳಕೆಯಲ್ಲಿರುವ ಪ್ರತಮ ಪುರಶ ಸರ್ವನಾಮಗಳನ್ನು ಗಮನಸಬಹುದು. ಬಡಗನ್ನಡದ ರಚನೆಯನ್ನು ಸಾಮಾನ್ಯವಾಗಿ ಹಳೆಗನ್ನಡದ ರಚನೆಗೆ ಹೋಲಿಸಿದಾಗ ಹಲವಾರು ಅಂಶಗಳನ್ನು ಹಾಗೆಯೆ ಉಳಿಸಿಕೊಂಡು ಬಂದಿದೆ ಅದರಂತೆ ಹಲವು ಅಂಶಗಳನ್ನು ಹೊಸದಾಗಿ ಬೆಳೆಸಿಕೊಂಡಿದೆ ಕೂಡ. ಸರ್ವನಾಮಗಳಲ್ಲಿ ಆಗಿರುವ ಬೆಳವಣಿಗೆ ಹೆಚ್ಚು ವಯ್ವಿದ್ಯತೆಯನ್ನು ಹೊಂದಿದೆ ಮತ್ತು ಸಾಕಶ್ಟು ಕುತೂಹಲದಾಯಕವೂ ಆಗಿದೆ. ಬಡಗನ್ನಡದ ಕೆಲವು ಒಳನುಡಿಗಳಿಂದ ಪ್ರತಮ ಪುರುಶ ಸರ್ವನಾಮಗಳನ್ನು ಪಟ್ಟಿ ಮಾಡಿದೆ.

	ಮಸ್ಕಿ ಕನ್ನಡ	ಕಲಬುರಗಿ ಕನ್ನಡ	ದಾರವಾಡ ಕನ್ನಡ
ಮಾನವ ಸ್ತ್ರೀಲಿಂಗ ಏಕವಚನ :	ಅಕಿ	ಅಕಿ, ಕಕಿ	ಆಕಿ
	ಅವ್ವ	ಅವ್ವ, ಕವ್ವ	ಅವ್ವ
ಮಾನವ ಪುಲ್ಲಿಂಗ ಏಕವಚನ :	ಅತ	ಅತ,	
		ಅ~ವ, ಕ~ವ	ಆ~ವ
	ಅವ್ನ	ಅವ್ನ, ಕವ್ನ	ಅವ್ನ
ನಪುಂಸಕಲಿಂಗ (ಮಾನವವಲ್ಲದ) ಏಕವಚನ :	ಅದು	ಅದು, ಕದು	ಅದು
ಮಾನವ ಬಹುವಚನ :	ಅವ್ರು	ಅವ್ರು, ಕವ್ರು	ಅವುರು
ನಪುಂಸಕಲಿಂಗ (ಮಾನವವಲ್ಲದ) ಬಹುವಚನ :	ಅವು	ಅವು, ಕವು	ಅವು

ಈ ಮೇಲೆ ಹಳೆಗನ್ನಡದ ಪ್ರತಮ ಪುರುಶ ಸರ್ವನಾಮ ರೂಪಗಳನ್ನು ನೋಡಿದೆವು. ಅದರಲ್ಲಿ ಸಾಮಾನ್ಯವಾಗಿ ವ್ಯಾಕರಣಗಳು ಪಟ್ಟಿ ಮಾಡುವ ಅವಳ್, ಅವನ್ಎಂಬ ಕ್ರಮವಾಗಿ ಮಾನವ ಏಕವಚನ ಸ್ತ್ರೀಲಿಂಗ ಮತ್ತು ಪುಲ್ಲಿಂಗ ರೂಪಗಳೊಂದಿಗೆ ಆಕೆ, ಆತನ್ ಎಂಬ ಇನ್ನೆರಡೂ ರೂಪಗಳೂ ಹಳೆಗನ್ನಡದಾಗ ಬಳಕೆಯಲ್ಲಿದ್ದವು. ಇವುಗಳನ್ನು ವ್ಯಾಕರಣಗಳು ಸಮಾನ ಮಹತ್ವದೊಂದಿಗೆ ವಿವರಿಸದೆ ಇರುವುದರಿಂದ ಇಂದಿನ ಬಡಗನ್ನಡಗಳಲ್ಲಿ ಬಳಕೆಯಲ್ಲಿರುವ ವಿಶಿಶ್ಟ ರೂಪಗಳು ಬಾಶಾವಿಗ್ನಾನಿಗಳಿಗೆ ಹೆಚ್ಚಿನ ಕುತೂಹಲವಾಗಿ ಕಂಡುಬಂದಿಲ್ಲ.

ಈ ಎರಡು ರೂಪಗಳಲ್ಲಿ ಬಡಗನ್ನಡ ಮುಕ್ಯವಾಗಿ ಆಕೆ, ಆತನ್ ಎಂಬ ರೂಪಗಳನ್ನು ವಿಶೇಶವಾಗಿ ಬೆಳೆಸಿಕೊಂಡಿದೆ. ಆದರೆ, ತೆಂಗನ್ನಡ ಇದಕ್ಕೆದುರಾಗಿ ಅವಳ್, ಅವನ್ ಎಂಬ ರೂಪಗಳನ್ನು ಬೆಳೆಸಿಕೊಂಡಿದೆ. ಇದು ನಾನು ಪ್ರಸ್ತಾಪಿಸುತ್ತಿರುವ ಕನ್ನಡಗಳ ಒಡೆತವನ್ನು, ಅವುಗಳಲ್ಲಿ ಬಡಗನ್ನಡ ಮತ್ತು ತೆಂಗನ್ನಡಗಳ ಗುಂಪನ್ನು ಅರ್ತ ಮಾಡಿಕೊಳ್ಳುವುದಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಅವಳ್, ಅವನ್ ಎಂಬ ರೂಪಗಳನ್ನೂ ಬಡಗನ್ನಡ ಬೆಳೆಸಿಕೊಂಡಿದೆ. ಆದರೆ, ಅವು ಹೀನಾರ್ತದಲ್ಲಿ ಮಾತ್ರ

ಬಳಕೆಯಾಗಬಲ್ಲವು. ಇದು ಬಹು ಮುಖ್ಯವಾದ ಅಂಶವಾಗಿದೆ. ಅದರೊಂದಿಗೆ ಇಲ್ಲಿ ಪರಿಗಣಿಸಬೇಕಾದ ಇನ್ನೊಂದು ಅಂಶವೆಂದರೆ ತೆಂಗನ್ನಡದಾಗ ಆಕೆ, ಆತ ರೂಪಗಳು ಕೂಡ ಬಳಕೆಯಲ್ಲಿವೆ. ಆದರೆ, ಇವು ಗವುರವ ಅರ್ತದಲ್ಲಿ ಮಾತ್ರ ಬಳಕೆಯಾಗುತ್ತದೆ.

ಇಲ್ಲಿ, ಮೊದಲಿಗೆ ಈ ಮೇಲೆ ಪಟ್ಟಿ ಮಾಡಿದ ಬಡಗನ್ನಡದ ಒಳನುಡಿಗಳ ಸರ್ವನಾಮ ರೂಪಗಳ ಬೆಳವಣಿಗೆಯನ್ನು ತೋರಿಸಿದೆ.

	ಮಸ್ಕಿ ಕನ್ನಡ	ಕಲಬುರಗಿ ಕನ್ನಡ	ದಾರವಾಡ ಕನ್ನಡ
ಮಾನವ ಸ್ತ್ರೀಲಿಂಗ ಏಕವಚನ :	ಅಕಿ	ಅಕಿ, ಕಕಿ	ಆಕಿ
	ಅವ್ವು	ಅವ್ವು, ಕವ್ವು	ಅವ್ವು

ಹಳೆಗನ್ನಡದಾಗ ಬಳಕೆಯಲ್ಲಿದ್ದ ಆಕೆ ಇದು ಕೊನೆಯ ಸ್ವರವನ್ನು ಬದಲಿಸಿಕೊಂಡು 'ಇ' ಎಂದು ಬೆಳೆದು ಆಕಿ ಎಂದಾಗಿದೆ. ಈ ರೂಪ ದಾರವಾಡ ಕನ್ನಡದಾಗ ಬಳಕೆಯಲ್ಲಿ ಇದೆ. ಇದೆ ರೂಪ ಮುಂದುವರೆದು ತನ್ನ ಮೊದಲ ಉದ್ದಕ್ಕರವನ್ನು ಕಳೆದುಕೊಂಡು ಗಿಡ್ಡಕ್ಕರವನ್ನು ಬೆಳೆಸಿಕೊಂಡಿದೆ. ಅದರಿಂದಾಗಿ ಈ ರೂಪ ಅಕಿ ಎಂದು ಬೆಳೆದಿದೆ. ಈ ರೂಪ ಮಸ್ಕಿ ಕನ್ನಡದಾಗ ಬಳಕೆಯಲ್ಲಿದೆ. ಅದರೊಂದಿಗೆ ಕಲಬುರಗಿ ಕನ್ನಡದಾಗೂ ಈ ರೂಪ ಬಳಕೆಯಲ್ಲಿ ಇದೆ. ಕಲಬುರಗಿ ಕನ್ನಡದ ರೂಪ ಕಕಿ ಎಂಬ ರೂಪಇದಕ್ಕಿಂತ ಇನ್ನೂ ಮುಂದುವರೆದಂತೆ, ವಿಶಿಶ್ಟ ಪ್ರಕ್ರಿಯೆಗೆ ಒಳಗಾದಂತೆ ಕಾಣುತ್ತದೆ.ಅಕಿ ಎಂಬ ರೂಪದಿಂದ ಕಕಿ ಎಂಬ ರೂಪವನ್ನು ಕಲಬುರಗಿ ಕನ್ನಡ ಸಾದಿಸಿಕೊಂಡಿದೆ. ಇದರಲ್ಲಿ ಅಕಿ ಎಂಬ ರೂಪಕ್ಕೆ ಕ್ ದ್ವನಿಯೊಂದು ಬಂದು ಸೇರಿದೆ. ಇದು ಏನನ್ನು ಪ್ರತಿನಿದಿಸುತ್ತದೆ ಎಂಬುದನ್ನು ತುಸು ಸೂಕ್ಶ್ಮವಾಗಿ ಅವಲೋಕಿಸಬೇಕು. ಅವಗಾಹನಾರ್ತಕದ ಇಗೊ ಎಂಬ ಹೊಸಗನ್ನಡದ ಪದ ಹಳೆಗನ್ನಡದಾಗ ಇಕೊ ಎಂದಾಗಿತ್ತು. ಈ ಪದ ಸರ್ವನಾಮ ರೂಪಕ್ಕೆ ಸೇರಿಕೊಂಡಾಗ ಇಕೊ+ಅಕಿ ಎಂದಾಗಿದೆ. ಇದು ಮುಂದುವರೆದು ಕಕಿ ಎಂಬ ರೂಪ ಬೆಳೆಯಲು ಕಾರಣವಾಗಿದೆ. ಕಲಬುರಗಿ ಕನ್ನಡದಾಗ ಇಕೊ ಎಂಬ ರೂಪ ಇಂದಿಗೂ ಬಳಕೆಯಲ್ಲಿದೆ. ಈ ಅವಗಾಹನಾರ್ತಕದ ರೂಪ ಇಕೊ ಎಂಬುದನ್ನು ಪ್ರತ್ಯೇಕವಾಗಿ ಬಳಸಿದಾಗ ಕಲಬುರಗಿ ಕನ್ನಡದಾಗ ಕಕಿ, ಕ~ವ ಮೊದಲಾದ ರೂಪಗಳ ಬಳಕೆ ಆಗುವುದಿಲ್ಲ. ಬದಲಿಗೆ ಅಲ್ಲಿ ಅಕಿ, ಅ~ವ ರೂಪಗಳು ಬಳಕೆಯಾಗುತ್ತವೆ. ಇದು ಕಲಬುರಗಿ ಕನ್ನಡದ ಸರ್ವನಾಮ ರೂಪಗಳ ಜೊತೆ ಸೇರಿಕೊಂಡಿರುವ ಕ್ ದ್ವನಿಯ ಬಗೆಗೆ ಸ್ಪಶ್ಟನೆಯನ್ನು ಕೊಡುತ್ತದೆ.

ಇನ್ನೊಂದು ಮಹತ್ವದ ಅಂಶವೆಂದರೆ, ಆಕೆ ಎಂಬುದು ಹಳೆಗನ್ನಡದ ರೂಪವೆ ಮೂಲಕನ್ನಡದ ರೂಪವೆ ಎಂಬುದರ ಬಗೆಗೆ ತಿಳುವಳಿಕೆ ಇಲ್ಲ.

ಇಲ್ಲಿ, ಈ ರೂಪಗಳ ಬೆಳವಣಿಗೆಯನ್ನು ತೋರಿಸಿದೆ.

ಆಕೆ>ಆಕಿ(ದಾರವಾಡ ಕನ್ನಡ)>ಅಕಿ(ಮಸ್ಕಿ ಕನ್ನಡ)>ಕಕಿ[ಇಕೊ+ಅಕಿ](ಕಲಬುರಗಿ ಕನ್ನಡ)

ಇನ್ನು, ಅವಳು ರೂಪದ ಬಗೆಗೆ ಮಾತುಕತೆಯನ್ನು ಮುಂದುವರೆಸಬಹುದು. ಈ ಮೇಲೆ ಮಾತನಾಡಿದಂತೆ ಅವಳು ಎಂಬ ರೂಪ ಹೀನಾರ್ತದಲ್ಲಿ ಮಾತ್ರ ಬಡಗನ್ನಡಗಳಲ್ಲಿ ಬಳಕೆಯಲ್ಲಿದೆ. ಅವಳ್ ಎಂಬ ಹಳೆಗನ್ನಡದ ರೂಪ ಕೊನೆಯ ವ್ಯಂಜನವನ್ನು ಕಳೆದುಕೊಂಡು ಸ್ವರಕೊನೆಯಾಗಿ ಬೆಳೆದು ಅವಳು ಎಂದಾಗಿದೆ. ಆನಂತರ ಬಡಗನ್ನಡದ ಒಂದು ಸಹಜ ಲಕ್ಶಣವಾದ ಮೂರಕ್ಕರದ ಪದಗಳ ನಡುವಿನ ಸ್ವರ ಲೋಪವಾಗಿ ಒತ್ತಕ್ಕರ ಬೆಳೆಯುವ ಪ್ರಕ್ರಿಯೆಯಲ್ಲಿ ಅವಳು>ಅವ್ವ ಎಂಬ ರೂಪ ಬೆಳೆದಿದೆ. ಅವಳ್ ಎಂಬ ಹಳೆಗನ್ನಡದ ರೂಪವೆ ಮೂಲಕನ್ನಡದ ರೂಪವೂ ಅಹುದು. ಈ ಬೆಳವಣಿಗೆಯನ್ನು ಇಲ್ಲಿ ತೋರಿಸಿದೆ.

* ಅವಳ್>ಅವಳು>ಅವ್ವ (ಬಡಗನ್ನಡ)

ಮಾನವ ಪುಲ್ಲಿಂಗ ಏಕವಚನ :   ಅತ   ಅತ,   ಆತ

ಅ~ವ, ಕ~ವಆ~ವ

ಅವ್ನ   ಅವ್ನ, ಕವ್ನ ಅವ್ನ

ಈ ಮೇಲೆ ಮಾನವ ಏಕವಚನ ಸ್ತ್ರೀಲಿಂಗ ಪ್ರತಮ ಪುರುಶ ಸರ್ವನಾಮ ರೂಪದ ಬಗೆಗೆ ಮಾತನಾಡಿದಂತೆಯೆ ಹಳೆಗನ್ನಡದಾಗ ಬಳಕೆಯಲ್ಲಿದ್ದ ಆತನ್ ಎಂಬ ರೂಪವನ್ನು ಬಡಗನ್ನಡ ವಿಶೇಶವಾಗಿ ಬೆಳೆಸಿಕೊಂಡಿದೆ. ಇದರಲ್ಲಿ ಹಳೆಗನ್ನಡದ ವ್ಯಂಜನಕೊನೆ ಪದಗಳು ನಂತರ ಸ್ವರಕೊನೆಗಳಾಗಿ ಬೆಳೆಯುವ ಪ್ರಕ್ರಿಯೆಯಲ್ಲಿ ಆತನ್>ಆತ ಬೆಳವಣಿಗೆ ನಡೆದಿದೆ. ಆತ ಎಂಬ ರೂಪ ದಾರವಾಡ ಕನ್ನಡದಾಗ ಬಳಕೆಯಲ್ಲಿದೆ. ಮುಂದುವರೆದು ಈ ಸ್ವರಕೊನೆ ರೂಪದ ಮೊದಲ ಉದ್ದಕ್ಕರವನ್ನು ಮಸ್ಕಿಕನ್ನಡ ಗಿಡ್ಡಕ್ಕರವಾಗಿಸಿಕೊಂಡಿದೆ. ಹೀಗಾಗಿ ಮಸ್ಕಿಕನ್ನಡದಾಗ ಅತ ಎಂಬ ರೂಪ ಬಳಕೆಯಲ್ಲಿದೆ. ಕಲಬುರಗಿ ಕನ್ನಡದಲ್ಲಿಯೂ ಈ ರೂಪ ಬಳಕೆಯಲ್ಲಿದೆ. ಇಲ್ಲಿ ಒಂದು ಮುಕ್ಯವಾದ ಅಂಶವನ್ನು ಗಮನಸಬೇಕು. ಕಲಬುರಗಿ ಕನ್ನಡದಾಗ ಸ್ತ್ರೀಲಿಂಗ ಸರ್ವನಾಮ ರೂಪ ಅವಗಾಹನಾರ್ತಕದ ಇಕೊ ಎಂಬ ರೂಪವನ್ನು ಮೊದಲಲ್ಲಿ ಪಡೆದುಕೊಂಡು ಕಕಿ ಎಂಬ ರೂಪ ಬೆಳೆದಿದೆ. ಆದರೆ, ಕಲಬುರಗಿ ಕನ್ನಡದ ಪ್ರದಾನ ಏಕವಚನ ಪುಲ್ಲಿಂಗ ಸರ್ವನಾಮ ರೂಪ ಅತ ಇದು ಹೀಗೆ ಬೆಳೆದಿಲ್ಲ. ಆದರೆ, ಅವನು ಎಂಬ ರೂಪ ಮತ್ತೆ ಹೀಗೆ ಇಕೊ ಎಂಬ ರೂಪವನ್ನು ಪಡೆದುಕೊಂಡು ಬೆಳೆದು ಬಳಕೆಯಲ್ಲಿದೆ ಎಂಬುದನ್ನು ಮುಂದೆ ನೋಡುವೆವು. ಇಲ್ಲಿ ಈ ರೂಪದ ಬೆಳವಣಿಗೆಯನ್ನು ಚಿತ್ರಿಸಿದೆ.

ಆತನ್>ಆತ(ದಾರವಾಡ ಕನ್ನಡ)>ಅತ(ಮಸ್ಕಿ ಕನ್ನಡ, ಕಲಬುರಗಿ ಕನ್ನಡ)

ಇನ್ನು ಮತ್ತೊಂದು ಪುಲ್ಲಿಂಗ ಏಕವಚನ ಸರ್ವನಾಮ ರೂಪವಾದ ಅವ್ನ, ಕವ್ನ ಇದನ್ನು ಗಮನಿಸಬಹುದು. ಇದು ಬಡಗನ್ನಡದಲ್ಲಿ ಬಳಕೆಯಲ್ಲಿದೆಯಾದರೂ ಕಡಿಮೆ. ವ್ಯಾಪಕ ಬಳಕೆಯನ್ನು ಹೊಂದಿರುವ ರೂಪ ಆತ/ಅತ ಎಂಬುದಾಗಿದೆ. ಮೂಲಕನ್ನಡದ ರೂಪ *ಅವನ್ ಎಂಬುದು ಹಳೆಗನ್ನಡದಲ್ಲಿಯೂ ಬಳಕೆಯಾಗಿದೆ. ಮುಂದೆ ವ್ಯಂಜನ

ಕೊನೆಗಳು ಸ್ವರಕೊನೆಗಳಾಗಿ ಬೆಳೆಯುವ ಹೊತ್ತಿನಲ್ಲಿ ಅದು ಅವನು ಎಂದು ಬೆಳೆದಿದೆ. ಮುಂದೆ ಮೂರಕ್ಕರದ ಪದಗಳು ನಡುವಿನ ಸ್ವರವನ್ನು ಕಳೆದುಕೊಳ್ಳುವ ಪ್ರಕ್ರಿಯೆಯಲ್ಲಿ ಇದು ಅವ್ನು ಎಂದು ಬೆಳೆದಿದೆ. ಈ ರೂಪ ಮಸ್ಕಿ ಕನ್ನಡದಾಗ ಬಳಕೆಯಲ್ಲಿದೆ. ಮೂಲಕನ್ನಡದ ರೂಪ *ಅವನ್ ಎಂಬುದೆ ಒಂದು ರೂಪವಾಗಿರದೆ ಅದು ಒಂದು ರಚನೆಯಾಗಿದೆ. ಇದರ ರಚನೆಯನ್ನು ಈ ಕೆಳಗಿನಂತೆ ತಿಳಿದುಕೊಳ್ಳಬಹುದು.

* ಅ+-ವ್-+-ಅನ್=ಅವನ್

ಇಲ್ಲಿ ಏಕವಚನ ಪುಲ್ಲಿಂಗ ಪ್ರತ್ಯಯವಾದ -ಅನ್ ಇದು ದೂರತೋರುಗ ರೂಪವಾದ *ಅ/*ಆ ಇದಕ್ಕೆ ಸೇರಿಕೊಂಡು *ಅವನ್ ಎಂಬ ರೂಪ ಸಿದ್ದಿಸಿದೆ. ನಡುವೆ -ವ್- ಆಗಮವಾಗಿ ಬಂದಿದೆ. ಆದರೆ, ದಾರವಾಡ ಕನ್ನಡ ಮತ್ತು ಕಲಬುರಗಿ ಕನ್ನಡಗಳಲ್ಲಿ ಬಳಕೆಯಲ್ಲಿರುವ ಅ~ವ ಎಂಬ ರೂಪ ಇದಕ್ಕಿಂತ ಬಿನ್ನವಾದ ವಿವರಣೆಯನ್ನು ಬಯಸುತ್ತದೆ. ಮೂಲಕನ್ನಡದ *ಅ/*ಆ ಎಂಬ ದೂರತೋರಗದ ರೂಪಕ್ಕೆ *-ಅ ಎಂಬ ಏಕವಚನ ಪುಲ್ಲಿಂಗ ರೂಪವು ಸೇರಿಕೊಂಡು ಅವ ಎಂಬ ರೂಪ ಸಿದ್ದಿಸಿರುವಂತಿದೆ. ಇದಕ್ಕೆ ಬದಲಾಗಿ ಬಡಗನ್ನಡಗಳಲ್ಲಿ ಇರುವ ಅವ ರೂಪ ಅವನು ಇದರ ಕೊನೆಯ ಅಕ್ಕರವನ್ನು ಕಳೆದುಕೊಂಡ ರೂಪ ಅಲ್ಲ. ಅಲ್ಲದೆ, ಹೀಗೆ ಇಡಿಯಾಗಿ ಒಂದು ಅಕ್ಕರವನ್ನು ಕಳೆದುಕೊಳ್ಳುವುದು ಸರಳವೂ ಆಗಲಾರದು. ಮುಂದೆ ಅವ ರೂಪ ದಾರವಾಡ ಕನ್ನಡಕ್ಕೆ ವಿಶೇಶ ಲಕ್ಶಣವಾದ ಮತ್ತು ಕಲಬುರಗಿ ಕನ್ನಡದಲ್ಲಿಯೂ ಕಂಡುಬರುವ ನಾಸಿಕೀಕರಣ ಪ್ರಕ್ರಿಯೆಯಲ್ಲಿ ಅ~ವ ಎಂದಾಗಿದೆ. ಇದರ ಬೆಳೆವಣಿಗೆಯನ್ನು ಕೆಳಗೆ ತೋರಿಸಿದೆ.

* ಅ+-ವ್-+*-ಅ>ಅವ>ಅ~ವ(ದಾರವಾಡ ಕನ್ನಡ, ಕಲಬುರಗಿ ಕನ್ನಡ)>ಕ~ವ[ಇಕೊ+ಅ~ವ](ಕಲಬುರಗಿ ಕನ್ನಡ)

ಹಾಗಾದರೆ, ಬಡಗನ್ನಡಗಳಲ್ಲಿ ಬಳಕೆಯಲ್ಲಿರುವ ಅ~ವ ಎಂಬ ರೂಪ ಹಳೆಗನ್ನಡಕ್ಕಿಂತ ಹಿಂದಿನ ಬೆಳವಣಿಗೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಇದು ಕನ್ನಡದ ಒಡೆತಗಳನ್ನು ಮತ್ತು ಬಡಗನ್ನಡದ ಇತಿಹಾಸ ಮತ್ತು ಬೆಳವಣಿಗೆಯನ್ನು ತಿಳಿದುಕೊಳ್ಳುವಲ್ಲಿ ಬಹು ಮಹತ್ವದ ಅಂಶ.

ನಪುಂಸಕ ಲಿಂಗ ಏಕವಚನದ ರೂಪ ಅದು ಎಂಬುದು ಬಡಗನ್ನಡದ ಬಹುತೇಕ ಒಳನುಡಿಗಳಲ್ಲಿ ಬಳಕೆಯಲ್ಲಿದೆ. ಇದು ಮೂಲಕನ್ನಡದ ಅದರಂತೆ ಮೂಲದ್ರಾವಿಡಕ್ಕೂ ಮತ್ತೆಕಟ್ಟಿದ ರೂಪವಾಗಿದೆ. ಇಂದಿನ ಶಿಶ್ಟಕನ್ನಡದಲ್ಲಿಯೂ ಇದೆ ರೂಪ ಬಳಕೆಯಲ್ಲಿದೆ.

ಈ ರೂಪವನ್ನು ಮೂಲದ್ರಾವಿಡಕ್ಕೂ ಕೂಡ ಮತ್ತೆ ಕಟ್ಟಲಾಗಿದೆ. ಹಾಗಾಗಿ ಇದು ಮೂಲಕನ್ನಡ ಮತ್ತು ಅದಕ್ಕೂ ಹಿಂದೆ ಮೂಲದ್ರಾವಿಡದಿಂದ ಬದಲಾಗದೆ ಹಾಗೆಯೆ ಉಳಿದು ಬಂದಿದೆ ಎಂಬುದೊಂದು ವಿಶಿಶ್ಟ ಅಂಶ.

ನಪುಂಸಕಲಿಂಗ (ಮಾನವವಲ್ಲದ) ಏಕವಚನ : ಅದು ಅದು ಅದು

ಮಾನವ ಬಹುವಚನ : ಅವ್ರು ಅವ್ರು, ಕವ್ರು ಅವುರು

ಕನ್ನಡದಲ್ಲಿ ಲಿಂಗವ್ಯವಸ್ತೆಯಲ್ಲಿ ಏಕವಚನ ಮತ್ತು ಬಹುವಚನಗಳಲ್ಲಿ ವ್ಯತ್ಯಾಸವಿದೆ. ಮಾನವ ಹೆಣ್ಣು ಮತ್ತು ಮಾನವ ಗಂಡು ಇವು ಏಕವಚನದಲ್ಲಿ ಬೇರೆ ಲಿಂಗಗಳಾಗಿ ಕಂಡುಬರುತ್ತವೆ. ಆದರೆ, ಬಹುವಚನದಲ್ಲಿ ಇವು ಬಿನ್ನವಾಗಿರದೆ, ಒಂದೆ ಆಗಿವೆ. ಮಾನವ ಬಹುವಚನ ಸರ್ವನಾಮ ರೂಪವು ಅವರು ಎಂಬುದಾಗಿದೆ. ಇದರ ಮೂಲಕನ್ನಡದ ರೂಪ *ಅವರ್ ಎಂಬ ವ್ಯಂಜನಕೊನೆ ರೂಪವಾಗಿದೆ. ಇದು ಮುಂದೆ ಸ್ವರಕೊನೆಯಾಗಿ ಅವರು ಎಂದಾಗಿ ನಡುವಿನ ಸ್ವರವನ್ನು ಕಳೆದುಕೊಂಡು ದಾರವಾಡ ಕನ್ನಡ ಮತ್ತು ಕಲಬುರಗಿ ಕನ್ನಡದಾಗ ಅವ್ರು ಎಂದಾಗಿದೆ. ಇದು ಮುಂದೆ ಕಲಬುರಗಿ ಕನ್ನಡದಾಗ ಮೊದಲಲ್ಲಿ ಕಕಾರವನ್ನು ಪಡೆದುಕೊಂಡು ಕವ್ರು ಎಂಬ ರೂಪದಲ್ಲಿ ಬಳಕೆಯಲ್ಲಿದೆ. ಇದನ್ನು ಈ ಕೆಳಗೆ ಬಿಡಿಸಿ ತೋರಿಸಿದೆ.

* ಅವರ್>ಅವರು>ಅವ್ರು(ದಾರವಾಡ ಕನ್ನಡ, ಕಲಬುರಗಿ ಕನ್ನಡ)> ಕವ್ರು[ಇಕೊ+ಅವ್ರು] (ಕಲಬುರಗಿ ಕನ್ನಡ)

ನಪುಂಸಕಲಿಂಗ (ಮಾನವವಲ್ಲದ) ಬಹುವಚನ : ಅವು ಅವು, ಕವು ಅವು

ನಪುಂಸಕ ಲಿಂಗ ಏಕವಚನದ ರೂಪದಲ್ಲಿ ಮೂಲಕನ್ನಡದಿಂದ ಇಂದಿನವರೆಗೆ ವಿಶೇಶ ಬೆಳವಣಿಗೆ ಇಲ್ಲದಿರುವುದನ್ನು ಈ ಮೇಲೆ ನೋಡಿದೆವು. ಅದರಂತೆ ಅದರ ಬಹುವಚನ ರೂಪದಲ್ಲಿಯೂ ವಿಶೇಶ ಬೆಳವಣಿಗೆ ಇಲ್ಲ. ಇಂದಿನ ಶಿಶ್ಟಕನ್ನಡ ಮತ್ತು ಬಡಗನ್ನಡದ ಬಹುತೇಕ ಒಳನುಡಿಗಳಲ್ಲಿ ಅವು ಎಂಬ ರೂಪವೆ ಬಳಕೆಯಲ್ಲಿದೆ. ಆದರೆ ಕಲಬುರಗಿ ಕನ್ನಡದಲ್ಲಿ ಮಾತ್ರ ಅವಗಾಹನಾರ್ತಕದ ಇಕೊ ಎಂಬ ರೂಪ ಉಳಿದ ಕೆಲವು ಪ್ರತಮ ಪುರುಶ ಸರ್ವನಾಮ ರೂಪಗಳಿಗೆ ಸೇರಿದಂತೆ ಮಾನವವಲ್ಲದ ಪ್ರತಮ ಪುರುಶ ಸರ್ವನಾಮ ರೂಪಕ್ಕೂ ಸೇರಿಕೊಂಡು ಕವು ಎಂದು ಬೆಳೆದಿದೆ. ಇದರ ಬೆಳವಣಿಗೆಯನ್ನು ಈ ಕೆಳಗೆ ತೋರಿಸಿದೆ.

* ಅವು(ಕಲಬುರಗಿ ಕನ್ನಡ ಹೊರತಾಗಿ ಉಳಿದ ಒಳನುಡಿಗಳು)> ಕವು [ಇಕೊ+ ಅವು] (ಕಲಬುರಗಿ ಕನ್ನಡ)

ನಪುಂಸಕಲಿಂಗ (ಮಾನವವಲ್ಲದ) ಏಕವಚನ : ಅದು ಅದು ಅದು

■

ಕಲ್ಬುರ್ಗಿ ಕನ್ನಡದ ವಿಭಕ್ತಿ ರೂಪಗಳು

◆

ಶಿವಲಿಂಗಪ್ಪ ಸಿ. ಬಸವಣ್ಣೋರ್

ಏ ಮಲ್ಲಪ್ಪ ಸಾಲಿಗಿ ಗಿಲಿಗಿ ಹೋತಿ ಯೆನ ಇಲ್ಲೋ, ಏಳ ಭಾಳ ಟೈಮ್ ಆಗ್ಯಾದ ನಿಮ್ಮಪ್ಪ ಹೊಲಕ್ಕ ಹೋಲತಾನ ನೋಡ. ನೀ ಇವತ್ತ ಸಾಲಿಗಿ ಹೊಲಿಲಿಂದ್ರ ಮದ್ಯಾಣ ನಿಮ್ಮಪ್ಪು ನ ಗೂಡಾ ಸಂತಿಗಿ ಹೋಗಿ ವಂದ್ ಕೋಳಿ ತೊಂಬಾ ನಾಳಿಗಿ ಕರಿ ಅದ ಕೋಳಿ ಕ್ವಯ್ದು ಮರಗಮ್ಮಗ ನ್ಯವ್ದ್ಯಾ ಯೆರ್ಸಾಮಿ. ಯೇ... ಏಳೋ ಯೇಳ್ತಿ ಏನ ಬಡ್ಗಿ ತೋಲಿ.

ಮೇಲಿನ ಪದಗಳೆಲ್ಲಾ ಕಲ್ಬುರ್ಗಿ ಕನ್ನಡದ ಮಾತಿನ ಗುಟ್ಟು ಈ ಮಾತು ಕಲ್ಬುರ್ಗಿ ಕನ್ನಡ, ಕನ್ನಡ ಭಾಷೆಯ ಒಂದು ಉಪಭಾಷೆ/ಭಾಷಾಪ್ರಭೇದ ಈ ನಮ್ಮ ನೆಲೆಯಲ್ಲಿ ಭಾಳ ಮಾತಿಗರು ಬದುಕು ಸಾಗಿಸುತ್ತಾರೆ. ಕನ್ನಡ, ಹಿಂದಿ, ಉರ್ದು, ಇಂಗ್ಲಿಷ್, ತೆಲುಗು, ಮರಾಠಿ, ಸಿಖ್, ಮಾರವಾಡಿ, ಗುಜುರಾತಿ ಮತ್ತು ಬ್ಯಾರೆ ಬ್ಯಾರೆ ಮಾತಾಡ್ತು ಹರಾ. ಗುಲ್ಬರ್ಗಾ ಹೆಸರಲಿಂದ ನೆಂಪಾಗದ ಈ ಕಲ್ಬುರ್ಗಿ, ಕರ್ನಾಟಕದ ಪ್ರಾದೇಶಿಕ ಐತಿಹಾಸಿಕ ಜಾಗದಾಗ ವಂದು ಹೈದ್ರಾಬಾದ ಕರ್ನಾಟಕದ ಜಿಲ್ಲಾ ಕೇಂದ್ರವಾಗಿದೆ. ಈ ಊರ್ನ ಮಾನ್ಯಖೇಡದ ರಾಷ್ಟ್ರಕೂಟರು, ಬಾದಾಮಿಯ ಚಾಲಯಕ್ಯರು, ಯಾದವ, ಹೊಯ್ಸಳ, ಕಾಕತಿಯರು ಮತ್ತು ಇತ್ತೀಚಿನ ಬಹಮನಿ ಸುಲ್ತಾನ್ ಮತ್ತು ಬ್ಯಾರೆ ಮಾತಿಗರ ಆಳ್ಕಿ ಪ್ರಭಾವ ದಟ್ಟವಾಗಿರುವುದು ಯೆದ್ದು ಕಾಣುತ್ತದೆ. ಬ್ಯಾರೆ ಬ್ಯಾರೆ ಮಾತಿನ ಧರ್ಮ, ಸಂಸ್ಕೃತಿ ಸಮುದಾಯಗಳ ಇರುವಿಕೆಯ ನೆಲಿ ಆಗಿ ಹೋಗಿರುವ ಈ ಕಲ್ಬುರ್ಗಿ ಸೂಫಿ, ಸಂತ ಶರಣ, ತತ್ವಪದಕಾರ ಕವಿರಾಜ ಮಾರ್ಗಕಾರ ಶ್ರೀವಿಜಯನ ಮಳಖೇಡ, ನಾಗಾವಿ ಪ್ರಾಚೀನ ವಿದ್ಯಾಕೇಂದ್ರ ಇತ್ಯಾದಿ, ಮಹತ್ವದ ಸಾಂಸ್ಕೃತಿಕ ಕೇಂದ್ರವಾಗಿವೆ.

ಭಾಷೆ ಮನುಷ್ಯನ ಅವಿಭಾಜ್ಯ ಅಂಗ ಪ್ರತಿಯೊಬ್ಬ ಮನುಷ್ಯನು ತಮ್ಮ ಸಮಾಜದ ಅಥವಾ ನಾಡಿನ ಮಾತೃಭಾಷೆಯ ಪ್ರಾದೇಶಿಕ/ಉಪಭಾಷೆಯನ್ನ ಕರಗತ ಮಾಡಿಕೊಂಡಿರುತ್ತಾನೆ. ಭಾಷೆಯನ್ನು ಮನುಷ್ಯ ಕುಲ ಕಲಿಯದೆ ಹೋಗಿದ್ದರೆ ನಾವೆಲ್ಲ

ಇಂದು ಹೇಗೆ ಬದುಕುತ್ತಿದೆವೆಂದರೆ ಕಾಡಿನಲ್ಲಿರುವ ಕಾಡು ಮೃಗಗಳಂತೆ ಕಚ್ಚಾಡುತ್ತ ಅವಿವೇಕತನದಿಂದ, ಕುಸಂಸ್ಕೃತಿಯಿಂದ ಬದುಕುತ್ತಿದ್ದೆವೋ ಏನೋ....

ಅದು ಏನೇ ಇರಲಿ ಬಿಡಿ, ಮಾತಿನಲ್ಲಿ ಕೆಲಸ ಮಾಡಲು ಒಬ್ಬ ವ್ಯಕ್ತಿ ಇಲ್ಲವೆ ವಸ್ತು ಬೇಕೆ ಬೇಕಾಗುತ್ತದೆ ಹಾಗಾಗಿ ಮಾಡುಗ ಮತ್ತು ಕೆಲಸದ ಮಧ್ಯೆ ಸಂಬಂದ ಕಲ್ಪಿಸಿಕೊಡುವುದೆ ಈ ವಿಭಕ್ತಿ ರೂಪ ಕೆಲಸ ಯಾರು, ಯಾರಿಂದ, ಎಲ್ಲಿಗೆ, ಹೇಗೆ, ಯಾರು ಯಾರು ಎಂಬ ಕಾರಕ ರೂಪಗಳ ಒಂದು ತಿಳುವಳಿಕೆಯನ್ನು ತೋರಿಸುವ ಬರವಣಿಗೆ ಈ ಒಂದು ನನ್ನ ಪ್ರಯತ್ನ ಮತ್ತು ಓದಿನ ರುಚಿಯಿಂದ ಲೇಖನದಲ್ಲಿ ಕಲ್ಬುರ್ಗಿ ಕನ್ನಡದ ವಿಭಕ್ತಿ ರೂಪಗಳು ಎಂಬ ವಿವರಣಾತ್ಮಕವಾದ ವಿನ್ಯಾಸವನ್ನು ಈ ಲೇಖನಕ್ಕೆ ತೆಗೆದುಕೊಂಡಿರುವುದರಿಂದ ಕಲ್ಬುರ್ಗಿ ಕನ್ನಡದೊಳಗೆ ಇವತ್ತು ಬಳಸುವ ಮಾತಿನ್ಯಾಗ ಸಂಬಂದ ವಿಭಕ್ತಿ ರಊಪ ತೋರಿಸಲಾಗಿದೆ. ಹಾಗೂ ಅವುಗಳು ಆಡುವ ಕಾರಕ ಸಂಬಂಧಗಳ ಬಗೆಗೆ ವಿವರಿಸಲಾಗಿದೆ ಅವುಗಳ ಗುಟ್ಟು, ಬಳಕೆ ಮತ್ತು ಗುಟ್ಟಿನ ಬಿಡಿಸಿಹೇಳುವಿಕೆ ಹೀಗೆ ಪ್ರತಿಯೊಂದು ರೂಪಕ್ಕೂ ಒಂದೊಂದು ಕಲ್ಬುರ್ಗಿ ಕನ್ನಡದ ಮಾತಿನ ಮತ್ತು ಬರಹದ ಬಳಕೆಯನ್ನು ಕೊಡಲಾಗಿದೆ.

ಕಲ್ಬುರ್ಗಿ ಕನ್ನಡದಾಗ ಬಳ್ಕಿ ಮಾಡುವ ಮಾತಿನ ವಿಭಕ್ತಿರೂಪಗಳನ್ನ ಈ ಕೃಳಾಗ ವಂದಾಗಣ ವಂದ ಕೊಡಲಾಗಿದೆ.

–ಶೂನ್ಯ
–ಉಗ/ಗ
–ನ್ನ
–ಅನ್ನ
–ಇಗಿ
–ಲಿಂದ
–ಳಿಂದ
–ಲೆ
–ಲಿ
–ಕ
–ಇಂದ
–ಉಂದ
–ಅಂದ
–ಇನ
–ನ
–ಬಲ್ಲಿ
–ಕಡಿ

–ಆಗ
–ಆ್ಯಗ
–ವಳ್ಗ
–ವೊಳುಗ
–ಜತಿ
–ಜ್ವತಿ
–ಗುಡ
–ಗೂಡ
–ಸರಿ
–ಸಬೂತ
–ಸಂಗಾಟ
–ಆ್ಯಗಿನ
–ಆಗಿಂದ

ಈಗ ಈ ಮೇಲಿನ ಎಲ್ಲ ಕಲ್ಬುರ್ಗಿ ಕನ್ನಡದ ವಿಭಕ್ತಿ ರೂಪಗಳು ಅವರಾಡುವ ಮಾತಿನಲ್ಲಿ ಯಾವ ಯಾವ ಕಾರಕ, ಕಾರಕದ ಗುಟ್ಟಿನ ರಟ್ಟು, ಬಿಡಿಸಿಹೇಳುವಿಕೆ ಹಾಗು ಅವುಗಳಿಗೆ ವಂದೊಂದು ಕಲ್ಲಬುರ್ಗಿ ಕನ್ನಡದ ಮತ್ತು ಬರಹ ಕನ್ನಡದ ಉದಾಹರಣೆಯನ್ನು ನೋಡೋಣ.

–ಶೂನ್ಯ : ಈ ವಿಭಕ್ತಿರೂಪ ಕಲ್ಬುರ್ಗಿ ಕನ್ನಡದಾಗ ಮಾಡುಗ, ನಂಟು ಮತ್ತು ಆಗುಗ ನಂಟನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ಮಾಡುಗನನ್ನು ತಿಳಿಸಲು
ಕಲ್ಬುರ್ಗಿ ಕನ್ನಡದ ಮಾತು : ಅಣ್ಣ (ಶೂನ್ಯ) ಸಾಲಿಗಿ ಹೋಗಲತಾನ
ಬರಹ ಕನ್ನಡ : ಅಣ್ಣ ಶಾಲೆಗೆ ಹೋಗುತ್ತಿದ್ದಾನೆ

ಬಳ್ಕಿ : ಆಗುಗವನ್ನು ತಿಳಿಸಲು
ಕ.ಕ.ಮಾತು : ಕಾಯ್‌ಪಲ್ಲ್ಯಾ ತೊಗೊಂಡ ಬಾ / ಮನಿ ಕಟ್ಟ
ಬ.ಕ. : ಕಾಯಿಪಲ್ಲೆಯನ್ನು ತೆಗೆದುಕೊಂಡು ಬಾ/ಮನೆಯನ್ನು ಕಟ್ಟು

ಬಳ್ಕಿ : ನಂಟನ್ನು ತಿಳಿಸಲು
ಕ.ಕ.ಮಾತು : ಕಣ್ಣೀರು ಸೋರ್ಲತಾವ (ಕಣ್ಣು(ಶೂನ್ಯ)+ನೀರು=ಕಣ್ಣೀರು
ಬ.ಕ : ಕಣ್ಣಿನಲ್ಲಿರುವ ನೀರು ಸೋರುತ್ತಿವೆ

–ಉಗ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದ ಮಾತಿನಲ್ಲಿ ಗುರಿಯನ್ನು ಮತ್ತು ಆಗುಗವನ್ನು ತಿಳಿಸುತ್ತದೆ.

ಬಳ್ಕಿ : ಗುರಿಕಯನ್ನು ತಿಳಿಸಲು
ಕ.ಕ. ಮಾತು : ಅಣ್ಣಗ ಕರಿ
ಬ.ಕ : ಅಣ್ಣನಿಗೆ ಕರೆ
ಬಳ್ಕಿ : ಆಗುಗವನ್ನು ತಿಳಿಸಲು
ಕ.ಕ. ಮಾತು : ಅಣ್ಣಗ ತೊಂಬರ್ಲಿಕ್ಕ ಹೇಳ
ಬ.ಕ : ಅಣ್ಣನಿಗೆ ತರುವುದಕ್ಕೆ (ತೆಗೆದುಕೊಂಡು ಬರುವುದ್ದಕ್ಕೆ) ಹೇಳು

–ನ್ನ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದ ಮಾತಿನಲ್ಲಿ ಗುರಿಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ಗುರಿಯನ್ನು ತಿಳಿಸಲು
ಕ.ಕ. ಮಾತು : ಆ ಪಾರನ್ನ ಕರಿ
ಬ.ಕ : ಆ ಹುಡುಗನನ್ನು ಕರಿ

–ಅನ್ನ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದ ಮಾತಿನಲ್ಲಿ ಗುರಿಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ಗುರಿಯನ್ನು ತಿಳಿಸಲು
ಕ.ಕ. ಮಾತು : ಆ ಕ್ಯಾಮನ್ನ ಹೊಡಿ
ಬ.ಕ : ಆ ಶ್ಯಾಮನನ್ನು ಹೊಡಿ

–ಇಗಿ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದ ಮಾತಿನಲ್ಲಿ ಗುರಿಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ಗುರಿಯನ್ನು ತಿಳಿಸಲು
ಕ.ಕ. ಮಾತು : ಮನಿಗಿ ಹೋತಿನಿ/ಸಾಲಿಗಿ ಹೋತಿನಿ
ಬ.ಕ : ಮನೆಗೆ ಹೋಗುತ್ತೇನೆ/ಶಾಲೆಗೆ ಹೋಗುತ್ತೆನೆ

–ಲಿಂದ : ಈ ವಿಭಕ್ತಿ ಕಲ್ಬುರ್ಗಿ ಕನ್ನಡದ ಮಾತಿನಲ್ಲಿ ಸಾಧನವನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ಸಾಧನವನ್ನು ತಿಳಿಸಲು
ಕ.ಕ. ಮಾತು : ಬಡ್ಗಿಲಿಂದ ಹೊಡ್ಡ/ಪೆನ್ನಿಲಿಂದ ಬರ್ದ
ಬ.ಕ : ಬಡಿಗೆಯಿಂದ ಹೊಡೆದೆ/ಪೆನ್ನಿನಿಂದ ಬರೆದೆ

ಲೇ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದ ಮಾತಿನಲ್ಲಿ ಬಿಡುಗಡೆಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ಬಿಡುಗಡೆಯನ್ನು ತಿಳಿಸಲು
ಕ.ಕ. ಮಾತು : ಮಾರಕೆಟಲೇ ಮಾಯ್ನಕಾಯ್ ತಂದಾರ
ಬ.ಕ : ಮಾರ್ಕೇಟನಿಂದ ಮಾವಿನಕಾಯಿ ತಂದಿದ್ದಾರೆ

–ಲಿ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದ ಮಾತಿನಲ್ಲಿ ಬಿಡುಗಡೆಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ಬಿಡುಗಡೆಯನ್ನು ತಿಳಿಸಲು
ಕ.ಕ. ಮಾತು : ಸಾಲಿಲಿ ಬಂದಿನಿ
ಬ.ಕ : ಶಾಲೆಯಿಂದ ಬಂದಿದ್ದೆನೆ

–ಳಿಂದ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದ ಮಾತಿನಲ್ಲಿ ಬಿಡುಗಡೆಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ಬಿಡುಗಡೆಯನ್ನು ತಿಳಿಸಲು
ಕ.ಕ. ಮಾತು : ಮಲ್ಲಪ್ಪಿಂದ ಈ ಕೆಲ್ಸಾ ಅತದಾ
ಬ.ಕ : ಮಲ್ಲವಳಿಂದ ಈ ಕೆಲಸ ಆಗುತ್ತದೆ

–ಕ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದ ಮಾತಿನಲ್ಲಿ ಗುರಿಯನ್ನು ತಿಳಿಸಲು ಬಳಕೆಗೊಳ್ಳುತ್ತದೆ

ಬಳ್ಕಿ : ಗುರಿಯನ್ನು ತಿಳಿಸಲು
ಕ.ಕ. ಮಾತು : ಬಜಾರಲಿ ಹ್ವಂಟಿನಿ/ಬಸ್ಸ್ಯಾಂಡ್ಕ ಹೊಲತಿನಿ
ಬ.ಕ : ಬಜಾರಕ್ಕೆ ಹೊರಟಿದ್ದೇನೆ/ಬಸ್ ಸ್ಟ್ಯಾಂಡಿಗೆ ಹೊರಟಿದ್ದೇನೆ

–ಇಂದ : ಈ ಬಿಭಕ್ತಿ ಕಲ್ಬುರ್ಗಿ ಕನ್ನಡದ ಮಾತಿನಲ್ಲಿ ಬಿಡುಗಡೆಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ಬಿಡುಗಡೆಯನ್ನು ತಿಳಿಸಲು
ಕ.ಕ. ಮಾತು : ಮನಿಂದ ಹ್ವಾದ
ಬ.ಕ : ಮನೆಯಿಂದ ಹೋದ

–ಉಂದ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದಲ್ಲಿ ನಂಟನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ನಂಟನ್ನು ತಿಳಿಸಲು
ಕ.ಕ. ಮಾತು : ಕಿದು ಶ್ಯಾಣಪ್ಪುಂದ ಹೊಲ
ಬ.ಕ : ಇದು ಶರಣಪ್ಪನ ಹೊಲ

–ಆ್ಯಗ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದಲ್ಲಿ ನೆಲಿಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ನೆಲೆ ತಿಳಿಸಲು
ಕ.ಕ. ಮಾತು : ಕಲ್ಲಪ್ಪ ಮನ್ಯಾಗ ಹನಾ/ಸಾಲ್ಯಾಗ ಹನಾ
ಬ.ಕ : ಕಲ್ಲಪ್ಪ ಮನೆಯಲ್ಲಿ ಇದ್ದಾನೆ/ಶಾಲೆಯಲ್ಲಿ ಇದ್ದಾನೆ

–ಆಗ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದಲ್ಲಿ ನೆಲಿಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ನೆಲಿಯನ್ನು ತಿಳಿಸಲು
ಕ.ಕ. ಮಾತು : ಕಣ್ಣಾಗ ಧೂಳ ಬಿದ್ದಾದ
ಬ.ಕ : ಕಣ್ಣಲ್ಲಿ ಧೂಳು ಬಿದ್ದಿದೆ

–ಅಂದ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದ ಮಾತಿನಲ್ಲಿ ನೆಲೆಯನ್ನು ತಿಳಿಸಲು ಬಳಕೆಗೊಳ್ಳುತದೆ.

ಬಳ್ಕಿ : ನೆಲಿ ತಿಲಿಸಲು
ಕ.ಕ. ಮಾತು : ಬಾಯಂದ ಜ್ವಲ್ಲ ಸೋರ್ಲತ್ತಾದ
ಬ.ಕ : ಬಾಯಿಯಿಂದ ಜೊಲ್ಲು ಸೋರಿತ್ತಿದೆ

–ಆ್ಯಂದ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದ ಮಾತಿನಲ್ಲಿ ನೆಲಿಯನ್ನು ಬಳಕೆಗೊಳ್ಳುತ್ತದೆ.

ಬಳ್ಕಿ : ನೆಲಿಯನ್ನು ತಿಳಿಸಲು
ಕ.ಕ. ಮಾತು : ತಲ್ಯಾಂಡ ರಗ್ತಾ (ರಕ್ತಾ) ಹರೀಲತಿತು
ಬ.ಕ : ತಲೆಯಿಂದ ರಕ್ತ ಹರಿದುಹೋಗುತ್ತಿತ್ತು

–ಬಲ್ಲಿ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದಲ್ಲಿ ನೆಲಿ ಮತ್ತು ಗುರಿಯನ್ನು ತಿಳಿಸಲು ಬಳಕೆಗೊಳ್ಳಿತ್ತದೆ

ಬಳ್ಕಿ : ನೆಲಿ ತಿಳಿಸಲು
ಕ.ಕ. ಮಾತು : ಕ–ವುನಬಲ್ಲಿ ಛಂದನು ಸೀರಿ ಸಿಗ್ತಾವ
ಬ.ಕ : ಅವನ ಹತ್ತಿರ ಒಳ್ಳೆಯ ಸೀರೆ ಸಿಗುತ್ತವೆ

ಬಳ್ಕಿ : ಗುರಿ ತಿಳಿಸಲು
ಕ.ಕ. ಮಾತು : ಮುಬಿಬಲ್ಲಿ ಆ ಹೂವ್ವಾ ಅದಾ
ಬ.ಕ : ಮನೆಯ ಹತ್ತಿರ ಆ ಹೂ ಇದೆ

–ಕಡಿ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದ ಮಾತಿನಲ್ಲಿ ನೆಲಿ ಮತ್ತು ಗುರಿಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ನೆಲಿ ತಿಳಿಸಲು
ಕ.ಕ. ಮಾತು : ರಾಮಪ್ಪನಕಡಿ ಇಂಥಾ ಬಳಿ ಸಿಗ್ತಾವ
ಬ.ಕ : ರಾಮಪ್ಪನ ಕಡೆಗೆ ಈ ತರಹದ ಬಳೆ ಸಿಗುತ್ತವೆ

ಬಳ್ಕಿ : ಗುರಿ ತಿಳಿಸಲು
ಕ.ಕ. ಮಾತು : ಬಾಬಾ ಹೊಲ್ದಕಡಿ ಹೊಗ್ಯಾನ
ಬ.ಕ : ತಂದೆ ಹೊಲದ ಕಡೆಗೆ ಹೋಗಿದ್ಧಾನೆ

–ವಳ್ಗ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದ ಮಾತಿನಲ್ಲಿ ನೆಲಿಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ನೆಲಿ ತಿಳಿಸಲು
ಕ.ಕ. ಮಾತು : ಗಿಡದೊಳ್ಗ ಹಾ–ವ ಹೋಗ್ಯಾದ
ಬ.ಕ : ಗಿಡದೊಳಗೆ ಹಾವು ಹೋಗಿದೆ

–ಜತಿ(ಜ್ವತಿ) : ಈ ವಿಭಕ್ತಿ ರೂಪ ಕಲ್ಲಬುರ್ಗಿ ಕನ್ನಡದ ಮಾತಿನಲ್ಲಿ ಸೇರಿಕೆ/ಕೂಡಿಕೆಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ಸೇರಿಕೆ/ಕೂಡಿಕೆ ತಿಳಿಸಲು
ಕ.ಕ. ಮಾತು : ನನ್ನ್‌ಜತಿ(ಜ್ವತಿ) ನೀನು ಇವತ್ತ ಹೊಲಕ್ಕ ನಡಿ
ಬ.ಕ : ನನ್ನ ಜೋತೆ ನೀನು ಇವತ್ತು ಹೊಲಕ್ಕೆ ನಡೆ

–ಗುಡ(ಗೂಡ) : ಈ ವಿಭಕ್ತಿ ರೂಪ ಕಲ್ಲಬುರ್ಗಿ ಕನ್ನಡದ ಮಾತಿನಲ್ಲಿ ಸೇರಿಕೆ/ಕೂಡಿಕೆಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ಸೇರಿಕೆ/ಕೂಡಿಕೆ ತಿಳಿಸಲು
ಕ.ಕ. ಮಾತು : ನನ್ನ್‌ಗೂಡ(ಗೂಡ) ಬಹಾರ್ಕ ನೀನು ಬಾ
ಬ.ಕ : ನನ್ನ ಜ್ವತೆ ಬಜಾರಕ್ಕೆ ನೀನು ಬಾ

–ಸರಿ : ಈ ವಿಭಕ್ತಿ ರೂಪ ಕಲ್ಲಬುರ್ಗಿ ಕನ್ನಡದ ಮಾತಿನಲ್ಲಿ ಸೇರಿಕೆ/ಕೂಡಿಕೆಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ಸೇರಿಕೆ/ಕೂಡಿಕೆ ತಿಳಿಸಲು
ಕ.ಕ. ಮಾತು : ಅ–ವುನ್‌ಸರಿ ನಾನು ಹೋತಿನಿ
ಬ.ಕ : ಅವನ ಸರಿ ನಾನು ಹೋಗುತ್ತೇನೆ

–ಸಬುತಿ : ಈ ವಿಭಕ್ತಿ ರೂಪ ಕಲ್ಲಬುರ್ಗಿ ಕನ್ನಡದ ಮಾತಿನಲ್ಲಿ ಸೇರಿಕೆ/ಕೂಡಿಕೆಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ಸೇರಿಕೆ/ಕೂಡಿಕೆ
ಕ.ಕ. ಮಾತು : ನೀ ಅ-ವುನ್ಸಬುತಿ ದೋಸ್ತಿ ಕಟ್ಟಬ್ಯಾಡ
ಬ.ಕ : ನೀನು ಅವನ ಜೋತೆ ಗೆಳೆತನ ಕಟ್ಟ ಬೇಡ

-ಇನ : ಈ ವಿಭಕ್ತಿ ರೂಪ ಕಲ್ಬುರ್ಗಿ ಕನ್ನಡದ ಮಾತಿನಲ್ಲಿ ಸಂಬಂಧ ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ಸಂಬಂಧ ತಿಳಿಸಲು
ಕ.ಕ. ಮಾತು : ಹಾ-ವಿನ ಕುಬಸಾ ಯೆಲ್ಲಿ ಬಿದ್ದಾದ ?
ಬ.ಕ : ಹಾವಿನ ಕುಪ್ಪಸ ಎಲ್ಲಿ ಬಿದ್ದಿದೆ ?

-ಸಂಗಾಟ : ಈ ವಿಭಕ್ತಿ ರೂಪ ಕಲ್ಲಬುರ್ಗಿ ಕನ್ನಡದ ಮಾತಿನಲ್ಲಿ ಸೇರಿಕೆ/ಕೂಡಿಕೆಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ಸೇರಿಕೆ/ಕೂಡಿಕೆ
ಕ.ಕ. ಮಾತು : ನೀ ಅ-ವುನ್ಸಂಗಾಟ ಯಾಕ ಹೋಗಿದಿ ?
ಬ.ಕ : ನೀನಿ ಅವನ ಸಂಗಡ ಏಕೆ ಹೋಗಿದ್ದಿಯಾ ?

-ಲ್ಯಾನ : ಈ ವಿಭಕ್ತಿ ರೂಪ ಕಲ್ಲಬುರ್ಗಿ ಕನ್ನಡದ ಮಾತಿನಲ್ಲಿ ನೆಲಿಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ನೆಲಿಯನ್ನು ತಿಳಿಸಲು
ಕ.ಕ.ಮಾತು : ಹೊಟ್ಟ್ಯಾನ ಕೂಸ, ಹೋರ್‍ಯಾಗ ಬಂದಿತು
ಬ.ಕ : ಹೊಟ್ಟೆಯಲ್ಲಿನ ಕೂಸು ಹೊರಗಡೆ ಬಂದಿತ್ತು

-ಲ್ಯಾಗಿನ : ಈ ವಿಭಕ್ತಿ ರೂಪ ಕಲ್ಲಬುರ್ಗಿ ಕನ್ನಡದ ಮಾತಿನಲ್ಲಿ ನೆಲಿಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ನೆಲಿಯನ್ನು ತಿಳಿಸಲು
ಕ.ಕ. ಮಾತು : ತಲ್ಯಾಗಿನ ಹೆನ ಸತ್ತ್ ಹೋದು
ಬ.ಕ : ತಲೆಯಲ್ಲಿನ ಹೇನು ಸತ್ತು ಹೋದವು.

-ಆಗಿಂದ : ಈ ವಿಭಕ್ತಿ ರೂಪ ಕಲ್ಲಬುರ್ಗಿ ಕನ್ನಡದ ಮಾತಿನಲ್ಲಿ ನೆಲಿಯನ್ನು ಮತ್ತು ಬಿಡುಗಡೆಯನ್ನು ತಿಳಿಸಲು ಬಳಕೆಗೊಳ್ಳುತ್ತದೆ.

ಬಳ್ಕಿ : ನೆಲಿ ತಿಳಿಸಲು
ಕ.ಕ. ಮಾತು : ಕಣ್ಣಾಗಿಂದ ಪಿಚ್ಚು ತಕ್ಕೊ
ಬ.ಕ : ಕಣ್ಣಲ್ಲಿನ ಪಿಚ್ಚು ತೆಗೆದು(ಒರೆಸು)ಕೊಳ್ಳು
ಬಳ್ಕಿ : ಬಿಡುಗಡೆ ತಿಳಿಸಲು

ಕ.ಕ. ಮಾತು: ಕ್ವಡದಾಗಿಂದ ನೀರ್ ಭಲ್ಲದು
ಬ.ಕ : ಕೊಡದಲ್ಲಿನ ನೀರು ಸೋರಿಹೋದವು

ಈ ಮೇಲಿನ ಎಲ್ಲ ಬಗೆ ಬಗೆಯ ವಿಭಕ್ತಿ ರೂಪಗಳು ಕಲ್ಲಬುರ್ಗಿಯಲ್ಲಿ ಇಂದು ಬಳಕೆಯಲ್ಲಿವೆ ನನಗೆ ಸಾಧ್ಯವಾದಷ್ಟನ್ನು ನಾನು ಹುಡುಕಿ ತೋರಿಸುವ ವಂದು ಸಣ್ಣ ಪ್ರಯತ್ನ ಮಾಡಿದ್ದೆನೆ.

■

ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು

◆

ಡಾ. ಅಪ್ಪಣ್ಣ ಎನ್. ಹಂಜೆ

೧. ಪೀಠಿಕೆ

ಕರ್ನಾಟಕದಲ್ಲಿ ಆದಿನಾಥ, ನೇಮಿನಾಥ, ಪಾರ್ಶ್ವನಾಥ, ಮಹಾವೀರ ತೀರ್ಥಂಕರರು ಧರ್ಮಪ್ರಸಾರ ಮಾಡಿದ್ದಾರೆ. ಇದನ್ನು ಆಯಾ ತೀರ್ಥಂಕರರಿಗೆ ಸಂಬಂಧಿಸಿದಂತೆ ರಚನೆಯಾಗಿರುವ ಪುರಾಣಗಳಾದಿ ಕೃತಿ-ಕಾವ್ಯಗಳು ದಾಖಲಿಸಿವೆ. ಆದರೆ ಅಂದಿನ ಜೈನ ಚಟುವಟಿಕೆಗಳ ಕುರಿತು ಶಾಸನಗಳಾದಿ ಪುರಾತತ್ವ ದಾಖಲೆಗಳು ಲಭ್ಯವಿಲ್ಲ. ಕ್ರಿ.ಪೂ. ಸುಮಾರು ೪ನೆಯ ಶತಮಾನದಲ್ಲಿ ಪಂಚಮ ಶ್ರುತಕೇವಲಿ ಭದ್ರಬಾಹು ಭಟ್ಟಾರಕರು (ಕ್ರಿ.ಪೂ. ೩೯೪-೩೬೫) ಮತ್ತು ನಂದರ ಚಂದ್ರಗುಪ್ತನ (ಕ್ರಿ.ಪೂ. ೩೨೨-೩೬೭) ನೇತೃತ್ವದಲ್ಲಿ ಹನ್ನೆರಡು ಸಾವಿರ ಮುನಿಗಳು ಉತ್ತರ ಭಾರತದ 'ಉಜ್ಜಯಿನಿ'ಯಿಂದ ದಕ್ಷಿಣ ಭಾರತದ ಪುನ್ನಾಟದೇಶದ 'ಕಳ್ವಪ್ಪು' ನಾಡಿಗೆ (ಶ್ರವಣ ಬೆಳಗೊಳ) ಆಗಮಿಸಿದರು. ಅಂದಿನಿಂದಲೂ ಜೈನಧರ್ಮವು ದಕ್ಷಿಣ ಭಾರತದ ಚರಿತ್ರೆ ಮತ್ತು ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿ ಬೆಳೆದು ಬಂದಿದೆ. ಇದನ್ನು ಅನೇಕ ಶಾಸನಗಳಾದಿ ವಿವಿಧ ಪುರಾತತ್ವ ಆಕರಗಳು ಮತ್ತು ಸಮಕಾಲೀನ ಸಾಹಿತ್ಯಿಕ ದಾಖಲೆಗಳು ದೃಢಪಡಿಸುತ್ತವೆ. ಭದ್ರಬಾಹು ಭಟ್ಟಾರಕರು ಕರ್ನಾಟಕದಲ್ಲಿ ಇಂದಿನ ಬೀದರ, ಕಲಬುರ್ಗಿ, ಯಾದಗಿರಿ, ವಿಜಯಪುರ, ಬಾಗಲಕೋಟೆ, ಬೆಳಗಾವಿ, ಧಾರವಾಡ, ಹಾವೇರಿ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳ ಪ್ರದೇಶದ ಮಾರ್ಗವಾಗಿ ಶ್ರವಣಬೆಳಗೊಳಕ್ಕೆ ಸಾಗುತ್ತಿದ್ದ ಸಂದರ್ಭದಲ್ಲಿ, ಮಾರ್ಗದುದ್ದಕ್ಕೂ ಅಲ್ಲಲ್ಲಿ ಕೆಲಕಾಲ ನೆಲೆನಿಂತು ಧರ್ಮಪ್ರಸಾರಗೈಯುತ್ತ ಮನುಕುಲವನ್ನು ಉತ್ತಮ ಜೀವನ ಮತ್ತು ಮೋಕ್ಷಮಾರ್ಗದೆಡೆಗೆ ಜಾಗೃತಗೊಳಿಸಿದ್ದಾರೆ. ಅವರು ಗೋಕಾಕ ತಾಲ್ಲೂಕಿನ ಕೊಣ್ಣೂರು ಮತ್ತು ಜಮಖಂಡಿ ತಾಲ್ಲೂಕಿನ ಹಳಿಂಗಳಿ ಗ್ರಾಮಗಳ ಜೈನ ಸಮುದಾಯದ ಆದರಾತಿಥ್ಯದಲ್ಲಿ ಕೆಲಕಾಲ ತಂಗಿದ್ದು, ಇಲ್ಲಿರುವ ಶಿಲಾಗುಂಫಾಗಳಲ್ಲಿ (ಜೈನ ಮುನಿಗಳ ಏಕಾಂತ ತಪಸ್ಸಿನ ತಂಗುದಾಣಗಳು) ತಪಸ್ಸು ಮಾಡಿದರೆಂದು ಪ್ರತೀತಿಯಿದೆ. ಈ ಶಿಲಾಗುಂಫಾಗಳನ್ನು ಪರಿಶೀಲಿಸಿರುವ ಪುರಾತತ್ವ

ಶಾಸ್ತ್ರಜ್ಞರಾದ ಅ. ಸುಂದರ ಅವರು ಇವು ಇತಿಹಾಸಪೂರ್ವ ಕಾಲಾವಧಿಯ ಬೃಹತ್ ಶಿಲಾಸಂಸ್ಕೃತಿಯ (ಕ್ರಿ.ಪೂ. ಸುಮಾರು ೧೨೦೦–೮೦೦) ದಾರಿಕೋಣೆ, ಕಿಂಡಿಕೋಣೆ ಪ್ರಕಾರದ ಗೋರಿಗಳು ಎಂದು ಗುರುತಿಸಿದ್ದಾರೆ. ಕೊಣ್ಣೂರದಲ್ಲಿ ಕ್ರಿ.ಶ. ೧೮೮೪ರಲ್ಲಿ ೭೫೦ಕ್ಕೂ ಹೆಚ್ಚು ಶಿಲಾಗೋರಿಗಳಿದ್ದವು.

೨೦ನೆಯ ಶತಮಾನದ ಪ್ರಥಮಾಚಾರ್ಯರಾದ ಚಾರಿತ್ರಚಕ್ರವರ್ತಿ ಸಮಾಧಿ ಸಾಮ್ರಾಟ ಆಚಾರ್ಯಶ್ರೀ ಶಾಂತಿಸಾಗರರು (ಕ್ರಿ.ಶ. ೧೮೭೨–೧೯೫೫) ಕೊಣ್ಣೂರದಲ್ಲಿ ೧೯೨೪ರಲ್ಲಿ ತಮ್ಮ ४ನೆಯ ಚಾತುರ್ಮಾಸವನ್ನು (ವರ್ಷಾಯೋಗ) ಕೈಗೊಂಡಿದ್ದ ಸಂದರ್ಭದಲ್ಲಿ, ಇಲ್ಲಿಯ ಶಿಲಾಗೋರಿಗಳಲ್ಲಿ ಕಠಿಣ ತಪಸ್ಸುಗೈದು ಹಲವು ಪವಾಡ ಸದೃಶ್ಯಗಳನ್ನು ಮೆರೆದಿದ್ದಾರೆ. ಹೀಗಾಗಿ ಈ ಶಿಲಾಗೋರಿಗಳ ಸ್ಥಳಗಳಿಗೆ 'ತಪಸಿಮಡ್ಡಿಗಳು' (ತಪಸ್ವಿಮರಡಿಗಳು) ಎಂಬ ಹೆಸರು ರೂಢಿಯಲ್ಲಿದೆ. ಇವುಗಳನ್ನು ಭಕ್ತಿಯಿಂದ ಗೌರವಿಸುತ್ತ ಕಾಪಾಡಿಕೊಂಡು ಇಂದಿಗೂ ಸುರಕ್ಷಿತವಾಗಿ ಉಳಿಸಿಕೊಂಡು ಬಂದಿರುವುದು ಇಲ್ಲಿಯ ಜೈನರ ಐತಿಹಾಸಿಕ ಪ್ರಜ್ಞೆಗೆ ಉತ್ತಮ ನಿದರ್ಶನವಾಗಿದೆ. ಈಗ ಏಳೆಂಟು ಶಿಲಾಗೋರಿಗಳು ಮಾತ್ರ ಗೋಚರಿಸುತ್ತವೆ. ಇಲ್ಲಿಯ ತಪಸಿಮಡ್ಡಿಗಳಲ್ಲಿ ಭದ್ರಬಾಹು ಭಟ್ಟಾರಕರ ಪರೋಕ್ಷ ವಿನಯಾರ್ಥವಾಗಿ ನಿಷಿಧಿ ಮಂಟಪಗಳನ್ನು ನಿರ್ಮಿಸಲಾಗಿದೆ. ಭದ್ರಬಾಹು ಭಟ್ಟಾರಕರ ಮುನಿಸಂಘವು ಬೆಳಗಾವಿ ನಗರದ ಕೋಟೆಯಲ್ಲಿರುವ ಕಮಲ ಬಸದಿಯ (ನೇಮಿನಾಥ ಬಸದಿ) ಪರಿಸರದಲ್ಲಿಯೂ ಕೆಲಕಾಲ ನೆಲೆಸಿತ್ತೆಂದು ಐತಿಹ್ಯವಿದೆ. ಹಳಿಂಗಳಿಯ ಬೆಟ್ಟದಲ್ಲಿ ೭೭೨ಕ್ಕೂ ಹೆಚ್ಚು ಶಿಲಾಗೋರಿಗಳಿದ್ದವು. ಗಣಿಗಾರಿಕೆ ಕೆಲಸದಿಂದ ಹಲವು ನಾಶವಾಗಿದ್ದು, ಕೆಲವು ಮಾತ್ರ ಉಳಿದು ಬಂದಿವೆ. ಈ ಶಿಲಾಗೋರಿಗಳನ್ನು ಭದ್ರಬಾಹು ಭಟ್ಟಾರಕರು ಮತ್ತು ನಂತರದ ಅನೇಕ ಮುನಿಗಳು ತಮ್ಮ ಏಕಾಂತ ತಪಸ್ಸಿಗೆ ಗುಂಫಾಗಳನ್ನಾಗಿ ಬಳಸಿಕೊಂಡಿದ್ದಾರೆ. ಎಂತಲೇ ಸ್ಥಳೀಯ ಜೈನ ದೇಸಗತಿ (ದೇಸಾಯಿ) ಮನೆತನದ ಕಾಲದಿಂದಲೂ ಇವುಗಳ ಸಂರಕ್ಷಣೆಯ ಕಾರ್ಯ ಮುಂದುವರಿದು ಬಂದಿದೆ. ಈ ಶಿಲಾಗೋರಿಗಳ ಬೆಟ್ಟವನ್ನು 'ಭದ್ರಗಿರಿ ಬೆಟ್ಟ' ಎಂದು ಕರೆಯಲಾಗುತ್ತಿದೆ.

ಕರ್ನಾಟಕದ ವಾಯವ್ಯ ಭಾಗದಲ್ಲಿ ಮಲೆನಾಡು ಮತ್ತು ಬಯಲುನಾಡುಗಳಲ್ಲಿ ವಿಸ್ತರಿಸಿರುವ ಬೆಳಗಾವಿ ಜಿಲ್ಲೆಯ ಹವಾಮಾನ, ಜಲಸಂಪತ್ತು, ಭೂಸಂಪತ್ತು, ಶಿಲಾಸಂಪತ್ತು, ಅರಣ್ಯಸಂಪತ್ತು, ಸಸ್ಯಸಂಪತ್ತು, ಪ್ರಾಣಿಸಂಪತ್ತು ಮೊದಲಾದ ನೈಸರ್ಗಿಕ ಸಂಪನ್ಮೂಲಗಳು ಸಂಪದ್ಭರಿತವಾಗಿವೆ. ಈ ನೈಸರ್ಗಿಕ ಸಂಪನ್ಮೂಲಗಳು ಈ ಪ್ರದೇಶದಲ್ಲಿ ಇತಿಹಾಸಪೂರ್ವ ಕಾಲದಿಂದಲೂ ವಿವಿಧ ಶಿಲಾಯುಗ ಮಾನವ ಸಂಸ್ಕೃತಿಗಳ ಆಶ್ರಯ–ಪೋಷಣೆಯ ಜೊತೆಗೆ ಅವುಗಳ ಬೆಳವಣಿಗೆಯಲ್ಲಿಯೂ ಮಹತ್ತರವಾದ ಪಾತ್ರವಹಿಸಿವೆ. ಹಾಗೆಯೇ ಈ ಸಂಪನ್ಮೂಲಗಳು ಈ ಪ್ರದೇಶವನ್ನಾಳಿದ ಮತ್ತು ಇಲ್ಲಿ ತಮ್ಮ ಆಳ್ವಿಕೆಯ ಪ್ರಭಾವವನ್ನು ಹೊಂದಿದ್ದ ಆಳರಸರಾದಿ ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರು, ದೇಸಗತಿಗಳು, ಬ್ರಿಟಿಷರು ಮೊದಲಾದವರ ರಾಜಕೀಯ, ಆಡಳಿತ, ಧಾರ್ಮಿಕ, ಆರ್ಥಿಕ, ಸಾಮಾಜಿಕ, ಸಂಸ್ಕೃತಿ, ಶೈಕ್ಷಣಿಕ, ವಾಸ್ತುಕಲೆ, ಶಿಲ್ಪಕಲೆ ಇತ್ಯಾದಿ ಕ್ಷೇತ್ರಗಳ ಅಭಿವೃದ್ಧಿಗೂ ಪೂರಕವಾಗಿವೆ. ಈ ಆಳರಸ ಆಳ್ವಿಕೆಯ ಕಾಲಾವಧಿಯಲ್ಲಿ

ಬೆಳಗಾವಿ ಜಿಲ್ಲೆಯ ಇಂದಿನ ಪ್ರದೇಶವು ಕುಂತಳನಾಡು, ಪ(ಹ)ಲಸಿಗೆ-೧೨೦೦೦, ಕರಹಡ-೪೦೦೦, ಕೂಹುಂಡಿ-೩೦೦೦, ಮಿರಿಂಜೆ-೩೦೦೦, ಕೊಂಕಣ-೯೦೦, ತೊರಗಲೆ-೬೦೦೦, ಕಣಂಬಡೆ-೩೦೦, ಬೆಳ್ವೊಲ-೩೦೦, ಕುರವಳ್ಳಿ-೧೫೦, ಕನ್ನನ-೧೦೦, ಸುದ್ದಿಕುಂದೂರು-೭೦, ವೇಣುಗ್ರಾಮೆ-೭೦, ಹೊರಘಟ್ಟ-೭೦, ಉಂಬರವಾಣಿ-೩೦, ಮೂವತ್ತಾರುಂಬಾಡ, ಕುಮುದವಾಡ-೩೦, ಉತ್ತುಗ್ರಾಮೆ-೩೦, ಕೊಟ್ಟಿಬಾಗೆ-೩೦, ಪೊಳಲ್ಗುಂದೆ-೩೦, ಸೋಲ-೩೦, ಕಾದರವಳ್ಳಿ-೩೦, ಹುವಳ್ಳಿ-೧೨, ಕಿತ್ತೂರು-೩೦, ಸುಗಂಧವರ್ತಿ-೧೨, ತೇರಿದಾಳ-೧೨, ನೇಸರಗಿ-೧೨, ಕಾಲಗಿರಿ ಕಂಪಣ, ಕುಂದರಗಿ ಕಂಪಣ, ಕುರುಂಬೆಟ್ಟ ಕಂಪಣ, ಕೊರವಳ್ಳಿ ಕಂಪಣ, ನೊಲೆನಾಡು, ಬಾಂಬೆ (ಮುಂಬಯಿ) ಮೊದಲಾದ ಆಡಳಿತ ವಿಭಾಗಗಳಲ್ಲಿ ಹಂಚಿಹೋಗಿತ್ತು. ಈ ಜಿಲ್ಲೆಯಲ್ಲಿ ಜೈನಧರ್ಮದ ಪ್ರಸಾರ ಮತ್ತು ಚಟುವಟಿಕೆಗಳು ಪೌರಾಣಿಕ ಪರಂಪರೆಯ ಹಿನ್ನೆಲೆಯಲ್ಲಿ ಕ್ರಿ.ಪೂ. ಸುಮಾರು ೪ನೆಯ ಶತಮಾನದಿಂದಲೂ ಗೋಚರಿಸುತ್ತವೆ. ಐತಿಹಾಸಿಕವಾಗಿ ಕ್ರಿ.ಶ. ಸುಮಾರು ೫ನೆಯ ಶತಮಾನದಿಂದಲೂ ಈ ಪ್ರದೇಶದಲ್ಲಿ ಅನೇಕ ಜೈನ ಮುನಿಗಳು ಧರ್ಮಪ್ರಸಾರದೊಂದಿಗೆ ಬಸದಿಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ, ದಾನ-ದತ್ತಿಗಳು ಮೊದಲಾದ ಚಟುವಟಿಕೆಗಳಿಗೆ ಪ್ರೇರಣೆ ಕೊಡಮಾಡುತ್ತ ಬಂದಿರುವುದನ್ನು ಇಲ್ಲಿಯ ಶಾಸನಗಳಾದಿ ವಿವಿಧ ಪುರಾತತ್ವ ಆಕರಗಳು ಮತ್ತು ಸಮಕಾಲೀನ ಕೃತಿ-ಕಾವ್ಯಗಳು ಸ್ಪಷ್ಟಪಡಿಸುತ್ತವೆ.

೨. ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು

ಬ್ರಿಟಿಷರು ಭಾರತದಲ್ಲಿ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದ ತರುವಾಯ ಇಲ್ಲಿಯ ಚರಿತ್ರೆ, ಸಮಾಜ, ಸಂಸ್ಕೃತಿ ಇತ್ಯಾದಿ ವಿಷಯಗಳ ಕುರಿತು ಅಧ್ಯಯನದೆಡೆಗೆ ಆಸಕ್ತರಾದರು. ಕ್ರಿ.ಶ. ೧೭೮೩ರಲ್ಲಿ ಕಲ್ಕತ್ತದ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧಿಶನಾಗಿ ಆಗಮಿಸಿದ ಸರ್ ವಿಲಿಯಂ ಜೋನ್ಸ್‌ನು ಕ್ರಿ.ಶ. ೧೭೮೪ರಲ್ಲಿ 'ರಾಯಲ್ ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದನು. ಇದರ ಆಶ್ರಯದಲ್ಲಿ ಪ್ರಾರಂಭವಾದ 'ಏಷಿಯಾಟಿಕ್ ರಿಸರ್ಚಸ್', 'ಜರ್ನಲ್ ಆಫ್ ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಮತ್ತು ಕ್ರಿ.ಶ. ೧೮೭೬ರಲ್ಲಿ ಜೇಮ್ಸ್ ಬರ್ಗೆಸ್ ಆರಂಭಿಸಿದ 'ಇಂಡಿಯನ್ ಎಂಟಿಕ್ವೇರಿ' ನಿಯತಕಾಲಿಕೆಗಳಲ್ಲಿ ಅಂದಿನ ಬ್ರಿಟಿಷ ಅಧಿಕಾರಿಗಳಾದ ಅಲೆಕ್ಸಾಂಡರ್ ಮ್ಯಾಕ್ಲಿಯೋಡ್, ವಾಲ್ಟರ್ ಇಲಿಯಟ್, ಕರ್ನಲ್ ಮೆಕೆಂಜಿ, ಕೋಲ್ ಬ್ರೂಕ್, ವಿಲಿಯಂ ಹೆನ್ರಿ ವಥೆನ್, ಬಿ.ಎಲ್. ರೈಸ್, ಜೆ.ಎಫ್. ಫ್ಲೀಟ್ ಮೊದಲಾದವರು ತಾವು ಕರ್ನಾಟಕದ ವಿವಿದೆಡೆಗಳಲ್ಲಿ ಸಂಗ್ರಹಿಸಿದ ಮತ್ತು ಶೋಧಿಸಿದ ಶಾಸನಗಳನ್ನು ಪ್ರಕಟಿಸಲು ಪ್ರಾರಂಭಿಸಿದರು. ಇವರಲ್ಲಿ ಜೈನ ಶಾಸನಗಳಾದಿ ವಿವಿಧ ಆಕರಗಳ ಕುರಿತು ಮೊಟ್ಟಮೊದಲು ಅಧ್ಯಯನ ಪ್ರಾರಂಭಿಸಿದ ಕೀರ್ತಿ ಕರ್ನಲ್ ಮೆಕೆಂಜಿ ಮತ್ತು ಈತನ ಸಹಾಯಕನಾಗಿದ್ದ ದೇಶೀಯ ವೈದಿಕ ವಿದ್ವಾಂಸ ಕವೆಲ್ಲಿ ವೆಂಕಟ ಬೋರಯ್ಯ ಅವರಿಗೆ ಸಲ್ಲುತ್ತದೆ. ವಿಲಿಯಂ ಹೆನ್ರಿ ವಥೆನ್‌ನು ಕ್ರಿ.ಶ. ೧೮೩೩ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಜೈನ ಶಾಸನಗಳ ಅಧ್ಯಯನವನ್ನು ಪ್ರಾರಂಭಿಸಿದನು. ಈ ಜಿಲ್ಲೆಯಲ್ಲಿ ಜೆ.ಎಫ್. ಫ್ಲೀಟ್, ವೆಂಕಟರಂಗೋ ಕಟ್ಟಿ, ಗಂಗಾಧರಯ್ಯ

ಮಡಿವಾಳೇಶ್ವರ ತುರಮರಿ, ಎಸ್.ಸಿ. ನಂದಿಮಠ, ಪಿ.ಬಿ. ದೇಸಾಯಿ, ಕೆ.ಜಿ. ಕುಂದಣಗಾರ, ಆರ್.ಎನ್. ಗುರವ, ಎಂ.ಬಿ. ನೇಗಿನಹಾಳ, ಶ್ರೀನಿವಾಸ ರಿತ್ತಿ, ಹಂಪ ನಾಗರಾಜಯ್ಯ, ಶ್ರೀನಿವಾಸ ಪಾಡಿಗಾರ, ಆರ್.ಎಂ. ಷಡಕ್ಷರಯ್ಯ, ಹನುಮಾಕ್ಷಿ ಗೋಗಿ, ಅಪ್ಪಣ್ಣ ಎನ್. ಹಂಜೆ, ಪಿ.ಜಿ. ಕೆಂಪಣ್ಣವರ, ಬಾಹುಬಲಿ ಹಂದೂರ, ಮಹೇಶ ಅಂಗಡಿ, ಶ್ರೀಧರ ಕುಲಕರ್ಣಿ, ಸಂಜಯ ಎನ್. ಹಂಜೆ ಮೊದಲಾದವರ ಪರಿಶ್ರಮದಿಂದ ಅನೇಕ ಜೈನ ಶಾಸನಗಳು ಬೆಳಕಿಗೆ ಬಂದಿವೆ. ಇವೆಲ್ಲವೂ ಎನ್ಯುವಲ್ ರಿಪೋರ್ಟ್ಸ್ ಆನ್ ಸೌಥ್ ಇಂಡಿಯನ್ ಎಪಿಗ್ರಫಿಯ ವಾರ್ಷಿಕ ವರದಿಗಳು, ವಿವಿಧ ನಿಯತಕಾಲಿಕೆಗಳು, ಸ್ಮರಣ ಸಂಚಿಕೆಗಳು, ಶಾಸನ ಸಂಪುಟಗಳು, ಸಂಶೋಧನ ಕೃತಿಗಳಲ್ಲಿ ಪ್ರಕಟವಾಗಿವೆ.

೨.೧. ಖಾನಾಪುರ ತಾಲ್ಲೂಕಿನ ಶಾಸನಗಳು

೧. ಹಲಸಿಯಲ್ಲಿ ದೊರೆತಿರುವ ಬನವಾಸಿ ಕದಂಬರ ಮೃಗೇಶವರ್ಮನ ಕ್ರಿ.ಶ. ಸುಮಾರು ೫ನೆಯ ಶತಮಾನದ ತಾಮ್ರಪಟ ಶಾಸನದಲ್ಲಿ (ಈ ತಾಮ್ರಪಟವು ಈಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿದೆ), "ಮೃಗೇಶವರ್ಮನು ತನ್ನ ತಂದೆ ಶಾಂತಿವರ್ಮನ ಮೋಕ್ಷಾರ್ಥವಾಗಿ ಶ್ರೀವಿಜಯ ಪಲಾಸಿಕಾ ನಗರದಲ್ಲಿ (ಹಲಸಿ) ಬಸದಿಯನ್ನು (ಆದಿನಾಥ ಬಸದಿ) ನಿರ್ಮಿಸಿ ಯಾಪನೀಯ, ನಿರ್ಗ್ರಂಥ, ಕೂರ್ಚಕ ಸಂಘಗಳ ಪರಂಪರೆಯ ಮುನಿಗಳಿಗಾಗಿ ಭೋಜಕ ದಾಮಕೀರ್ತಿ ಮತ್ತು ಆಯುಕ್ತ ಜಯಂತನಿಗೆ ಮೂವತ್ತುಮೂರು ನಿವರ್ತನ ಭೂಮಿಯನ್ನು ದಾನ ಮಾಡಿದನು" ಎಂದು ಉಲ್ಲೇಖವಿದೆ.

೨. ಹಲಸಿಯಲ್ಲಿ ದೊರೆತಿರುವ ಬನವಾಸಿ ಕದಂಬರ ರವಿವರ್ಮನ ಕ್ರಿ.ಶ. ಸುಮಾರು ೫ನೆಯ ಶತಮಾನದ ತಾಮ್ರಪಟ ಶಾಸನದಲ್ಲಿ (ಈ ತಾಮ್ರಪಟವು ಈಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿದೆ), "ರವಿವರ್ಮನ ಸಹೋದರನಾದ ಭಾನುವರ್ಮನು ಸ್ಥಳೀಯ ಬಸದಿಯಲ್ಲಿ ಪ್ರತಿ ಹುಣ್ಣಿಮೆಯಂದು ತಪ್ಪದೆ ಜಿನಾಭಿಷೇಕ ಮಾಡುವುದಕ್ಕಾಗಿ ಕರ್ದಮಪಟ್ಟಿ ಎಂಬ ಕ್ಷೇತ್ರದಲ್ಲಿ ಹದಿನೈದು ನಿವರ್ತನ ಭೂಮಿಯನ್ನು ಉಂಚ್ಛಕರ ಎಂಬ ತೆರಿಗೆಯಿಂದ ಮುಕ್ತಮಾಡಿ ದಾನ ಮಾಡಿದನು" ಎಂದು ಪ್ರಸ್ತಾಪವಿದೆ.

೩. ಹಲಸಿಯಲ್ಲಿ ದೊರೆತಿರುವ ಬನವಾಸಿ ಕದಂಬರ ರವಿವರ್ಮನ ಕ್ರಿ.ಶ. ಸುಮಾರು ೫ನೆಯ ಶತಮಾನದ ತಾಮ್ರಪಟ ಶಾಸನದಲ್ಲಿ (ಈ ತಾಮ್ರಪಟವು ಈಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿದೆ), "ರವಿವರ್ಮನು ತನ್ನ ದಂಡನಾಯಕ ಶ್ರುತಕೀರ್ತಿ ಭೋಜಕನ ಮಗನಾದ ದಾಮಕೀರ್ತಿಯ ತಾಯಿಯ ವಾತ್ಸಲ್ಯಕ್ಕೆ ಒಳಗಾಗಿ ಬಸದಿಯಲ್ಲಿ ಜಿನಾಭಿಷೇಕಕ್ಕಾಗಿ ನಾಲ್ಕು ನಿವರ್ತನ ಭೂಮಿಯನ್ನು ದಾನ ಮಾಡಿದನು" ಎಂದು ವಿವರವಿದೆ.

೪. ಹಲಸಿಯಲ್ಲಿ ದೊರೆತಿರುವ ಬನವಾಸಿ ಕದಂಬರ ರವಿವರ್ಮನ ಕ್ರಿ.ಶ. ಸುಮಾರು ೫ನೆಯ ಶತಮಾನದ ತಾಮ್ರಪಟ ಶಾಸನದಲ್ಲಿ (ಈ ತಾಮ್ರಪಟವು ಈಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿದೆ), "ಬಹುವಿದ್ಯಾಸಂಪನ್ನನೂ, ದಾನಗುಣಶೀಲನೂ, ಯಜನ–ಯಾಜನ ಕಾರ್ಯನಿಪುಣನೂ ಆದ ದಂಡನಾಯಕ ಶ್ರುತಕೀರ್ತಿ ಭೋಜಕನಗೆ ಕಾಕುಸ್ಥವರ್ಮನು ದತ್ತಿ ಕೊಟ್ಟಿದ್ದ ಪುರುಖೇಟಕ ಗ್ರಾಮದಲ್ಲಿನ ಬಳೋವರ ಕ್ಷೇತ್ರವನ್ನು (ಹಲಸಿಯ ಪಶ್ಚಿಮಕ್ಕಿರುವ 'ಬೊಡಕ್ಕೆ ಟೆಂಬೆ' ಎಂದು ಕರೆಯುವ ಬೆಟ್ಟದ ಪರಿಸರ) ಈತನ ಮಗನಾದ ಶಾಂತಿವರ್ಮನು ದೃಢೀಕರಿಸಿದನು. ಮೃಗೇಶವರ್ಮನು ದಾಮಕೀರ್ತಿಯ ತಾಯಿಗೆ ಅದನ್ನು ಪುನರ್ ನವೀಕರಿಸಿಕೊಟ್ಟನು. ರವಿವರ್ಮನು ದಾಮಕೀರ್ತಿಯ ಮಗನಾದ ಪ್ರತೀಹಾರ ಜಯಕೀರ್ತಿಗೆ ಈ ದತ್ತಿಯ ಉತ್ಪನವನ್ನು ಪ್ರತಿವರ್ಷ ಕಾರ್ತಿಕ ಮಾಸದಲ್ಲಿ ಎಂಟು ದಿನಗಳ ಕಾಲ ಜಿನೇಂದ್ರನ ಮಹಿಮಾ ಉತ್ಸವವನ್ನು ಕ್ರಮದಿಂದ ಆಚರಿಸಲು, ಯಾಪನೀಯ ಸಂಘದ ಮುನಿಗಳ ಚಾತುರ್ಮಾಸಕ್ಕೆ ಸಕಲ ಸೌಲಭ್ಯಗಳನ್ನು ಪ್ರತಿವರ್ಷ ಒದಗಿಸಿಕೊಡಲು, ಕುಮಾರದತ್ತರೇ ಮುಖ್ಯರಾದಂತಹ ಸಾಹಿತಿ, ಚಿಂತಕ, ಜ್ಞಾನಿ, ತಪೋಧನ ಸಂಘಗಳಿಗೆ ಆಶ್ರಯ ಕೊಡುವುದಕ್ಕಾಗಿ, ಪಲಾಶಿಕಾ ನಗರದ ಜಿನಾಲಯದಲ್ಲಿ ಜಿನೇಂದ್ರನ ಪೂಜೆಯನ್ನು ತಪ್ಪದೆ ನಡೆಸಿಕೊಂಡು ಬರುವುದಕ್ಕೆ ಎಂಬ ನಿಬಂಧನೆಯೊಂದಿಗೆ ನವೀಕರಿಸಿಕೊಟ್ಟ ಮತ್ತು ಜಯಕೀರ್ತಿ ಇದನ್ನು ತನ್ನ ತಂದೆಯ ತಾಯಿಗೆ ವರ್ಗಾಯಿಸಿಕೊಟ್ಟನು" ಎಂದು ವಿವರಗಳಿವೆ.

೫. ಹಲಸಿಯಲ್ಲಿ ದೊರೆತಿರುವ ಬನವಾಸಿ ಕದಂಬರ ಹರಿವರ್ಮನ ಕ್ರಿ.ಶ. ಸುಮಾರು ೬ನೆಯ ಶತಮಾನದ ತಾಮ್ರಪಟ ಶಾಸನದಲ್ಲಿ (ಈ ತಾಮ್ರಪಟವು ಈಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿದೆ), "ಹರಿವರ್ಮನು ಉಚ್ಚಶೃಂಗಿಯಲ್ಲಿ ಬಿಡಾರ ಮಾಡಿದ್ದ ಸಂದರ್ಭದಲ್ಲಿ ತನ್ನ ಚಿಕ್ಕಪ್ಪ ಶಿವರಥನ ಸೂಚನೆಯ ಮೇರೆಗೆ ಸುದ್ಧಿಕುಂದೂರು (ಧಾರವಾಡ ತಾಲ್ಲೂಕಿನ ನರೇಂದ್ರ) ವಿಷಯದಲ್ಲಿಯ ವಸಂತವಾಟಿಕಾ ಗ್ರಾಮವನ್ನು ಭಾರದ್ವಾಜ ಗೋತ್ರದ ಸಿಂಹಸೇನಾಪತಿಯ ಮಗನಾದ ಮೃಗೇಶನು ಪಲಾಶಿಕಾದಲ್ಲಿ ನಿರ್ಮಿಸಿದ ಬಸದಿಯಲ್ಲಿ ಅರಹಂತನ ಅಭಿಷೇಕ ಮತ್ತು ಪೂಜಾದಿಗಳಿಗೆ ಚಂದ್ರಕಾಂತ ಮುಂತಾದ ಪ್ರಮುಖರ ಸನ್ನಿಧಿಯಲ್ಲಿ ಕೂರ್ಚಕ ಪರಂಪರೆಯ ವಾರಿಷೇಣಾಚಾರ್ಯರ ಸಂಘಕ್ಕೆ ದತ್ತಿ ಕೊಟ್ಟು, ಇದರ ಆದಾಯದಿಂದ ವರ್ಷಂಪ್ರತಿ ಎಂಟು ದಿನಗಳು ಬಸದಿಯಲ್ಲಿ ಚರೂಪಲೇಪನ (ಅಭಿಷೇಕ) ಕ್ರಿಯೆಗಾಗಿ ಮತ್ತು ಸರ್ವಸಂಘಗಳ ಮುನಿಗಳಿಗೆ ಆಹಾರದಾನಕ್ಕೆ ವಿನಿಯೋಗಿಸಬೇಕೆಂದು ನಿಯಮ ಮಾಡಿದನು" ಎಂದು ಪ್ರಸ್ತಾಪಗಳಿವೆ.

೬. ಹಲಸಿಯಲ್ಲಿ ದೊರೆತಿರುವ ಬನವಾಸಿ ಕದಂಬರ ಹರಿವರ್ಮನ ಕ್ರಿ.ಶ. ಸುಮಾರು ೬ನೆಯ ಶತಮಾನದ ತಾಮ್ರಪಟ ಶಾಸನದಲ್ಲಿ (ಈ ತಾಮ್ರಪಟವು ಈಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿದೆ), "ಪಲಾಶಿಕಾದ ಬಸದಿಯ ಪೂಜೆ–ಪುನಸ್ಕಾರ ಮತ್ತು ಮುನಗಳ ಆಹಾರದಾನಕ್ಕೆ

ಸೇಂದ್ರಕರ ಭಾನುಶಕ್ತಿಯ ಕೋರಿಕೆಯ ಮೇರೆಗೆ ಅಹರಿಷ್ಟ ಶ್ರಮಣಸಂಘದ ಆಚಾರ್ಯ ಧರ್ಮನಂದಿಯ ಸನ್ನಿಧಿಯಲ್ಲಿ ಮರದೆ ಎಂಬ ಗ್ರಾಮವನ್ನು ದತ್ತಿ ಕೊಟ್ಟನು" ಎಂದು ಉಲ್ಲೇಖವಿದೆ.

೭. ಗೋಲಿಹಳ್ಳಿಯ ಸಿದ್ಧಲಿಂಗ ದೇವಾಲಯದ ಮುಂಭಾಗದಲ್ಲಿರುವ ಕ್ರಿ.ಶ. ೧೧೭೬ರ ಶಾಸನದಲ್ಲಿ, "ಗಂಗಿಸೆಟ್ಟಿಯರು ಕಿರುಸಂಪಗಾಡಿಯಲ್ಲಿ (ಬೀಡಿ) ನಿರ್ಮಿಸಿದ ಬಸದಿಯ ಜೀರ್ಣೋದ್ಧಾರ, ನಂದಾದೀವಿಗೆ, ಮುನಿಗಳ ಆಹಾರದಾನಕ್ಕೆಂದು ಇವರ ಮಕ್ಕಳಾದ ಮಲ್ಲಿಸೆಟ್ಟಿ, ದೇವಿಸೆಟ್ಟಿ, ಮಧುರ ಸೆಟ್ಟಿಯರು ಮತ್ತು ಅಯ್ನೂರ್ವರು, ಇನ್ನೂರ್ವರು ಸೋಮಗ್ರಹಣ ನಿಮಿತ್ತವಾಗಿ ಮೂಲಸಂಘದ ಬಳಗಾರಗಣ ಪರಂಪರೆಯ ನೇಮಿಚಂದ್ರ ಭಟ್ಟಾರಕದೇವನ ಶಿಷ್ಯ ವಾಸುಪೂಜ್ಯ ಭಟ್ಟಾರಕನ ಸನ್ನಿಧಿಯಲ್ಲಿ ಭೂಮಿ, ಗಾಣ, ನಿವೇಶನ, ನಾಣ್ಯವನ್ನು ದಾನ ಮಾಡಿದರು" ಎಂದು ನಿರೂಪಣೆಯಿದೆ.

೮. ಕಸಮಳಗಿಯ ಪಾರ್ಶ್ವನಾಥ ಬಸದಿಯ ಗರ್ಭಗೃಹದಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪದ ಪಾದಪೀಠದ ಮೇಲಿರುವ ಶಾಸನದಲ್ಲಿ, "ಮೂಲಸಂಘದ ಬಳಗಾರಗಣ ಪರಂಪರೆಯ ಕೇಶರ್ಮಣಗೆ (ಕಸಮಳಗಿ) ಬಸದಿಯ ಸ್ಥಾನಾಚಾರ್ಯನಾದ ತ್ರಿಭುವನಚಂದ್ರ ಭಟ್ಟಾರಕದೇವನ ಶಿಷ್ಯ ಕೈಹಮಸೆಟ್ಟಿ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವನ್ನು ಪ್ರತಿಷ್ಠಾಪಿಸಿದನು" ಎಂದು ವಿವರವಿದೆ.

೨.೨. ಬೈಲಹೊಂಗಲ ತಾಲ್ಲೂಕಿನ ಶಾಸನಗಳು

೧. ಬೆಳವಡಿಯ ಪದವಿಪೂರ್ವ ಮಹಾವಿದ್ಯಾಲಯದ ಆವರಣದಲ್ಲಿರುವ ಕ್ರಿ.ಶ. ೧೦೭೦ರ ಶಾಸನದಲ್ಲಿ, "ಕಲ್ಯಾಣದ ಚಾಳುಕ್ಯರ ಭುವನೈಕಮಲ್ಲದೇವನ (ಇಮ್ಮಡಿ ಸೋಮೇಶ್ವರ) ಆಳ್ವಿಕೆಯ ಸಂದರ್ಭದಲ್ಲಿ, ಗುಣಲೋಕೋತ್ತಮನಾದ ಗುಣಕೀರ್ತಿದೇವನ ಶಿಷ್ಯರಾದ ನರಸಿಂಹಪ್ರಭು, ಈತನ ಧರ್ಮಪತ್ನಿ ಪಿಟ್ಟಿಕಬ್ಬೆ, ಇವರ ಮಕ್ಕಳಾದ ಜಯದೇವ (ಈತನನ್ನು ಬ್ರಹ್ಮಯ್ಯ, ಜಯಸಿಂಹ ಎಂತಲೂ ಕರೆಯಲಾಗಿದೆ), ದೇವಣ್ಣ, ಚಾವುಂಡಮಯ್ಯ, ಆಯ್ತವರ್ಮ, ಅತ್ತಿಗೆಯಾದ (ನಾದಿನಿ) ಸತ್ತಿಯಬ್ಬೆ, ಸಹೋದರನಾದ ಪೊಲ್ಲ ಇವರೆಲ್ಲರೂ ಕೂಡಿಕೊಂಡು ಮೈಳಾಪಾನ್ವಯ ಪರಂಪರೆಯ ಸಹಸ್ರಕೂಟ ಬಸದಿಗೆ ದಾನ ಮಾಡಿದರು" ಎಂದು ಉಲ್ಲೇಖವಿದೆ.

೨. ಬೆಳವಡಿಯ ಕೋಟೆ ಗೋಡೆಯ ಹತ್ತಿರವಿರುವ ಕ್ರಿ.ಶ. ೧೦೭೫ರ ಶಾಸನದಲ್ಲಿ, "ಕಲ್ಯಾಣದ ಚಾಳುಕ್ಯರ ಭುವನೈಕಮಲ್ಲದೇವನ (ಇಮ್ಮಡಿ ಸೋಮೇಶ್ವರ) ಮಹಾಸಾಮಂತ ಗಂಧಮರಸನು ಪೊಳಲ್ಗುಂದ-೩೦ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸಂದರ್ಭದಲ್ಲಿ, ದಾಯಿಮಸೆಟ್ಟಿ ಬೆಳವಡಿಯ ಸಹಸ್ರಕೂಟ ಬಸದಿಯ ಮುನಿಗಳ ಆಹಾರದಾನಕ್ಕೆ ಮುನಿಚಂದ್ರತ್ರೈವಿದ್ಯದೇವನ ಸನ್ನಿಧಿಯಲ್ಲಿ ಐವತ್ತು ದಿನಾರಗಳನ್ನು, ದಾಯಿಮಸೆಟ್ಟಿಯ ಮಗನೂ ಮಲಧಾರಿಸೂರಿಯ ಗುಡ್ಡನೂ (ಶಿಷ್ಯ) ಆದ ಮುದ್ದಿಸೆಟ್ಟಿ ಐವತ್ತು ನಿಷ್ಕಗಳನ್ನು, ಗುಣಕೀರ್ತಿಮುನೀಂದ್ರನ ಗುಡ್ಡರಾದ (ಶಿಷ್ಯರು) ತೈಲಗಾವುಂಡ ಮತ್ತು ದಾಸಿಕಬ್ಬೆ ದಂಪತಿಗಳ ಮಗನಾದ ಮಾರಸಿಂಗ ಗಾವುಂಡನು ಐವತ್ತು

ಹೊನ್ನುಗಳನ್ನು, ಮಾರಸಿಂಗ ಗಾವುಂಡನ ಧರ್ಮಪತ್ನಿ ಲೋಕಲೆ ಮತ್ತು ಮಕ್ಕಳಾದ ಬಾಗುಡ, ಚಂದನ ಕೂಡಿಕೊಂಡು ನಾಗಚಂದ್ರಸಿದ್ಧಾಂತದೇವನ ಸನ್ನಿಧಿಯಲ್ಲಿ ಇಪ್ಪತ್ತು ಕಾಂಚನಗಳನ್ನು (ಚಿನ್ನದ ನಾಣ್ಯಗಳು) ದಾನ ಮಾಡಿದರು" ಎಂದು ಪ್ರಸ್ತಾಪವಿದೆ.

೩. ಬೆಳವಡಿಯ ವೀರಭದ್ರ ದೇವಾಲಯದ ಹಿಂಭಾಗದಲ್ಲಿರುವ ಕ್ರಿಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ, "ಸವದತ್ತಿ ರಟ್ಟರ ಕನ್ನಕೈರನ ಮಗಳು ಭಾಗಿಯಬ್ಬೆ ಬೆಳವಡಿಯ ಸಹಸ್ರಕೂಟ ಬಸದಿಗೆ ಕಾರೆಯಗಣ ಪರಂಪರೆಯ ಗುಣಕೀರ್ತಿ ಭಟ್ಟಾರಕದೇವನ ಪಾದಗಳನ್ನು ತೊಳೆದು ಭೂಮಿಯನ್ನು ದಾನ ಮಾಡಿದಳು ಮತ್ತು ಇದೇ ಬಸದಿಗೆ ಕಲ್ಯಾಣದ ಚಾಲುಕ್ಯರ ಭುವನೈಕಮಲ್ಲದೇವನ (ಇಮ್ಮಡಿ ಸೋಮೇಶ್ವರ) ಮಹಾಸಾಮಂತನಾದ ಗಂಧಮರಸ, ಪೊಲ್ಲೆಗ, ಕುಮಾರ ಬಮ್ಮರಸ ಕೂಡಿಕೊಂಡು ಚಂದ್ರಕೀರ್ತಿದೇವನ ಕಾಲುಗಳನ್ನು ತೊಳೆದು ತಮ್ಮ ಸೀವಟದೊಳಗೆ ಭೂಮಿಯನ್ನು ದಾನ ಮಾಡಿದರು" ಎಂದು ನಿರೂಪಣೆಯಿದೆ.

೪. ದೊಡವಾಡದ ವೀರಭದ್ರೇಶ್ವರ ದೇವಾಲಯದ ಮುಂಭಾಗದಲ್ಲಿರುವ ಕ್ರಿಶ. ೧೦೭೪ರ ಶಾಸನದಲ್ಲಿ, "ಕಾಳಿಮಯ್ಯಸೆಟ್ಟಿ ಮಾಡಿಸಿದ ಬಸದಿಯ ಮುನಿಗಳ ಆಹಾರದಾನಕ್ಕೆ ಮಹಾಸಾಮಂತ ಕಾವದೇವರಸ ಮತ್ತು ಈತನ ಧರ್ಮಪತ್ನಿ ಚಿಕ್ಕಬ್ಬೆಯರಸಿ ಹಾಗೂ ಇಪ್ಪತ್ತು ಗಾವುಂಡರು ಕೂಡಿಕೊಂಡು ಕಾರೆಯಗಣ ಪರಂಪರೆಯ ಕುಕ್ಕುಟಸೇನದೇವನ ಕಾಲುಗಳನ್ನು ತೊಳೆದು ಕಪ್ಪು ಮಣ್ಣಿನ ಭೂಮಿಯನ್ನು ದಾನ ಮಾಡಿದರು" ಎಂದು ಪ್ರಸ್ತಾಪವಿದೆ.

೫. ಕಲಬಾವಿಯ ರಾಮಲಿಂಗ ದೇವಾಲಯದ ಆವರಣದಲ್ಲಿರುವ ಕ್ರಿಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ, "ಮಳಖೇಡದ ರಾಷ್ಟ್ರಕೂಟರ ೧ನೆಯ ಅಮೋಘವರ್ಷನ ಸಾಮಂತ ತಲಕಾಡಿನ ಗಂಗರ ಸೈಗೊಟ್ಟ ಗಂಗಪೆರ್ಮಾಡಿದೇವನು (೧ನೆಯ ಶಿವಮಾರ) ಗಂಗವಾಡಿ-೯೬೦೦೦ ಆಡಳಿತ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಕಾದಲವಳ್ಳಿ-೩೦ ಆಡಳಿತ ಘಟಕದಲ್ಲಿನ ಕುಮ್ಮುದವಾಡದಲ್ಲಿ (ಕಲಬಾವಿ) ಜಿನೇಂದ್ರಮಂದಿರ ಮತ್ತು ಇದಕ್ಕೆ ಹೊಂದಿಕೊಂಡಂತೆ ದಾನಶಾಲೆಯನ್ನು ಮಾಡಿಸಿ ಮೈಳಾಪಾನ್ವಯದ ಕಾರೆಯಗಣ ಪರಂಪರೆಯ ದೇವಕೀರ್ತಿಪಂಡಿತದೇವನ ಕಾಲುಗಳನ್ನು ತೊಳೆದು ದಾನ-ದತ್ತಿಗಳನ್ನು ಕೊಡಮಾಡಿದನು. ಗಂಗರ ಕೆಂಚರಸನು ಆ ದಾನವನ್ನು ಸ್ಥಿರಗೊಳಿಸಿದನು" ಎಂದು ವಿವರವಿದೆ.

೬. ಹುಣಸಿಕಟ್ಟಿಯ ಹೊಲದಲ್ಲಿ ದೊರೆತಿರುವ ಕ್ರಿಶ. ೧೧೩೧ರ ಶಾಸನದಲ್ಲಿ (ಇದು ಕಿತ್ತೂರಿನ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಸ್ಥಳಾಂತರವಾಗಿದೆ), "ಕೊಲ್ಲಾಪುರದ ಶಿಲಾಹಾರರ ಮಹಾಮಂಡಳೇಶ್ವರ ಮಾರಸಿಂಗದೇವರಸನು ಅಗ್ರಹಾರ ಕೋಡನ ಪೂರ್ವದ ಹಳ್ಳಿಯ (ಖೋದಾನಪುರ) ಮಾಣಿಕ್ಯದೇವರ (ಆದಿನಾಥ ತೀರ್ಥಂಕರ) ಬಸದಿಯ ಯೆಕಸಾಲೆಯ ಪಾರ್ಶ್ವನಾಥನ ವಿವಿಧ ಪೂಜಾ ವಿಧಾನಗಳಿಗೆ ಗದ್ದೆಯನ್ನು ದಾನ ಮಾಡಿದನು" ಎಂದು ಉಲ್ಲೇಖವಿದೆ.

೭. ಕುಲವಳ್ಳಿಯ ಕ್ರಿ.ಶ. ೧೧೪೦ರ ಶಾಸನದಲ್ಲಿ, "ಗೋವೆ ಕಾದಂಬರ ಶಿವಚಿತ್ತವೀರ ಪೆರ್ಮಾಡಿದೇವನು ಕೂಲವಳ್ಳಿಯ (ಕುಲವಳ್ಳಿ) ಅರುವತ್ತೊಕ್ಕಲರು ಮಾಡಿಸಿದ ಬಸದಿಯ ಖಂಡಸ್ಫುಟಿತ ಜೀರ್ಣೋದ್ಧಾರ ಮತ್ತು ಮುನಿಗಳ ಆಹಾರದಾನಕ್ಕೆ ರಾಮಶ್ರೀಕಂತಿಯ ಸನ್ನಿಧಿಯಲ್ಲಿ ಗದ್ದೆ, ಇಪ್ಪತ್ತು ಕಯ್ಯ ಅಳತೆಯ ಮನೆಯನ್ನು ದಾನ ಮಾಡಿದನು" ಎಂದು ನರೂಪಣೆಯಿದೆ.

೮. ಬೈಲಹೊಂಗಲದ ಗದಿಗೆಯ್ಯ ಏಣಗಿಮಠದ ಆವರಣದಲ್ಲಿರುವ ಕ್ರಿ.ಶ. ಸುಮಾರು ೧೧ನೆಯ ಶತಮಾನದ ಶಾಸನದಲ್ಲಿ, "ಕಲ್ಯಾಣದ ಚಾಳುಕ್ಯರ ತ್ರಿಭುವನ ಮಲ್ಲದೇವನ (೬ನೆಯ ವಿಕ್ರಮಾದಿತ್ಯ) ಆಳ್ವಿಕೆಯ ಸಂದರ್ಭದಲ್ಲಿ ಕೂಣ್ಡಿ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಮಹಾಸಾಮಂತ ಸವದತ್ತಿ ರಟ್ಟರ ಅಂಕರಸ ಮತ್ತು ಈತನ ಪಟ್ಟದರಸಿ ಶಾಂತಿಯಕ್ಕ ಯಾಪನೀಯ ಸಂಘದ ಮೈಳಾಪಾನ್ವಯದ ಕಾರೆಯಗಣ ಪರಂಪರೆಯ ಜಿನದೇವಸೂರಿ ಮತ್ತು ಮುಳ್ಳಭಟ್ಟಾರಕನ ಸನ್ನಿಧಿಯಲ್ಲಿ ಬಸದಿಗೆ ಭೂದಾನ ಮಾಡಿದರು" ಎಂದು ಪ್ರಸ್ತಾಪವಿದೆ.

೯. ಬೈಲಹೊಂಗಲದ ಶಿವನ ದೇವಾಲಯದಲ್ಲಿರುವ ಕ್ರಿ.ಶ. ೧೧೬೪-೬೫ರ ಶಾಸನದಲ್ಲಿ, "ಸವದತ್ತಿ ರಟ್ಟರ ಮುಮ್ಮಡಿ ಕಾರ್ತವೀರ್ಯನು ಯಾಪನೀಯ ಸಂಘದ ಮೈಳಾಪಾನ್ವಯ ಪರಂಪರೆಯ ಜಿನದೇವಸೂರಿಯ ಸನ್ನಿಧಿಯಲ್ಲಿ ಬಸದಿಗೆ ದಾನ ಮಾಡಿದನು" ಎಂದು ನಿರೂಪಣೆಯಿದೆ.

೧೦. ಉಡಕೇರಿಯ ಮೈಲಾರಲಿಂಗ ದೇವಾಲಯದ ಗರ್ಭಗೃಹದಲ್ಲಿ ಪ್ರತಿಷ್ಠಾಪಿತ ಶಿವಲಿಂಗದ ಪೀಠದ ಮೇಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ, "ಜಿನದೇವನ ಗುಡ್ಡನಾದ (ಶಿಷ್ಯ) ಪೋಲಕೇಸಿ ಗಾವುಂಡನು ಉಡಕೆರೆಯಲ್ಲಿ (ಉಡಕೇರಿ) ಬಸದಿಯನ್ನು ಮಾಡಿಸಿದನು" ಎಂದು ಪ್ರಸ್ತಾಪವಿದೆ.

೧೧. ಹಣ್ಣಿಕೇರಿಯ ಶಿವನ ದೇವಾಲಯದ ಹತ್ತಿರವಿರುವ ಕ್ರಿ.ಶ. ೧೨೦೯ರ ಮತ್ತು ಕ್ರಿ.ಶ. ೧೨೫೮ರ ಶಾಸನದಲ್ಲಿ, "ಏಪ್ಪತ್ತುಬಾಡದೊಳಗಣ ಹರಳೆಂಟುಬಾಡದಲ್ಲಿನ ಚಿಂಚುಣಿಕೆ (ಹಣ್ಣಿಕೇರಿ) ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದ ಮಹಾಪ್ರಭು ಮೂಲಿಗ ಮುರಿಯರ ಅಮ್ಮಗಾವುಂಡನು ಎಳ್ಕೋಟಿ ಮಹಾದೇವನ ಆಜ್ಞೆಯಂತೆ ಜೋಗವಟ್ಟಿಗೆಯನ್ನು (ಯೋಗಪಟ್ಟಿಕೆ) ಧರಿಸಿ ಚಿಂಚುಣಿಕೆ ಗ್ರಾಮದ ಮಧ್ಯದಲ್ಲಿ ಮಾನಸ್ತಂಭ, ಮಕರತೋರಣ ಸಹಿತವಾಗಿ ಪಾರ್ಶ್ವಜಿನೇಂದ್ರ ಭವನವನ್ನು ಮಾಡಿಸಿ, ಸವದತ್ತಿ ರಟ್ಟರ ಮಹಾಮಂಡಳೇಶ್ವರ ವೀರಲಕ್ಷ್ಮಿದೇವರಸನ ಅನುಮತಿ ಪಡೆದು ಯಾಪನೀಯ ಸಂಘದ ಮೈಳಾಪಾನ್ವಯದ ಕಾರೆಯಗಣ ಪರಂಪರೆಯ ಆಚಾರ್ಯನಾದ ಕನಕಪ್ರಭಪಂಡಿತದೇವನ ಪಾದಗಳನ್ನು ತೊಳೆದು ಬಸದಿಯ ಜೀರ್ಣೋದ್ಧಾರ ಮತ್ತು ಆಹಾರದಾನಕ್ಕೆ ಭೂಮಿ, ದಾನಶಾಲೆಯ ನಿವೇಶನ, ಮನೆ, ಗಾಣ, ಅಂಗಡಿ, ಹೂದೋಟವನ್ನು ದಾನ ಮಾಡಿದನು" ಎಂದು ನಿರೂಪಣೆಯಿದೆ.

೧೨. ವಕ್ಕುಂದದ ಜೈನ ಬಸದಿಯ ಗರ್ಭಗೃಹದ ದ್ವಾರಬಂಧದ ಉತ್ತರಾಂಗಣದ ಪಟ್ಟಿಕೆಯ ಮೇಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ, "ಪದ್ಮಾವತಿದೇವಿಲಬ್ಧವರಪ್ರಸಾದನಾದ ಚಂದಿಸೆಟ್ಟಿ ಮತ್ತು ದೇವಣಸೆಟ್ಟಿಯರ ಕೋಣುಗಳ ಕಾವಲುಗಾರನಾದ ತೆನಗಾರ ಮಾಳೆಯನು ಬಸದಿಯಲ್ಲಿ ಉತ್ತರಾಂಗಣವನ್ನು (ದ್ವಾರಬಂಧದ ಮೇಲಿನ ಭಾಗ) ಮಾಡಿಸಿದನು" ಎಂದು ಪ್ರಸ್ತಾಪವಿದೆ.

೨.೩. ಸವದತ್ತಿ ತಾಲ್ಲೂಕಿನ ಶಾಸನಗಳು

೧. ಹೂಲಿಯಲ್ಲಿ ದೊರೆತಿರುವ ಬಾದಾಮಿ ಚಲುಕ್ಯರ ಮಂಗಳೇಶನ ಕ್ರಿ.ಶ. ಸುಮಾರು ೬ನೆಯ ಶತಮಾನದ ತಾಮ್ರಪಟ ಶಾಸನದಲ್ಲಿ (ಈ ತಾಮ್ರಪಟವು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿದೆ), "ಮಂಗಳೇಶನ ಅಪ್ಪಣೆಯಿಂದ ಸೇಂದ್ರಕರ ರವಿಶಕ್ತಿಯ ಮಗನಾದ ಕನ್ನಶಕ್ತಿ ಕಿರುವಟ್ಟಕೆರೆಯ (ಹೂಲಿಯ ಕಿರಟಗೆರೆ ಓಣಿ) ಶಾಂತಿನಾಥ ಬಸದಿಗೆ ಪರಲೂರು ಸಂಘದ ಶ್ರೀನಂದಿಮುನಿಯ ಶಿಷ್ಯ ಅಭಯನಂದಿಯ ಸನ್ನಿಧಿಯಲ್ಲಿ ಐವತ್ತು ನಿವರ್ತನ ಭೂಮಿಯನ್ನು ದಾನ ಮಾಡಿದನು" ಎಂದು ವಿವರವಿದೆ.

೨. ಹೂಲಿಯ ವೀರಭದ್ರ ದೇವಾಲಯದ ಆವರಣದಲ್ಲಿರುವ ಕ್ರಿ.ಶ. ೧೦೪೩ರ ಶಾಸನದಲ್ಲಿ, "ಕಲ್ಯಾಣದ ಚಾಳುಕ್ಯರ ೧ನೆಯ ಸೋಮೇಶ್ವರನ ಸಾಮಂತನಾದ (ರಾಜ್ಯಾಧ್ಯಕ್ಷ) ಕಾಲಡಿಯ ಬೋಳಗಡಿಯನ ಮೊಮ್ಮಗಳು ಹಾಗೂ ಸವದತ್ತಿ ರಟ್ಟರ ಅಂಕರಸನ ಪಟ್ಟದರಸಿಯಾದ ಲಚ್ಚಿಯಬ್ಬರಸಿ (ಪಾಯಿಮ ಮತ್ತು ಹಮ್ಮಿಕಬ್ಬೆ ದಂಪತಿಗಳ ಮಗಳು) ಶ್ರೀಮನ್ಮಹಾಗ್ರಹಾರ ಪೂಲಿಯ (ಹೂಲಿ) ಊರೊಡೆಯರಾದ ಸಾವಿರ ಮಹಾಜನರ ದಿವ್ಯಶ್ರೀಪಾದಪದ್ಮಂಗಳನ್ನು ಹಿರಣ್ಯಪೂರ್ವಕವಾಗಿ ಆರಾಧಿಸಿ ಭೂಮಿಯನ್ನು ಪಡೆದು ಬಸದಿಯನ್ನು ಮಾಡಿಸಿ, ಇದರ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಶಿವೆಯಗೇರಿಯಲ್ಲಿ ಆರು ಮತ್ತರು ಭೂಮಿ, ಮೂರು ಚಿನ್ನದ ನಾಣ್ಯಗಳನ್ನು ಯಾಪನೀಯ ಸಂಘದ ಪುನ್ನಾಗವೃಕ್ಷಮೂಲಗಣ ಪರಂಪರೆಯ ಬಾಳಚಂದ್ರ ಭಟ್ಟಾರಕನ ಕಾಲುಗಳನ್ನು ತೊಳೆದು ದಾನ ಮಾಡಿದಳು" ಎಂದು ವಿವರವಿದೆ.

೩. ಹೂಲಿಯ ವೀರಭದ್ರ ದೇವಾಲಯದ ಸಭಾಮಂಟಪದಲ್ಲಿರುವ ಕ್ರಿ.ಶ. ೧೧೪೫ರ ಶಾಸನದಲ್ಲಿ, "ಪೆರ್ಗಡೆ ನೇಮಣ್ಣನ ಮುತ್ತವ್ವೆ ಲಚ್ಚಿಯಬ್ಬರಸಿ ಮಾಡಿಸಿದ ಬಸದಿಯ ಪೂಜೆ-ಪುನಸ್ಕಾರ ಮತ್ತು ಮುನಿಗಳ ಆಹಾರದಾನಕ್ಕೆ ರಾಮಚಂದ್ರದೇವನ ಪಾದಗಳನ್ನು ತೊಳೆದು ಶಿವೆಯಗೇರಿಯಲ್ಲಿ ಆರು ಮತ್ತರು ಭೂಮಿ, ಕಳಶವಳ್ಳಿಗೇರಿಯಲ್ಲಿ ಆರು ಮತ್ತರು ಭೂಮಿ ಮತ್ತು ಚಿನ್ನದ ಮೂರು ನಾಣ್ಯಗಳನ್ನು ದಾನ ಕೊಡಲಾಯಿತು" ಎಂದು ಪ್ರಸ್ತಾಪವಿದೆ.

೪. ಹೂಲಿಯ ಕರೆಮ್ಮನ ದೇವಾಲಯದ ಹತ್ತಿರವಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ತೀರ್ಥಂಕರನ ಶಿಲ್ಪದ ಪಾದಪೀಠದ ಮೇಲಿರುವ ಶಾಸನದಲ್ಲಿ,

"ಯಾಪನೀಯ ಸಂಘದ ಕಾಣೂರುಗಣ ಪರಂಪರೆಯ ಭಾನುಕೀರ್ತಿ ಸಿದ್ಧಾಂತದೇವ" ಎಂದು ಪ್ರಸ್ತಾಪವಿದೆ.

೫. ಹೂಲಿಯ ಪಂಚಲಿಂಗೇಶ್ವರ ದೇವಾಲಯದ (ಮೂಲತಃ ಪಂಚಕೂಟ ಬಸದಿ) ಗರ್ಭಗೃಹದ ೧ನೆಯ ದ್ವಾರಬಂಧದ ಮೇಲ್ಭಾಗದ ಪಟ್ಟಿಕೆಯಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ, "ಶ್ರೀ ನೇಮಿಚಂದ್ರ ಸಿದ್ಧಾಂತಚಕ್ರವರ್ತಿಯ ಗುಡ್ಡಗಳಾದ (ಶಿಷ್ಯರು) ನವಿಲೂರದ (ಧಾರವಾಡ ತಾಲ್ಲೂಕಿನ ನವಲೂರು) ಗೋವರಿಯ ಕಾಳಿಗಾವುಂಡ, ತಾವರೆಯ ಮಹಾದೇವಸೆಟ್ಟಿ, ಕೊಳಗದ ಕೇತಿಸೆಟ್ಟಿ, ಬಳ್ಳಿಯರ ಕೇತಿಸೆಟ್ಟಿ, ಗುಡರ ಪಟ್ಟಸೆಟ್ಟಿ, ಮಿಳರ ಮಾಳಿಸೆಟ್ಟಿ, ಕೊಂಡಸ ಬಮ್ಮಿಸೆಟ್ಟಿ ಮುಖ್ಯವಾಗಿ ಸಮಸ್ತ ನಕರಗಳು ಎರಡು ದ್ವಾರಶಾಖೆಗಳನ್ನು (ಎರಡು ಗರ್ಭಗೃಹಗಳ ದ್ವಾರಶಾಖೆಗಳು) ಸ್ಥಿರವಾಗಿ ಮಾಡಿಸಿದರು" ಎಂದು ಉಲ್ಲೇಖವಿದೆ.

೭. ಹೂಲಿಯ ಪಂಚಲಿಂಗೇಶ್ವರ ದೇವಾಲಯದ (ಮೂಲತಃ ಪಂಚಕೂಟ ಬಸದಿ) ಗರ್ಭಗೃಹದ ೩ನೆಯ ದ್ವಾರಬಂಧದ ಮೇಲ್ಭಾಗದ ಪಟ್ಟಿಕೆಯಲ್ಲಿರುವ ಕ್ರಿ.ಶ. ೧೨೨೦ರ ಶಾಸನದಲ್ಲಿ, "ಶ್ರೀ ಪ್ರಭಾಚಂದ್ರಸಿದ್ಧಾಂತದೇವನ ಗುಡ್ಡಗಳಾದ (ಶಿಷ್ಯರು) ಹಡಪದ ಬೋಸಣ್ಣನ ಮಗನಾದ ಸೋಮಯ್ಯ, ಬಮ್ಮಯ್ಯನನ್ನು ಒಳಗೊಂಡಂತೆ ಸಮಸ್ತ ಪೆರ್ಗಡೆಗಳು, ಧಾರವಾಡದ ಹತ್ತಿಯ ಮಾಳಿಸೆಟ್ಟಿ, ಬಾಳಯ್ಯ, ಸೋಮಯ್ಯ, ದೊಡವಾಡದ (ಬೈಲಹೊಂಗಲ ತಾಲ್ಲೂಕಿನ ದೊಡವಾಡ) ಬೆಸವಿಕ (ಚಳುವಿಕ) ಬಸವಿಸೆಟ್ಟಿ, ಕಂಬದ ನೇಮಿಸೆಟ್ಟಿ, ಬಲ್ಲಿಸೆಟ್ಟಿ ಮುಖ್ಯವಾಗಿ ಸಮಸ್ತ ಭವ್ಯಜನರು (ಜೈನರು) ಹೂಲಿಯ ಮಾಣಿಕ್ಯತೀರ್ಥದ ದ್ವಾರಶಾಖೆಯನ್ನು ಮಾಡಿಸಿದರು ಮತ್ತು ಈ ದ್ವಾರಶಾಖೆಯನ್ನು ಕುರುವನೂರದ ರಾಜೋಜನು ಮಾಡಿದನು (ಕಂಡರಿಸಿದನು)" ಎಂದು ವಿವರಗಳಿವೆ.

೮. ಹೂಲಿಯ ಪಂಚಲಿಂಗೇಶ್ವರ ದೇವಾಲಯದ (ಮೂಲತಃ ಪಂಚಕೂಟ ಬಸದಿ) ಗರ್ಭಗೃಹದ ಪೂರ್ವಬದಿಯ ಅಧಿಷ್ಠಾನದ ಪಟ್ಟಿಕೆಯ ಮೇಲಿರುವ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಶಾಸನದಲ್ಲಿ "ಅಳೆದುದು" ಎಂದು ನಿರೂಪಣೆಯಿದೆ.

೯. ಹೂಲಿಯ ಪಂಚಲಿಂಗೇಶ್ವರ ದೇವಾಲಯದ (ಮೂಲತಃ ಪಂಚಕೂಟ ಬಸದಿ) ಗರ್ಭಗೃಹದ ಪೂರ್ವಬದಿಯ ಅಧಿಷ್ಠಾನದ ಮೇಲ್ಗಡೆ ಭಿತ್ತಿಯ ಕೆಳಭಾಗದಲ್ಲಿರುವ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಶಾಸನದಲ್ಲಿ "ಪಿಷ್ಟ ಥರ ಮಟ್ಟ ೧ ವಿಶುದ್ಧಿ" ಎಂದು ವಿವರವಿದೆ.

೧೦. ಹೂಲಿಯ ಪಂಚಲಿಂಗೇಶ್ವರ ದೇವಾಲಯದ (ಮೂಲತಃ ಪಂಚಕೂಟ ಬಸದಿ) ಉತ್ತರ ಗರ್ಭಗೃಹದ ಪೂರ್ವಬದಿಯ ಅಧಿಷ್ಠಾನದ ಕಪೋತ ಭಾಗದಲ್ಲಿರುವ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಶಾಸನದಲ್ಲಿ "ಕಪೋತ ಥರ ಮಟ್ಟ ವಿಶುದ್ಧಿ ೮" ಎಂದು ಪ್ರಸ್ತಾಪವಿದೆ.

೧೧. ಹೂಲಿಯ ಪಂಚಲಿಂಗೇಶ್ವರ ದೇವಾಲಯದ (ಮೂಲತಃ ಪಂಚಕೂಟ ಬಸದಿ) ದಕ್ಷಿಣಬದಿಯ ಅಧಿಷ್ಠಾನದ ಮಕರಪಟ್ಟಿಕೆಯಲ್ಲಿರುವ ಕ್ರಿಶ. ಸುಮಾರು ೧೩ನೆಯ ಶತಮಾನದ ಶಾಸನದಲ್ಲಿ "ಮಕರಪಟ್ಟಿಕೆ ವಿಶುದ್ಧಿ ೯. ಈ ಪಟ್ಟಿಕೆಯನ್ನು ಪಿಟ್ಟಿಗ ಗರುಡ ಎಂಬುವವನು ಮಾಡಿದನು" ಎಂದು ನಿರೂಪಣೆಯಿದೆ.

೧೨. ಹೂಲಿಯ ಪಂಚಲಿಂಗೇಶ್ವರ ದೇವಾಲಯದ (ಮೂಲತಃ ಪಂಚಕೂಟ ಬಸದಿ) ನವರಂಗದ ಹೊಸ್ತಿಲದ ಮೇಲಿರುವ ಕ್ರಿಶ. ೧೮೮೦ರ ಶಾಸನದಲ್ಲಿ, "ಚುಳಕಿ ಮಠಪತಿ ಬೈಲಯ್ಯನು ಈ ಹೊಸ್ತಿಲು, ಘಂಟೆ, ಮುಖಮಂಟಪವನ್ನು ಮಾಡಿಸಿ ಕೊಟ್ಟನು" ಎಂದು ಪ್ರಸ್ತಾಪವಿದೆ.

೧೩. ಸವದತ್ತಿಯ ಕ್ರಿಶ. ೮೭೫–೭೬ರ ಶಾಸನದಲ್ಲಿ, "ಸವದತ್ತಿ ರಟ್ಟರ ಮೇರಡನ ಹಿರಿಯ ಮಗನೂ, ಇಂದ್ರಕೀರ್ತಿಸ್ವಾಮಿಯ ಶಿಷ್ಯನೂ ಆದ ಮಹಾಸಾಮಂತ ಪೃಥ್ವೀರಾಮನು ಸುಗಂಧವರ್ತಿ–೧೨ ಆಡಳಿತ ವಿಭಾಗದ ಕೇಂದ್ರ ಪಟ್ಟಣದಲ್ಲಿ ಬಸದಿಯನ್ನು ಕಟ್ಟಿಸಿ (ಇದು ಪ್ರಾಯಶಃ ಇಂದಿನ ಎಲ್ಲಮ್ಮದೇವಿ ದೇವಾಲಯ) ಹದಿನೆಂಟು ನಿವರ್ತನ ಭೂಮಿಯನ್ನು ದಾನ ಮಾಡಿದನು. ಇದೇ ಬಸದಿಗೆ ಕಣ್ಣಭೂಭುಜನು ಸುಗಂಧವರ್ತಿ–೧೨ನ್ನು ಒಳಗೊಂಡಂತೆ ಮುಳಗುಂದದಲ್ಲಿ (ಗದಗ ತಾಲ್ಲೂಕಿನ ಮುಳಗುಂದ) ತನ್ನ ಸೀವಟದ ಭೂಮಿಯಲ್ಲಿ ಎರಡು ಹುಣಸೆಯ ಮರಗಳ ನಡುವಣದ ಆರು ನವರ್ತನ ಭೂಮಿಯನ್ನು ದಾನ ಮಾಡಿದನು. ಪೃಥ್ವೀರಾಮನು ಕೊಡಮಾಡಿದ ಭೂದಾನವನ್ನು ಕಾರ್ತವೀರ್ಯ ಮತ್ತು ಈತನ ಪಟ್ಟದರಸಿ ನಾಗಲಾಂಬಿಕೆ ಸೂರ್ಯಗ್ರಹಣದ ಸಂದರ್ಭದಲ್ಲಿ ಪುನರ್ದಾನವಾಗಿ ಕೊಟ್ಟರು" ಎಂದು ನಿರೂಪಣೆಗಳಿವೆ.

೧೪. ಸವದತ್ತಿಯ ಅನಂತನಾಥ ಬಸದಿಯಲ್ಲಿರುವ ಕ್ರಿಶ. ೯೮೦ರ ಶಾಸನದಲ್ಲಿ, "ಗಾವುಂಡರು ರಟ್ಟರ ಪಟ್ಟಜಿನಾಲಯದ ಜಿನೇಂದ್ರನ ಪೂಜೆಗೆ, ದೀಪಾವಳಿಯ ಪರ್ವಕ್ಕೆ, ಸೊಡರಿಂಗೆ (ನಂದಾದೀಪ) ಗಾಣದೆಣ್ಣೆಯನ್ನು ದಾನ ಮಾಡಿದರು. ಮಹಾಸಾಮಂತ ಪೃಥ್ವೀರಾಮನ ಮಗನಾದ ಶಾಂತಿವರ್ಮನು ತಾನು ಸುಗಂಧವರ್ತಿಯಲ್ಲಿ (ಸವದತ್ತಿ) ಮಾಡಿಸಿದ ಬಸದಿಗೆ ಅಯ್ವತ್ತೊಕ್ಕಲರ ಅನುಮತದಿಂದ ಬಾಹುಬಲಿ ಭಟ್ಟಾರಕನ ಕಾಲುಗಳನ್ನು ತೊಳೆದು ತನ್ನ ಸೀವಟದ ಭೂಮಿಯಲ್ಲಿ ನೂರೈವತ್ತು ಮತ್ತರು ಭೂಮಿಯನ್ನು ದಾನ ಮಾಡಿದನು. ಇದೇ ಬಸದಿಗೆ ಶಾಂತಿವರ್ಮನ ತಾಯಿ ನಿಜಿಯಬ್ಬರಸಿ ಪುನಃ ನೂರೈವತ್ತು ಮತ್ತರು ಭೂಮಿಯನ್ನು ದಾನ ಮಾಡಿದಳು" ಎಂದು ಉಲ್ಲೇಖವಿದೆ.

೧೫. ಸವದತ್ತಿಯ ಅನಂತನಾಥ ಬಸದಿಯಲ್ಲಿರುವ ಕ್ರಿಶ. ೧೯೯೮ರ ಶಾಸನದಲ್ಲಿ, "ಸವದತ್ತಿ ರಟ್ಟರ ಕಾರ್ತವೀರ್ಯನು ಕೂಹುಂಡಿ ದೇಶವನ್ನು (ಕೂಹುಂಡಿ–೩೦೦೦ ಆಡಳಿತ ವಿಭಾಗ) ಜಯಿಸಿದ ತರುವಾಯ ಕಾಳಸೇನನು ಸುಂಗಧವರ್ತಿಯಲ್ಲಿ ನಿರ್ಮಿಸಿದ್ದ ಬಸದಿಗೆ ದಾನ ಮಾಡಿದನು. ಇದೇ ಬಸದಿಗೆ ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನು ಕಾರೆಯಬಾಗು ಗ್ರಾಮದಲ್ಲಿ ಭೂದಾನ ಮಾಡಿದನು. ಇದೇ ಬಸದಿಗೆ

ರಟ್ಟರ ಇಮ್ಮಡಿ ಸೇನನು ಭೂದಾನ ಮಾಡಿದನು. ಇದೇ ಬಸದಿಗೆ ಇಮ್ಮಡಿ ಕನ್ನಕೈರನು ಕನಕಪ್ರಭಸಿದ್ಧಾಂತದೇವನ ಸನ್ನಿಧಿಯಲ್ಲಿ ಭೂದಾನ ಮಾಡಿದನು" ಎಂದು ವಿವರಗಳಿವೆ.

೧೫. ಸವದತ್ತಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ (ಈ ಶಾಸನಶಿಲೆ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ವಸ್ತುಸಂಗ್ರಹಾಲಯಕ್ಕೆ ಸ್ಥಳಾಂತರವಾಗಿದೆ), "ಸವದತ್ತಿ ರಟ್ಟರ ಇಮ್ಮಡಿ ಸೇನನ ತಾಯಿ ಮೈಳಲದೇವಿ ಕಂಡೂರುಗಣ ಪರಂಪರೆಯ ರವಿಚಂದ್ರಸ್ವಾಮಿಯ ಶಿಷ್ಯ ಅರ್ಹನಂದಿಮುನಿಯ ಸನ್ನಿಧಿಯಲ್ಲಿ ಬಸದಿಗೆ ದಾನ ಮಾಡಿದಳು" ಎಂದು ನಿರೂಪಣೆಯಿದೆ. ಅಕ್ಷರಗಳು ಸವೆದಿರುವುದರಿಂದ ಹೆಚ್ಚಿನ ವಿವರಗಳು ಸ್ಪಷ್ಟವಿಲ್ಲ.

೧೬. ಎಲ್ಲಮ್ಮಗುಡ್ಡದ ಎಲ್ಲಮ್ಮದೇವಿ ದೇವಾಲಯದ ಗರ್ಭಗೃಹ ದ್ವಾರಬಂಧದ ಲಲಾಟಪಟ್ಟಿಕೆಯ ಮೇಲ್ಭಾಗದಲ್ಲಿರುವ ಕ್ರಿ.ಶ. ಸುಮಾರು ೧೧ನೆಯ ಶತಮಾನದ ಶಾಸನದಲ್ಲಿ, "ಯಾಪನೀಯ ಸಂಘದ ಕಂಡೂರುಗಣ" ಎಂದು ಪ್ರಸ್ತಾಪವಿದೆ.

೧೭. ಎಲ್ಲಮ್ಮಗುಡ್ಡದ ಎಲ್ಲಮ್ಮದೇವಿ ದೇವಾಲಯದ ಅಧಿಷ್ಠಾನದ ಪಟ್ಟಿಕೆಯ ಮೇಲಿರುವ ಕ್ರಿ.ಶ. ಸುಮಾರು ೧೧ನೆಯ ಶತಮಾನದ ಶಾಸನದಲ್ಲಿ, "ಸಕಳಚಂದ್ರ ಸಿದ್ಧಾಂತದೇವನಂದ ರಟ್ಟ ಜಿನಾಲಯವು ಜೀರ್ಣೋದ್ಧಾರವಾಯಿತು" ಎಂಬ ವಿವರವಿದೆ.

೧೮. ಉಗರಗೋಳದ ಮುತಾಲಿಕ ದೇಸಾಯಿ ಅವರ ಮನೆಯ ಹತ್ತಿರವಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ, "ಕಲ್ಯಾಣದ ಚಾಳುಕ್ಯರ ತ್ರಿಭುವನಮಲ್ಲದೇವನ (೬ನೆಯ ವಿಕ್ರಮಾದಿತ್ಯ) ಮಹಾಪ್ರಧಾನನು ಬಸದಿಗೆ ದಾನ ಮಾಡಿದನು" ಎಂದು ಉಲ್ಲೇಖವಿದೆ.

೧೯. ಬಡ್ಲಿಯ ಚಿದಂಬರೇಶ್ವರ ದೇವಾಲಯದಲ್ಲಿನ ಸ್ತಂಭದ ಮೇಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ, "ದೋರಸಮುದ್ರದ ಹೊಯ್ಸಳರ ವೀರಬಲ್ಲಾಳನ ಆಳ್ವಿಕೆಯ ಸಂದರ್ಭದಲ್ಲಿ ನಾರಣಭಟ್ಟನ ಮಗನಾದ ಹರಿಹರ, ಕೀರ್ತಿಪಂಡಿತ ಚಿಕ್ಕಯ್ಯ, ನಾಗಿಸೆಟ್ಟಿ, ದೂಸಿಗ ಪಾರಿಸಸೆಟ್ಟಿ ಕೂಡಿಕೊಂಡು ಗಂಗಕಂದರ್ಪ ಪೆರ್ಮ್ಮಾಡಿಯ ಬ್ರಹ್ಮಜಿನಾಲಯಕ್ಕೆ ಮನೆ, ಗಾಣ, ಭೂಮಿಯನ್ನು ದಾನ ಮಾಡಿದರು" ಎಂದು ಪ್ರಸ್ತಾಪವಿದೆ.

೨೦. ಮುನವಳ್ಳಿಯ ಕರೆವ್ವನ ದೇವಾಲಯದ ಮುಂಭಾಗದಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ನಿಷಿಧಿ ಶಾಸನದಲ್ಲಿ, "ಸಿರಿಯಾದೇವಿ ಮುನಿವಳ್ಳಿಯಲ್ಲಿ (ಮುನವಳ್ಳಿ) ನಿರ್ಮಿಸಿದ ಬಸದಿಯ ಸ್ಥಾನಾಚಾರ್ಯನಾದ ಯಾಪನೀಯಸಂಘ ಪರಂಪರೆಯ ಮುನಿಚಂದ್ರದೇವನು ಸನ್ಯಸನ ವಿಧಿಯಿಂದ ಸಮಾಧಿಮರಣವನ್ನಪ್ಪಿದ ಪರೋಕ್ಷ ವಿನಯಾರ್ಥವಾಗಿ ಆತನ ಶಿಷ್ಯೆ ಕುಳ್ಳೆಯ ಕೇತಗಾವುಂಡನ ಮಗಳಾದ ಗಂಗವ್ವೆ ನಿಷಿಧಿಗಲ್ಲನ್ನು ನಿಲ್ಲಿಸಿದಳು" ಎಂದು ಪ್ರಸ್ತಾಪವಿದೆ.

೨೧. ಯಡ್ರಾವಿಯ ಬ್ರಹ್ಮದೇವರ ಕಟ್ಟೆಯಲ್ಲಿರುವ ಕ್ರಿ.ಶ. ೯೭೯ರ ಶಾಸನದಲ್ಲಿ, "ಎಳರಾಮೆಯ (ಯಡ್ರಾವಿ) ಹನ್ನೆರಡು ಗಾವುಂಡರು ದೇಹಾರಕ್ಕೆ (ಬಸದಿ) ಸೂರಸ್ತಗಣ ಪರಂಪರೆಯ ಕನಕಪ್ರಭಮುನಿಯ ಸನ್ನಿಧಿಯಲ್ಲಿ ಆರುನೂರು ಮತ್ತರು ಭೂಮಿಯನ್ನು ದಾನ ಮಾಡಿದರು" ಎಂದು ನಿರೂಪಣೆಯಿದೆ.

೨.೪. ಅಥಣಿ ತಾಲ್ಲೂಕಿನ ಶಾಸನಗಳು

೧. ಶೇಡಬಾಳದ ಕ್ರಿ.ಶ. ೧೧೫೬ರ ಶಾಸನದಲ್ಲಿ, "ಕೊತ್ತಲಿಗರು ನಿರ್ಮಿಸಿದ ಬಸದಿಗೆ ಅಕ್ಕಸಾಲೆಯ ನಾಗೋಜ, ಮರೆವಗಾವುಂಡ, ಎಂಟುಹಿಟ್ಟುಗಳು, ನೇಕಾರರು ಮತ್ತು ಸಮಸ್ತ ಕೊತ್ತಲಿಗರು ಮದುವೆ ತೆರಿಗೆಯನ್ನೊಳಗೊಂಡಂತೆ ಕೆಲವು ತೆರಿಗೆಗಳನ್ನು ಕೊಡಬೇಕು" ಎಂದು ಉಲ್ಲೇಖವಿದೆ.

೨. ಬಳ್ಳಿಗೇರಿಯ ಕ್ರಿ.ಶ. ೧೧೫೬ರ ಶಾಸನದಲ್ಲಿ, "ಕಲ್ಯಾಣದ ಕಲಚೂರಿಗಳ ಇಮ್ಮಡಿ ಬಿಜ್ಜಳದೇವನ ಹಿರಿಯ ಸಹೋದರ ಮೈಲುಗಿಯ ಮಂತ್ರಿ ಕಾಳಿದಾಸ ಚಮೂಪನು ಪಾರ್ಶ್ವನಾಥ ಬಸದಿಯನ್ನು ನಿರ್ಮಿಸಿ, ಇದರ ನಿತ್ಯ ಪೂಜಾದಿಗಳಿಗೆ ಭೂಮಿ ಮತ್ತು ಹೂದೋಟವನ್ನು ದಾನ ಮಾಡಿದನು" ಎಂದು ವಿವರವಿದೆ.

೩. ಅಥಣಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ, "ಬೊಮ್ಮನ ಧರ್ಮಪತ್ನಿ ಚಿಕ್ಕಂಬಿಕೆ ಮೂಲಸಂಘದ ಪುಸ್ತಕಗಚ್ಛದ ದೇಸಿಯಗಣದ ಕುಂದಕುಂದಾನ್ವಯ ಪರಂಪರೆಯ ರತ್ನತ್ರಯ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿದಳು" ಎಂದು ಪ್ರಸ್ತಾಪವಿದೆ.

೪. ಐನಾಪುರದ ಬಸದಿಯಲ್ಲಿರುವ ಕ್ರಿ.ಶ. ಸುಮಾರು ೧೬ನೆಯ ಶತಮಾನದ ಸಹಸ್ರಕೂಟ ಶಿಲ್ಪದ ಸುತ್ತಲೂ ಇರುವ ಶಾಸನದಲ್ಲಿ, "ಬಾಳಚಂದ್ರಸಿದ್ಧಾಂತದೇವನ ಶಿಷ್ಯ ಚತುರ್ದಾನಗಳಲ್ಲಿ (ಆಹಾರ, ಅಭಯ, ಔಷಧ, ಶಾಸ್ತ್ರ) ನಿಷ್ಠಾವಂತನಾಗಿದ್ದ ಕಲ್ಲಿಸೆಟ್ಟಿ ಸಹಸ್ರಕೂಟವನ್ನು ಮಾಡಿಸಿದನು" ಎಂದು ನಿರೂಪಣೆಯಿದೆ.

೫. ಐನಾಪುರದ ಬಸದಿಯಲ್ಲಿರುವ ಕ್ರಿ.ಶ. ಸುಮಾರು ೧೮ನೆಯ ಶತಮಾನದ ಅನಂತನಾಥನ ಪ್ರತಿಮೆಯ ಪಾದಪೀಠದ ಮೇಲಿರುವ ಶಾಸನದಲ್ಲಿ, "ಐನಾಪುರದ ಯಲಗೌಂಡ ಮತ್ತು ಯಲ್ಲವ್ವ ದಂಪತಿಗಳ ಮಗಳು ಗಿರಿಯವ್ವ, ಇವಳ ಮಗನಾದ ಸಂಗನಗೌಡ ಮತ್ತು ಈತನ ಧರ್ಮಪತ್ನಿ ಮದುವವ್ವೆ, ಈ ದಂಪತಿಗಳ ಮಗನಾದ ರಾಯಪ್ಪ ಇವರೆಲ್ಲರೂ ಅನಂತನೋಂಪಿ ಉದ್ಯಾಪನೆಯ ತರುವಾಯ ಅನಂತನಾಥನ ಪ್ರತಿಮೆಯನ್ನು ಮಾಡಿಸಿದರು" ಎಂದು ವಿವರವಿದೆ.

೬. ಕಾಗವಾಡದ ಬಸದಿಯಲ್ಲಿರುವ ಕ್ರಿ.ಶ. ೧೯೩೪ರ ನಿಷಿಧಿಶಾಸನದಲ್ಲಿ, "ಯಾಪನೀಯ ಸಂಘ ಪರಂಪರೆಯ ಧರ್ಮಕೀರ್ತಿ ಮತ್ತು ನಾಗಚಂದ್ರ ಮುನಿಗಳು ಸಮಾಧಿಮರಣವನ್ನಪ್ಪಿದರು" ಎಂದು ನಿರೂಪಣೆಯಿದೆ.

೨.೫. ಗೋಕಾಕ ತಾಲ್ಲೂಕಿನ ಶಾಸನಗಳು

೧. ಕೊಣ್ಣೂರದ ಪಾರ್ಶ್ವನಾಥ ಬಸದಿಯ ಸಭಾಮಂಟಪದ ಭಿತ್ತಿಯಲ್ಲಿರುವ ಕ್ರಿ.ಶ. ೧೦೮೭ರ ಶಾಸನದಲ್ಲಿ, "ಮಹಾಪ್ರಭು ನಿಧಿಯಮ ಗಾವುಂಡನು ಕೊಣ್ಣೂರದಲ್ಲಿ ಬಸದಿಯನ್ನು ಮಾಡಿಸಿ ತನ್ನ ಮಾನ್ಯದೊಳಗಿನ ಹಿಂಡಾಧಿಯ ಹೊಲದಲ್ಲಿ ಕೂಣ್ಡಿಯ (ಕೂಹುಂಡಿ) ಕೋಲಿನ ಅಳತೆಯ ಪ್ರಕಾರ ಹನ್ನೆರಡು ಮತ್ತರು ಭೂಮಿ, ಒಂದು ಮನೆ, ಒಂದು ಗಾಣ, ತೋಟವನ್ನು ದಾನ ಮಾಡಿದನು. ಈ ಬಸದಿಗೆ ದರ್ಶನಕ್ಕಾಗಿ ಆಗಮಿಸಿದ್ದ ಸವದತ್ತಿ ರಟ್ಟರ ಮಹಾಮಂಡಳೇಶ್ವರ ೧ನೆಯ ಕನ್ನನೃಪನು ದೇವರ ಅಂಗಭೋಗ, ರಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ತನ್ನ ಸೀವಟದೊಳಗಣ ಭೂಮಿಯನ್ನು ಮೂಲಸಂಘದ ಬಲತ್ಕಾರಗಣ ಪರಂಪರೆಯ ಶ್ರೀಧರಪಂಡಿತದೇವನ ಪಾದಗಳನ್ನು ತೊಳೆದು ದಾನ ಮಾಡಿದನು. ಇದೇ ಬಸದಿಯ ಅಂಗಭೋಗ, ಮುನಿಗಳ ಆಹಾರದಾನಕ್ಕೆ ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಮಗನಾದ ಜಯಕರ್ಣನು ಬಸದಿಯ ಸ್ಥಾನಾಚಾರ್ಯನಾದ ವಾಸುಪೂಜ್ಯಮುನಿಯ ಪಾದಗಳನ್ನು ತೊಳೆದು ಎರಡು ಗದ್ಯಾಣವನ್ನು ದಾನ ಮಾಡಿದನು" ಎಂದು ಉಲ್ಲೇಖವಿದೆ.

೨. ಕೊಣ್ಣೂರದ ರೈಲು ನಿಲ್ದಾಣದ ಪಶ್ಚಿಮಕ್ಕೆ ಒಂದು ಕಿ.ಮೀ. ಅಂತರದಲ್ಲಿ ಸಾವಳಗಿ ರಸ್ತೆಯ ಉತ್ತರ ಬದಿಯಲ್ಲಿರುವ ಸುರೇಶ ದೂಳಗೌಡ ಪಾಟೀಲ ಅವರ ಹೊಲದಲ್ಲಿ ದೊರೆತಿರುವ (ಸರ್ವೆ ನಂ. ೨೬೧) ಕ್ರಿ.ಶ. ಸುಮಾರು ೧೧ನೆಯ ಶತಮಾನದ ಶಾಸನದಲ್ಲಿ, "ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಮಹಾಮಂಡಳೇಶ್ವರನಾದ ಸವದತ್ತಿ ರಟ್ಟರ ಇಮ್ಮಡಿ ಸೇನನು ಕೂಣ್ಡಿ ಮೂಸಾಸಿರ (ಕೂಹುಂಡಿ-೩೦೦೦ ಆಡಳಿತ ವಿಭಾಗ) ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಕೊಣ್ಡನೂರದ (ಕೊಣ್ಣೂರು) ನಿಧಿಯಮ ಗಾವುಂಡನ ಧರ್ಮಪತ್ನಿಯಾದ ಕನಕಿಯಬ್ಬೆ ತನ್ನ ತಾಯಿಯ ಪುಣ್ಯಾರ್ಥವಾಗಿ ಮುನಿಗಳು ಮತ್ತು ಕಂತಿಯರ (ಆರ್ಯಿಕೆಯರು) ಆಹಾರದಾನಕ್ಕೆ ಕೊಣ್ಡನೂರದಲ್ಲಿ ಭೂಮಿಯನ್ನು ದಾನ ಮಾಡಿದಳು" ಎಂದು ನಿರೂಪಣೆಯಿದೆ.

೩. ಕೊಣ್ಣೂರದ ಪಾರ್ಶ್ವನಾಥ ಬಸದಿಯ ಸಭಾಮಂಟಪದಲ್ಲಿನ ಕ್ರಿ.ಶ. ಸುಮಾರು ೧೨ನೆಯ ಶತಮಾನದ ತೀರ್ಥಂಕರನ ಶಿಲ್ಪದ ಪಾದಪೀಠ ಮತ್ತು ಪ್ರಭಾವಳಿಯಲ್ಲಿರುವ ಪಾದಪೀಠ ಶಾಸನದಲ್ಲಿ, "ಮೂಲಸಂಘ ಪರಂಪರೆಯ ಕುಮಾರಸೇನದೇವನ ಶಿಷ್ಯ ನಾಗಸೇನದೇವನು ತೀರ್ಥಂಕರನ ಶಿಲ್ಪವನ್ನು ಮಾಡಿಸಿದನು" ಎಂದು ನಿರೂಪಣೆಯಿದೆ.

೬. ಕೊಣ್ಣೂರದ ಹನುಮಾನ ದೇವಾಲಯದ ಮುಂಭಾಗದಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಜೈನ ವೀರಗಲ್ಲಿನ ಮೇಲಿನ ಪಟ್ಟಿಕೆಯ ಕೆಳಭಾಗದಲ್ಲಿ ಒಂದೆರಡು ಸಾಲುಗಳ ಶಾಸನವಿದ್ದು, ಅಕ್ಷರಗಳೆಲ್ಲವೂ ಸವೆದಿರುವುದರಿಂದ ವಿವರಗಳು ಅಸ್ಪಷ್ಟವಾಗಿವೆ.

೭. ಕೊಣ್ಣೂರದ ಚಿಂತಾಮಣಿ ಪಾರ್ಶ್ವನಾಥ ಬಸದಿಯ ಹೊರಭಾಗದಲ್ಲಿ ಎಡಬದಿಯ ಭಿತ್ತಿಯ ಮೇಲಿರುವ ಕ್ರಿ.ಶ. ೧೮೭೬ರ ದೇವನಾಗರಿ ಲಿಪಿ ಮತ್ತು ಮರಾಠಿ ಭಾಷೆಯ ಶಾಸನದಲ್ಲಿ, "ಕ್ರಿ.ಶ. ೧೮೭೬ರ ಮಾರ್ಚ್ ೨೭ರಂದು ಗರ್ಭಗೃಹ ಮತ್ತು ಸುಗ್ನಿವಾಸಗಳನ್ನು (ಸುಖನಾಸ) ಜೀರ್ಣೋದ್ಧಾರ ಮಾಡಿಸಲಾಯಿತು. ಕಳಸ ಮಂಟಪ, ಸೋಪಾನಗಳನ್ನು ಹೊಸದಾಗಿ ನಿರ್ಮಿಸಲಾಯಿತು" ಎಂದು ವಿವರಗಳಿವೆ.

೮. ಗೋಕಾಕದಲ್ಲಿ ದೊರೆತಿರುವ ಕ್ರಿ.ಶ. ೫೩೨-೩೩ರ ತಾಮ್ರಪಟ ಶಾಸನದಲ್ಲಿ (ಈ ತಾಮ್ರಪಟ ಶಾಸನವು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿದೆ), "ಆಗುಪ್ತಾಮಿಕ ಅರಸನ ಆಳ್ವಿಕೆಯ ಕಾಲದಿಂದ ೮೪೫ ವರ್ಷಗಳು ಕಳೆದಿದ್ದಾಗ ಮಾನಪುರದ ದೇಜ್ಜಮಹಾರಾಜನ (ಮುಮ್ಮಡಿ ದೇವರಾಜ / ಕ್ರಿ.ಶ. ೫೩೦-೫೫೦) ಆಳ್ವಿಕೆಯ ಸಂದರ್ಭದಲ್ಲಿ ಸೇಂದ್ರಕರ ಇಂದ್ರನಂದಿ ತನ್ನ ಹಾಗೂ ತನ್ನ ಪೂರ್ವಜರ ಪುಣ್ಯಗೋಸ್ಕರ ಕಷ್ಮಾಂಡಿ ವಿಷಯದ (ಕುಹುಣ್ಡಿವಿಷಯ > ಕೂಹುಂಡಿ-೩೦೦೦) ಜಳಾರ ಗ್ರಾಮದಲ್ಲಿ ಅರಹಂತನ ಪೂಜೆ, ಶಿಕ್ಷಕರು, ರೋಗಿಗಳು, ವೃದ್ಧರು, ತಪಸ್ವಿಗಳಿಗೆ ಜಂಬೂಖಂಡಗಣ ಪರಂಪರೆಯ ಆರ್ಯನಂದಿ ಆಚಾರ್ಯನ ಸನ್ನಿಧಿಯಲ್ಲಿ ಐವತ್ತು ನವರ್ತನ ಭೂಮಿಯನ್ನು ದಾನ ಮಾಡಿದನು" ಎಂದು ನಿರೂಪಣೆಯಿದೆ.

೯. ಗೋಕಾಕದ ಸುಪಾರ್ಶ್ವನಾಥ ಬಸದಿಯಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಸುಪಾರ್ಶ್ವನಾಥ ತೀರ್ಥಂಕರನ ಶಿಲ್ಪದ ಪಾದಪೀಠದ ಮೇಲಿರುವ ಶಾಸನದಲ್ಲಿ, "ಕಾರೆಯಗಣ ಪರಂಪರೆಯ ರವಿಚಂದ್ರ ತ್ರೈವಿದ್ಯದೇವನ ಶಿಷ್ಯನಾದ ಬರ್ಮ್ಮದೇವನೃಪನೆಂದು ಖ್ಯಾತನಾದ ಎರಗನು ನಾಗನೂರು ಗ್ರಾಮದಲ್ಲಿ ಜಿನಮಂದಿರವನ್ನು ಮಾಡಿಸಿದನು" ಎಂದು ಪ್ರಸ್ತಾಪವಿದೆ.

೧೦. ಗೋಕಾಕದ ಆಚಾರ್ಯಶ್ರೀ ಪಾಯಸಾಗರರ ತಪೋವನದಲ್ಲಿರುವ ಅಜಿತನಾಥ ತೀರ್ಥಂಕರನ ಅಮೃತಶಿಲೆಯ ಶಿಲ್ಪದ ಪೀಠದ ಮೇಲಿರುವ ದೇವನಾಗರಿ ಲಿಪಿ ಮತ್ತು ಹಿಂದಿ ಭಾಷೆಯ ಶಾಸನದಲ್ಲಿ, "ಮೂಲಸಂಘ ಪರಂಪರೆಯ ಮುನಿಯೊಬ್ಬನ ಶಿಷ್ಯನು ಕ್ರಿ.ಶ. ೧೬೨೬ರಲ್ಲಿ ಈ ಶಿಲ್ಪವನ್ನು ಮಾಡಿಸಿ, ದಾನ ಮಾಡಿದನು" ಎಂದು ವಿವರಗಳಿವೆ.

೧೧. ಕಲ್ಲೊಳಿಯ ಶಾಂತಿನಾಥನ ತ್ರಿಕೂಟ ಬಸದಿಯ ನವರಂಗದ ದ್ವಾರಬಂಧದ ಬಲಬದಿಯ ಭಿತ್ತಿಯಲ್ಲಿರುವ ಕ್ರಿ.ಶ. ೧೨೦೪ರ ಶಾಸನದಲ್ಲಿ, "ಹಗರಟಗೆನಾಡಿನ ಮಹಾಮಂಡಳೇಶ್ವರ ಯದುವಂಶದ ಇಮ್ಮಡಿ ರಾಜರಸನು ಕಲ್ಲೊಳಿಯಲ್ಲಿ ಶಾಂತಿನಾಥನ ತ್ರಿಕೂಟ ಬಸದಿಯನ್ನು ನಿರ್ಮಿಸಿ, ಇದಕ್ಕೆ ಬಂಗಾರದ ಕಳಸ, ಮಕರತೋರಣ, ಮಾನಸ್ತಂಭವನ್ನು ಮಾಡಿಸಿದನು. ಈ ಬಸದಿಗೆ ಸವದತ್ತಿ ರಟ್ಟರ ೪ನೆಯ ಕಾರ್ತವೀರ್ಯನು ಮೂಲಸಂಘದ ದೇಸಿಯಗಣದ ಪುಸ್ತಕಗಚ್ಛದ ಹಣಸೋಗೆಬಳಿ ಪರಂಪರೆಯ ನೇಮಿಚಂದ್ರಮುನಿಯ ಶಿಷ್ಯ ಮಂಡಳಾಚಾರ್ಯ ಶುಭಚಂದ್ರಭಟ್ಟಾರಕನ

ಸನ್ನಿಧಿಯಲ್ಲಿ ಎರಡು ಸಾವಿರ ಕಂಬಗಳ ಅಳತೆಯ ಭೂಮಿ, ಮನೆಯ ನಿವೇಶನ, ಗಾಣ, ಅಂಗಡಿಗಳು, ಬಣಂಬೆಯ ನಿವೇಶನ, ಮೂವತ್ತು ಕಂಬಗಳ ಅಳತೆಯ ಹೂದೋಟವನ್ನು ದಾನ ಮಾಡಿದನು. ಇದೇ ಬಸದಿಗೆ ಬೆಳಗಲೆ (ಮುಧೋಳ ತಾಲ್ಲೂಕಿನ ಬೆಳಗಲಿ?) ಮುಖ್ಯವಾಗಿ ನಾಲ್ಕು ಪಟ್ಟಣದ ಸೆಟ್ಟಿಯರು, ಸಮಸ್ತ ಮುಮ್ಮುರಿದಂಡರು ದಾನ ಮಾಡಿದರು" ಎಂದು ವಿವರಗಳಿವೆ.

೧೨. ಕುಲಗೋಡದ ಹನುಮಾನ ದೇವಾಲಯದ ಮುಂಭಾಗದಲ್ಲಿರುವ ಕ್ರಿ.ಶ. ೧೩ನೆಯ ಶತಮಾನದ ಮುಕ್ಕೊಡೆಗಲ್ಲಿನ ಮೇಲ್ಭಾಗದ ಪಟ್ಟಿಕೆಯಲ್ಲಿ ಪರ್ಯಂಕಾಸನ ದಲ್ಲಿರುವ ತೀರ್ಥಂಕರ ಮತ್ತು ಈತನ ಪಾರ್ಶ್ವಗಳಲ್ಲಿ ಹಸು, ಸೂರ್ಯ, ಚಂದ್ರನ ನಿರೂಪಣೆಗಳಿವೆ. ಪಟ್ಟಿಕೆಯ ಕೆಳಭಾಗದಲ್ಲಿ ನಾಲ್ಕು ಸಾಲುಗಳ ಶಾಸನವಿದ್ದು, ಅಕ್ಷರಗಳೆಲ್ಲವೂ ಸವೆದಿರುವುದರಿಂದ ವಿವರಗಳು ಅಸ್ಪಷ್ಟವಾಗಿವೆ.

೧೩. ಯಾದವಾಡದ ಪಾರ್ಶ್ವನಾಥ ಬಸದಿಯ ಗರ್ಭಗೃಹದಲ್ಲಿರುವ ಅಂಬಿಕಾ ದೇವಿಯ (ಕೂಷ್ಮಾಂಡಿನಿ) ಪಂಚಲೋಹದ ಪ್ರತಿಮೆಯ ಹಿಂಬದಿಯಲ್ಲಿರುವ ದೇವನಾಗರಿ ಲಿಪಿ ಮತ್ತು ಹಿಂದಿ(?) ಭಾಷೆಯ ಶಾಸನದಲ್ಲಿ, "ಕ್ರಿ.ಶ. ೧೫೯೭ರಲ್ಲಿ ಉಸವಾಲ (ಓಸ್ವಾಲ) ಜ್ಞಾತಿಯ (ಜಾತಿ ಅಥವಾ ಪಂಥ) ಮಾಣಿಕನು ಈ ಪ್ರತಿಮೆಯನ್ನು ಮಾಡಿಸಿದನು" ಎಂದು ವಿವರವಿದೆ.

೧೪. ಯಾದವಾಡದ ಪಾರ್ಶ್ವನಾಥ ಬಸದಿಯ ಗರ್ಭಗೃಹದಲ್ಲಿರುವ ಪಾರ್ಶ್ವನಾಥ ತೀರ್ಥಂಕರನ ಸುತ್ತಲೂ ಇರುವ ಹಿತ್ತಾಳೆಯ ಪ್ರಭಾವಳಿಯ ಕೆಳಗಿನ ಪಟ್ಟಿಕೆಯ ಮೇಲಿರುವ ಶಾಸನದಲ್ಲಿ, "ಕ್ರಿ.ಶ. ೧೭೪೩ರಲ್ಲಿ ಶ್ರೀ ಅನಂತಸೇನ ಸ್ವಾಮಿಗಳು ಯಾದವಾಡದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪಕ್ಕೆ ಒಂದು ಮಾನ ತೂಕದ ಹಿತ್ತಾಳೆಯ ಪ್ರಭಾವಳಿಯನ್ನು ಮಾಡಿಸಿಕೊಟ್ಟರು" ಎಂಬ ನಿರೂಪಣೆಯಿದೆ.

೧೫. ಯಾದವಾಡದ ಪಾರ್ಶ್ವನಾಥ ಬಸದಿಯಲ್ಲಿರುವ ಕ್ರಿ.ಶ. ಸುಮಾರು ೧೭ನೆಯ ಶತಮಾನದ ತೀರ್ಥಂಕರನ ಪಂಚಲೋಹದ ಪ್ರತಿಮೆಯ ಪೀಠದ ಎರಡು ಬದಿಯಲ್ಲಿರುವ ಶಾಸನದಲ್ಲಿ, "ಚಂದಣ್ಣನು ಸಿದ್ಧಚಕ್ರ ನೋಂಪಿಯನ್ನು ಉದ್ಯಾಪನೆಗೈದು ಈ ಪ್ರತಿಮೆಯನ್ನು ಮಾಡಿಸಿಕೊಟ್ಟನು" ಎಂದು ಪ್ರಸ್ತಾಪವಿದೆ.

೧೬. ಯಾದವಾಡದ ಪಾರ್ಶ್ವನಾಥ ಬಸದಿಯ ಗರ್ಭಗೃಹದಲ್ಲಿರುವ ಕ್ರಿ.ಶ. ಸುಮಾರು ೧೫–೧೬ನೆಯ ಶತಮಾನದ ಹಿತ್ತಾಳೆಯ ಯಂತ್ರಪಟದ ಒಂದು ಅಂಚಿನಲ್ಲಿ 'ಚಿಂತಾಮಣಿ' ಎಂದು ನಿರೂಪಣೆಯಿದೆ. ಮಧ್ಯದಲ್ಲಿ ಎಲೆಯಾಕಾರದ ಎಂಟು ಚೌಕುಗಳಿದ್ದು, ಇವುಗಳಲ್ಲಿ ತಲಾ ಒಂದು ಸಾಲಿನ ಮಂತ್ರಗಳಿವೆ.

೧೭. ಯಾದವಾಡದ ಪಾರ್ಶ್ವನಾಥ ಬಸದಿಯ ಗರ್ಭಗೃಹದಲ್ಲಿರುವ ಕ್ರಿ.ಶ. ಸುಮಾರು ೧೫–೧೬ನೆಯ ಶತಮಾನದ ಹಿತ್ತಾಳೆಯ ಯಂತ್ರಪಟದ ಒಂದು ಅಂಚಿನಲ್ಲಿ 'ಅನಂತನಪ್ಪರ ಸ್ಥಾಪನೆ ಯಂತ್ರಂ' ಎಂದು ನಿರೂಪಣೆಯಿದೆ.

೨.೬. ಹುಕ್ಕೇರಿ ತಾಲ್ಲೂಕಿನ ಶಾಸನಗಳು

೧. ಉಳ್ಳಾಗಡ್ಡಿ ಖಾನಾಪುರದ ಹನುಮಾನ ದೇವಾಲಯದ ಆವರಣದಲ್ಲಿರುವ ಕ್ರಿ.ಶ. ೧೨೨೯–೩೦ರ ಶಾಸನದಲ್ಲಿ, "ಸವದತ್ತಿ ರಟ್ಟರ ಅಂಕದೇವನ ಮಹಾಪ್ರಧಾನ ಪೆರ್ಗಡೆ ಬಮ್ಮಣಯ್ಯನು ಬಸದಿಯನ್ನು ನಿರ್ಮಿಸಿ, ಮೂಲಸಂಘದ ದೇಸಿಯಗಣದ ಪುಸ್ತಕಗಚ್ಛ ಪರಂಪರೆಯ ಶ್ರೀಧರಮುನಿಯ ಪಾದಗಳನ್ನು ತೊಳೆದು ನಾನೂರೈವತ್ತು ಕಮ್ಮ ಭೂಮಿ, ತೋಟ, ಹಣವನ್ನು ದಾನ ಮಾಡಿದನು" ಎಂದು ಉಲ್ಲೇಖವಿದೆ.

೨. ಉಳ್ಳಾಗಡ್ಡಿ ಖಾನಾಪುರದ ಮಹಾವೀರ ಬಸದಿಯ ಆವರಣದಲ್ಲಿನ ಬಾಹುಬಲಿ ಶಿಲ್ಪದ ಹಿಂಬದಿಯಲ್ಲಿರುವ ಕ್ರಿ.ಶ. ೧೧೪೪ರ ಶಾಸನದಲ್ಲಿ, "ಆಲ್ಗೋಡದ ಸುಮತಿಯಣ್ಣನು ನಿರ್ಮಿಸಿದ ಬಾಹುಬಲಿಯ(?) ದೇಹಾರದ (ಬಸದಿ) ದೇವರ ಸರುಗಿಗೆ (ಚರು) ಸವದತ್ತಿ ರಟ್ಟರ ಮುಮ್ಮಡಿ ಕಾರ್ತವೀರ್ಯನು ಪುನ್ನಾಗವೃಕ್ಷಮೂಲಗಣ ಪರಂಪರೆಯ ಕನಕಸ್ವಾಮಿಸಿದ್ಧಾಂತದೇವನ ಕಾಲುಗಳನ್ನು ತೊಳೆದು ನೂರು ಕಮ್ಮ ಭೂಮಿಯನ್ನು ದಾನ ಮಾಡಿದನು" ಎಂದು ವಿವರವಿದೆ.

೩. ಅಮ್ಮಣಗಿಯ ಪಾರ್ಶ್ವನಾಥ ಬಸದಿಯ ಗರ್ಭಗೃಹದಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪದ ಪಾದಪೀಠದ ಮೇಲಿರುವ ಶಾಸನದಲ್ಲಿ, "ಮೂಲಸಂಘದ ಸೂರಸ್ತಗಣ ಪರಂಪರೆಯ ಶ್ರೀನಂದಿ ಭಟ್ಟಾರಕದೇವನ ಶಿಷ್ಯೆ ಅಮಣಗೆಯೂರದ (ಅಮ್ಮಣಗಿ) ಧನಶ್ರೀ ಈ ಶಿಲ್ಪವನ್ನು ಮಾಡಿಸಿದಳು" ಎಂದು ಉಲ್ಲೇಖವಿದೆ.

೪. ಬೆನವಾಡದ ಪಾರ್ಶ್ವನಾಥ ಬಸದಿಯ ಗರ್ಭಗೃಹದಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪದ ಪಾದಪೀಠದ ಮೇಲಿರುವ ಶಾಸನದಲ್ಲಿ, "ಮಹಾಸಾಮಂತನು ಮಾಡಿಸಿದ ಬಸದಿಯ ಜೀರ್ಣೋದ್ಧಾರ ಮತ್ತು ಮುನಿಗಳ ಆಹಾರದಾನಕ್ಕಾಗಿ ಎಂಟುಹಿಟ್ಟುಗಳು ಮೊದಲಾದವರು ಯಾಪನೀಯ ಸಂಘದ ಮೈಳಾಪಾನ್ವಯದ ಕಾರೆಯಗಣ ಪರಂಪರೆಯ ಶ್ರೀಧರತ್ರೈವಿದ್ಯದೇವನ ಕಾಲುಗಳನ್ನು ತೊಳೆದು ಮೂವತ್ತು ಕಮ್ಮ ಭೂಮಿಯನ್ನು ದಾನ ಮಾಡಿದರು" ಎಂದು ಪ್ರಸ್ತಾಪವಿದೆ. ಅಕ್ಷರಗಳು ಸವೆದಿರುವುದರಿಂದ ಮಹಾಸಾಮಂತನ ಹೆಸರು ಸ್ಪಷ್ಟವಿಲ್ಲ.

೫. ಸಂಕೇಶ್ವರದ ಕ್ರಿ.ಶ. ಸುಮಾರು ೧೩ನೆಯ ಶತಮಾನದ ತೀರ್ಥಂಕರನ ಶಿಲ್ಪದ ಪಾದಪೀಠದ ಮೇಲಿರುವ ಶಾಸನದಲ್ಲಿ, "ಬಾಚಾಚಿ ಭರಮಪ್ಪಶೆಟ್ಟಿ ಬಸದಿಯನ್ನು ಜೀರ್ಣೋದ್ಧಾರಪಡಿಸಿದನು" ಎಂದು ಉಲ್ಲೇಖವಿದೆ.

೬. ಪಾಶ್ಚಾಪುರದ ಪಾರ್ಶ್ವನಾಥ ಬಸದಿಯ ಗರ್ಭಗೃಹದಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪದ ಪಾದಪೀಠದ ಮೇಲಿರುವ ಶಾಸನದಲ್ಲಿ, "ಅತುಲ ಮೂಲಸಂಘದ ಚಿತ್ರಕೂಟಾನ್ವಯದ ಸೂರಸ್ಥಗಣ ಪರಂಪರೆಯ

ಪೂಜ್ಯಪಾದ ಮುನಿಪನು ಶಾಸನದೇವಿಯನ್ನು (ಪದ್ಮಾವತಿಯಕ್ಷಿ?) ಪೂಜಿಸಿ ವಿಜಯಿಯಾದನು" ಎಂದು ಪ್ರಸ್ತಾಪವಿದೆ.

೨.೭. ಚಿಕ್ಕೋಡಿ ತಾಲ್ಲೂಕಿನ ಶಾಸನಗಳು

೧. ಯಕ್ಸಂಬಾದ ಆದಿನಾಥ ಬಸದಿಯ ನವರಂಗದಲ್ಲಿರುವ ಕ್ರಿ.ಶ. ೧೧೬೫ರ ಶಾಸನದಲ್ಲಿ, "ಕೊಲ್ಲಾಪುರದ ಶಿಲಾಹಾರರ ವಿಜಯಾದಿತ್ಯನ ಮಹಾಪ್ರಧಾನ ಪಡವಳ ಕಾಳಿಯಣ್ಣನು ಕೂಹುಂಡಿ ಮಂಡಲದ (ಕೂಹುಂಡಿ–೩೦೦೦) ಕೊರವಳ್ಳಿ ಕಂಪಣದಲ್ಲಿನ ಎಕ್ಕಸಂಬುಗೆಯಲ್ಲಿ (ಯಕ್ಸಂಬಾ) ನೇಮಿನಾಥ ಬಸದಿಯನ್ನು ನಿರ್ಮಿಸಿ, ಇದರ ತ್ರಿಕಾಲ ಸಂಧ್ಯಾವಸರದ ಮಧುರ ವಾದ್ಯಕ್ಕೆ ಎರಡುಸಾವಿರ ಕಂಬಗಳ ಅಳತೆಯ ಭೂಮಿ, ದಾನಶಾಲೆ, ಬಣಬೆಯ ನಿವೇಶನ, ಹೂದೋಟವನ್ನು ದಾನ ಮಾಡಿದನು. ಇದೇ ಬಸದಿಯ ನೇಮಿನಾಥ ಸ್ವಾಮಿಗಳ ಅಷ್ಟವಿಧಾರ್ಚನೆ (ಅಕ್ಷತೆ, ಜಲ, ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲ) ಪೂಜೆ, ನಂದಾದೀವಿಗೆಗಾಗಿ ಉಭಯ ನಾನಾದೇಸಿಗಳು, ಎಕ್ಕಸಂಬುಗೆಯ ಸಮಸ್ತ ಪ್ರಜೆಗಳು ಕೂಡಿಕೊಂಡು ಒಂದು ಎಣ್ಣೆಗಾಣ, ವಿವಿಧ ತೆರಿಗೆಗಳು (ಒಕ್ಕಲುದೆರೆ, ಬೆಣ್ಣೆ, ಬೀರವಣ ಇತ್ಯಾದಿ), ಅರ್ಧಮಾನ ಧಾನ್ಯ, ಅಡಕೆಗಳು, ಐವತ್ತು ಎಲೆಗಳು, ಎಣ್ಣೆಯನ್ನು ದಾನ ಮಾಡಿದರು" ಎಂದು ಪ್ರಸ್ತಾಪವಿದೆ.

೨. ಯಕ್ಸಂಬಾದ ಆದಿನಾಥ ಬಸದಿಯ ಗರ್ಭಗೃಹದಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಆದಿನಾಥ ತೀರ್ಥಂಕರನ ಶಿಲ್ಪದ ಪೀಠದ ಮೇಲಿರುವ ಶಾಸನದಲ್ಲಿ (ಈ ಪೀಠವು ಮೂಲತಃ ಪ್ರತಿಷ್ಠಾಪಿತವಾಗಿದ್ದ ನೇಮಿನಾಥ ತೀರ್ಥಂಕರನಿಗೆ ಸಂಬಂಧಿಸಿದೆ), "ಪಡವಳ ಕಾಳಿಯಣ್ಣನು ನೇಮಿನಾಥ ಬಸದಿಯನ್ನು ಮಾಡಿಸಿ, ತನ್ನ ಗುರು ಯಾಪನೀಯ ಸಂಘದ ಪುನ್ನಾಗವೃಕ್ಷಮೂಲಗಣ ಪರಂಪರೆಯ ಮಂಡಳಾಚಾರ್ಯ ಕುಮಾರಕೀರ್ತಿಪಂಡಿತದೇವನ ಶಿಷ್ಯ ವಿಜಯಕೀರ್ತಿಪಂಡಿತದೇವನಿಗೆ ಒಪ್ಪಿಸಿದನು" ಎಂದು ವಿವರವಿದೆ.

೩. ಕರೋಶಿಯ ಕೋಟೆಯ ಆವರಣದಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಸಿಂಹಪೀಠದ ಪಟ್ಟಿಕೆಯ ಮೇಲಿರುವ ಶಾಸನದಲ್ಲಿ, "ಜಯದೇವನಾಯಕನು ಶಾಂತಿನಾಥ ತೀರ್ಥಂಕರನ ಪ್ರತಿಮೆಯನ್ನು ಮಾಡಿಸಿದನು ಮತ್ತು ಜಯಸೆಟ್ಟಿಯ ಮಗನಾದ ಸೇನಬೋವ ಸಿಂಗಯ್ಯನು ಈ ಶಾಸನವನ್ನು ಬರೆದನು" ಎಂದು ನಿರೂಪಣೆಯಿದೆ.

೪. ಸ್ತವನಿಧಿಯ ಕ್ರಿ.ಶ. ೧೨ನೆಯ ಶತಮಾನದ ಪಾದಪೀಠ ಶಾಸನದಲ್ಲಿ (ಈ ಶಿಲ್ಪವು ಹುಕ್ಕೇರಿ ಪರಿಸರದಿಂದ ಸ್ತವನಧಿಗೆ ಸ್ಥಳಾಂತರವಾಗಿದೆ), "ಮೂಲಸಂಘದ ದೇಸಿಯಗಣದ ಪುಸ್ತಕಗಚ್ಛ ಪರಂಪರೆಯ ವೀರನಂದಿಸಿದ್ಧಾಂತ ಚಕ್ರವರ್ತಿದೇವನ ಗುಡ್ಡ (ಶಿಷ್ಯ) ಸೇನರಸನ (ಈತನು ಸವದತ್ತಿ ರಟ್ಟರ ಅರಸ) ಅಜ್ಜಿ (ಮುತ್ತವ್ವೆ) ಲಲಿಯಾದೇವಿ (ಲಚ್ಯೇಯಾದೇವಿ) ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದಳು ಮತ್ತು ರೂವಾರಿ ಜಿನ್ನೋಜನು ಪ್ರತಿಮೆಯನ್ನು ಕಂಡರಿಸಿದನು" ಎಂದು ಪ್ರಸ್ತಾಪವಿದೆ. ಈ

ಶಾಸನದ ಪಾರ್ಶ್ವದಲ್ಲಿ "ಕ್ರಿ.ಶ. ೧೮೮೦ರಲ್ಲಿ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕಸ್ವಾಮಿ ಸಂಸ್ಥಾಪಿತ" ಎಂದು ವಿವರವಿದೆ.

೫. ಖಡಕಲಾಟದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ, "ಅಗ್ರಹಾರ ಲಟ್ಟಿಯ (ಖಡಕಲಾಟ) ಬಸದಿಗೆ ದಾನ ಮಾಡಿದರು" ಎಂದು ವಿವರವಿದೆ. ಅಕ್ಷರಗಳು ಸವೆದಿರುವುದರಿಂದ ಹೆಚ್ಚಿನ ವಿವರಗಳು ಸ್ಪಷ್ಟವಿಲ್ಲ.

೬. ಶಮನೇವಾಡಿಯ ಚಂದ್ರಪ್ರಭನಾಥ ಬಸದಿಯ ಮೇಲ್ಮಡಿಯ ಗರ್ಭಗೃಹದಲ್ಲಿರುವ ತೀರ್ಥಂಕರನ ಶಿಲ್ಪದ ಪಾದಪೀಠದ ಮೇಲಿರುವ ಶಾಸನದಲ್ಲಿ, "ಜಿನಸೇನ ಭಟ್ಟಾರಕರ ಶಿಷ್ಯನೊಬ್ಬನು ಕ್ರಿ.ಶ. ೧೭೯೩ರಲ್ಲಿ ಚಂದ್ರಪ್ರಭನಾಥನ ಶಿಲ್ಪವನ್ನು ಮಾಡಿಸಿದನು" ಎಂದು ವಿವರವಿದೆ. ಅಕ್ಷರಗಳು ಸವೆದಿರುವುದರಿಂದ ಶಿಷ್ಯನ ಹೆಸರು ಸ್ಪಷ್ಟವಿಲ್ಲ.

೭. ಬೋರಗಾಂವದ ಕ್ರಿ.ಶ. ಸುಮಾರು ೧೩ನೆಯ ಶತಮಾನದ ನಿಷಿಧಿ ಶಾಸನದಲ್ಲಿ, "ಗುಣಭದ್ರ ಭಟ್ಟಾರಕದೇವನ ಶಿಷ್ಯನಾದ ಚಂದದೇವನು ಸನ್ಯಸನ ವಿಧಿಯಿಂದ ಸಮಾಧಿಮರಣ ಹೊಂದಿದ ಪರೋಕ್ಷ ವಿನಯಾರ್ಥವಾಗಿ ನಿಷಿಧಿಗಲ್ಲನ್ನು ನಿಲ್ಲಿಸಲಾಯಿತು" ಎಂದು ವಿವರವಿದೆ.

೮. ಯಕ್ಸಂಬಾದ ಆದಿನಾಥ ಬಸದಿಯ ನವರಂಗದಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಜೈನ ವೀರಗಲ್ಲಿನ ಪಟ್ಟಿಕೆಗಳ ಮೇಲೆ ಶಾಸನವಿದ್ದು, ಅಕ್ಷರಗಳು ಸವೆದಿರುವುದರಿಂದ ವಿವರಗಳು ಸ್ಪಷ್ಟವಿಲ್ಲ.

೨.೮. ರಾಯಬಾಗ ತಾಲ್ಲೂಕಿನ ಶಾಸನಗಳು

೧. ರಾಯಬಾಗದ ಆದಿನಾಥ ಬಸದಿಯ ಮುಖಮಂಟಪದ ದ್ವಾರಬಂಧದ ಬಲಬದಿಯಲ್ಲಿರುವ ಕ್ರಿ.ಶ. ೧೦೪೧ರ ಶಾಸನದಲ್ಲಿ, "ಕಲ್ಯಾಣದ ಚಾಳುಕ್ಯರ ೧ನೆಯ ಜಯಸಿಂಹನ ಆಳ್ವಿಕೆಯ ಸಂದರ್ಭದಲ್ಲಿ ಬಸದಿಗೆ ದಾನ ಮಾಡಲಾಯಿತು" ಎಂದು ಪ್ರಸ್ತಾಪವಿದೆ. ಅಕ್ಷರಗಳು ಸವೆದಿರುವುದರಿಂದ ಹೆಚ್ಚಿನ ವಿವರಗಳು ಸ್ಪಷ್ಟವಿಲ್ಲ.

೨. ರಾಯಬಾಗದ ಕ್ರಿ.ಶ. ೧೧೪೯ರ ಶಾಸನದಲ್ಲಿ (ಈ ಶಾಸನಶಿಲೆ ಕೊಲ್ಲಾಪುರದ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಸ್ಥಳಾಂತರವಾಗಿದೆ), "ಕಲ್ಯಾಣದ ಚಾಳುಕ್ಯರ ಇಮ್ಮಡಿ ಜಗದೇಕಮಲ್ಲನ ನೆಚ್ಚಿನ ಹಿರಿಯ ದಂಡನಾಯಕ ಕಾಳಿದಾಸನ ಧರ್ಮಪತ್ನಿ ರೇಕಲದೇವಿಯ ಸಹೋದರ ದಾಸಿರಾಜನು (ದಾಸಿಮರಸ) ಅಗ್ರಹಾರ ಹೂವಿನಬಾಗೆಯ (ರಾಯಬಾಗ) ಮಾರಸಿಂಗಸೆಟ್ಟಿ ಬಸದಿಯಲ್ಲಿ ಜಿನಪೂಜೋತ್ಸವನ್ನು ನೋಡಲು ಆಗಮಿಸಿದ್ದ ಸಂದರ್ಭದಲ್ಲಿ, ಇದು ಶೂನ್ಯಸಂಸ್ಥಾನವೆಂದು ಇದರ ಮಹಿಮೆಯನ್ನು ನಕರರು ಬಣ್ಣಿಸಲು, ಈ ಬಸದಿಯ ಖಂಡಸ್ಫುಟಿತ ಜೀರ್ಣೋದ್ಧಾರ, ದೇವರ ಪೂಜೆ–ಪುನಸ್ಕಾರ, ಮುನಿಗಳ ಆಹಾರದಾನಕ್ಕೆ ಯಾಪನೀಯ ಸಂಘದ ಪುನ್ನಾಗವೃಕ್ಷಮೂಲಗಣ ಪರಂಪರೆಯ ಆಚಾರ್ಯನಾದ ಕುಮಾರಕೀರ್ತಿಪಂಡಿತದೇವನ ಪಾದಗಳನ್ನು ತೊಳೆದು

ಸರ್ವಬಾಧಾಪರಿಹಾರವಾಗಿ ಮೂವತ್ತು ಮತ್ತರು ಭೂಮಿಯನ್ನು ದಾನ ಮಾಡಿದನು. ಈ ದಾನವನ್ನು ರಾಯಬಾಗದ ಊರೊಡೆಯರಾದ ಮಹಾಜನಗಳು ಸಧರ್ಮದಿಂದ ಪ್ರತಿಪಾಳಿಸಬೇಕು" ಎಂದು ಉಲ್ಲೇಖವಿದೆ.

೩. ರಾಯಬಾಗದ ಕ್ರಿ.ಶ. ೧೧೪೦ರ(?) ಶಾಸನದಲ್ಲಿ (ಈ ಶಾಸನಶಿಲೆ ಕೊಲ್ಲಾಪುರದ ಇರ್ವಿನ್ ಅಗ್ರಿಕಲ್ಚರ್ ವಸ್ತುಸಂಗ್ರಹಾಲಯಕ್ಕೆ ಸ್ಥಳಾಂತರವಾಗಿದೆ), "ಸವದತ್ತಿ ರಟ್ಟರ ಮಹಾಮಂಡಳೇಶ್ವರ ಕಾರ್ತವೀರ್ಯದೇವನು ವೇಣುಗ್ರಾಮೆಯ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದ ಸಂದರ್ಭದಲ್ಲಿ, ಕೂಹುಂಡಿ–೩೦೦೦ ವಿಭಾಗದಲ್ಲಿನ ಕುರುಂಬೆಟ್ಟ (ಗೋಕಾಕ ತಾಲ್ಲೂಕಿನ ಮಮದಾಪುರ) ಕಂಪಣದಲ್ಲಿನ ಕಂಕಣನೂರು (ಕಂಕಣವಾಡಿ) ಪ್ರಭುತ್ವವನ್ನು ಅಷ್ಟಭೋಗ ತೇಜಸಾಮ್ಯಸಹಿತವಾಗಿ ನೋಡಿಕೊಳ್ಳುತ್ತಿದ್ದ ಕನ್ನಡಿಗವಂಶದ ಶಾಂಡಿಲ್ಯಗೋತ್ರದ ಮಹಾದಾನಿ ಮಾದಿರಾಜ ದಂಡನಾಯಕನು ಮೂಲಸ್ಥಾನದ ಕಲಿದೇವಸ್ವಾಮಿ ದೇವಾಲಯಕ್ಕೆ ೫೫೦ ಕಂಬದ ಅಳತೆಯ ಭೂಮಿ, ತೋಟ, ಎಂಟು ಹಸ್ತದ ಅಳತೆಯ ಮನೆಯನ್ನು, ಯಾಪನೀಯ ಸಂಘದ ಮೂಲಬಸದಿಗೆ ೪೫೦ ಕಂಬದ ಅಳತೆಯ ಭೂಮಿ, ಆರು ಹಸ್ತದ ಅಳತೆಯ ದಾನಶಾಲೆಯನ್ನು, ಮೂಲಸಂಘದ ಬಸದಿಗೆ ೫೫೦ ಕಂಬದ ಅಳತೆಯ ಭೂಮಿ, ಎಂಟು ಹಸ್ತದ ಅಳತೆಯ ದಾನಶಾಲೆಯನ್ನು ದಾನ ಮಾಡಿದನು ಮತ್ತು ಮೂಲಸ್ಥಾನ ಕಲಿದೇವಸ್ವಾಮಿ ದೇವಾಲಯ, ಮೂಲಬಸದಿಗಳೆರಡನ್ನೂ ಜೀರ್ಣೋದ್ಧಾರ ಮಾಡಿಸಿದನು" ಎಂದು ವಿವರವಿದೆ.

೪. ರಾಯಬಾಗದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ (ಈ ಶಾಸನಶಿಲೆ ಕೊಲ್ಲಾಪುರದ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಸ್ಥಳಾಂತರವಾಗಿದೆ), "ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಮಹಾಮಂಡಳೇಶ್ವರ ಸವದತ್ತಿ ರಟ್ಟರ ಕನ್ನಕೈರನು ಹೂವಿನಬಾಗೆಯ ನೆಲೆವೀಡಿನಿಂದ ಆಳುತ್ತಿದ್ದ ಸಂದರ್ಭದಲ್ಲಿ ವಾಸುಪೂಜ್ಯಮುನಿಯ ಶಿಷ್ಯ ವಿಜಯಕೀರ್ತಿಮುನಿಯ ಸನ್ನಿಧಿಯಲ್ಲಿ ದಾನ ಮಾಡಿದನು" ಎಂದು ಪ್ರಸ್ತಾಪವಿದೆ. ಅಕ್ಷರಗಳು ಸವೆದಿರುವುದರಿಂದ ಹೆಚ್ಚಿನ ವಿವರಗಳು ಸ್ಪಷ್ಟವಿಲ್ಲ.

೫. ರಾಯಬಾಗದ ಆದಿನಾಥ ಬಸದಿಯ ಮುಖಮಂಟಪದಲ್ಲಿ ಬಲ ಮತ್ತು ಎಡಬದಿಯ ಸ್ತಂಭಗಳ ಮೇಲಿರುವ ಎರಡು ಶಾಸನಗಳಲ್ಲಿ, "ದಿಲ್ಲಿ ಸಿಂಹಾಸನಾಧೀಶ್ವರ ಮೊಘಲ್ ಚಕ್ರವರ್ತಿ ಜಹಾಂಗೀರನ ಆಳ್ವಿಕೆಯ ಸಂದರ್ಭದಲ್ಲಿ ಮೂಲಸಂಘದ ಸೇನಗಣ ಪರಂಪರೆಯ ಗಣ್ಯರು ಕ್ರಿ.ಶ. ೧೫೫೭ರಲ್ಲಿ ಸೋಮಸೇನ ಭಟ್ಟಾರಕನ (ಈತನು ಪ್ರಾಯಶಃ ಕೊಲ್ಲಾಪುರ ಜೈನ ಮಠದ ಪೀಠಾಧಿಪತಿ) ಉಪದೇಶದಿಂದ ಆದಿನಾಥ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿದರು" ಎಂದು ವಿವರವಿದೆ.

೬. ರಾಯಬಾಗದಲ್ಲಿ ತಮ್ಮಣ್ಣ ಚಿನ್ನಪ್ಪ ಒಡ್ಡರ ಅವರ ಮನೆಯ ನಿವೇಶನದಲ್ಲಿ ದೊರೆತಿರುವ ಚೌವ್ವೀಸ ತೀರ್ಥಂಕರರ ಪ್ರಭಾವಳಿಯುಳ್ಳ ಆದಿನಾಥ ತೀರ್ಥಂಕರನ ಲೋಹದ ಪ್ರತಿಮೆಯ ಹಿಂಬದಿಯಲ್ಲಿರುವ ಶಾಸನದಲ್ಲಿ, "ಮೂಲಸಂಘದ ಸರಸ್ವತಿಗಣ ಪರಂಪರೆಯ ವಿಜಯಕೀರ್ತಿ ಭಟ್ಟಾರಕನ ಉಪದೇಶದ ಅನುಗುಣವಾಗಿ ಖಂಡೇಲವಾಲ

ವಂಶದ (ಗುಜರಾತ ಪ್ರದೇಶ) ಗಂಗಾಯಿಯ ಮಗನಾದ ಸಂಘವಿ ಆಂಪ್ತಜೂರಪಾ ಮತ್ತು ಸುಧಾಯಿಯ ಮಗನಾದ ಸಂಘವಿ ಧರ್ಮರಾಜ ಕ್ರಿಶ. ೧೫೦೭ರಲ್ಲಿ ಚತುರ್ವಿಂಶತಿ ತೀರ್ಥಂಕರರ ಪ್ರತಿಮೆಯನ್ನು ಮಾಡಿಸಿದರು" ಎಂದು ನರೂಪಣೆಯಿದೆ.

೭. ರಾಯಬಾಗದ ಪಶ್ಚಿಮಕ್ಕೆ ನಂದಿಕುರಳಿಗೆ ಸಾಗುವ ಮಾರ್ಗದ ಬಲಬದಿಯ ಮರಡಿಯಲ್ಲಿರುವ ನಿಷಿಧಿಮಂಟಪದಲ್ಲಿನ ಪಾದಪೀಠದ ಮೇಲಿರುವ ಶಾಸನದಲ್ಲಿ, "ಕ್ರಿಶ. ೧೯೬೫ರ ಡಿಸೆಂಬರ್ ೧೮ರಂದು ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯರು ಸಮಾಧಿಮರಣವನ್ನಪ್ಪಿದರು" ಎಂದು ಪ್ರಸ್ತಾಪವಿದೆ.

೨.೯. ಬೆಳಗಾವಿ ತಾಲ್ಲೂಕಿನ ಶಾಸನಗಳು

೧. ಬೆಳಗಾವಿಯ ಕಮಲ ಬಸದಿಯ ಆವರಣದಲ್ಲಿದ್ದ ಕ್ರಿಶ. ೧೨೦೪ರ ಶಾಸನದಲ್ಲಿ (ಈ ಶಾಸನಶಿಲೆ ಇಂಗ್ಲೆಂಡದ ಲಂಡನ್‌ದಲ್ಲಿರುವ ಬ್ರಿಟಿಷ್ ವಸ್ತುಸಂಗ್ರಹಾಲಕ್ಕೆ ಸ್ಥಳಾಂತರ 'ವಾಗಿದೆ), "ಸವದತ್ತಿ ರಟ್ಟರ ಳನೆಯ ಕಾರ್ತವೀರ್ಯನ ಮಹಾಮಂತ್ರಿ ಬೀಚಣನು (ಬೀಚಿರಾಜ) ಮಾಡಿಸಿದ ರಟ್ಟಜಿನಾಲಯದ (ಕಮಲ ಬಸದಿ) ಶಾಂತಿನಾಥದೇವರ ನಿತ್ಯಪೂಜಾಭಿಷೇಕ ಮೊದಲಾದ ಧರ್ಮಕಾರ್ಯಗಳಿಗೆ ವೇಣುಗ್ರಾಮ ನೆಲೆವೀಡಿನಿಂದ ಅರಸುಗೈಯುತ್ತಿದ್ದ ಯುವರಾಜ ಮಲ್ಲಿಕಾರ್ಜುನದೇವನು ಮತ್ತು ಮಹಾಜನಗಳು (ಅಗ್ರಹಾರದ ಬ್ರಾಹ್ಮಣರು) ಸಹಿತವಾಗಿ ಸ್ಥಾನಾಚಾರ್ಯನಾದ ಶುಭಚಂದ್ರ ಭಟ್ಟಾರಕದೇವನಿಗೆ ಧಾರಾಪೂರ್ವಕವಾಗಿ ವೇಣುಗ್ರಾಮದಲ್ಲಿ (ಬೆಳಗಾವಿ) ವೇಣುಗ್ರಾಮದ ಕೋಲಿನಿಂದ ಅಳೆದು ಭೂಮಿ, ಮನೆಯನ್ನು ದಾನ ಮಾಡಿದನು ಹಾಗೂ ಇದೇ ಬಸದಿಗೆ ವೀರಬಣಂಜರು, ಸಮಯಚಕ್ರವರ್ತಿ ಜಯಪತಿಸೆಟ್ಟಿ, ವೇಣುಗ್ರಾಮದ ಸಮಸ್ತ ಮುಮ್ಮುರಿದಂಡರು, ಕೂಹುಂಡಿ-೩೦೦೦ದ ಉಭಯ ನಾನಾದೇಶಿ ಮುಮ್ಮುರಿದಂಡರು, ಪರಶುರಾಮನಾಯಕ, ಪೊಮ್ಮನನಾಯಕ, ಅಮ್ಮುಗಿನಾಯಕ, ಪಡಪನಾಯಕ, ಕೊಂಡನಂಬಿಸೆಟ್ಟಿ, ಪೊರೆಯಂಚಸೆಟ್ಟಿ ಮೊದಲಾದ ಸಮಸ್ತ ಲಾಳಮಲೆಯಾಳದ (ಕೇರಳ ರಾಜ್ಯದ ಪ್ರದೇಶ) ವ್ಯವಹಾರಿಗಳು, ವೇಣುಗ್ರಾಮದ ಸಮಸ್ತ ಚಿನ್ನಗೆಯಿಕದವರು, ದೂಸಿಗರು, ಮುಖ್ಯಮಾಗುಳಿದ ಪರದರು, ತೇಲಿಗರು, ದಿಂಕಸಾಲಿಗರು ಮೊದಲಾದವರು ಕೂಡಿಕೊಂಡು ಹಣವನ್ನು (ಹಾಗ, ಗದ್ಯಾಣ, ಕಾಣಿ), ಕಾರ್ತವೀರ್ಯನು ಭೂಮಿಯನ್ನು ದಾನ ಮಾಡಿದನು" ಎಂದು ವಿವರವಿದೆ.

೨. ಬೆಳಗಾವಿಯ ಕಮಲ ಬಸದಿಯ ಆವರಣದಲ್ಲಿದ್ದ ಕ್ರಿಶ. ೧೨೦೪ರ ಶಾಸನದಲ್ಲಿ (ಈ ಶಾಸನಶಿಲೆ ಇಂಗ್ಲೆಂಡದ ಲಂಡನ್‌ದಲ್ಲಿರುವ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿದೆ), "ಸವದತ್ತಿ ರಟ್ಟರ ಳನೆಯ ಕಾರ್ತವೀರ್ಯ ಮತ್ತು ಯುವರಾಜಕುಮಾರ ಮಲ್ಲಿಕಾರ್ಜುನ ಕೂಡಿಕೊಂಡು ಮಹಾಮಂತ್ರಿ ಬೀಚಿರಾಜನು ಮಾಡಿಸಿದ ರಟ್ಟಜಿನಾಲಯದ ಶಾಂತಿನಾಥ ದೇವರ ಅಂಗಭೋಗ, ರಂಗಭೋಗ, ನಿತ್ಯಾಭಿಷೇಕ, ಖಂಡಸ್ಫುಟಿತ ಜೀರ್ಣೋದ್ಧಾರ, ಮುನಿಗಳ ಆಹಾರದಾನಕ್ಕೆ ಮೂಲಸಂಘದ ಕೊಂಡಕುಂದಾನ್ವಯದ ದೇಸಿಯಗಣದ ಪುಸ್ತಕಗಚ್ಛದ ಹನಸೋಗೆಬಳಿ ಪರಂಪರೆಯ ಸ್ಥಾನಾಚಾರ್ಯನಾದ ಶುಭಚಂದ್ರ

ಭಟ್ಟಾರಕದೇವನ ಸನ್ನಿಧಿಯಲ್ಲಿ ಕೂಹುಂಡಿ-೩೦೦೦ ಆಡಳಿತ ವಿಭಾಗದ ಕೊರವಳ್ಳಿ ಕಂಪಣದಲ್ಲಿನ ಉಂಬರವಾಣಿ (ಉಮರಾಣಿ) ಗ್ರಾಮದಲ್ಲಿ ಭೂದಾನ ಮಾಡಿದರು" ಎಂದು ನಿರೂಪಣೆಯಿದೆ.

೩. ಹೊಸೂರಿನ ಕ್ರಿ.ಶ. ೧೧೮೦ರ ಶಾಸನದಲ್ಲಿ, "ಸವದತ್ತಿ ರಟ್ಟರ ಲಕ್ಷ್ಮಿದೇವರಸನು ಬಸದಿಯನ್ನು ನಿರ್ಮಿಸಿ ಭೂದಾನ ಮಾಡಿದನು" ಎಂದು ಉಲ್ಲೇಖವಿದೆ.

೪. ಬೆಳಗಾವಿಯ ಕೋರೆಗಲ್ಲಿಯ ಪಾರ್ಶ್ವನಾಥ ಬಸದಿಯ ಅಂತರಾಳದ ದೇವಕೋಷ್ಠಕದಲ್ಲಿರುವ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪದ ಪಾದಪೀಠದ ಮೇಲಿರುವ ಶಾಸನದಲ್ಲಿ, "ಮೂಲಸಂಘದ ಬಲತ್ಕಾರಗಣ ಪರಂಪರೆಯ ಸಕಲವಿದ್ಯಾಚಕ್ರವರ್ತಿ ಶ್ರುತಕೀರ್ತಿಸಿದ್ಧಾಂತದೇವನ ಶಿಷ್ಯನು ಪಾರ್ಶ್ವನಾಥನ ಶಿಲ್ಪವನ್ನು ಮಾಡಿಸಿನು" ಎಂದು ಪ್ರಸ್ತಾಪವಿದೆ. ಅಕ್ಷರಗಳು ಸವೆದಿರುವುದರಿಂದ ಶಿಷ್ಯನ ಹೆಸರು ಸ್ಪಷ್ಟವಿಲ್ಲ.

೫. ಬಸ್ತವಾಡದ ಚಂದ್ರಪ್ರಭನಾಥ ಬಸದಿಯ ಗರ್ಭಗೃಹದಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಚೌವ್ವೀಸ ತೀರ್ಥಂಕರರ ಶಿಲ್ಪದ ಪಾದಪೀಠದ ಮೇಲಿರುವ ಶಾಸನದಲ್ಲಿ, "ಶುಭಚಂದ್ರ ಭಟ್ಟಾರಕದೇವನ ಗುಡ್ಡ (ಶಿಷ್ಯ) ಬಚ್ಚರ (ವೈಷ್ಯರ) ಜಿನ್ನಯ್ಯನ ಮಗನಾದ ಚಂದರಯ್ಯನು ಬಸದಿಯನ್ನು ಮಾಡಿಸಿದನು" ಎಂದು ಪ್ರಸ್ತಾಪವಿದೆ.

೬. ಹಿಂಡಲಗಾದ ರಸ್ತೆಯ ಪಕ್ಕದಲ್ಲಿ ಕೆಬಲ್ ಹಾಕಲು ೨೦೧೨ರಲ್ಲಿ ಅಗೆಯುತ್ತಿದ್ದ ಸಂದರ್ಭದಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪ ದೊರೆತಿದೆ. ಇದನ್ನು ಬೆಳಗಾವಿಯ ಕಮಲ ಬಸದಿಯ ನವರಂಗದಲ್ಲಿ ತಂದಿಡಲಾಗಿದೆ. ಈ ಶಿಲ್ಪದ ಪಾದಪೀಠದ ಮೇಲಿರುವ ಶಾಸನದಲ್ಲಿ, "ಮೂಲಸಂಘದ ಕಾಣೂರುಗಣ ಪರಂಪರೆಯ ವಿಮಳದೇವರ ಗುಡ್ಡಿ (ಶಿಷ್ಯೆ) ಪೊಮವ್ವೆ ಎಂಬುವವಳು ಈ ಶಿಲ್ಪವನ್ನು ಪ್ರತಿಷ್ಠಾಪನೆ ಮಾಡಿಸಿದಳು" ಎಂದು ನಿರೂಪಣೆಯಿದೆ.

೨.೧೦. ರಾಮದುರ್ಗ ತಾಲ್ಲೂಕಿನ ಶಾಸನಗಳು

೧. ಕಟಕೋಳದ ಕೆರೆಯ ಹತ್ತಿರ ಮೂರು ನಿಷಿಧಿಗಲ್ಲುಗಳಿದ್ದು, ಇವುಗಳ ಪಟ್ಟಿಕೆಗಳ ಮೇಲೆ ಶಾಸನಗಳಿವೆ. ಅಕ್ಷರಗಳು ಸವೆದಿರುವುದರಿಂದ ವಿವರಗಳು ಸ್ಪಷ್ಟವಿಲ್ಲ.

೨.೧೧. ಇತರೆಡೆಯ ಶಾಸನಗಳು

ಬೆಳಗಾವಿ ಜಿಲ್ಲೆಯ ಜೈನೇತರ ಹಾಗೂ ಇತರೆಡೆಯ ಕೆಲವು ಜೈನ ಮತ್ತು ಜೈನೇತರ ಶಾಸನಗಳಲ್ಲಿ, ಬೆಳಗಾವಿ ಜಿಲ್ಲೆಯ ಜೈನ ಮುನಿಗಳು, ವರ್ತಕರು, ಜೈನರು, ಬಸದಿಗಳು, ಕವಿಗಳು, ಶ್ರಾವಕರು ಮೊದಲಾದ ವಿವರಗಳಿವೆ.

೧. ಸವದತ್ತಿಯ ಕ್ರಿ.ಶ. ೧೨೨೮ರ ಶೈವ ಶಾಸನದಲ್ಲಿ (ಈ ಶಾಸನಶಿಲೆ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿದೆ), "ಸವದತ್ತಿ

ರಟ್ಟರ ಇಮ್ಮಡಿ ಲಕ್ಷ್ಮೀದೇವನು ತನ್ನ ತಂದೆ ಮಲ್ಲಿಕಾರ್ಜುನನ ಪರೋಕ್ಷ ವಿನಯಾರ್ಥವಾಗಿ ಸುಗಂಧವರ್ತಿಯ ನಾಗರಕೆರೆಯ ಹತ್ತಿರ ನಿರ್ಮಿಸಿದ ಮಲ್ಲಿನಾಥ (ಮಲ್ಲಿಕಾರ್ಜುನ) ದೇವಾಲಯಕ್ಕೆ ಹೂಲಿಯ ಮಾಣಿಕ್ಯತೀರ್ಥದ ಬಸದಿಯ ಸ್ಥಾನಾಚಾರ್ಯನಾದ ಪ್ರಭಾಚಂದ್ರಸಿದ್ಧಾಂತದೇವನ ಸಹಧರ್ಮಿ ಶುಭಚಂದ್ರಸಿದ್ಧಾಂತದೇವನ ಶಿಷ್ಯರಾದ ಇಂದ್ರಕೀರ್ತಿದೇವ, ಶ್ರೀಧರದೇವ ಮತ್ತು ಗಾವುಂಡರು ನಾಲ್ಕು ಮತ್ತರು ಭೂಮಿ, ಒಂದು ಮನೆಯನ್ನು ದಾನ ಮಾಡಿದರು" ಎಂದು ಪ್ರಸ್ತಾಪವಿದೆ.

೨. ಸಂಕೇಶ್ವರದ ಲಕ್ಷ್ಮೀನಾರಾಯಣ ದೇವಾಲಯದ ಸುಖನಾಸಿಯ ಭಿತ್ತಿಯಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ, "ಸವದತ್ತಿ ರಟ್ಟರ ಕಾರ್ತವೀರ್ಯ ದೇವನ ಆಳ್ವಿಕೆಯ ಕಾಲಾವಧಿಯಲ್ಲಿ ಬ್ರಹ್ಮಪುರಿಯ ಅಶೇಷ ಮಹಾಜನಗಳಿಗೆ, ಲಕ್ಷ್ಮೀನರಸಿಂಹದೇವರ ಅಷ್ಟವಿಧಾರ್ಚನೆಗೆ ಮತ್ತು ಚಿಕ್ಕೇಶ್ವರದೇವರಿಗೆ ಕೆಲವು ವರ್ತಕರು ಕೂಡಿಕೊಂಡು ಸುಂಕದತ್ತಿ ಮತ್ತು ಹಣವನ್ನು ದಾನ ಮಾಡಿದರು" ಎಂದು ವಿವರವಿದೆ. ಈ ವರ್ತಕರಲ್ಲಿ ಆದಿಸೆಟ್ಟಿ, ಬಮ್ಮಿಸೆಟ್ಟಿ, ಪಾರಿಸೆಟ್ಟಿ ಮೊದಲಾದ ಕೆಲವರು ಜೈನ ವರ್ತಕರಾಗಿದ್ದಾರೆ.

೩. ದೇಗಾಂವದ ಕಮಲ ನಾರಾಯಣ ದೇವಾಲಯದ ಸಭಾಮಂಟಪದ ಭಿತ್ತಿಯಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ, "ಅಗ್ರಹಾರ ದೇಗಾಂವೆಯ ಸೀಮಾಕ್ರಮವನ್ನು ಸೂಚಿಸಿರುವ ವಿವರಗಳಲ್ಲಿ "ಅಲ್ಲಿಂ ತೆಂಕಲೊತ್ತಿ ಪಡುವಲ್ಝೂಲವಳ್ಳಿಯ ಬಸದಿಯ ಕೆಯ್ಯೀಶಾನ್ಯಾದ ಮೂರುಂ ಹಳ್ಳದ ಕೂಡಲ ತೆಂಕಣ ನಟ್ಟಕಲ್" ಎಂದು ಕುಲವಳ್ಳಿ ಬಸದಿಯ ಪ್ರಸ್ತಾಪವಿದೆ.

೪. ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ನಂದವಾಡಗಿಯ ಕ್ರಿ.ಶ. ಸುಮಾರು ೧೧ನೆಯ ಶತಮಾನದ (ಕ್ರಿ.ಶ. ೧೦೬೫ರ) ಶಾಸನದಲ್ಲಿ, "ಕಲ್ಯಾಣದ ಚಾಳುಕ್ಯರ ಆಹವಮಲ್ಲ ತ್ರೈಲೋಕ್ಯಮಲ್ಲದೇವನ (೧ನೆಯ ಸೋಮೇಶ್ವರ) ಆಳ್ವಿಕೆಯ ಸಂದರ್ಭದಲ್ಲಿ, 'ಭಾವನಗಂಧವಾರಣ' ಬಿರುದಾಂಕಿತನೊಬ್ಬನು (ಬೆಳ್ವೊಲ-೩೦೦ ಮತ್ತು ಪುಲಿಗೆರೆ-೩೦೦ ವಿಭಾಗಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಪೆರ್ಮಾಳ ಮಾದರಸ) ಕಲ್ಯಾಣ (ಬಸವಕಲ್ಯಾಣ), ಅಣ್ಣಿಗೇರಿ, ಮುಳುಗುಂದ, ಕೊಳ್ವುಗೆ, ನಂದಾಪುರ, ಕೋಹಳ್ಳಿ, ಮಂಡಲಿಗೆರೆ, ಬೆಳ್ಗಲ್ಲಿ, ಬನವಾಸಿಪುರ, ಕರಿವಿಡಿ, ನವಿಲೆ, ನಂದವಾಡಗಿ, ಪೇರೂರು, ಪೊನಗುಂದ, ಪುರಗೂರು, ಕುಂದುರಗೆ, ಸಂಗವ ಮೊದಲಾದೆಡೆಗಳಲ್ಲಿ ದೇವಾಲಯಗಳು, ಬಸದಿಗಳು, ಮಠಗಳು, ಕೆರೆಗಳನ್ನು ಜೀರ್ಣೋದ್ಧಾರ ಮಾಡಿಸಿ ದಾನ-ದತ್ತಿಗಳನ್ನು ಕೂಡಮಾಡಿದನು" ಎಂದು ನಿರೂಪಣೆಯಿದೆ. ಪ್ರಸ್ತುತ ಶಾಸನೋಕ್ತ 'ಕುಂದುರಗೆ' ಗ್ರಾಮವು ಗೋಕಾಕ ತಾಲ್ಲೂಕಿನ ಕುಂದರಗಿ ಗ್ರಾಮವಾಗಿದೆ. ಆದರೆ ಈ ಗ್ರಾಮದಲ್ಲಿದ್ದ ಬಸದಿ ಯಾವ ತೀರ್ಥಂಕರನದು ಮತ್ತು ಅದನ್ನು ಯಾರು, ಯಾವಾಗ ಕಟ್ಟಿಸಿದರೆಂಬುದು ಸ್ಪಷ್ಟವಿಲ್ಲ.

೫. ಹುಬ್ಬಳ್ಳಿ ತಾಲ್ಲೂಕಿನ ಛಬ್ಬಿಯ ಸುಪಾರ್ಶ್ವನಾಥ ಬಸದಿಯಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಆದಿನಾಥ ತೀರ್ಥಂಕರನ ಶಿಲ್ಪದ ಪಾದಪೀಠದ ಮೇಲಿರುವ ಶಾಸನದಲ್ಲಿ "ಬಾಗಿಯ (ರಾಯಬಾಗ) ಪದ್ಮಾವತಿ ಅನಂತವ್ರತ (ಅನಂತನೋಂಪಿ) ಉದ್ಯಾಪನೆಗೈದು ಆದಿನಾಥ ತೀರ್ಥಂಕರನ ಶಿಲ್ಪವನ್ನು ಮಾಡಿಸಿಕೊಟ್ಟಳು" ಎಂದು ನರೂಪಣೆಯಿದೆ.

೬. ಗದಗ ತಾಲ್ಲೂಕಿನ ಲಕ್ಕುಂಡಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ, ಯಾಪನೀಯ ಸಂಘದ ಪರಂಪರೆಯಲ್ಲಿದ್ದ ಹದಿನಾರು ಗಣಗಳು ಮತ್ತು ಹದಿನಾರು ಗಚ್ಛಗಳು ದಾಖಲಾಗಿವೆ. ಇವುಗಳಲ್ಲಿನ ಹದಿನಾರು ಗಣಗಳಲ್ಲಿ 'ಬಾಗಿಗಣ' ಎಂಬುದೂ ಒಂದಾಗಿದೆ. ಇದು ರಾಯಬಾಗದ ಮುನಪರಂಪರೆಗೆ ಸಂಬಂಧಿಸಿದ ಗಣವಾಗಿದೆ.

೭. ಶ್ರವಣಬೆಳಗೊಳದ ಚಿಕ್ಕಬೆಟ್ಟದ ಮೇಲ್ಭಾಗದ ಪಾರ್ಶ್ವನಾಥ ಬಸದಿಯ ಮುಂಭಾಗದ ಪಾತಾಳಾಂಕಣದಲ್ಲಿನ ಕ್ಷೇತ್ರಪಾಲನ ಪೀಠದ ಮೇಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ, "ಮೂಲಸಂಘದ ದೇಸಿಯಗಣದ ಪುಸ್ತಕಗಚ್ಛ ಪರಂಪರೆಯ ಭಾನುಕೀರ್ತಿದೇವನು ಶ್ರವಣಬೆಳಗೊಳ ಮೊದಲಾದೆಡೆಗಳಲ್ಲಿ ಧರ್ಮಪ್ರಸಾರಗೈದು ಸಲ್ಲೇಖನಾನಮಿತ್ತ ಉತ್ತರಾಭಿಮುಖವಾಗಿ ಸಂಚರಿಸುತ್ತ ಕೂಂಡಿನಾಡಿನ (ಕೂಹುಂಡಿ-೩೦೦೦ ಆಡಳಿತ ವಿಭಾಗ) ಹೂವಿನಬಾಗೆಯಲ್ಲಿ (ರಾಯಬಾಗ) ಸನ್ಯಸನ ವಿಧಿಯಿಂದ ಸ್ವರ್ಗಪ್ರಾಪ್ತನಾದನು. ಅದನ್ನರಿತ ಆತನ ಅಗ್ರ ಶಿಷ್ಯನಾದ ಬಾಳಚಂದ್ರದೇವ, ಗುಡ್ಡಿ (ಶಿಷ್ಯೆ) ಹೆಗ್ಗಡಿತಿ ಬಾಗಣಬ್ಬೆ ಮತ್ತು ಗುಡ್ಡ ಸಂಧಿವಿಗ್ರಹಿ ಮಲ್ಲಿಯಣ್ಣ ಕೂಡಿಕೊಂಡು ಪರೋಕ್ಷವಿನಯದಿಂದ ಶ್ರವಣಬೆಳಗೊಳದಲ್ಲಿ ನಿಷಿಧಿಗೆಯನ್ನು ಮಾಡಿಸಿ ಪ್ರತಿಷ್ಠೆ ಮಾಡಿದರು" ಎಂಬ ವಿವರಗಳಿವೆ.

೮. ಅಥಣಿ ತಾಲ್ಲೂಕಿನ ಕೊಕಟನೂರದ ಕ್ರಿ.ಶ. ೧೦೫೦ರ ಶೈವ ಶಾಸನವನ್ನು 'ವಿದ್ವಜ್ಜನಾಂಬೋಜಿನೀವನಹಂಸ' ಎಂಬ ಬಿರುದಾಂಕಿತನಾದ ಜೈನಕವಿ ಜಿನವರ್ಮ ಪಂಡಿತನು ರಚಿಸಿದ್ದಾನೆ.

೩. ಸಮಾರೋಪ

ಬೆಳಗಾವಿ ಜಿಲ್ಲೆಯಲ್ಲಿ ಇದುವರೆಗೂ ಖಾನಾಪುರ ತಾಲ್ಲೂಕಿನಲ್ಲಿ ಒಂಭತ್ತು, ಬೈಲಹೊಂಗಲ ತಾಲ್ಲೂಕಿನಲ್ಲಿ ಹದಿನಾರು, ಸವದತ್ತಿ ತಾಲ್ಲೂಕಿನಲ್ಲಿ ಮೂವತ್ತು, ಅಥಣಿ ತಾಲ್ಲೂಕಿನಲ್ಲಿ ಹದಿನೆಂಟು, ಗೋಕಾಕ ತಾಲ್ಲೂಕಿನಲ್ಲಿ ಮೂವತ್ತೆಂಟು, ಹುಕ್ಕೇರಿ ತಾಲ್ಲೂಕಿನಲ್ಲಿ ಹನ್ನೆರಡು, ಚಿಕ್ಕೋಡಿ ತಾಲ್ಲೂಕಿನಲ್ಲಿ ಹದಿಮೂರು, ರಾಯಬಾಗ ತಾಲ್ಲೂಕಿನಲ್ಲಿ ಇಪ್ಪತ್ತೊಂದು, ಬೆಳಗಾವಿ ತಾಲ್ಲೂಕಿನಲ್ಲಿ ಹದಿನೈದು, ರಾಮದುರ್ಗ ತಾಲ್ಲೂಕಿನಲ್ಲಿ ಮೂರು – ಹೀಗೆ ಒಟ್ಟು ೧೭೫ ಶಾಸನಗಳು ಬೆಳಕಿಗೆ ಬಂದಿವೆ. ಈ ಶಾಸನಗಳು ಕ್ರಿ.ಶ. ಸುಮಾರು ೫ನೆಯ ಶತಮಾನದಿಂದಲೂ ಸಮಕಾಲೀನ ಚರಿತ್ರೆ ಮತ್ತು ಸಂಸ್ಕೃತಿಯ ವಿವಿಧ ಆಯಾಮಗಳನ್ನು ದಾಖಲಿಸುತ್ತ ಬಂದಿರುವುದು

ಗೋಚರಿಸುತ್ತದೆ. ಈ ಮೇಲಿನ ಎಲ್ಲ ಶಾಸನಗಳು ಭೌತಿಕ (ಬಾಹ್ಯ) ಮತ್ತು ಬೌದ್ಧಿಕ (ಆಂತರಿಕ) ಅಧ್ಯಯನಗಳ ದೃಷ್ಟಿಯಿಂದ ಮಹತ್ವದ್ದಾಗಿವೆ. ಹಲಸಿಯ ಶಾಸನಗಳನ್ನು ಉತ್ಕೃಷ್ಟವಾದ ತಾಮ್ರಪಟಗಳ ಮೇಲೆ ಕೊರೆಯಲಾಗಿದೆ. ಇಲ್ಲಿಯ ಬಹುತೇಕ ಶಿಲಾಶಾಸನಗಳಿಗೆ ಬಳಪದ ಶಿಲೆಗಳನ್ನು ಬಳಸಲಾಗಿದೆ. ಹಾಗೆಯೇ ಕೆಲವು ಶಾಸನಗಳಿಗೆ ಸ್ಥಳೀಯವಾಗಿ ಲಭ್ಯವಿರುವ ಶಿಲೆಗಳನ್ನು ಬಳಸಿಕೊಳ್ಳಲಾಗಿದೆ. ಕೆಲವು ದಾನಶಾಸನಗಳ ಮೇಲ್ತುದಿಯಲ್ಲಿರುವ ಶಿಲ್ಪಪಟ್ಟಿಕೆಗಳು ಗಮನೀಯವಾಗಿವೆ. ಈ ಪಟ್ಟಿಕೆಗಳಲ್ಲಿ ಸಾಮಾನ್ಯವಾಗಿ ಬಸದಿಯ ಪ್ರತಿರೂಪದ ಮಂಟಪದಲ್ಲಿ ಸಿಂಹಪೀಠದ ಮೇಲೆ ಪರ್ಯಂಕಾಸನದಲ್ಲಿ ಆಸೀನನಾಗಿರುವ ತೀರ್ಥಂಕರ, ಪಾರ್ಶ್ವದಲ್ಲಿ ಕಾಮಧೇನು (ಆಕಳು ಮತ್ತು ಕರು), ಅಂಜಲಿಮುದ್ರೆಯಲ್ಲಿ ಆಸೀನನಾಗಿರುವ ದಾನಿ, ಸೂರ್ಯ–ಚಂದ್ರನ ಉಬ್ಬುಶಿಲ್ಪಗಳಿವೆ. ಇಲ್ಲಿಯ ಶಾಸನಗಳಲ್ಲಿ ಉಲ್ಲಿಖಿತವಾಗಿರುವ ಹಲವು ಬಸದಿಗಳು ಇಂದು ಉಳಿದು ಬಂದಿಲ್ಲ. ಆದರೆ ಪ್ರಸ್ತುತ ಶಾಸನಗಳ ಶಿಲ್ಪಪಟ್ಟಿಕೆಯಲ್ಲಿರುವ ಬಸದಿಗಳ ಪ್ರತಿರೂಪ ಮತ್ತು ಇವುಗಳಲ್ಲಿ ಆಸೀನನಾದ ತೀರ್ಥಂಕರರ ಲಕ್ಷಣಗಳ ತಲಸ್ಪರ್ಶಿ ಅಧ್ಯಯನಗಳಿಂದ ಆ ಬಸದಿಗಳ ವಾಸ್ತು ಸ್ವರೂಪ ಮತ್ತು ಆ ಬಸದಿಗಳು ಯಾವ ತೀರ್ಥಂಕರರಿಗೆ ಅರ್ಪಿತವಾಗಿದ್ದವು ಎಂಬುದನ್ನು ತಿಳಿಯಲು ಅವಕಾಶವಿದೆ. ಹಾಗೆಯೇ ಕೆಲವು ನಿಷಿಧಿ ಶಾಸನಗಳ ಶಿಲ್ಪಪಟ್ಟಿಕೆಗಳೂ ಗಮನೀಯವಾಗಿವೆ. ಇವುಗಳಲ್ಲಿ ತೀರ್ಥಂಕರನ ಸನ್ನಿಧಿಯಲ್ಲಿ ಸಲ್ಲೇಖನ ವಿಧಿಯನ್ನು ಬೋಧಿಸುತ್ತಿರುವ ಮುನಿ, ಈತನ ಮುಂಬದಿಯಲ್ಲಿ ಸಲ್ಲೇಖನ ವ್ರತಧಾರಿ ಮತ್ತು ಇವರಿಬ್ಬರ ಮಧ್ಯದಲ್ಲಿ ಶ್ರುತಪೀಠದ ಉಬ್ಬುಶಿಲ್ಪಗಳಿವೆ. ಮುನಿ ವೀರಾಸನದಲ್ಲಿ ಆಸೀನನಾಗಿ ವ್ಯಾಖ್ಯಾನ ಮಾಡುತ್ತಿದ್ದಾನೆ. ವ್ರತಧಾರಿ ಅಂಜಲಿಮುದ್ರೆಯಲ್ಲಿ ವೀರಾಸನದಲ್ಲಿದ್ದಾನೆ. ಈ ಹಿನ್ನೆಲೆಯಲ್ಲಿ ತುಂಬಾ ಅಪರೂಪದ ಉಬ್ಬುಶಿಲ್ಪಗಳನ್ನು ಹೊಂದಿರುವ ಇಲ್ಲಿಯ ದಾನಶಾಸನಗಳು ಮತ್ತು ನಿಷಿಧಿ ಶಾಸನಗಳ ಶಿಲ್ಪಪಟ್ಟಿಕೆಗಳ ಕುರಿತು ಪ್ರತ್ಯೇಕವಾದ ಅಧ್ಯಯನ ನಡೆಯಬೇಕಾಗಿದೆ. ಹಾಗೆಯೇ "ಕರ್ನಾಟಕದಲ್ಲಿ ಜೈನ ಶಾಸನಗಳ ಶಿಲ್ಪಪಟ್ಟಿಕೆಗಳು" ಎಂಬ ಶೀರ್ಷಿಕೆಯಲ್ಲಿ ಪ್ರೌಢ ಅಧ್ಯಯನಕ್ಕೆ ಅವಕಾಶವಿದೆ.

ಈ ಮೇಲಿನ ಬಹುತೇಕ ದಾನಶಾಸನಗಳ ಪ್ರಾರಂಭದಲ್ಲಿ "ಪರಮಗಂಭೀರವೂ, ಅಮೋಘವಾದ ಸ್ಯಾದ್ವಾದ ಲಾಂಛನಯುಕ್ತವೂ, ತ್ರೈಲೋಕ್ಯನಾಥನಿಂದ ಬೋಧಿಸಲ್ಪಟ್ಟದ್ದೂ ಆದ ಜಿನಶಾಸನಕ್ಕೆ ಜಯವಾಗಲಿ" ಎಂಬ ಸಂಸ್ಕೃತ ಪದ್ಯಗಳಿವೆ. ಈ ಶಾಸನಗಳು ಬೆಳಗಾವಿ ಪ್ರದೇಶವನ್ನಾಳಿದ ಮತ್ತು ಇಲ್ಲಿ ತಮ್ಮ ಆಳ್ವಿಕೆಯ ಪ್ರಭಾವವನ್ನು ಹೊಂದಿದ್ದ ಶಾಸನಗಳು ಬನವಾಸಿ ಕದಂಬರು, ಸೇಂದ್ರಕರು, ಬಾದಾಮಿ ಚಲುಕ್ಯರು, ಮಾನಾಂಕದ (ಮಾನಪುರ) ರಾಷ್ಟ್ರಕೂಟರು, ಮಳಖೇಡದ ರಾಷ್ಟ್ರಕೂಟರು, ತಲಕಾಡಿನ ಗಂಗರು, ಕಲ್ಯಾಣದ ಚಾಳುಕ್ಯರು, ಸವದತ್ತಿ ರಟ್ಟರು, ಹಗರಟಗೆನಾಡಿನ ಯದುವಂಶದ ಮಹಾಮಂಡಳೇಶ್ವರರು, ದೋರಸಮುದ್ರದ ಹೊಯ್ಸಳರು, ಕೊಲ್ಲಾಪುರದ ಶಿಲಾಹಾರರು, ಗೋವೆ ಕಾದಂಬರು, ಮೊಗಲರು, ಸಮಕಾಲೀನ ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರು, ದಂಡನಾಯಕರು, ಪೆರ್ಗಡೆಗಳ ಅಧ್ಯಯನಕ್ಕೆ ಉಪಯುಕ್ತ ಆಕರಗಳಾಗಿವೆ. ಈ ಶಾಸನಗಳಲ್ಲಿ ಸುದ್ಧಿಕುಂದೂರು ವಿಷಯ, ಕಾದರವಳ್ಳಿ–೩೦, ಸುಗಂಧವರ್ತಿ–

೧೨, ಕೂಹುಂಡಿ-೩೦೦೦), ಕೊರವಳ್ಳಿ ಕಂಪಣ, ಕುರುಂಬೆಟ್ಟ ಕಂಪಣ ಮೊದಲಾದ ಆಡಳಿತ ವಿಭಾಗಗಳ ನಿರೂಪಣೆಗಳಿವೆ.

ಬೆಳಗಾವಿ ಜಿಲ್ಲೆಯ ಪ್ರದೇಶದಲ್ಲಿ ಯಾಪನೀಯ ಸಂಘ, ನಿರ್ಗ್ರಂಥ ಸಂಘ, ಕೂರ್ಚಕ ಸಂಘ, ಅಹರಿಷ್ಟ ಶ್ರಮಣಸಂಘ, ಮೂಲಸಂಘ, ಪರಲೂರು ಸಂಘ, ದ್ರವಿಳಸಂಘ, ಬಳಗಾರಗಣ, ಕಾರೆಯಗಣ, ಕಂಡೂರುಗಣ, ಬಲತ್ಕಾರಗಣ, ಕಾಣೂರ್ಗ್ಗಣ, ಸೂರಸ್ತಗಣ, ದೇಸಿಯಗಣ, ಪುನ್ನಾಗವೃಕ್ಷಮೂಲಗಣ, ಜಂಬೂ ಖಂಡಗಣ, ಸೇನಗಣ, ಸರಸ್ವತಿಗಣ, ಪುಸ್ತಕಗಚ್ಛ, ಸರಸ್ವತಿಗಚ್ಛ, ಮೈಳಾಪಾನ್ವಯ, ಕುಂದಕುಂದಾನ್ವಯ, ಸೇನಗಣಾನ್ವಯ, ಚಿತ್ರಕೂಟಾನ್ವಯ, ಇಂಗಳೇಶ್ವರಬಳಿ, ಹಣಸೋಗೆಬಳಿ ಮೊದಲಾದ ಸಂಘ-ಗಣ-ಗಚ್ಛ-ಅನ್ವಯ-ಬಳಿ ಪರಂಪರೆಗಳು ಅಸ್ತಿತ್ವ ದಲ್ಲಿದ್ದವು. ಈ ಪರಂಪರೆಗಳ ವಾರಿಷೇಣಾಚಾರ್ಯ, ಆಚಾರ್ಯ ಧರ್ಮನಂದಿ, ನೇಮಿಚಂದ್ರ ಭಟ್ಟಾರಕದೇವ, ವಾಸುಪೂಜ್ಯ ಭಟ್ಟಾರಕ, ತ್ರಿಭುವನಚಂದ್ರ ಭಟ್ಟಾರಕದೇವ, ಗುಣಕೀರ್ತಿದೇವ, ಮಲಧಾರಿಸೂರಿ, ಗುಣಕೀರ್ತಿಮುನೀಂದ್ರ, ನಾಗಚಂದ್ರಸಿದ್ಧಾಂತದೇವ, ಗುಣಕೀರ್ತಿ ಭಟ್ಟಾರಕದೇವ, ಚಂದ್ರಕೀರ್ತಿದೇವ, ಕುಕ್ಕುಟಸೇನದೇವ, ದೇವಕೀರ್ತಿ ಪಂಡಿತದೇವ, ರಾಮಶ್ರೀಕಂತಿ, ಜಿನದೇವಸೂರಿ, ಮುಳ್ಳಭಟ್ಟಾರಕರ, ಜಿನದೇವ, ಕನಕಪ್ರಭ 'ಪಂಡಿತದೇವ, ಕನಕಚಂದ್ರ, ಕುಮಾರಕೀರ್ತಿ, ಬಾಳಚಂದ್ರದೇವ, ಶ್ರೀನಂದಿಮುನಿ, ಅಭಯನಂದಿ, ಬಾಳಚಂದ್ರ ಭಟ್ಟಾರಕ, ರಾಮಚಂದ್ರದೇವ, ಭಾನುಕೀರ್ತಿ ಸಿದ್ಧಾಂತದೇವ, ನೇಮಿಚಂದ್ರಸಿದ್ಧಾಂತ ಚಕ್ರವರ್ತಿ, ಪ್ರಭಾಚಂದ್ರಸಿದ್ಧಾಂತದೇವ, ಇಂದ್ರಕೀರ್ತಿಸ್ವಾಮಿ, ಬಾಹುಬಲಿ ಭಟ್ಟಾರಕ, ರವಿಚಂದ್ರಸ್ವಾಮಿ, ಅರ್ಹನಂದಿ, ಸಕಳಚಂದ್ರಸಿದ್ಧಾಂತದೇವ, ಮೋನಭಟ್ಟಾರಕ, ಚಂದ್ರಮತಿಕಂತಿ, ಮಹಾಮಂಡಳಾಚಾರ್ಯ ಮಾಧವಭಟ್ಟಾರಕ, ಕನಕಪ್ರಭ, ಮುನಿಚಂದ್ರ, ಪದ್ಮನಂದಿ, ಬಾಳಚಂದ್ರಸಿದ್ಧಾಂತದೇವ, ಧರ್ಮಕೀರ್ತಿ, ನಾಗಚಂದ್ರ, ವಾಸುಪೂಜ್ಯ, ಕುಮಾರಸೇನದೇವ, ನಾಗಸೇನದೇವ, ಆರ್ಯನಂದಿ ಆಚಾರ್ಯ, ರವಿಚಂದ್ರ ತ್ರೈವಿದ್ಯದೇವ, ಆಚಾರ್ಯ ಶಾಂತಿಸಾಗರರು, ಆಚಾರ್ಯ ಅನಂತಕೀರ್ತಿ, ನೇಮಿಚಂದ್ರ, ಮಂಡಳಾಚಾರ್ಯ ಶುಭಚಂದ್ರಭಟ್ಟಾರಕ, ಅನಂತಸೇನ, ಶ್ರೀಧರ, ಕನಕಸ್ವಾಮಿಸಿದ್ಧಾಂತದೇವ, ಶ್ರೀನಂದಿ ಭಟ್ಟಾರಕದೇವ, ಶ್ರೀಧರತ್ರೈವಿದ್ಯದೇವ, ಅರಹನಂದಿ, ಪೂಜ್ಯಪಾದ, ಮಂಡಳಾಚಾರ್ಯ ಕುಮಾರಕೀರ್ತಿಪಂಡಿತದೇವ, ವಿಜಯಕೀರ್ತಿಪಂಡಿತದೇವ, ಶ್ರೀಧರತ್ರೈವಿದ್ಯದೇವ, ವೀರನಂದಿ ಸಿದ್ಧಾಂತಚಕ್ರವರ್ತಿದೇವ, ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕಸ್ವಾಮಿ, ಗುಣಭದ್ರದೇವ, ಜಿನಸೇನ ಭಟ್ಟಾರಕರ, ಗುಣಭದ್ರ ಭಟ್ಟಾರಕದೇವ, ಚಂದದೇವ, ಕುಮಾರಕೀರ್ತಿಪಂಡಿತದೇವ, ವಾಸುಪೂಜ್ಯ, ವಿಜಯಕೀರ್ತಿ, ಸೋಮಸೇನ ಭಟ್ಟಾರಕ, ವಿಜಯಕೀರ್ತಿ ಭಟ್ಟಾರಕ, ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯ, ಸಕಲವಿದ್ಯಾಚಕ್ರವರ್ತಿ ಶ್ರುತಕೀರ್ತಿಸಿದ್ಧಾಂತದೇವ, ಚಂದ್ರಕೀರ್ತಿಸ್ವಾಮಿ, ಆಚಾರ್ಯ ಪಾಯಸಾಗರರು, ಮಾಘಣಂದಿಸಿದ್ಧಾಂತದೇವ, ಶಾಂತಿನಂದಿ, ಚಂದ್ರಯತಿ, ಶುಭಚಂದ್ರ ಭಟ್ಟಾರಕದೇವ, ಮೊದಲಾದ ಮುನಿಗಳು, ಕಂತಿಯರು ಧರ್ಮಪ್ರಸಾರ ಕೈಗೊಂಡು ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಸ್ಫೂರ್ತಿ-ಪ್ರೇರಣೆಯನ್ನು

ಕೊಡಮಾಡಿದ್ದಾರೆ. ಈ ಮುನಿಗಳು ಕೈಗೊಂಡ ಕಠಿಣ ತಪಸ್ಸು, ಧರ್ಮಪ್ರಸಾರ, ವ್ರತಗಳ ಪಾಲನೆ, ಜೈನಾಗಮಗಳಲ್ಲಿ ಅವರಿಗಿದ್ದ ಪಾಂಡಿತ್ಯ, ವಿದ್ವತ್ತು, ಅಂದಿನ ಸಮಾಜದಲ್ಲಿ ಅವರ ಸ್ಥಾನ-ಮಾನ, ಆಳರಸರಾದಿ ಪ್ರಜೆಗಳು ಅವರಿಗೆ ತೋರುತ್ತಿದ್ದ ನಿಷ್ಠೆ-ಗೌರವಾದರ ತನ್ಮಯತೆ ಮೊದಲಾದ ವಿಚಾರಗಳು ಇಲ್ಲಿಯ ಶಾಸನಗಳಲ್ಲಿ ಸವಿಸ್ತಾರವಾಗಿ ದಾಖಲಾಗಿವೆ. ಸವದತ್ತಿ ರಟ್ಟರ ಆಶ್ರಯದಲ್ಲಿದ್ದ ಪಾರ್ಶ್ವಪಂಡಿತನು 'ಪಾರ್ಶ್ವನಾಥ ಪುರಾಣ'ದಲ್ಲಿ ಈ ಮೇಲಿನ ಕೆಲವು ಮುನಿಗಳ ಪಾಂಡಿತ್ಯವನ್ನು ಸೊಗಸಾಗಿ ದಾಖಲಿಸಿದ್ದಾನೆ.

ಈ ಮೇಲಿನ ಕೆಲವು ಮುನಿಗಳನ್ನು 'ಸಿದ್ಧಾಂತಚಕ್ರವರ್ತಿ', ಮತ್ತೆ ಕೆಲವರನ್ನು 'ತ್ರೈವಿದ್ಯದೇವ' ಎಂದು ಕರೆಯಲಾಗಿದೆ. ಧರಸೇನಾಚಾರ್ಯರ ಶಿಷ್ಯರಾದ ಪುಷ್ಪದಂತ ಮತ್ತು ಭೂತಬಲಿ ಮುನಿಗಳು ಕೂಡಿಕೊಂಡು ಕ್ರಿ.ಶ. ೭೫ರಲ್ಲಿ ಹದಿನಾಲ್ಕು ಪೂರ್ವಗಳಲ್ಲಿ ೨ನೆಯದಾದ ಅಗ್ರಾಯಣೀಯ ೫ನೆಯ ಚಯನಲಬ್ಧಿ ವಸ್ತುವಿನ ಇಪ್ಪತ್ತು ಪ್ರಾಭೃತಗಳಲ್ಲಿ ೪ನೆಯ ಮಹಾಕರ್ಮಪ್ರಕೃತಿ ಪ್ರಾಭೃತದ ಜೀವಸ್ಥಾನ, ಕ್ಷುದ್ರಬಂಧ, ಬಂಧಸ್ವಾಮಿತ್ವವಿಚಯ, ವೇದನಾ, ವರ್ಗಣಾ, ಮಹಾಬಂಧ ಎಂಬ ಆರು ಖಂಡಗಳಲ್ಲಿ ರಚಿಸಿರುವ ಸೂತ್ರಗಳ ಆಗಮವು 'ಷಟ್ಖಂಡಾಗಮ' ಎಂದು ಹೆಸರಾಗಿದೆ. ಈ ಆಗಮದ ಆರೂ ಖಂಡಗಳಲ್ಲಿ ಜ್ಞಾನವನ್ನು ಸಂಪಾದಿಸಿದ ಮುನಿಗಳನ್ನು 'ಸಿದ್ಧಾಂತಚಕ್ರವರ್ತಿ' ಎಂದು ಕರೆಯಲಾಗುತ್ತಿತ್ತು. ಪ್ರಥಮ ಮೂರು ಖಂಡಗಳಲ್ಲಿ ಜ್ಞಾನವನ್ನು ಸಂಪಾದಿಸಿದ ಮುನಿಗಳನ್ನು 'ತ್ರೈವಿದ್ಯದೇವ' ಎಂದು ಕರೆಯಲಾಗುತ್ತಿತ್ತು.

ಈ ಮೇಲಿನ ಮುನಿಗಳ ಸ್ಫೂರ್ತಿ-ಪ್ರೇರಣೆ, "ಎಲ್ಲೆಲ್ಲಿ ಜಿನೇಂದ್ರನ ಪೂಜೆ ಸಾಂಗವಾಗಿ ನಡೆಯುತ್ತದೋ ಅಲ್ಲೆಲ್ಲ ದೇಶದ ಅಭಿವೃದ್ಧಿ ಹೆಚ್ಚುತ್ತದೆ, ನಗರದಲ್ಲಿ ನಿರ್ಭಯತೆ ಉಂಟಾಗುತ್ತದೆ, ದೇಶಸ್ವಾಮಿಗಳ (ಅರಸರು) ಬಲ ಪ್ರಬಲಿಸುತ್ತದೆ" ಎಂಬ ನಂಬಿಕೆ, ಆಳರಸರಾದಿ ಅಧಿಕಾರಿಗಳ ಪ್ರೋತ್ಸಾಹ, ವರ್ತಕರ ಉದಾರತೆ, ಜೈನರ ಅಪರಿಗ್ರಹತೆ ಮೊದಲಾದವುಗಳ ಹಿನ್ನೆಲೆಯಲ್ಲಿ ಹಲಸಿ, ಗೋಲಿಹಳ್ಳಿ, ಬೆಳವಡಿ, ದೊಡವಾಡ, ಕಲಬಾವಿ, ಖೋದಾನಪುರ, ಕುಲವಳ್ಳಿ, ಬೈಲಹೊಂಗಲ, ಉಡಕೇರಿ, ಹಣ್ಣಿಕೇರಿ, ಒಕ್ಕುಂದ, ಹೂಲಿ, ಸವದತ್ತಿ, ಉಗರಗೋಳ, ಬಡ್ಲಿ, ಮುನವಳ್ಳಿ, ಯಡ್ರಾವಿ, ಅಸುಂಡಿ, ಹಿರೇಕುಂಬಿ, ಶೇಡಬಾಳ, ಬಳ್ಳಿಗೇರಿ, ಅಥಣಿ, ಐನಾಪುರ, ಉಗಾರ, ಕೊಣ್ಣೂರು, ಗೋಕಾಕ, ನಾಗನೂರು, ಕಲ್ಲೊಳಿ, ಕುಲಗೋಡು, ಯಾದವಾಡ, ಉಳ್ಳಾಗಡ್ಡಿ ಖಾನಾಪುರ, ಅಮ್ಮಣಗಿ, ಬೆನಿವಾಡ, ಎಲಿಮುನವಳ್ಳಿ, ಸಂಕೇಶ್ವರ, ಪಾಶ್ಚಾಪುರ, ಕಣಗಲಾ, ಹುಕ್ಕೇರಿ, ಬೆಲ್ಲದ ಬಾಗೇವಾಡಿ, ಯಕ್ಸಂಬಾ, ಕರೋಶಿ, ಸ್ತವನಿಧಿ, ಕೆರೂರು, ಖಡಕಲಾಟ, ಶಮನೇವಾಡಿ, ಬೋರಗಾಂವ, ನಂದಿಕುರಳಿ, ರಾಯಬಾಗ, ಬೆಳಗಾವಿ, ಹೊಸೂರು, ಮಚ್ಚೆ, ಪಂತಬಾಳೇಕುಂದ್ರಿ (ಹಿರೇಬಾಳೇಕುಂದರಗಿ), ಕಣಬರಗಿ, ಗುತ್ತಿ, ಬಸ್ತವಾಡ, ಮೊದಲಾದೆಡೆಗಳಲ್ಲಿ ಬಸದಿಗಳು ನಿರ್ಮಾಣವಾಗಿದ್ದವು. ಅವುಗಳಲ್ಲಿ ಬೆರಳೆಣಿಕೆಯಷ್ಟು ಬಸದಿಗಳು ಮಾತ್ರ ಮೂಲ ವಾಸ್ತು ಸ್ವರೂಪದಲ್ಲಿ ಉಳಿದು ಬಂದಿವೆ. ಹಲವು ಬಸದಿಗಳು ಕಾಲಾಂತರದಲ್ಲಿ ನಡೆದ ಧರ್ಮಸಂಘರ್ಷಗಳಲ್ಲಿ ಸಮೂಲನಾಶವಾಗಿವೆ. ಕೆಲವು ಬಸದಿಗಳು ಶೈವ, ವೈಷ್ಣವ ಧರ್ಮಗಳ ದೇವಾಲಯಗಳಾಗಿ ಪರಿವರ್ತಿತವಾಗಿವೆ.

ಈ ಮೇಲಿನ ಶಾಸನಗಳಲ್ಲಿ ಉಲ್ಲಿಖಿತ ಬೆಳವಡಿಯ ಸಹಸ್ರಕೂಟ ಬಸದಿ, ಹೂಲಿಯ ಮಾಣಿಕ್ಯತೀರ್ಥ ಬಸದಿ, ಸವದತ್ತಿಯ ರಟ್ಟರ ಪಟ್ಟಜಿನಾಲಯ, ಬಡ್ಲಿಯ ಗಂಗಕಂದರ್ಪ ಪೆರ್ಮ್ಮಾಡಿಯ ಬ್ರಹ್ಮಜಿನಾಲಯ, ಅಥಣಿಯ ರತ್ನತ್ರಯ ಬಸದಿ, ಕಲ್ಹೊಳಿಯ ಶಾಂತಿನಾಥನ ತ್ರಿಕೂಟ ಬಸದಿ, ಬೆಳಗಾವಿಯ ಶಾಂತಿನಾಥ ಬಸದಿ ಮೊದಲಾದವುಗಳು ಜೈನ ವಾಸ್ತುಕಲೆ, ಸಮಕಾಲೀನ ಧಾರ್ಮಿಕ ಮತ್ತು ಸಾಮಾಜಿಕ ಅಧ್ಯಯನದ ಹಿನ್ನೆಲೆಯಲ್ಲಿ ಅಪರೂಪದ್ದಾಗಿವೆ.

ಬೆಳಗಾವಿ ಜಿಲ್ಲೆಯ ಪ್ರದೇಶದ ತತ್ಕಾಲೀನ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯ ವಿವಿಧ ಆಯಾಮಗಳ ಅಧ್ಯಯನಕ್ಕೆ ಈ ಮೇಲಿನ ಎಲ್ಲ ಜೈನ ಶಾಸನಗಳೂ ಅಪರೂಪದ ದಾಖಲೆಗಳಾಗಿವೆ. ಈ ಶಾಸನಗಳಲ್ಲಿ ಗಂಗಿಸೆಟ್ಟಿ, ಮಲ್ಲಿಸೆಟ್ಟಿ, ದೇವಿಸೆಟ್ಟಿ, ಮಧುರ ಸೆಟ್ಟಿ, ಕೈಹಮಸೆಟ್ಟಿ, ಡಾಯಿಮಸೆಟ್ಟಿ (ದಾಯಿಮಸೆಟ್ಟಿ), ಮುದ್ದಿಸೆಟ್ಟಿ, ಕಾಳಿಮಯ್ಯಸೆಟ್ಟಿ, ಚಂದಿಸೆಟ್ಟಿ, ದೇವಣಸೆಟ್ಟಿ, ಗಾವಲಿಯ ಚೆಂದಿಸೆಟ್ಟಿ, ಗೋವರಿಯ ಕಾಳಿಗಾವುಂಡ, ತಾವರೆಯ ಮಹಾದೇವಸೆಟ್ಟಿ, ಕೊಳಗದ ಕೇತಿಸೆಟ್ಟಿ, ಬಳ್ಳಿಯರ ಕೇತಿಸೆಟ್ಟಿ, ಗುಡರ ಪಟ್ಟಸೆಟ್ಟಿ, ಮಿಳರ ಮಾಳಿಸೆಟ್ಟಿ, ಕೊಂಡಸ ಬಮ್ಮಿಸೆಟ್ಟಿ, ನಾಗಿಸೆಟ್ಟಿ, ದೂಸಿಗ ಪಾರಿಸಸೆಟ್ಟಿ, ಧಾರವಾಡದ ಹತ್ತಿಯ ಮಾಳಿಸೆಟ್ಟಿ, ದೊಡವಾಡದ ಬೆಸವಿಕ (ಚಳುವಿಕ) ಬಸವಿಸೆಟ್ಟಿ, ಕಂಬದ ನೇಮಿಸೆಟ್ಟಿ, ಬಲ್ಲಿಸೆಟ್ಟಿ, ಮರಯ್ಯಶೆಟ್ಟಿ, ಮಲ್ಲಿಸೆಟ್ಟಿ, ಜಯಸೆಟ್ಟಿ, ಸಮಯಚಕ್ರವರ್ತಿ ಜಯಪತಿಸೆಟ್ಟಿ, ಕೊಂಡನಂಬಿಸೆಟ್ಟಿ, ಪೊರೆಯಂಚಸೆಟ್ಟಿ, ಅಯ್ನೂರ್ವರು, ಇನ್ನೂರ್ವರು, ಅರುವತ್ತೊಕ್ಕಲರು, ನಕರರು, ಕೊತ್ತಲಿಗರು, ಮುಮ್ಮುರಿದಂಡರು, ಉಭಯ ನಾನಾದೇಸಿಗಳು, ವೀರಬಣಂಜರು, ವೇಣುಗ್ರಾಮದ ಚಿನ್ನಗೆಯಿಕದವರು, ದೂಸಿಗರು, ಮುಖ್ಯಮಾಗುಳಿದ ಪರದರು, ತೇಲಿಗರು, ದಿಂಕಸಾಲಿಗರು, ಲಾಳಮಲೆಯಾಳದ (ಕೇರಳ ರಾಜ್ಯ) ವ್ಯವಹಾರಿಗಳ ಪ್ರಸ್ತಾಪಗಳಿವೆ. ಇವರೆಲ್ಲರೂ ಅಂದಿನ ವಾಣಿಜ್ಯ-ವ್ಯಾಪಾರದಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಈ ಪ್ರದೇಶದಲ್ಲಿ ನರಸಿಂಹಪ್ರಭು, ಪಿಟ್ಟಿಕಬ್ಬೆ, ಜಯದೇವ (ಬ್ರಹ್ಮಯ್ಯ, ಜಯಸಿಂಹ), ದೇವಣ್ಣ, ಚಾವುಂಡಮಯ್ಯ, ಆಯ್ತವರ್ಮ, ಸತ್ತಿಯಬ್ಬೆ, ಪೊಲ್ಲ, ದಾಸಿಕಬ್ಬೆ, ಲೋಕಲೆ, ಬಾಗುಡ, ಚಂದನ, ಭಾಗಿಯಬ್ಬೆ, ಪೊಲ್ಲೆಗ, ಕುಮಾರ ಬಮ್ಮರಸ, ಚಿಕ್ಕಬ್ಬೆಯರಸಿ, ಶಾಂತಿಯಕ್ಕ, ತೆನಗಾರ ಮಾಳೆಯ, ಲಚ್ಚಿಯಬ್ಬರಸಿ, ಕುಲಕರಣಿ ನಾಗಪ್ಪ, ಹಡಪದ ಬೋಸಣ್ಣ, ಸೋಮಯ್ಯ, ಬಮ್ಮಯ್ಯ, ಬಾಳಯ್ಯ, ಸೋಮಯ್ಯ, ಚುಳಕಿ ಮಠಪತಿ ಬೈಲಯ್ಯ, ನಾಗಲಾಂಬಿಕೆ, ನಿಜಿಯಬ್ಬರಸಿ, ಕಾಳಸೇನ, ಮೈಳಲದೇವಿ, ನಾರಣಭಟ್ಟ, ಹರಿಹರ, ಕೀರ್ತಿಪಂಡಿತ ಚಿಕ್ಕಯ್ಯ, ಸಿರಿಯಾದೇವಿ, ಗಂಗವ್ವೆ, ಅಕ್ಕಸಾಲೆಯ ನಾಗೋಜ, ಮರೆವಗಾವುಂಡ, ಎಂಟುಹಿಟ್ಟುಗಳು, ನೇಕಾರರು, ಜವನಯ್ಯ, ಕಾಳಿದಾಸ ಚಮೂಪ, ಬೊಮ್ಮ, ಚಿಕ್ಕಂಬಿಕೆ, ವೈಶ್ಯ ಜಾತಿಯ ಗೋಮಾಯೆ, ಅಮ್ಮೆಕ್ಕ (ಅಮ್ಮಕ್ಕ), ಏಣವ್ವ ಗೌಡತಿ, ಮಲ್ಲಪ್ಪ, ಅರುಪಲ್ಲಿ ಗುಂಮಣ, ವಿದ್ಯನಾಗರಾಜಯ್ಯ, ಯಲಗೌಂಡ, ಯಲ್ಲವ್ವ, ಗಿರಿಯವ್ವ, ಸಂಗನಗೌಡ, ಮದುವವ್ವೆ, ರಾಯಪ್ಪ, ಜಸವ್ವ (ಬಸವ್ವ), ಸಿದ್ಧಗೌಡ, ಮಾಯಗೌಡ, ಮಹಾಪ್ರಭು ನಿಧಿಯಮ ಗಾವುಂಡ, ಕನಕಿಯಬ್ಬೆ, ಎರಗ, ಭರಮಪ್ಪ ರಾಮಪ್ಪ ಕಸ್ತೂರಿ, ಪದವ್ವ, ರಾಮಚಂದ್ರಪ್ಪ, ತವನಪ್ಪ ಗಂಗಾರಾನು

ಕಸ್ತೂರಿ, ಚಿಂತಾಮಣಿ, ಅಪ್ಪಣ್ಣ ಗಣೇಶ ಮೆಳವಂಕಿ, ಭರಮಪ್ಪ ಬಾಪೂರಾವ ಕಿತ್ತೂರ, ಉಸವಾಲ (ಓಸ್ವಾಲ) ಜ್ಞಾತಿಯ (ಜಾತಿ ಅಥವಾ ಪಂಥ) ಮಾಣಿಕ, ಚಂದಣ್ಣ, ಭರಮಪ್ಪ, ಅಪ್ಪಾಸಾಹೇಬ ಭುಜಬಲಿ ಗರಗಟ್ಟಿ, ಪೆರ್ಗಡೆ ಬಮ್ಮಣಯ್ಯ, ಆಲ್ಗೋಡದ ಸುಮತಿಯಣ್ಣ, ಪೆರ್ಗಡೆ ಚಾವುಂಡ, ಧನಶ್ರೀ, ಎಂಟುಹಿಟ್ಟುಗಳು, ಬಾಚಾಚಿ ಭರಮಪ್ಪಶೆಟ್ಟಿ, ಮಹಾಪ್ರಧಾನ ಪಡವಳ ಕಾಳಿಯಣ್ಣ, ಜಯದೇವನಾಯಕ, ಸಾಮಂತ ನಾರಾಯಣ, ದಂಡನಾಯಕ ಕಾಳಿದಾಸ, ರೇಕಲದೇವಿ, ದಾಸಿರಾಜ (ದಾಸಿಮರಸ), ಕನ್ನಡಿಗವಂಶದ ಶಾಂಡಿಲ್ಯಗೋತ್ರದ ಮಹಾದಾನ ಮಾದಿರಾಜ ದಂಡನಾಯಕ, ಗುಜರಾತದ ಖಂಡೇಲವಾಲ ವಂಶದ ಗಂಗಾಯಿಯ ಮಗ ಸಂಘವಿ ಆಂಪ್ತಜೂರಪಾ, ಸುಧಾಯಿಯ ಮಗ ಸಂಘವಿ ಧರ್ಮರಾಜ, ಭೂಪಾಲಪ್ಪ ಜೀರಗೆ, ಲಕ್ಷ್ಮೀಬಾಯಿ, ಮಹಾಮಂತ್ರಿ ಬೀಚಣ (ಬೀಚಿರಾಜ), ಮಹಾಜನರು (ಅಗ್ರಹಾರದ ಬ್ರಾಹ್ಮಣರು), ಪರಶುರಾಮನಾಯಕ, ಪೊಮ್ಮನನಾಯಕ, ಅಮ್ಮುಗಿನಾಯಕ, ಪಡಪನಾಯಕ, ಮಾಯಿದೇವ, ಕಾಮವ್ವೆ, ಬಚ್ಚರ (ವೈಶ್ಯರ) ಜಿನ್ನಯ್ಯನ ಮಗ ಚಂದರಯ್ಯ, ಮೊದಲಾದ ಜೈನ ಮತ್ತು ಜೈನೇತರರು ಕೈಗೊಂಡಿರುವ ಜೈನ ಧಾರ್ಮಿಕ–ಸಾಮಾಜಿಕ ಚಟುವಟಿಕೆಗಳು ದಾಖಲಾಗಿವೆ.

ಈ ಮೇಲಿನ ಕೆಲವು ಶಾಸನಗಳಲ್ಲಿ ಉಲ್ಲಿಖಿತವಾಗಿರುವ ನಿವರ್ತನ, ಕಯ್ಯ, ಮತ್ತರು, ಮಾನ, ಕಮ್ಮ, ಅರ್ಧಮಾನ, ಹಸ್ತ ಎಂಬ ಅಳತೆ ಮಾಪನಗಳು, ಉಂಚ್ಚಕರ, ಒಕ್ಕಲುದೆರೆ, ಬೆಣ್ಣೆ, ಬೀರವಣ ಎಂಬ ತೆರಿಗೆಗಳು, ದಿನಾರ, ನಿಷ್ಕ, ಹೊನ್ನು, ಕಾಂಚನ, ಹಾಗ, ಗದ್ಯಾಣ, ಕಾಣಿ ಎಂಬ ನಾಣ್ಯಗಳು, ಕೂಣ್ಡಿಯ (ಕೂಹುಂಡಿ) ಕೋಲು, ವೇಣುಗ್ರಾಮದ ಕೋಲು ಮೊದಲಾದವುಗಳು ಅಂದಿನ ಆರ್ಥಿಕ ವ್ಯವಸ್ಥೆಯ ಚಿತ್ರಣವನ್ನು ಸ್ಪಷ್ಟಪಡಿಸುತ್ತವೆ. ಹಾಗೆಯೇ ಹಲವು ಶಾಸನಗಳಲ್ಲಿ ಪಲಾಸಿಕಾ ನಗರ (ಹಲಸಿ), ಕರ್ದ್ದಮಪಟ್ಟಿ, ಪುರುಖೇಟಕ, ಬಳೋವರ ಕ್ಷೇತ್ರ (ಹಲಸಿಯ ಪಶ್ಚಿಮಕ್ಕಿರುವ 'ಬೊಡಕ್ಕೆ ಟೆಂಬೆ' ಎಂದು ಕರೆಯುವ ಬೆಟ್ಟದ ಪರಿಸರ), ಉಚ್ಚಶೃಂಗಿ, ವಸಂತವಾಟಿಕಾ, ಮರದೆ, ಕಿರುಸಂಪಗಾಡಿ (ಬೀಡಿ), ಕೇಶರ್ಮಣಗೆ (ಕಸಮಳಗಿ), ಕುಮ್ಮುದವಾಡ (ಕಲಬಾವಿ), ಅಗ್ರಹಾರ ಕೋಡನಪೂರ್ವದ ಹಳ್ಳಿ (ಖೋದಾನಪುರ), ಕೂಲವಳ್ಳಿ (ಕುಲವಳ್ಳಿ), ಉಡಕೆರೆ (ಉಡಕೇರಿ), ಚಿಂಚುಣಿಕೆ (ಹಣ್ಣಿಕೇರಿ), ಕಿರುವಟ್ಟಕೆರೆ (ಹೂಲಿಯ ಕಿರಟಗೆರೆ ಓಣಿ), ಪೂಲಿ (ಹೂಲಿ), ಶಿವೆಯಗೇರಿ, ಕಳಶವಳ್ಳಿಗೇರಿ, ನವಿಲೂರು (ಧಾರವಾಡ ತಾಲ್ಲೂಕಿನ ನವಲೂರು), ದೊಡವಾಡ (ದೊಡವಾಡ), ಧಾರವಾಡ, ಸುಗಂಧವರ್ತಿ (ಸವದತ್ತಿ), ಮುಳಗುಂದ, ಸುದ್ಧಿಕುಂದೂರು (ಧಾರವಾಡ ತಾಲ್ಲೂಕಿನ ನರೇಂದ್ರ), ಕಾರೆಯಬಾಗು, ಮುನವಳ್ಳಿ (ಮುನವಳ್ಳಿ), ಎಳರಾಮೆ (ಯಡ್ರಾವಿ), ಯತಬಾರಪುರ (ಐನಾಪುರ), ಹೊಂನನೂರು, ಐನಾಪುರ, ಉಗಾರ, ಕೊಣ್ಡನೂರು (ಕೊಣ್ಣೂರು), ಜಳಾರ, ನಾಗನೂರು, ಯರನಾಳ, ಸದಲಗಾ, ಬೆಳಗಲೆ (ಮುಧೋಳ ತಾಲ್ಲೂಕಿನ ಬೆಳಗಲಿ?), ಶಿವಾಪುರ, ಆಲ್ಗೋಡ, ಅಮಣಗೆಯೂರು (ಅಮ್ಮಣಗಿ), ಕಣಗಿಲೆ (ಕಣಗಲಾ), ಎಕ್ಕಸಂಬುಗೆ (ಯಕ್ಸಂಬಾ), ಲಟ್ಟೆ (ಖಡಕಲಾಟ), ಹೂವಿನಬಾಗೆ (ರಾಯಬಾಗ), ವೇಣುಗ್ರಾಮೆ (ಬೆಳಗಾವಿ), ಕುರುಂಬೆಟ್ಟ (ಮಮದಾಪುರ), ಕಂಕಣನೂರು

(ಕಂಕಣವಾಡಿ), ಚಿಂಚೋಳಿ (ಚಿಂಚಲಿ), ಉಂಬರವಾಣಿ (ಉಮರಾಣಿ) ಸ್ಥಳನಾಮಗಳು ದಾಖಲಾಗಿವೆ.

ಬೆಳಗಾವಿ, ಕಲ್ಲೊಳಿ, ಕೊಣ್ಣೂರು, ಯಕ್ಸಂಬಾ, ರಾಯಬಾಗ, ಗೋಲಿಹಳ್ಳಿ, ಸವದತ್ತಿ, ಹೂಲಿ, ಕಲಬಾವಿ, ಬೆಳವಡಿ, ಹಣ್ಣಿಕೇರಿ ಮೊದಲಾದೆಡೆಯ ಕೆಲವು ಶಾಸನಗಳು ಲಿಪಿ, ಭಾಷೆ, ಸಾಹಿತ್ಯದ ದೃಷ್ಟಿಯಿಂದ ಗಮನೀಯವಾಗಿವೆ. ಇವುಗಳು ಭೌಗೋಳಿಕ ಹಿನ್ನೆಲೆ, ಸ್ಥಳದ ಹಿರಿಮೆ, ಆಳರಸರಾದಿ ರಾಣಿಯರು, ಅಧಿಕಾರಿಗಳು, ದಾನಿಗಳ ವಂಶಾವಳಿ–ರಾಜಾವಳಿಯ ನಿರೂಪಣೆಯನ್ನು ಕಾವ್ಯಾತ್ಮಕವಾಗಿ ವರ್ಣಿಸಿವೆ. ಇವುಗಳಲ್ಲಿ ಗದ್ಯ ಮತ್ತು ಕಂದ ಪದ್ಯಗಳು ಅಧಿಕ ಪ್ರಮಾಣದಲ್ಲಿ ಗೋಚರಿಸುತ್ತವೆ. ಈ ಶಾಸನಗಳಲ್ಲಿ ಉತ್ಪಲ, ಶಾರ್ದೂಲ, ಸ್ರಗ್ಧರಾ, ಚಂಪಕ, ಮತ್ತೇಭವಿಕ್ರೀಡಿತ, ಮಹಾಸ್ರಗ್ಧರೆ ವೃತ್ತಗಳು ಬಳಕೆಯಾಗಿವೆ. ಇದರಿಂದ ಈ ಶಾಸನಗಳನ್ನು ರಚಿಸಿರುವ ಕವಿಗಳು ಸಂಸ್ಕೃತ, ಕನ್ನಡ ಭಾಷೆಗಳನ್ನು ಬಲ್ಲವರಾಗಿದ್ದು, ನಾನಾ ಜ್ಞಾನ ಶಾಖೆಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದ ರೆಂಬುದು ಮನದಟ್ಟಾಗುತ್ತದೆ. ಸವದತ್ತಿ ರಟ್ಟರ ೪ನೆಯ ಕಾರ್ತವೀರ್ಯನ ಆಶ್ರಯದಲ್ಲಿದ್ದ ಕವಿಕುಳತಿಳಕ ಎಂಬ ಬಿರುದಾಂಕಿತನಾದ ಪಾರ್ಶ್ವಪಂಡಿತನು ಕಲ್ಲೊಳಿಯ ಕ್ರಿಶ. ೧೨೦೪ರ ಶಾಸನವನ್ನು ರಚಿಸಿದ್ದಾನೆ. ಇದು ರಟ್ಟರು ಮತ್ತು ಹಗರಟಗೆನಾಡಿನ ಯದುವಂಶದ ಮಹಾಮಂಡಳೇಶ್ವರರ ವಂಶಾವಳಿ, ಪರಸ್ಪರ ಸಂಬಂಧಗಳು, ಸಾಂಸ್ಕೃತಿಕ ಚಟುವಟಿಕೆಗಳ ಅಧ್ಯಯನಕ್ಕೆ ಅಪರೂಪದ ಆಕರವಾಗಿದೆ. ಪಾರ್ಶ್ವಪಂಡಿತನು ಕ್ರಿ.ಶ. ೧೨೦೫ರಲ್ಲಿ ರಚಿಸಿರುವ 'ಪಾರ್ಶ್ವನಾಥ ಪುರಾಣ'ದಲ್ಲಿ ತನ್ನ ಮತ್ತು ಆಶ್ರಯದಾತನ ಕೌಟುಂಬಿಕ ವಿವರಗಳು, ಪಾರ್ಶ್ವನಾಥ ತೀರ್ಥಂಕರನ ಜೀವನ ಮತ್ತು ಸಮಕಾಲೀನ ಬಸದಿಗಳು, ಭೌಗೋಳಿಕ ವಿವರಗಳನ್ನು ವಿಶೇಷವಾಗಿ ದಾಖಲಿಸಿದ್ದಾನೆ. ರಟ್ಟರ ಧರ್ಮಗುರು ಯಾಪನೀಯ ಸಂಘದ ಸ್ವರ್ಣಪಾಷಾಣಗಚ್ಛದ ವೃಕ್ಷಮೂಲಗಣ ಪರಂಪರೆಯ ಬಾಳಚಂದ್ರದೇವನು ಪ್ರಸಿದ್ಧ ಕವಿಯೂ ಆಗಿದ್ದನು. ತ್ರೈವಿದ್ಯಚಕ್ರವರ್ತಿ ಮಾಧವ ಚಂದ್ರದೇವನ ಶಿಷ್ಯನಾದ ಈತನು ೪ನೆಯ ಕಾರ್ತವೀರ್ಯನ ಕಾಲಾವಧಿಯ ಬೆಳಗಾವಿಯ ಕ್ರಿ.ಶ. ೧೨೦೪ರ ಎರಡು ಶಾಸನಗಳನ್ನು ರಚಿಸಿದ್ದಾನೆ. ಈ ಶಾಸನಗಳು ರಟ್ಟರ ವಂಶಾವಳಿ, ಆಡಳಿತ, ಸಾಂಸ್ಕೃತಿಕ ಕೊಡುಗೆಗಳು ಮತ್ತು ಸಮಕಾಲೀನ ಸಾಮಾಜಿಕ, ಆರ್ಥಿಕ ವಿಚಾರಗಳ ಅಧ್ಯಯನಕ್ಕೆ ಅಪರೂಪದ ದಾಖಲೆಗಳಾಗಿವೆ. ಚತುರ್ಭಾಷಾ ಚಕ್ರವರ್ತಿ, ಬುಧಾಧೀಶ್ವರ, ಗುಣಾಗ್ರಹಿ, ವಿದ್ವಜ್ಜನಪಂಡಿತ, ಪದಕವಿ, ಕವಿಕಂದರ್ಪ ಎಂಬ ಬಿರುದಾಂಕಿತನಾದ ಬಾಳಚಂದ್ರದೇವನು ರಚಿಸಿರಬಹುದಾದ ಕಾವ್ಯಗಳಾವವು ಇದುವರೆಗೆ ಬೆಳಕಿಗೆ ಬಂದಿಲ್ಲ. ಕವಿಚಕ್ರವರ್ತಿ ಜನ್ನನು (ಕ್ರಿ.ಶ. ೧೨೨೯) ತನ್ನ ಧರ್ಮಪತ್ನಿ ಲಕುಮಾದೇವಿ ತನ್ನ ತವರೂರು ವೇಣುಪುರದಲ್ಲಿದ್ದ (ಬೆಳಗಾವಿ) ಸಂದರ್ಭದಲ್ಲಿ, ಬಾಳಚಂದ್ರದೇವನ ಬಳಿಯೇ ತನ್ನ ಧಾರ್ಮಿಕ ಶಿಕ್ಷಣವನ್ನು ಪೂರೈಸಿದಳೆಂದು 'ಅನಂತನಾಥ ಪುರಾಣ'ದಲ್ಲಿ ಅಭಿಮಾನದಿಂದ ಹೇಳಿಕೊಂಡಿದ್ದಾನೆ. ಪಾರ್ಶ್ವಪಂಡಿತನು 'ಪಾರ್ಶ್ವನಾಥ ಪುರಾಣ'ದಲ್ಲಿ ಬಾಳಚಂದ್ರದೇವನ ವಕ್ರೋಕ್ತಿ ಪ್ರಗಲ್ಭತೆಯನ್ನು ಗೌರವದಿಂದ ಸ್ಮರಿಸಿದ್ದಾನೆ. ಸವದತ್ತಿ ರಟ್ಟರ ಇಮ್ಮಡಿ ಸೇನನ ಆಶ್ರಯದಲ್ಲಿದ್ದ ಜೈನ ಕವಿ ಹೊಸೂರಿನ

ಕ್ರಿ.ಶ. ೧೧೧೦೭ರ ಶಾಸನವನ್ನು ರಚಿಸಿದ್ದಾನೆ. ಕರೋಶಿಯ ಕೋಟೆಯ ಆವರಣದಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಸಿಂಹಪೀಠದ ಪಟ್ಟಿಕೆಯ ಮೇಲಿರುವ ಶಾಸನವನ್ನು ಜಯಸೆಟ್ಟಿಯ ಮಗನಾದ ಸೇನಬೋವ ಸಿಂಗಯ್ಯನು ರಚಿಸಿದ್ದಾನೆ. ಕಲ್ಯಾಣದ ಚಾಳುಕ್ಯರ ತ್ರೈಲೋಕ್ಯಮಲ್ಲದೇವನ ಕಾಲಾವಧಿಯ ಕೊಕಟನೂರದ ಕ್ರಿ.ಶ. ೧೦೫೦ರ ಶೈವ ಶಾಸನವನ್ನು ವಿದ್ವಜ್ಜನಾಂಭೋಜಿನೀವನಹಂಸ ಎಂಬ ಬಿರುದಾಂಕಿತನಾದ ಜೈನ ಕವಿ ಜಿನವರ್ಮಪಂಡಿತನು ರಚಿಸಿರುವುದು ವಿಶೇಷವಾಗಿದೆ.

ಒಟ್ಟಾರೆ ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು ಈ ಪ್ರದೇಶದ ಚರಿತ್ರೆ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಮಹತ್ವದ ದಾಖಲೆಗಳಾಗಿವೆ. ಈ ಜಿಲ್ಲೆಯಲ್ಲಿ ಜೈನಧರ್ಮದ ವಿವಿಧ ಆಯಾಮಗಳನ್ನು ಅಧ್ಯಯನ ಮಾಡಿರುವ ಸಂಶೋಧಕರು ಮತ್ತು ವಿದ್ವಾಂಸರು ಕ್ರಿ.ಶ. ಸುಮಾರು ೧೮ನೆಯ ಶತಮಾನದವರೆಗಿನ ಶಾಸನಗಳನ್ನು ಮಾತ್ರ ಗಮನಿಸಿದ್ದಾರೆ. ೧೮ನೆಯ ಶತಮಾನದಿಂದೀಚೆಗೆ ಇಲ್ಲಿ ಹಲವು ಬಸದಿಗಳು ನಿರ್ಮಾಣವಾಗಿವೆ. ಹಲವು ಬಸದಿಗಳು ಜೀರ್ಣೋದ್ಧಾರವಾಗುತ್ತ ಬಂದಿವೆ. ದಿಗಂಬರ ಮತ್ತು ಶ್ವೇತಾಂಬರ ಪಂಥಗಳ ಶ್ರಾವಕರು ಅನೇಕ ಶಿಲ್ಪಗಳು ಮತ್ತು ಪ್ರತಿಮೆಗಳನ್ನು ದಾನ ಮಾಡಿದ್ದಾರೆ. ಹಲವು ಮುನಿಗಳು ಸನ್ಯಸನ ವಿಧಿಯಿಂದ ಸಮಾಧಿಮರಣ ಹೊಂದಿದ್ದಾರೆ. ಹಲವು ಮುನಿಗಳು ಮತ್ತು ಶ್ರಾವಕರು ಲೋಕೋಪಯೋಗಿ ಕಾರ್ಯಗಳನ್ನು ಕೈಗೊಂಡಿದ್ದಾರೆ. ಈ ಎಲ್ಲ ವಿಚಾರಗಳಿಗೆ ಸಂಬಂಧಿಸಿದಂತೆ ಶಾಸನಗಳು ಲಭ್ಯವಿವೆ. ಈ ಶಾಸನಗಳ ಸಂಗ್ರಹ ಮತ್ತು ಅಧ್ಯಯನ ನಡೆಯಬೇಕಾಗಿದೆ. ಹಾಗೆಯೇ ಯಾದವಾಡದ ಪಾರ್ಶ್ವನಾಥ ಬಸದಿಯಲ್ಲಿರುವ ಎಂಟು ಯಂತ್ರ-ಮಂತ್ರ ಪಟಗಳು ಗಮನೀಯವಾಗಿವೆ. ಇಲ್ಲಿಯ ಬಹುತೇಕ ಬಸದಿಗಳಲ್ಲಿ ಪ್ರಾಚೀನ ಮತ್ತು ಅರ್ವಾಚೀನ ಯಂತ್ರ-ಮಂತ್ರ ಪಟಗಳಿವೆ. ಕರ್ನಾಟಕದಾದ್ಯಂತದ ಬಸದಿಗಳಲ್ಲಿ ಇಂಥ ಸಾವಿರಾರು ಪಟಗಳಿವೆ. ಇದುವರೆಗೂ ಇಂಥ ಪಟಗಳೆಡೆಗೆ ವಿದ್ವಾಂಸರು, ಸಂಶೋಧಕರು ಗಮನಹರಿಸಿಲ್ಲ. ಈ ಪಟಗಳು ಸಮಕಾಲೀನ ಧಾರ್ಮಿಕ, ಸಾಮಾಜಿಕ ವ್ಯವಸ್ಥೆಯ ಅಧ್ಯಯನಕ್ಕೆ ಅಪರೂಪದ ದಾಖಲೆಗಳಾಗಿವೆ. ಇವುಗಳ ಸಾಂಸ್ಕೃತಿಕ ಅಧ್ಯಯನದೆಡೆಗೆ ಸಂಶೋಧಕರು ಗಮನಹರಿಸುವುದು ಅವಶ್ಯವಿದೆ.

ಬೆಳಗಾವಿ ಜಿಲ್ಲೆಯಲ್ಲಿ ಜೈನ ಶಾಸನಗಳ ಸಂಗ್ರಹ, ಅಧ್ಯಯನ, ಪ್ರಕಟನೆ ಇದುವರೆಗೂ ವ್ಯವಸ್ಥಿತವಾಗಿ ನಡೆದಿಲ್ಲ. ಈ ನಿಟ್ಟಿನಲ್ಲಿ ಬಾಹುಬಲಿ ಹಂದೂರ ಅವರು "ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು" (೨೦೧೦) ಎಂಬ ಕೃತಿಯಲ್ಲಿ ಹಲವು ಶಾಸನಗಳನ್ನು ಒಂದೆಡೆಗೆ ಸಂಗ್ರಹಿಸಲು ಪ್ರಯತ್ನಿಸಿದ್ದಾರೆ. ಆದರೆ ಈ ಕೃತಿಯಲ್ಲಿ ಶಾಸನಗಳ ಪಾಠಗಳನ್ನು ಮಾತ್ರ ಸಂಗ್ರಹಿಸಲಾಗಿದೆ. ಇದರಲ್ಲಿ ಪ್ರಸ್ತಾವನೆ, ಶಾಸನಗಳ ಸಾರಾಂಶ, ಪದಸೂಚಿ ಇತ್ಯಾದಿಗಳ ಕೊರತೆಯಿದೆ. ಹೀಗಾಗಿ ಈ ಜಿಲ್ಲೆಯ ಪ್ರತಿಯೊಂದು ಗ್ರಾಮದಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ಜೈನ ಶಾಸನಗಳ ಸಂಗ್ರಹ, ಅಧ್ಯಯನ, ಪ್ರಕಟನೆ ವ್ಯವಸ್ಥಿತವಾಗಿ ನಡೆಯಬೇಕಾಗಿದೆ. ಈಗಾಗಲೇ ಹಲವು ಶಾಸನಗಳು ಕಣ್ಮರೆಯಾಗಿವೆ. ಹಲವು ಶಾಸನಗಳು ಸ್ಥಳಾಂತರವಾಗಿವೆ. ಹಲವು ಶಾಸನಗಳ ಅಕ್ಷರಗಳು

ಸವೆದಿವೆ. ಹಲವು ಶಾಸನಗಳು ವಿನಾಶದ ಅಂಚಿನಲ್ಲಿವೆ. ಹೀಗಾಗಿ ಇಲ್ಲಿಯ ಜೈನ ಸಂಘ-ಸಂಸ್ಥೆಗಳು ತಮ್ಮ ತಮ್ಮ ತಾಲ್ಲೂಕಿನ ಜೈನ ಶಾಸನಗಳು, ಬಸದಿಗಳು, ಶಿಲ್ಪಗಳು, ನಿಷಿಧಿಗಲ್ಲುಗಳು ಮೊದಲಾದವುಗಳನ್ನು ಒಂದೆಡೆಗೆ ದಾಖಲೀಕರಣ ಮಾಡುವ ಕಾರ್ಯವನ್ನು ಕೈಗೊಳ್ಳುವುದು ಅವಶ್ಯವಿದೆ. ಈ ನಿಟ್ಟಿನಲ್ಲಿ ಗೋಕಾಕದ ಕೆಲವು ಶಾಸ್ತ್ರದಾನಿಗಳು ಸಂಜಯ ಎನ್. ಹಂಜೆ ಅವರಿಂದ "ಗೋಕಾಕ ಪರಿಸರದಲ್ಲಿ ಜೈನಧರ್ಮ" (೨೦೧೬) ಎಂಬ ಶೀರ್ಷಿಕೆಯಲ್ಲಿ ಗೋಕಾಕ ತಾಲ್ಲೂಕಿನ ಬಸದಿಗಳು, ಶಿಲ್ಪಗಳು, ಶಾಸನಗಳು, ಮುನಿಗಳ ದಾಖಲೀಕರಣ ಕಾರ್ಯವನ್ನು ಕೈಗೊಂಡಿದ್ದಾರೆ. ಇದೇ ರೀತಿ ಉಳಿದ ತಾಲ್ಲೂಕುಗಳ ಸಂಘ-ಸಂಸ್ಥೆಗಳು, ಶಾಸ್ತ್ರದಾನಿಗಳು ತಮ್ಮ ತಮ್ಮ ತಾಲ್ಲೂಕುಗಳ ಅಧ್ಯಯನಗಳಿಗೆ ಸಹಾಯ-ಸಹಕಾರ ಕೊಡಮಾಡಿ, ಆಯಾ ಪ್ರದೇಶದ ಜೈನ ಶಾಸನಗಳಾದಿ ವಿವಿಧ ಪುರಾತತ್ವ ಆಕರಗಳು ಮತ್ತು ಸಮಕಾಲೀನ ಕವಿಗಳು, ಸಾಹಿತ್ಯವನ್ನು ದಾಖಲೀಕರಣ ಮಾಡುವ ಕಾರ್ಯ ಕೈಗೊಳ್ಳುವುದು ಅವಶ್ಯವಿದೆ. ಈ ರೀತಿಯ ಅಧ್ಯಯನಗಳಿಂದ ಜೈನಧರ್ಮದ ಪ್ರಾದೇಶಿಕ ಚರಿತ್ರೆ, ಹಿರಿಮೆ, ಬಸದಿಗಳು, ಶಿಲ್ಪಗಳು, ಶಾಸನಗಳು, ಮುನಿಪರಂಪರೆ, ಸಾಹಿತ್ಯ, ಸಂಸ್ಕೃತಿ, ಆಚಾರ-ವಿಚಾರಗಳು, ಸಂಪ್ರದಾಯಗಳನ್ನು ಮುಂದಿನ ತಲೆಮಾರಿಗೆ ಕಟ್ಟಿಕೊಡಲು ಸಾಧ್ಯವಾಗುತ್ತದೆ.

ಆಧಾರ ಗ್ರಂಥಗಳು

೧. ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೬ (ಮಹಾರಾಷ್ಟ್ರದ ಕನ್ನಡ ಶಾಸನಗಳು-೨೦೦೧), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಕಲಬುರ್ಗಿ ಎಂ.ಎಂ. (ಸಂ.), ಮಹಾರಾಷ್ಟ್ರದ ಕನ್ನಡ ಶಾಸನಗಳು (೧೯೮೭), ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ.

೩. ಗುರವ ಆರ್.ಎನ್., "ಚಾಲುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲದೇವನ ಕೊಕಟನೂರ ಶಾಸನ", ಕರ್ನಾಟಕ ಭಾರತಿ ಸಂ. ೩/೨ (೧೯೭೦), ಪು. ೫೦-೫೨, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ - ಕ್ರಿ.ಶ. ೧೨೦೪", ಕರ್ನಾಟಕ ಭಾರತಿ ಸಂ. ೬/೩ (ಜನೇವರಿ-೧೯೭೪), ಪು. ೪೩-೫೪, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಕರ್ನಾಟಕ ಭಾರತಿ ಸಂ. ೧೧/೨ (ನವೆಂಬರ್-೧೯೭೮), ಪು. ೨೨-೪೨, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. "ಚಕ್ರವರ್ತಿ ಭುವನೈಕಮಲ್ಲದೇವನ ಬೆಳವಡಿ ಶಾಸನ", ಕರ್ನಾಟಕ ಭಾರತಿ ಸಂ. ೧೧/೪ (೧೯೭೯), ಪು. ೨೯-೩೫, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪. ಗೋಗಿ ಹನುಮಾಕ್ಷಿ, "ಐನಾಪುರದ ಶಾಸನಗಳು", ಅಥಣಿ ತಾಲ್ಲೂಕು : ಸಮಗ್ರ ದರ್ಶನ (೨೦೦೭), ಪು. ೪೪-೪೯, ವಿಮೋಚನ ಪ್ರಕಾಶನ, ಅಥಣಿ. ಲಕ್ಕುಂಡಿಯ ಶಾಸನಗಳು (೨೦೦೮), ಮಹಿಳಾ ಸಾಹಿತ್ಯಿಕಾ ಹುಬ್ಬಳ್ಳಿ. ಹುಬ್ಬಳ್ಳಿ ತಾಲೂಕಿನ ಶಾಸನಗಳು (೨೦೧೩), ಮಹಿಳಾ ಸಾಹಿತ್ಯಿಕಾ ಹುಬ್ಬಳ್ಳಿ.

೫. ಗೋಪಾಲ್ ಬಾ.ರಾ., ಬನವಾಸಿ ಕದಂಬರು (೧೯೮೩), ಕದಂಬ ಸಾಂಸ್ಕೃತಿಕ ಅಧ್ಯಯನ ಸಂಸ್ಥೆ, ಶಿರಸಿ.

೬. ತಮ್ಮೋಜಿ ಚಂದ್ರಶೇಖರ ಬಿ., "ಕೊಣ್ಣೂರಿನ ಜಿನಬಿಂಬ ಶಾಸನ", ಶಾಸನ ಅಧ್ಯಯನ ಸಂ. ೨ (೨೦೦೪), ಪು. ೨೦-೨೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. "ಗೋಕಾಕದ ಜಿನಬಿಂಬ ಶಾಸನ", ಸ್ಟಡೀಜ್ ಇನ್ ಕರ್ನಾಟಕ ಹಿಸ್ಟ್ರಿ ಆ್ಯಂಡ್ ಕಲ್ಚರ್ ಪ್ರೊಸಿಡಿಂಗ್ಸ್ ವಾಲ್ಯೂಮ್-VII (2006), ಪು. ೧೭೩.

೭. ನೇಗಿನಹಾಳ ಎಂ.ಬಿ., "ಉಳಾಗಡ್ಡಿ ಖಾನಾಪುರ ಶಾಸನಗಳು", ಕನ್ನಡ ಅಧ್ಯಯನ (ಚಳಿ ಸಂಚಿಕೆ-೨೦೦೨), ಪು. ೫೫-೫೮, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ಪಾಡಿಗಾರ ಶ್ರೀನಿವಾಸ, "ಹೂಲಿಯ ಶಾಸನಗಳ ಹಿನ್ನೆಲೆಯಲ್ಲಿ ಮಧ್ಯಯುಗೀನ ಕರ್ನಾಟಕದ ವಾಸ್ತುಶಿಲ್ಪ ಪರಿಭಾಷೆ", ಚರಿತ್ರೆ ಅಧ್ಯಯನ ಸಂ. ೧/೨ (ಜನೇವರಿ-ಜೂನ್ : ೨೦೦೬), ಪು. ೧೪೪-೧೪೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ರಿತ್ತಿ ಎಸ್.ಎಚ್., "ಬೆಳವಡಿಯಲ್ಲಿಯ ಶಿಲಾಲಿಪಿಗಳು", ಬೆಳವಡಿಯ ವೀರರಾಣಿ ಮಲ್ಲಮ್ಮನ ತ್ರಿಶತಮಾನೋತ್ಸವದ ಸ್ಮರಣ ಸಂಚಿಕೆ-೧೬೭೮ ರಿಂದ ೧೯೭೮ (೧೯೭೯), ಪು. ೧೬-೧೮, ಬೆಳವಡಿ.

೧೦. ಷಡಕ್ಷರಯ್ಯ ಆರ್.ಎಂ., "ಕರೋಶಿಯಲ್ಲಿ ಜೈನ ಸಿಂಹಪೀಠ ಶಾಸನ ಪತ್ತೆ", ಸಂಯುಕ್ತ ಕರ್ನಾಟಕ ದಿನಪತ್ರಿಕೆ (೨೨-೦೨-೧೯೯೮), ಪು. ೬. "ರಾಯಬಾಗದಲ್ಲಿ ಪತ್ತೆಯಾದ ಲೋಹದ ಜೈನ ವಿಗ್ರಹಗಳು", ಕರ್ನಾಟಕ ಭಾರತಿ ಸಂ. ೩೭/೧ (೨೦೦೯), ಪು. ೨೦೦-೨೧೭, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೧. ಹಂಜೆ ಅಪ್ಪಣ್ಣ ಎನ್., "ಕಸಮಳಗಿಯ ಪಾರ್ಶ್ವನಾಥ ತೀರ್ಥಂಕರನ ಶಿಲ್ಪ ಮತ್ತು ಪಾದಪೀಠ ಶಾಸನ", ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ. ೮೩/೪ (ಅಕ್ಟೋಬರ್/ಡಿಸೆಂಬರ್-೨೦೦೫), ಪು. ೧-೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. "ಶೇಡಬಾಳದ ಚೌವ್ವೀಸ ತೀರ್ಥಂಕರರ ಶಿಲ್ಪ ಮತ್ತು ಪಾದಪೀಠ ಶಾಸನ", ಶಾಸನ ಅಧ್ಯಯನ ಸಂ. ೩/೨ (೨೦೦೬), ಪು. ೧೮-೧೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. "ಗೋಕಾಕ ತಾಲ್ಲೂಕಿನ ಶಾಸನಗಳು", ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ. ೮೬/೦೧-೦೨ (ಜನೇವರಿ/ಡಿಸೆಂಬರ್-೨೦೦೮), ಪು. ೧೧-೧೭, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. "ಪಾಶ್ಚಾಪುರದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪ ಮತ್ತು ಪಾದಪೀಠ ಶಾಸನ", ಇತಿಹಾಸ ದರ್ಶನ ಸಂ. ೨೫ (೨೦೧೦), ಪು. ೭೩-೭೪, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು. "ಉಗರಗೋಳದ ಜೈನ ಸಿಂಹಪೀಠ ಶಾಸನ", ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ. ೮೮-೮೯/೦೩-೦೪ ಮತ್ತು ೦೧-೧೨ (ಜುಲೈ/ಡಿಸೆಂಬರ್-೨೦೧೦ ಮತ್ತು ಜನೇವರಿ/ಜೂನ್-೨೦೧೧), ಪು. ೫೭-೬೦, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. "ಗೋಕಾಕ ಪರಿಸರದ ಬಸದಿಗಳು", ಶೋಧ (ಅರ್ಧವಾರ್ಷಿಕ ದ್ವಿಭಾಷಾ ಸಂಶೋಧನ ನಿಯತಕಾಲಿಕೆ-೨೦೧೨), ಪು. ೨೬-೩೬, ಡಾ. ಹಾಮಾನಾ ಸಂಶೋಧನ ಕೇಂದ್ರ ಉಜಿರೆ.

೧೧. ಹಂಜೆ ಸಂಜಯ ಎನ್., ಗೋಕಾಕ ಪರಿಸರದಲ್ಲಿ ಜೈನಧರ್ಮ (೨೦೧೬), ವಿದ್ಯಾಶ್ರೀ ಪ್ರಕಾಶನ, ಅಳಗವಾಡಿ.

೧೨. ಹಂದೂರ ಬಿ.ಆರ್. (ಸಂ.), ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು (೨೦೧೦), ಡಾ. ಬಿ.ಆರ್. ಹಂದೂರ ಹುಕ್ಕೇರಿ.

೧೩. ಹಂಪ ನಾಗರಾಜಯ್ಯ, ಯಾಪನೀಯ ಸಂಘ (೧೯೯೯), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. Gurav R.N., The Kadambas of Goa and their Inscriptions (Unpublished Ph.D. Thesis-1969), Karnatak University Dharwad.

೧೫. Kundanagar K.G. (edi.), Inscriptions in Northern Karnataka and the Kolhapur State (1939), Kolhapur.

■

ಹೊಸಗುಂದದ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಅಪ್ರಕಟಿತ ನಿರೂಪಗಳು

◆

ಡಾ. ಕೆಳದಿ ವೆಂಕಟೇಶ ಜೋಯಿಸ್

ಹೊಸಗುಂದ ಪಶ್ಚಿಮ ಘಟ್ಟದ ಸಹ್ಯಾದ್ರಿ ಸೆರಗಿನಲ್ಲಿ ಇರುವಂತಹ ಒಂದು ಸಣ್ಣ ಹಳ್ಳಿ. ಶಿವಮೊಗ್ಗ ಸಾಗರ ಮಾರ್ಗದಲ್ಲಿ ಶಿವಮೊಗ್ಗದಿಂದ ಸುಮಾರು ಅರವತ್ತು ಕಿ.ಮೀ. ಸಾಗರದಿಂದ ಸುಮಾರು ಹದಿನಾರು ಕಿ.ಮೀ. ದೂರದಲ್ಲಿ ಈ ಊರಿದೆ. ಸುಮಾರು ೬೫೦ ವರ್ಷಗಳ ಹಿಂದೆ ಹೊಸಗುಂದ ಅರಸು ಮನೆತನ ಅವನತಿ ಹೊಂದಿದೆ. ಅಂದಿನಿಂದ ಅಲ್ಲಿಯ ದೇವಾಲಯಗಳು ನಿರ್ಲಕ್ಷಕ್ಕೊಳಗಾಗಿವೆ. ಇಲ್ಲಿ ಜನವಸತಿ ಸಹ ಇಲ್ಲದೆ ಅವರುಗಳು ಬೇರೆಡೆ ತಮ್ಮ ಅಸ್ತಿತ್ವವನ್ನು ಕಂಡುಕೊಂಡಿದ್ದಾರೆ. ದೇವಾಲಯಗಳ ಸಮುಚ್ಚಯದ ನಡುವೆ ಕಾಡೂ ಸಂರಕ್ಷಣೆಗೆ ಒಳಪಟ್ಟಿತು. ದೇವರ ಹೆಸರಿನಲ್ಲಿ ಈ ಕಾಡು ಉಳಿದು ಬಂದಿದ್ದು ಇಲ್ಲಿ ಸುಮಾರು ಐದಾರು ವರ್ಷಗಳ ಹಿಂದಿನ ಮರಗಳನ್ನು ಕಾಣಬಹುದು. ಈ ಪ್ರದೇಶದಲ್ಲಿ ನೂತನ ಶಿಲಾಯುಗದ, ಗಂಗರ ಕಾಲದ ಕುರುಹುಗಳು ಲಭ್ಯವಾಗಿದೆ.

ಇಲ್ಲಿ ದೇವಾಲಯದ ಅವಶೇಷದ ಜೊತೆಗೆ ಶಾಸನಗಳು ಸಾಕಷ್ಟಿವೆ. ದಟ್ಟಡವಿಯಲ್ಲಿ ಮರೆಯಲ್ಲಿದ್ದ ಈ ದೇವಾಲಯವನು ಜೋರ್ಣೋದ್ಧರಿಸುವಲ್ಲಿ ಬಂಟ್ವಾಳ ತಾಲ್ಲೂಕಿನ ಕೆದಿಲದವರಾಗಿರುವ ಶ್ರೀ ಸಿ.ಎಂ.ಎನ್. ಶಾಸ್ತ್ರಿ ಕುಟುಂಬದವರು (ಶ್ರೀ ಸಿ.ಎಂ. ನಾರಾಯಣ ಶಾಸ್ತ್ರೀ) ಗಮನಹರಿಸಿದ್ದಾರೆ. ನೂರಿನ್ನೂರು ವರ್ಷಗಳಿಂದ ಪೂಜಾದಿಗಳು ಇಲ್ಲದೆ ಪಾಳುಬಿದ್ದಿದ್ದ ಈ ದೇವಾಲಯದ ಜೀರ್ಣೋದ್ಧಾರಕ್ಕೆ ಮನಸ್ಸು ಮಾಡಿ ಇದಕ್ಕಾಗಿಯೇ ಜೀರ್ಣೋದ್ಧಾರ ಸಮಿತಿಯನ್ನು ರಚಿಸಿಕೊಂಡು ಶ್ರೀ ಶ್ರಿಂಗೇರಿಯ ಪರಮ ಪೂಜ್ಯರು ಮತ್ತು ಶ್ರೀ ರಾಮಚಂದ್ರಾಪುರ ಮಠದ ಪರಮ ಪೂಜ್ಯ ಶ್ರೀ ರಾಘವೇಶ್ವರ ಸ್ವಾಮಿಯವರ ಮಾರ್ಗದರ್ಶನದಲ್ಲಿ ಜೀರ್ಣೋದ್ಧಾರ ಕೈಗೊಂಡಿದ್ದಾರೆ. ಇವರ ಪ್ರಯತ್ನದ ಫಲವಾಗಿ ಮತ್ತು ಗ್ರಾಮಸ್ಥರ ಸಹಕಾರದಿಂದ ಇಂದು ಶಿಥಿಲಗೊಂಡಿದ್ದ ದೇವಾಲಯ ಆರುನೂರು ವರ್ಷಗಳ ಹಿಂದಿನ ವೈಭವವನ್ನು ಕಾಣುವತ್ತ ದಾಪುಗಾಲು ಹಾಕಿದೆ. ಈ ದಟ್ಟ ಅಡವಿಯಲ್ಲಿ

ಹೊಸಗುಂದ ಅರಸರೆಂದು ಗುರುತಿಸಿಕೊಂಡು ಸುಮಾರು ೩೦೦ ವರ್ಷಕಾಲ ಆಡಳಿತ ನಡೆಸಿದ ಹುಂಚದ ಬಿಲ್ಲೇಶ್ವರ ದೇವರ ಪಾದ ಪದ್ಮಾರಾಧಾಕರಾಗಿದ್ದ ಸಾಂತರ ವಂಶಸ್ಥರ ನಾಡು ಮತ್ತೊಮ್ಮೆ ಮಹತ್ವ ಪಡೆಯುವತ್ತ ಸಾಗಿದೆ. ಈ ಇತ್ತೀಚಿನ ಸಂಶೋಧನೆಯಿಂದ ಕ್ರಿ.ಶ. ೧೧೧೦ರಲ್ಲಿ ಭುಜಬಲ ಅರಸ ಹೊಸಗುಂದದ ಮೊದಲ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟ ಅರಸ ಎಂಬುದು ತಿಳಿದುಬಂದಿದೆ. ಇವನ ನಂತರದಲ್ಲಿ ಸಾಕಷ್ಟು ಅರಸರು, ಅರಸಿಯರೂ ಈ ಪ್ರದೇಶವನ್ನು ಆಳಿದ್ದಾರೆ. ಅವರ ಕಾಲದಲ್ಲಿ ಈ ಪ್ರದೇಶ ದೇವಾಲಯ ನಗರಿಯಾಗಿತ್ತೆಂಬುದನ್ನು ಅಲ್ಲಿಯ ಅವಶೇಷಗಳು ಹೇಳುತ್ತವೆ. ಈ ಪ್ರಾಂತದ ಅತಿ ಪುರಾತನ ದೇವಾಲಯವಾಗಿರುವ ಇಲ್ಲಿಯ ಪ್ರಧಾನ ದೇವಾಲಯ ಈಗ ಹೆಸರಿರುವ ಉಮಾಮಹೇಶ್ವರ ದೇವಾಲಯ ಆಗಿರಬೇಕು. ಇದನ್ನು ಕಟ್ಟಿಸಿದವರಾರೆಂಬುದು ಸ್ಪಷ್ಟವಿಲ್ಲ. ದೇವಾಲಯದ ವಾಸ್ತು ಹಿನ್ನೆಲೆಯಲ್ಲಿ ಇದು ಸುಮಾರು ಹತ್ತನೆ ಶತಮಾನದ ನಿರ್ಮಾಣಕ್ಕೆ ಸೇರುತ್ತದೆ. ದೇವಾಲಯವು ರಂಗಮಂಟಪ, ಸಭಾಮಂಟಪ, ಪ್ರದಕ್ಷಿಣಾ ಪಥ, ಸಾಂದಾರ ಗರ್ಭಗೃಹಗಳನ್ನೊಳಗೊಂಡಿದೆ. ಸಭಾಮಂಟಪದಲ್ಲಿ ಕಲಾತ್ಮಕ ಕಂಭಳಿವೆ. ದೇವಾಲಯದ ಮೇಲ್ಛಾವಣಿ ಮರದ ಪೆಟ್ಟಿಗೆಗಳಂತೆ ಶಿಲೆಯಲ್ಲಿ ನಿರ್ಮಾಣಗೊಂಡಿದೆ. ಹೊರ ಮೈಯಲ್ಲಿ ಹಲವು ಮಿಥುನ ಶಿಲ್ಪಗಳಿವೆ. ಇದರ ಜೊತೆಗೆ ವೀರಭದ್ರ, ಮಹಿಷಮರ್ದಿನಿ, ಪುನರ್ ನಿರ್ಮಾಣಗೊಂಡಿದ್ದರೆ ಅವಶೇಷವಾಗಿ ಸಂಶೋಧನೆಯಿಂದ ಕಂಚಿಕಾಳಮ್ಮ, ಪ್ರಸನ್ನನಾರಾಯಣ, ಲಕ್ಷ್ಮೀಗಣಪತಿ ವಿಗ್ರಹಗಳು ದೊರೆತಿವೆ. ಇವುಗಳಿಗೆ ದೇವಾಲಯವನ್ನು ಹೊಸದಾಗಿ ನಿರ್ಮಿಸುವ ಕೆಲಸ ಇಲ್ಲಿ ನಡೆದಿದೆ. ಕಂಚಿ ಕಾಳಮ್ಮನ ಶಿಲ್ಪ ಸುಂದರವಾಗಿದೆ.

ಇತ್ತೀಚೆಗೆ ದೊರೆತ ದಾಖಲೆಗಳು

ಇತ್ತೀಚೆಗೆ ಹೊಸನಗರ ತಾಲ್ಲೂಕಿನಲ್ಲಿ ಹಸ್ತಪ್ರತಿ ಸರ್ವೇಕ್ಷಣೆ ನಡೆಸುವ ಸಂದರ್ಭದಲ್ಲಿ ಎರಡು ಹಸ್ತಪ್ರತಿಗಳು ದೊರೆತಿತ್ತು. ಅದರಲ್ಲಿ ಒಂದು ಮಂತ್ರದ ಪುಸ್ತಕ. ಇನ್ನೊಂದು, ನವರಾತ್ರಿ ಪೂಜೆ, ಸಹಸ್ರನಾಮ ಇವುಗಳನ್ನು ತಿಗಳಾರಿಯಲ್ಲಿ ಬರೆದುಕೊಂಡ ಹಸ್ತಪ್ರತಿ ಯಾಗಿದೆ. ಅದರಲ್ಲಿ ಸುಮಾರು ೭೫ಕ್ಕೂ ಹೆಚ್ಚು ಗರಿಗಳಲ್ಲಿ ಶಿವಮೊಗ್ಗ ಜಿಲ್ಲೆಯ ಇತಿಹಾಸದ ಮೇಲೆ ಬೆಳಕುಚೆಲ್ಲುವ ಹಲವು ಗರಿಗಳಿವೆ. ಇವುಗಳನ್ನೆಲ್ಲಾ ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ. ಇದರಲ್ಲಿರುವ ನಾಲ್ಕು ಗರಿಗಳು ಮೇಲ್ನೋಟಕ್ಕೆ ಹೊಸಗುಂದ ಇತಿಹಾಸದ ಮೇಲೆ ಬೆಳಕು ಚೆಲ್ಲುವಂತಹುದಾದ್ದರಿಂದ ಅದರ ಪಾಠವನ್ನು ಮಾನ್ಯ ಹುಲಿಮನೆ ಶ್ರೀ ಗಣಪತಿ ಅವರ ಸಹಾಯದಿಂದ ದಾಖಲಿಸಲು ಇಲ್ಲಿ ಪ್ರಯತ್ನಿಸಿದ್ದೇನೆ.

ನಾಲ್ಕು ಗರಿಗಳು ಶ್ರೀ ಶೃಂಗೇರಿ ಸಚ್ಚಿದಾನಂದ ಭಾರತಿ ಸ್ವಾಮಿಯವರ ಕಾಲದಲ್ಲಿ ಶ್ರೀ ಮಠಕ್ಕೆ ಬರೆದ ಭಿನ್ನವತ್ತಳೆ ಮತ್ತು ಕೆಳದಿ ಸೋಮಶೇಖರನಾಯಕನು ಶ್ರೀ ಸ್ವಾಮೀಜಿಯವರಿಗೆ ಬರೆದ ಭಿನ್ನಹ ಪತ್ರದ ಪ್ರತಿಯಾಗಿದೆ. ಹೊಸಗುಂದ ದೇವಾಲಯಗಳಲ್ಲಿ ಪೂಜಾದಿಗಳು ನಿಂತು ಹೋಗಿರುವುದರಿಂದ ಇದನ್ನು ಪುನಃ ಮೊದಲಿನಂತೆ ಪುನರ್ ಸ್ಥಾಪಿಸಲು ಅಲ್ಲಿಯ ಆನಂದಪುರ, ಕಾಸ್ಪಾಡಿ, ಮಳಲಿ, ತ್ಯಾಗರ್ತಿ,

ಉಳ್ಳೂರು, ಮಂಚಾಲೆ ಮೊದಲಾದ ಸ್ಥಳಗಳ ಭಕ್ತಾದಿಗಳು ಶ್ರೀ ಮಠ ಮತ್ತು ಶ್ರೀ ರಾಮಚಂದ್ರಾಪುರ ಮಠದ ಗುರುಗಳಿಗೆ ಬರೆದುಕೊಂಡ ಭಿನ್ನವತ್ತಳೆ ಇದರಲ್ಲಿದೆ. ಶ್ರೀ ಗುರುಗಳು ಕೆಳದಿ ಸೋಮಶೇಖರನಾಯಕರ ಗಮನಕ್ಕೆ ಇದನ್ನು ತಂದ ಕುರಿತು ಮತ್ತು ಸೋಮಶೇಖರ ನಾಯಕರು ಚಿಕ್ಕನರಸಪ್ಪ ಎಂಬುವವರನ್ನು ಕಳುಹಿಸಿ ಈ ಕುರಿತಂತೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದ ವಿವರಗಳು ಈ ನಿರೂಪದಲ್ಲಿ ದಾಖಲಾಗಿವೆ. ಒಂದು ದಾಖಲೆ ಅದು ನಾಗರ ಬರಹದಲ್ಲಿ ವಪ್ಪ ಇರುವುದಾಗಿಯೂ ಅಲ್ಲದೆ ಇದನ್ನು ಕಡತ ೧೦೩ರಿಂದ ತ್ಯಾಗರ್ತಿ ಶಂಕರಭಟ್ಟನ ಕೂಡೆ ಆಗಸ್ಟ ೩ ೧೮೦೨ರಲ್ಲಿ ಶೃಂಗೇರಿಯಲ್ಲಿ ಪ್ರತಿ ಮಾಡಿಕೊಂಡಿದ್ದೆಂದು ತಿಳಿಸುತ್ತದೆ. ಶೃಂಗೇರಿಯ ಕಡತಗಳನ್ನು ಕೂಲಂಕಷವಾಗಿ ಅಧ್ಯಯನಕ್ಕೆ ಒಳಪಡಿಸಿರುವ ಮಾನ್ಯ ಡಾ. ಎ.ಕೆ. ಶಾಸ್ತ್ರಿರವರನ್ನೂ ಈ ಕುರಿತು ಸಂಪರ್ಕಿಸಿದಾಗ ಇದುವರೆಗಿನ ನನ್ನ ಸಂಶೋಧನೆಯಲ್ಲಿ ಈಕುರಿತು ಯಾವುದೇ ನಿರೂಪ ಸಿಕ್ಕಿಲ್ಲವೆಂದೂ, ಶ್ರೀ ಮಠದ ಕಡತಗಳನ್ನು ನರಸಿಂಹವನದಿಂದ ಸ್ಥಳಾಂತರಿಸುವ ಸಂದರ್ಭದಲ್ಲಿ ಹಲವು ಕಡತಗಳು ನಾಶವಾಗಿದ್ದು ನಮ್ಮ ಇತಿಹಾಸಕ್ಕೆ ತುಂಬಲಾರದ ನಷ್ಟವನ್ನುಂಟು ಮಾಡಿವೆ. ಹಾಗಾಗಿ ಈ ನಿಟ್ಟಿನಲ್ಲಿ ಈ ದಾಖಲೆ ಪ್ರಮುಖವಾಗುತ್ತದೆ ಎಂದು ಅಭಿಪ್ರಾಯಿಸುತ್ತಾರೆ.

ನಿರೂಪದಲ್ಲಿ ಶ್ರೀ ಉಮಾಮಹೇಶ್ವರ, ವೀರಭದ್ರ, ಕಾಳಿ, ನಾರಾಯಣ ದೇವಾಲಯ ಗಳ ಹೆಸರುಗಳೂ ಬಂದಿವೆ. ಆದರೆ ಸಾಂತರಸರ ಕಾಲದಲ್ಲಿನ ಶಾಸನಗಳಲ್ಲಿ ಈ ಹೆಸರಿನ ಉಲ್ಲೇಖ ಕಂಡುಬರುವುದಿಲ್ಲ. ಇವರು ಬಿಲ್ಲೇಶ್ವರನ ಆರಾಧಕರಾಗಿದ್ದವರು. ಅಂದಾಗ ಇದೂ ಬಿಲ್ಲೇಶ್ವರ ದೇವಾಲಯವೇ ಆಗಿದ್ದಿರಬಹುದೇ? ಹಲವಾರು ವರ್ಷಗಳ ಕಾಲ ಪೂಜಾದಿಗಳಿಲ್ಲದೆ ಇದ್ದ ಇಲ್ಲಿ ಕೆಳದಿ ಅರಸರ ಕಾಲದಲ್ಲಿ ಶ್ರೀ ಶೃಂಗೇರಿ ಮತ್ತು ಶ್ರೀ ರಾಮಚಂದ್ರಾಪುರ ಮಠದ ಗುರುಗಳ ಮಾರ್ಗದರ್ಶನ ಪಡೆದು ಲಿಂಗವನ್ನು ಸ್ಥಾಪಿಸಿ ಉಮಾಮಹೇಶ್ವರನೆಂದು ಹೆಸರಿಸಿರಬಹುದೇ? ದೇವಾಲಯದ ಮುಂದಿನ, ಈಗ ವೀರಭದ್ರ ದೇವಾಲಯವೆಂದು ಗುರುತಿಸುತ್ತಿರುವ ಗುಡಿ ಹಿಂದೆ ಪಾರ್ವತಿ ದೇವಾಲಯವಾಗಿದ್ದಿರಬಹುದೇ? ಅಲ್ಲಿ ಕೆಳದಿ ಕಾಲದಲ್ಲಿ ವೀರಭದ್ರ ಸ್ಥಾಪಿತವಾಗಿರ ಬಹುದೇ? ಈ ಎಲ್ಲಾ ವಿಷಯಗಳ ಕುರಿತು ಹೆಚ್ಚಿನ ಸಂಶೋಧನೆ ಆಗಬೇಕಿದೆ. ಈಗ ದೊರೆತಿರುವ ದಾಖಲೆಯಲ್ಲಿ ಗ ಮತ್ತು ಸ ಅಕ್ಷರಗಳ ಬಳಕೆ, ಅರ್ಕಾವತ್ತು, ಒತ್ತಕ್ಷರ ಬಳಕೆಯಲ್ಲಿ ಕೆಲ ವ್ಯತ್ಯಾಸವನ್ನು ಕಾಣಬಹುದು. ಈ ದಾಖಲೆಗಳು ೧೬-೧೭ನೇ ಶತಮಾನದ, ಕೆಳದಿ ಕಾಲಕ್ಕೆ ಸೇರಿದ್ದು ಹೊಸಗುಂದ ಇತಿಹಾಸದ ಮೇಲೆ ಬೆಳಕುಚೆಲ್ಲುತ್ತವೆ ಎನ್ನಬಹುದು.

ನಿರೂಪಗಳ ಪಾಠ ಇಂತಿದೆ.

೦೧. ದಾಖಲೆ ೩ ಮುಂಭಾಗ

೦॥ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯಪದವಾಕ್ಯಪ್ರಮಾಣಪಾರಾವಾರಪಾರಿಣ ಯಮನಿಯ

೦॥ಮಾದ್ಯಷ್ಟಾಂಗ ಯೊಗನರುತರದ ಶ್ರುಂಗೆರಿ ಶ್ರಿ ಸಚ್ಚಿದಾನಂದ ಭಾರತಿ ಸ್ವಾಮಿಗಳಿಗೆ

೦॥ಕೆಳದಿ ಸೊಮಶೆಖರ ನಾಯಕರೂ ಮಾಡುವ ಬಿಂನಹ। ಕಳುಹಿದ ಆಶಿರ್ವಾದ ಪ

೦॥ತ್ರಿಕೆ ಯಿಂದೆಲ್ಲಾ ಮನಸ್ಸಿಗೆ ತಂದೆಉ। ಪೂರ್ವಾರಭ್ಯ ಹೊಸಗುಂದ ಸ್ತಳದ ದೆವತಾ ಪೂಜಾದಿ

ಹಿಂಭಾಗ:

೦॥ಗಳು ಶ್ರುಂಗೆರಿ ಮಠ ಧರ್ಮಕ್ಕೆ ಚುತಿ ಬಾರದ ರಿತ್ತಿಯಲ್ಲಿ ಸಾಂಗವಾಗಿ ನಡೆಯುವಂ

೦॥ತೆ ಸಿಸ್ತು ಕ್ರಮ ಕೈಗೊಳ್ಳಲು ಚಿಕ್ಕ ನರಸಪ್ಪನನ್ನು ಕಳುಹಿಸಿದೆ ಉಳಿದಂತೆ

೦॥ಮಹಾನುಭಾವರಿಗೆ ಬರಸುವಂಥಾದೆನದೆಯಾಗಿ ಬಿನ್ನಹ ಕಡತದ ಪ್ರತಿ

೦೨.ಗರಿ ಸಂಖ್ಯೆ ೨೦೬ ಮುಂಭಾಗ:

೦॥ ದುರ್ಮುಖ ಸಂವತ್ಸರದ ವಯಿಶಾಖ ಬ ೧ಳಲ್ಲು ಶ್ರಿಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪ

೦॥ದವಾಕ್ಯ ಪ್ರಮಾಣ ಪಾರಾವಾರ ಪಾರಿಣ ಯಮನಯಮಾದ್ಯಷ್ಟಾಂಗ ಯೊಗನರುತರದ

೦॥ಶ್ರುಂಗೆರಿ ಶ್ರಿ ಸಚ್ಚಿದಾನಂದ ಭಾರತಿ ಸ್ವಾಮಿಗಳ ಸನ್ನದಾನಕೆ ಆನಂದಪುರ,

೦॥ಹೊಸಗುಂದ। ತ್ಯಾಗರ್ತಿ। ಕಾಸಪಾಡಿ । ಮಳಲಿ। ಉಳೂರು। ಮಂಚಾಲೆ। ಮೊದಲಾದ ಸ್ಥಳಗಳ

೦॥ಜನಂಗಳು ಬರಕೊಂಡ ಬಿನ್ನವತ್ತಳೆ. ಪೂರ್ವಾರಭ್ಯ ಶ್ರಿ ಮಠದ

ಹಿಂಭಾಗ:೦॥ಆಚಾರದಂತೆ ನಡೆದು ಬರುತ್ತಿದ್ದ ಹೊಸಗುಂದ ಉಮಾಮಹೆಶ್ವರ, ವೀರಭದ್ರ, ಕಾಳಿ, ನಾರಾಯಣಯಿಾ ದೆವರುಗಳ ದೆ

೦॥ವತಾಸೆವೆ, ಉಪಾಧಿ ನಂತುಹೊಗಿದೆ। ವಕಲುಗಳು ನಲದೆ ಉಳುವರಿ ಹಾಳುಬಿದ್ದು ಯಿಲಿಯವರು ೦॥ಪರಊರಿಗೆ ವಲಸೆ ಹೊಗಿದ್ದಾರೆ। ಮೊದಲಿನಂತೆ ಪೂಜಾದಿಗಳು ನಡೆಯುವ ರಿತ್ತಿ

೦॥ಅರಮನೆ ಹವಾಲೆ ಮಾಡಿಸಿ ಅನುಗ್ರಹಿಸುವಂತೆ ಬಿನ್ನವತ್ತಳೆ। ನಾಗರ ಬರಹದಲ್ಲಿ ವಪ್ಪ ಯಿದೆ ಕಡತ ೦॥೧೦೩ರಿಂದ ತ್ಯಾಗರ್ತಿ ಶಂಕರಭಟ್ಟನ ಕೂಡೆ ಆಗಸ್ಟ ೩ ೧೮೦೨ರಲ್ಲಿ ಶ್ರುಂಗೆರಿಯಲಿ ಪ್ರತಿ ಮಾಡಿದ್ದು।

೦೩. ಗರಿ ಸಂಖ್ಯೆ ೨೦೮ ಮುಂಭಾಗ:

೦॥ದುಂದುಭಿ ಸಂವತ್ಸರದ ಚೈತ್ರ ಶುದ್ಧ ೮ ಕೆಳದಿ ಸೊಮಶೆಖರ ನಾಯಕರು ಚಿಕ್ಕ

೦॥ನರಸಪ್ಪಗೆ ಬರಸಿ ಕಳುಹಿದ ಕಾರ್ಯ. ಹೊಸಗುಂದ ಹೊಬಳಿಯ ಆ ಗ್ರಾಮದ

೦॥ಈಶ್ವರ ವೀರಭದ್ರ ಯಿಾ ಮೊದಲಾದ ದೇವರ ಪೂಜೆ ಪೂರ್ವದಲ್ಲಿ ನಡೆದು ಬಾಹ ರೀತಿ ನಡೆಯ

೦॥ದೆ ಸೀಮೆಯ ಪ್ರಜೆಗಳು ತೊಂದರೆ ಅನುಭವಿಸುವಂತಾಗಿದೆಯೆಂದು ಶ್ರುಂಗೆರಿ ಶ್ರಿ

ಹಿಂಭಾಗ:

೦॥ಸಚ್ಚಿದಾನಂದ ಭಾರತಿ ಸ್ವಾಮಿಗಳವರಿಗೆ ಮತ್ತು ಶ್ರೀ ರಾಮಚಂದ್ರಾಪುರ ಮಠದ ಸ್ವಾಮಿಗಳವರಿಗೆ

೦॥ಅರಿಕೆ ಮಾಡಿಕೊಂಡ ಸಂಬಂಧ ಶ್ರುಂಗೇರಿ ಸ್ವಾಮಿಗಳವರು ಮಠದ ಸುಬ್ಬರಾಯನ ಅರಮನೆಗೆ ಕಳಿಸಿ

೦॥ದ್ದು ಯಿಾ ಬಗೆಗೆ ವಿಚಾರಿಸಿ ಆ ಸ್ತಳದ ಪೂಜಾದಿಗಳು ಹಿಂದಿನಂತೆ

೦॥ಸಾಂಗವಾಗಿ ನಡೆಸಿ ಬಾಹಾಗೆ ಕಟ್ಟು ಮಾಡಿಸಿ ವಿಶಯವನ್ನು ಶ್ರೀ ಮಠಕ್ಕೂ, ಅರಮನೆಗೂ

೦॥ ತಿಳಿಸುವಂತೆ ನರೂಪ ಪ್ರತಿ.

೦೪. ಗರಿ ಸಂಖ್ಯೆ ೨೦೭ ಮುಂಭಾಗ:

೦॥ಶಾರ್ವರಿ॥ಸಂ॥ದ ಭಾದ್ರಪತ್ತ ಬ ೧೦ಲ್ಲು ಜಗದ್ಗುರು ಶ್ರಿ ಶ್ರುಂಗೆರಿ ಚಂದ್ರಶೆಖರ ಭಾರತಿ

೦॥ಸ್ವಾಮಿಗಳ ಸನ್ನಿಧಾನಕ್ಕೆ ಹೊಸಗುಂದ ನಾಡ ಸೀಮೆಯೊಳಗಣ ಶ್ರುಂಗೆರ್ರಿ।

೦॥ಗೋಕರ್ಣ ರಾಮಚಂದ್ರಾಪುರ ಮಠದ ಭಕ್ತಾದಿಗಳು ಬರಕೊಂಡ ಅರಿಕೆಯೆನೆಂ

೦॥ದರೆ ಹೊಸಗುಂದ ನಾಡಲಿ ಅದೆಂದಿನಂದ ನಡೆದು ಬಂದ ಉಮಾಮಹೆಶ್ವರ॥ವಿರಭದ್ರ

ಹಿಂಭಾಗ:

೦॥ಕಾಳಿಕಾದೆವಿ ಮೊದಲಾದ ದೆವರುಗಳ ಪೂಜಾದಿಗಳು ನಡೆಯದೆ ಸಿಮೆಯ ಜನರು ಅಪ

೦॥ವಾದದಿಂದ ಬಳಲುವಂತಾಗಿದೆ. ನಿತ್ಯನೈಮಿತ್ತಿಕಾದಿಗಳು ನಡೆಸುವ ರಿತ್ತಿ ಅರ

೦॥ಮನೆಗೆ ತಾಕಿತ್ತು ತಂದು ಆಚಾರ ವಿಚಾರಗಳು ಸಾಂಗವಾಗಿ ನಡೆಸಿ

೦॥ಬರುವಂತೆ ಹವಾಲೆ ಮಾಡಿಸಿ ಅನುಗ್ರಹಿಸುವಂತೆ ಬಿನ್ನವತ್ತಳೆ ಶ್ರೀಶ್ರೀ

[ನನಗೆ ಈ ಗರಿಗಳನ್ನು ಅಧ್ಯಯನಕ್ಕೆ ಒದಗಿಸಿದ ಸಂಬಂಧಪಟ್ಟವರಿಗೂ ಮತ್ತು ಓದಲು ಸಹಕರಿಸಿದ ಹುಲಿಮನೆ ಶ್ರೀ ಗಣಪತಿ ಇವರಿಗೆ ನಾನು ಅಭಾರಿಯಾಗಿದ್ದೇನೆ].

■

'ರಾಯವಾಚಕ'–ಕೃಷ್ಣದೇವರಾಯನ ದಿನಚರಿ: ಒಂದು ಪರಿಶೀಲನೆ

◆

ಗುರುಮೂರ್ತಿ ಪೆಂಡಕೂರ್

ರಾಯವಾಚಕ ಎಂಬ ತೆಲುಗು ಗದ್ಯ ಗ್ರಂಥವನ್ನು ಕಾಶಿ ವಿಶ್ವನಾಥ ನಾಯನಯ್ಯ ಅವರ ಸ್ಥಾನಾಪತಿ ಬರೆದ ನಿರೂಪ ಎನ್ನಲಾಗಿದೆ. ಈ ಕಾಶಿ ವಿಶ್ವನಾಥ ನಾಯನಯ್ಯ ಯಾರು ಎಂಬುದು ಈವರೆಗೆ ಖಚಿತವಾಗಿಲ್ಲ. ಪ್ರಾಯಃ ಮಧುರೆಯನ್ನಾಳಿದ ವಿಶ್ವನಾಥ ನಾಯಕ (೧೫೪೨–೧೫೬೦) ಎಂದು ಒಂದು ಅಭಿಪ್ರಾಯ. ಈ ನಾಯಕನ ಪರವಾಗಿ ವಿಜಯನಗರದಲ್ಲಿ ಅಧಿಕಾರಿ(ರಾಯಭಾರಿ)ಯಾದವನೇ ಆಗ ಸ್ಥಾಹಾಪತಿ ಎನಿಸಿಕೊಳ್ಳುತ್ತಿದ್ದನು. ಆದರೆ ಈ ವರದಿಯು ಅವನ ಹೆಸರಲ್ಲಿ ನಮೂದಾಗಿಲ್ಲ. ಈ ವರದಿ ಕೃಷ್ಣದೇವರಾಯನ ಕೊನೆಯ ದಿನಗಳಲ್ಲಿ ಬರೆಯಲ್ಪಟ್ಟಿರಬಹುದು ಅಥವಾ ಅಚ್ಯುತದೇವರಾಯನ ಕಾಲದಲ್ಲಿ ರಚಿಸಲ್ಪಟ್ಟಿರಬಹುದೆಂದು ಊಹಿಸಲಾಗಿದೆ. ವಿಜಯನಗರದಲ್ಲಿ ಎಲ್ಲ ಮಾಂಡಲಿಕರ ಮತ್ತು ಅನ್ಯರಾಜರ ಪ್ರತಿನಿಧಿಗಳಾಗಿ ಸ್ಥಾನಾಪತಿಗಳಿರುತ್ತಿದ್ದರು. ಗಜಪತಿ ರಾಜ್ಯದಲ್ಲಿ ಕರ್ನಾಟಕದ ಪರವಾಗಿ ಕಮಲನಾಭಯ್ಯ ಎಂಬುವರು ಸ್ಥಾನಾಪತಿಯಾಗಿದ್ದರು. ಈ ರೀತಿ ಸ್ಥಾನಾಪತಿಯಾಗಿದ್ದ ಅಧಿಕಾರಿಯೊಬ್ಬರು ತನ್ನ ಪ್ರಭುವಿಗೆ ಕಳಿಸಿದ ನಿವೇದನೆಯೇ ರಾಯವಾಚಕ.

ಆದರೆ ಈ ವಾಚಿಕೆಯ ಅಂತಃಸಾಕ್ಷ್ಯಗಳನ್ನು ಆಧರಿಸಿ ಡಾ॥ ಸಿ.ವಿ. ರಾಮಚಂದ್ರರಾಯರು ೧೫೫೫–೧೬೦೨ರ ಕಾಲಾವಧಿಯಲ್ಲಿ ಕೃಷ್ಣದೇವರಾಯನ ಕಾಲಾನಂತರ ಈ ಗ್ರಂಥವು ರಚಿಸಲ್ಪಟ್ಟಿತೆಂದು ತೀರ್ಮಾನಿಸಿದ್ದಾರೆ. ಈ ವಾಚಿಕೆಯ ವಸ್ತು–ಕೃಷ್ಣದೇವರಾಯರ ಚರಿತ್ರೆ, ರಾಯರ ಕಥೆಯನ್ನು ಹೇಳುವುದೇ ಉದ್ದೇಶವಾದರೂ ಅನೇಕ ಐತಿಹ್ಯಗಳನ್ನು ಇಲ್ಲಿ ಸುಬದ್ಧವಾಗಿ ಸಂಕಲಿಸಲಾಗಿದೆ. ಪಾಶ್ಚಾತ್ಯರ 'ಚರಿತ್ರೆ'ಯ ಭಾಷ್ಯದ ಪ್ರಕಾರ ನೋಡಿದರೆ ಇದು ಚರಿತ್ರೆ ಅಲ್ಲ. ಆದರೆ ಇತಿಹಾಸ ರಚನೆಗೆ ಆಕರವಾಗಬಲ್ಲ ಗ್ರಂಥ. ಇದರಲ್ಲಿ ಪೌರಾಣಿಕ ಪ್ರಸಂಗಗಳು, ಜಾನಪದ ಕಲ್ಪನೆಗಳು ಸೇರಿಕೊಂಡಿವೆ.

ರಾಯವಾಚಕದ ಲೇಖಕ ಒಬ್ಬ ಅಧಿಕಾರಿ, ಸಮಾಚಾರ ನೀಡುವವನು. ಆತನಿಗೆ ಸಮಕಾಲೀನ ರಾಜಕೀಯ ಮತ್ತು ಸಾಹಿತ್ಯದ ನಿಕಟ ಪರಿಚಯವಿದೆ. ಅವನು ಸುಜನರಿಂದ ಸಂಗ್ರಹಿಸಿದ ಸತ್ಯವಾದ ವಿವರಗಳು ಇಲ್ಲಿವೆ ಎಂದು ವಾಚಿಕೆಯ ಬಗ್ಗೆ ಹೇಳುತ್ತಾನೆ. ತಾನು ಕೃಷ್ಣರಾಯರ ಚರಿತ್ರೆಯನ್ನು ಹೇಳಹೊರಟವನು. ಅವರ ಪೂರ್ವಿಕರಾದ ವೀರನರಸಿಂಹರಾಯರ ದಿನಚರಿ ಮತ್ತು ವಾಲಿ ಸುಗ್ರೀವರ, ವಿದ್ಯಾರಣ್ಯರ, ವಿದ್ಯಾನಗರ ಸ್ಥಾಪನೆಯ ವಿಷಯಗಳನ್ನೂ ತಿಳಿಸುತ್ತಾನೆ. ಅನಂತರ ಕೃಷ್ಣದೇವರಾಯರ ಪಟ್ಟಾಭಿಷೇಕ, ಆತನ ದಿನಚರಿ, ಪರಿಪಾಲನಾ ವಿಧಾನ, ಯುದ್ಧಗಳು, ತೀರ್ಥಯಾತ್ರೆಗಳು ಮತ್ತು ಅನೇಕ ಕಥೆ ಉಪಕಥೆಗಳನ್ನು ಹೇಳಲಾಗಿದೆ.

ಬೇರೆ ಬೇರೆ ಗ್ರಂಥಗಳಿಂದ ಸಂದರ್ಭಾನುಸಾರವಾಗಿ ಪದ್ಯಗಳನ್ನು, ಶ್ಲೋಕಗಳನ್ನು, ಔಚಿತ್ಯಪೂರ್ಣವಾಗಿ ಉದ್ಧರಿಸಲಾಗಿದೆ. ಚರಿತ್ರೆಯ ಗ್ರಂಥಗಳಲ್ಲಿ ಪದ್ಯಗಳಿರುವುದಿಲ್ಲ. ಈ ಗ್ರಂಥದಲ್ಲಿ ಮುಖ್ಯವಾಗಿ ರಾಜನು ಹೇಗಿರಬೇಕು, ರಾಜ ಮರ್ಯಾದೆಗಳು, ಮಂತ್ರಿಗಳ ನಡವಳಿಕೆ ಮೊದಲಾದ ವಿಷಯಗಳಿವೆ. ರಾಜನೆಂದರೆ ಸಭಾಪತಿ, ಅವನು ಹೇಗಿರಬೇಕೆಂದರೆ.

ತರುಣನಾಗಿ ನವರತ್ನಾ
ಭರಣನಾಗಿ ಗಂಧ ಪುಷ್ಪ ಪರಿಮಳಯುತನಾಗಿ
ನರನಾಯಕ ಪರಿವೃತನಾಗಿ
ಆಸೀನನಾದವನೇ ಸಭಾಪತಿಯೆನಿಸುವನ್ನೆ ॥

ಇಲ್ಲಿ ರಾಜನ ಸಪ್ತಾಂಗಗಳು, ಸಪ್ತೋಪಾಯಗಳು, ರಾಜನಿಗೆ ಬರಬಾರದ ಸಪ್ತ ವ್ಯಸನಗಳು, ಸಪ್ತ ಸಂತಾಪ, ಸಭಾ ಸಪ್ತಾಂಗ, ಸಪ್ತ ತ್ಯಾಗಗಳು ಇತ್ಯಾದಿ ವಿವೇಚಿಸಿ, ರಾಜದೋಷಗಳನ್ನು ವಿವರಿಸಿ, ತ್ರಿ ಸಂಖ್ಯೆಯಿಂದ ರಾಜನೀತಿ ಹೇಳುತ್ತಾನೆ.

ರಾಯರು ತುರುಕರನ್ನು ಗೆದ್ದ ಮೇಲೆ ಕವಿ ಮುಕ್ಕುತಿಮ್ಮನನು ಹೇಳಿದ ಪದ್ಯ ಹೀಗೆ :

ನರಸಿಂಹ ಕೃಷ್ಣರಾಯಾ
ರಣದಲ್ಲಿ ನಿನ್ನ ಹೆಸರೇ ತುರುಕುರನು ಸದೆಬಡಿಯಿತು
ಕರಿರಾಜ ವರದನೆಂದು
ಕಾರುಮೋಡಗಳು ನಿನ್ನ ಕಂಡು ಗಕ್ಕನೆ ತಿರುಗಿದುವು ॥

ಹೀಗೆ ನಾನಾ ಕಥೆಗಳ ಐತಿಹ್ಯಗಳ ಸುದ್ದಿ ಸಮಾಚಾರದ ಉತ್ಕೃಷ್ಟ ಸಂಕಲನವೇ ರಾಯವಾಚಕ.

ಕನ್ನಡದ ಕೃಷ್ಣದೇವರಾಯನ ದಿನಚರಿಯು ೧೯೮೩ರಲ್ಲಿ ಬಿ.ಎಂ. ಶ್ರೀ ಪ್ರತಿಷ್ಠಾನದಿಂದ ಪ್ರಕಟವಾಗಿದೆ. ಎಂ.ವಿ. ಸೀತಾರಾಮಯ್ಯನವರು ಸಂಪಾದಿಸಿದ್ದಾರೆ. ಇದು ತೆಲುಗು ರಾಯವಾಚಕದ ಅನುವಾದ. ಕೃಷ್ಣದೇವರಾಯರು ಆ ಕಾಲದಲ್ಲಿ

ಅತ್ಯಂತ ಪ್ರಸಿದ್ಧರೂ ಜನಪ್ರಿಯರೂ ಆದರ್ಶಪ್ರಾಯರೂ ಆಗಿದ್ದರಿಂದ ಇದು ಅನ್ಯಭಾಷೆಗಳಿಗೆ ಅನುವಾದವಾಗಿರಬೇಕು.

ಅನುವಾದಕಾರನು ರಾಯವಾಚಕದ ಅನೇಕ ಪದ್ಯಗಳನ್ನು, ಶ್ಲೋಕಗಳನ್ನು ಕೈಬಿಟ್ಟಿದ್ದಾನೆ. ಕೆಲಕಡೆ ಭಾವಾನುವಾದ ನೀಡಲಾಗಿದೆ. ಕೃಷ್ಣದೇವರಾಯನ ದಿನಚರಿ ಎಂದರೆ ಆಧುನಿಕ ಅರ್ಥದ ಡೈರಿ ಅಥವಾ ದಿನಚರಿ ಅಲ್ಲ. ರಾಯರೇ ಇದನ್ನು ಬರೆದಿಲ್ಲ. ಇದು ರಾಯರ ಒಂದು ದಿನದ ಕಾರ್ಯ ಕಲಾಪಗಳ ವಿವರ ಎನ್ನಬಹುದು. ಇದು ಒಂದು ರೀತಿಯ ಬಖೈರು. ಬಖೈರು-ಒಬ್ಬ ಅಧಿಕಾರಿ ತನ್ನ ಪ್ರಭುವಿಗೆ ಬರೆದ ವಿವರವಾದ ಪತ್ರ. 'ನಾಮಾ' ಎಂದರೂ ಅದೇ ಆಗುತ್ತದೆ. ಉದಾ: ಹೈದರ್‌ನಾಮಾ, ರಾಜೇಂದ್ರನಾಮ. ಈ ದಿನಚರಿಯೂ ಅಂತಹದೇ ಒಂದು ಗ್ರಂಥ.

ಈ ದಿನಚರಿಯಲ್ಲಿ : ೧) ವೀರನರಸಿಂಹರಾಯರ, ಕೃಷ್ಣದೇವರಾಯರ ಬೆಳಗಿನ ದಿನಚರ್ಯ. ೨) ವಿದ್ಯಾನಗರ ಸ್ಥಾಪನೆ, ೩) ಕೃಷ್ಣದೇವರಾಯರ ಪಟ್ಟಾಭಿಷೇಕ, ೪) ಮಂತ್ರಿಗಳಿಂದ ರಾಜನೀತಿ ವಿವರಣೆ, ೫) ಬೇರೆ ಬೇರೆ ರಾಜ್ಯಗಳಿಗೆ ವರದಿಗಾರರನ್ನು ಕಳಿಸಿದ್ದು, ೬) ಕೃಷ್ಣದೇವರಾಯರ ರಾತ್ರಿಗಸ್ತು, ೭) ನಗರ ಕೋಶಾದಿ ವಿವರಣೆ, ೮) ಚತುರಂಗ ಬಲ ವಿಸ್ತರಣ, ೯) ತುರುಕರ ದಂಡನೀತಿ, ೧೦) ತುರುಕರ ಮೇಲೆ ಸಮರ, ೧೧) ಓರುಗಲ್ಲಿನ ಮೇಲೆ ಡಿಲ್ಲಿ ಸುಲ್ತಾನನ ದಾಳಿ, ೧೨) ಡಿಲ್ಲಿ ಸುಲ್ತಾನ, ಪ್ರತಾಪ ರುದ್ರರ ಮಹಿಮೆ, ೧೩) ಪುರುಷೋತ್ತಮ ನಗರ (ಪುರಿ) ವರ್ಣನೆ, ೧೪) ಗೋದಾವರಿ ತೀರದಲ್ಲಿ ಗಜಪತಿ ಜಗನ್ನಾಥರ ವಿವರ. ಷೋಡಶ ಪಾತ್ರರ ವಿವರ. ೧೫) ಗಜಪತಿ ರಾಜ್ಯದಲ್ಲಿ ಜಗಚೆಟ್ಟಿ ಗಾರುಡಿ, ೧೬) ರಾಯರ ದಿಗ್ವಿಜಯ, ೧೭) ಗಜಪತಿಯ ಮೇಲೆ ದಾಳಿ, ಷೇಡಶಪಾತ್ರರಿಗೆ, ಹದಿನಾರು ಆಭರಣಗಳ ಕಾಣಿಕೆ, ೧೯) ಗಜಪತಿ ಕುವರಿಯೊಂದಿಗೆ ವಿವಾಹ, ೨೦) ತೀರ್ಥಕ್ಷೇತ್ರ ಸಂದರ್ಶನ, ೨೧) ವಿದ್ಯಾನಗರ ಪ್ರವೇಶ.

ರಾಯವಾಚಕದಲ್ಲಿರುವ ಸಿರಿಗರಿಭಟ್ಟರ ಪ್ರಸಕ್ತಿ, ವೇದವ್ಯಾಸರ ಭೇಟಿ, ವಿದ್ಯಾರಣ್ಯ ಪ್ರಶಂಸೆ, ಅವತಾರಿಕಾ ಪದ್ಯಗಳು, ಫಲಶ್ರುತಿ ವಾಕ್ಯಗಳು ಇಲ್ಲಿಲ್ಲ. ಅನೇಕ ಕಡೆ ವಕ್ಕಣಿಕೆಯಲ್ಲೂ ಭೇದವಿದೆ.

ಎಂ.ವಿ. ಸೀತಾರಾಮಯ್ಯನವರು ಈ ಗ್ರಂಥವನ್ನು ಮುಕ್ಕುತಿಮ್ಮನ ಮತ್ತು ಮಾದಯ್ಯನವರ ಮಲ್ಲಣ್ಣ ಬರೆದಿರಬೇಕೆಂದು ಊಹಿಸಿದ್ದಾರೆ.

ದಿಚರಿಯಲ್ಲಿ – ಕಥಾರಂಭಕ್ಕಿಂತ ಮೊದಲು – ರಾಯವಾಚಕದಲ್ಲಿರುವ ಈ ಬಿನ್ನಹ ವಾಕ್ಯಗಳೇ ಇಲ್ಲ.

'ಶ್ರೀಮಂತ ಸಕಲಗುಣಸಂಪನ್ನ ಮಹಾಮೇರು ಸಮಾನಧೀರ ಅಖಂಡಿತ ಲಕ್ಷ್ಮೀಪ್ರಸನ್ನರಾದ ಶ್ರೀಮನ್ಮಹಾಮಂಡಲೇಶ್ವರ ರಾಜಮಾನ್ಯ ಮಹಾರಾಜ ರಾಜ ಶ್ರೀ

ಕಾಶೀ ವಿಶ್ವನಾಥ ನಾಯಕನಯ್ಯ ಅವರ ದಿವ್ಯ ಶ್ರೀಪಾದಪದ್ಮಗಳಿಗೆ ಪ್ರಭುಗಳ ಸ್ಥಾನಾಪತಿ ಭಕ್ತ ಪರಾಧೀನ ಸದ್ವಿನಯ ಭಯಭಕ್ತಿಯಿಂದ ಸಮರ್ಪಿಸಿದ ಬಿನ್ನಪ'.

ಈ ರೀತಿ ಸ್ಥಾನಾಪತಿಯೊಬ್ಬರು ಬರೆದ ನಿರೂಪವನ್ನು ಅನಂತರ ಕನ್ನಡ ಬಲ್ಲವರೊಬ್ಬರು ದಿನಚರಿಯೆಂದು ಅನುವಾದಿಸಿರಬೇಕು. ಮುಕ್ಕುತಿಮ್ಮನನಾಗಲೀ ಮಾದಯ್ಯನವರ ಮಲ್ಲಣ್ಣನಂಥವರಾಗಲೀ ರಚಿಸಿರಬಹುದಾದ ಕೃತಿಯಿದಲ್ಲ. ಮೇಲಾಗಿ ಕೃಷ್ಣದೇವರಾಯನು ತನ್ನ ದಿನಚರಿಯನ್ನು ಬರೆಯಲು ಎಂದೂ ಯಾರಿಗೂ ಹೇಳಿಲ್ಲವೆಂದು ಖಚಿತ ಅಭಿಪ್ರಾಯ. ಮೇಲಾಗಿ ರಾಯವಾಚಕಕ್ಕೂ ದಿನಚರಿಗೂ ವಿವರಗಳಲ್ಲಿ ಸಾಕಷ್ಟು ಭೇದವಿದೆ. ಆದರೆ ಬಹುಪಾಲು ದಿನಚರಿ ರಾಯವಾಚಕದ ತದ್ವತ್ ಅನುವಾದವಾಗಿದೆ.

ರಾಯವಾಚಕ ಮತ್ತು ದಿನಚರಿ ರಚನೆಯ ಕಾಲದಲ್ಲಿ ತುಂಬಾ ವ್ಯತ್ಯಾಸವಿಲ್ಲ. ಆ ಕಾಲದಲ್ಲಿ ವಿಜಯನಗರದಲ್ಲಿ ದ್ವಿಭಾಷಾ ವ್ಯವಹಾರವಿತ್ತು. ಆಗಲೇ ಯಾರಾದರೂ ಉಭಯ ಭಾಷಾ ವಿಶಾರದರು 'ದಿನಚರಿ'ಯನ್ನು ರಚಿಸಿರಬಹುದು.

ಈ ಎರಡೂ ಗ್ರಂಥಗಳನ್ನು ಪರಿಶೀಲಿಸಿದಾಗ ವಿಜಯನಗರ ಕಾಲದಲ್ಲಿ ಕನ್ನಡವೇ ಪ್ರಧಾನ ಮತ್ತು ಆಡಳಿತ ಭಾಷೆಯಾಗಿತ್ತೆಂದೂ ಕೃಷ್ಣದೇವರಾಯರ ಸಮಸ್ತ ವ್ಯವಹಾರವೂ ಕನ್ನಡದಲ್ಲೇ ನಡೆದಿತ್ತೆಂದು ಹೇಳಬಹುದು. ತೆಲುಗಿನ ಮೇಲೆ ಕನ್ನಡವು ತೀವ್ರ ಪ್ರಭಾವ ಬೀರಿತ್ತು ಎಂದೂ ತೀರ್ಮಾನಿಸಬಹುದು.

೧. ನನ್ನಯ್ಯನೇ ಪಂಪನಿಂದ ಪ್ರಭಾವಿತನಾದೆನೆಂದು ಹೇಳಿದ್ದಾನೆ.

೨. ನನ್ನೆ ಚೋಡನು ಕುಮಾರಸಂಭವದಲ್ಲಿ ದೇಶಿ, ಮಾರ್ಗ ಕವಿತೆ, ಮುಂತಾದ ಪ್ರಯೋಗ ಮಾಡಲು ಕನ್ನಡದ ಪ್ರಭಾವವೇ ಕಾರಣ.

೩. ೧೨ನೇ ಶತಮಾನದಲ್ಲಿ ಶಿವಶರಣರ ಪ್ರಭಾವವು, ವಚನ ಸಾಹಿತ್ಯದ ಪ್ರಭಾವ ಆಂಧ್ರದ ಶಿವಕವಿಗಳ ಮೇಲೆ ಗಾಢವಾಗಿ ಆಯಿತು.

೪. ಪಂಡಿತಾರಾಧ್ಯ, ಪಾಲ್ಕುರಿಕೆ ಸೋಮನಾಥ ಅವರು ವೀರಶೈವ ಮತ ಪ್ರಚಾರ ಮಾಡುವಾಗ -ಕನ್ನಡ- ವಾಚಹವಾಯಿತು.

೫. ತಿಕ್ಕನ ಭಾರತದಲ್ಲಿ 'ಆದಿಪುರಾಣದ ಪ್ರಭಾವ-ಎರ್ರನನ ಕೃತಿಯಲ್ಲಿ-ಪಂಪ ಭಾರತದ ಪ್ರಭಾವ ಎಲ್ಲರೂ ಒಪ್ಪಿದ ಮಾತು.

೬. ಶ್ರೀನಾಥ, ಪೋತನನ ಮೇಲೆ ಕುಮಾರವ್ಯಾಸನ ಪ್ರಭಾವ.

೭. ಸಂಗೀತ ಲೋಕದಲ್ಲಿ ಪುರಂದರ, ಅನ್ನಮಯ್ಯ, ತ್ಯಾಗರಾಜರ ಕೃತಿಗಳು, ಎರಡೂ ಭಾಷೆಗಳನ್ನು ಸನಿಹ ಮಾಡಿದವು.

೮. ಹೀಗಾಗಿ ರಾಯವಾಚಕದ ಭಾಷೆಯ ಉಚ್ಚಾರಣೆ, ಪದಜಾಲ, ಪದಬಂಧ, ಸರ್ವನಾಮ, ವಾಕ್ಯ ರಚನೆಯಲ್ಲೂ ಕನ್ನಡದ ಪ್ರಭಾವ ಕಾಣುತ್ತಿದೆ.

೧. ತೆಲುಗಿನಲ್ಲಿ ಣ, ಳ ಇಲ್ಲ. ಅಲ್ಲಿ ನ ಲಗಳೇ ಪ್ರಿಯ. ರಾಯವಾಚಕದಲ್ಲಿ – ಅಣ್ಣಗಳು, ಮಳಯಾಳ, ಕಲ್ಯಾಣ ನಡವಡಿಕೆಲು, ಸಂಬಳಂ ಸಾರಿಕೆಲು.

೨. ಪದಜಾಲ–ಅಪ್ಪ, ಅಳಿಯ, ಕಾಸು ಮುಂತಾದವು.

೩. ಅಂಕ್ಕ ಪಂಕ್ಕ, ಕಡ್ಡಿ ಕವಳ, ಕಾನುಕಕಪ್ಪಮುಲು, ಧಾನ್ಯ ದವಸಮುಲು, ಕೋಟಿಕೊತ್ತಳಮುಲು.

೪. ಸರ್ವನಾಮ – ಆತ – ಆತಡು. ಈತ – ಈತಡು.

೫. ಸಂಖ್ಯಾವಾಚಕ – ಕಾಲು, ಮುಕ್ಕಾಲು, ಮುನ್ನೂರು, ನಾಲುಗಾರು ಹೀಗೆ ಹತ್ತು ಹಲವಾರು ರೀತಿಯಲ್ಲಿ ಕನ್ನಡವು ತೆಲುಗಿನ ಮೇಲೆ ಪ್ರಭಾವ ಬೀರಿತು. ಆದರೆ ಇಲ್ಲಿ ತಮಿಳಿನ ಪದಗಳಿಲ್ಲ. ಪಾರ್ಸಿ ಪೋರ್ತುಗೀಸ್ ಪದಗಳಿವೆ, ಆ ಕಾಲದ ಆಡು ಮಾತಿನ ತೆಲುಗು ಇಲ್ಲಿದೆ. ಅದು ಕನ್ನಡ ಭೂಯಿಷ್ಠವಾಗಿದೆ. ನಿಘಂಟುವಿನಲ್ಲಿಲ್ಲದ ಅನೇಕ ಪದಗಳಿವೆ. 'ರಾಯವಾಚಕವು ವೈಯಾಕರಣಿ ಮತ್ತು ಭಾಷಾತಜ್ಞರ ಗಣಿಯಾಗಿದೆ.

ಆಧುನಿಕ ತೆಲುಗಿನ ಮೇಲೆ ಅಂದರೆ ತೆಲುಗು ಭಾಷಾ ರಚನೆಯ ಮೇಲೆ ಕನ್ನಡದ ಪ್ರಭಾವವು ಗಾಢವಾಗಿದೆಯೆಂದು ತೆಲುಗು ವಿದ್ವಾಂಸರು ಅಂಗೀಕರಿಸಿದ್ದಾರೆ. ರಾಜ ಮತ್ತು ರಾಜ್ಯದ ಭಾಷೆ ಕನ್ನಡವಾಗಿದ್ದರಿಂದ ಅದರ ಪ್ರಭಾವವು ತೆಲುಗಿನ ಮೇಲಾಯಿತು.

ಉದಾಹರಣೆಗಳು :

	ಕನ್ನಡ	**ತೆಲುಗು**	**ವಿಜಯನಗರದ ತೆಲುಗು**
೧	ಒಂಟಿಯಾಗಿ	–	ವೊಂಟಿಗಾ
೨	ಯಥಾವತ್ತಾಗಿ	–	ಯಥಾವತ್ತುಗಾ
೩	ನೀತಿಗಳು	ನೀತುಲು	ನೀತುಲನ್ನಿ
೪	ಅವರೆಲ್ಲಾ	ವಾಳ್ಳಂತಾ	ವಾರ್ಲೆಲ್ಲಾ
೫	ಸರಿ (ಅಭಿಪ್ರಾಯ ಪ್ರಕಟನೆ)	ಅಲಾಗೇ	ಸರೇ
೬	ದರ್ಶನ ಮಾಡಿ	ದರ್ಶಿಂಚಿ	ದರ್ಶನಮು ಚೇಸಿನ ಪಿಮ್ಮಟ
೭	ಬಿನ್ನಹಮಾಡಿ	ಬಿನ್ನವಿಂಚಿ	ವಿನ್ನಪಂ ಚೇಸಿ
೮	ವಾಸಮಾಡಿ	ವಾಸಿಂಚಿ	ವಾಸಮು ಚೇಸಿ
೯	ಕೂತುಕೊಂಡು	ಕೂರ್ಚೊನಿ	ಕೂರ್ಚುಂಡುಕೊನಿ
೧೦	ಹತ್ತಿಕೊಂಡು	ಎಕ್ಕಿ	ಎಕ್ಕುಕೊನಿ

ಈ ರೀತಿಯಾಗಿ ಪದ ಪ್ರಯೋಗದಲ್ಲಿ ಕನ್ನಡದ ಪ್ರಭಾವ ಆಗಿದೆ. ಆ ಕಾಲದ ಆಡುಭಾಷೆಯ ತೆಲುಗನ್ನು ರೂಪಿಸುವಲ್ಲಿ ಕನ್ನಡದ ನೆರವು ಅಮೂಲ್ಯವಾಗಿದೆ. ಪ್ರಾಯಃ ತೆಲುಗಿನ ಪ್ರಥಮ ಗದ್ಯ ಗ್ರಂಥವಾದ ರಾಯವಾಚಕವು ವಿಜಯನಗರ ಕಾಲದ ಕನ್ನಡ – ತೆಲುಗು ದ್ವಿಭಾಷಿಕತೆಯ ಅಧ್ಯಯನಕ್ಕೆ ಆಕರವೆನಿಸಿದೆ. ತೆಲುಗು ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ರಾಯವಾಚಕವು ತೆಲುಗಿನ ಆಡು ಭಾಷೆಯನ್ನು ಬಳಸಿದ ಅಪೂರ್ವ ಕೃತಿಯಾಗಿದೆ. ಕಂದಾಚಾರ್ಯ, ಕಡ್ಡಿ ಕವಳ, ರೊಕ್ಕ ರುಜಿನ, ಊಳಿಗ, ಕರಣಿಕ, ಕೈ ಜೀತ, ಗಣಿಕೆ, ತಲಾರಿ, ದಳವಾಯಿ, ಪಾಳೇಗಾರ, ಬಂಟ, ಬಾನಿಸ ಮಾವುತ, ರಾಯಸ, ಬೊಕ್ಕಸ, ಕಾಗಜ ಮತ್ತು ಅಳಿಯ ಮುಂತಾದ ಸಹಸ್ರಾರು ಶಬ್ದಗಳು ತೆಲುಗು ಭಂಡಾರದಲ್ಲಿ ಸೇರಿದವು. ಕುರ್ನೀಸು, ಕೂಚು, ಕೊತ್ವಾಲ, ಜೀರಾ, ಡೇರೆ, ತಾಕೀತು, ದುನೇದಾರ ಮತ್ತು ಭರೋಸಾದಂತಹ ಪಾರಶೀ ಶಬ್ದಗಳು ಕನ್ನಡ– ತೆಲುಗನ್ನು ಪ್ರವೇಶಿಸಿದವು. ಕನ್ನಡ–ತೆಲುಗು ಭಾಷೆಗಳ ಮಧುರ ಬಾಂಧವ್ಯವೂ ಈ ಕೃತಿಯಿಂದ ಸರ್ವತ್ರ ವಿದಿತವಾಯಿತು.

ಆಕರ

೧. ರಾಯವಾಚಕಮು –ಸಂ. ಡಾ॥ ಸಿ.ವಿ. ರಾಮಚಂದ್ರರಾವ್, ಆಂಧ್ರ ಸಾಹಿತ್ಯ, ಅಕಾಡೆಮಿ, ಹೈದರಾಬಾದ್, ೧೯೮೨.

೨. ಕೃಷ್ಣದೇವರಾಯನ ದಿನಚರಿ –ಸಂ. ಎಂ.ವಿ. ಸೀತಾರಾಮಯ್ಯ, ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರು, ೧೯೮೩.

೩. ರಾಯವಾಚಕಂ – ಭಾಷಾ ಸಾಹಿತ್ಯ ಪರಿಶೀಲನ –ಡಾ॥ ಕೆ. ರಾಮಾಂಜನೇಯಲು, ಫಣಿ ಕೃಷ್ಣ ಪಬ್ಲಿಕೇಷನ್ಸ್, ಹೈದರಾಬಾದ್, ೧೯೯೩.

■

ಶಾತವಾಹನರ ಕಾಲದ ಮಹಿಳೆಯರು

◆

ಶೋಭನಾ ಸಿಡಗನಾಳ್

ಕ್ರಿಪೂ. ೧೮೭೭ರ ಹೊತ್ತಿಗೆ ಮೌರ್ಯ ಅರಸು ಮನೆತನದ ಆಳ್ವಿಕೆ ಕೊನೆಗೊಂಡಿದ್ದರಿಂದ ಹಾಗೇ ಕರ್ನಾಟಕದ ಮೇಲೂ ಅವರ ಹಿಡಿತ ದುರ್ಬಲವಾಯಿತು. ನಂತರ ಮಗಧ, ಶುಂಗ, ಕಣ್ವ ಮನೆತನಗಳು ಕ್ರಿ.ಪೂ. ೩೦ರವರೆಗೆ ಆಳ್ವಿಕೆ ಮಾಡಿದವು. ಆ ಕಾಲಕ್ಕೆ ಕರ್ನಾಟಕದ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ, ಸ್ಥಿತಿಗತಿ ತಿಳಿಯಲು ಸಾಧ್ಯವಿಲ್ಲ, ಕಾರಣ ನಮಗೆ ಅಂತಹ ದಾಖಲೆಗಳಾವುವೂ ದೊರೆಯುವುದಿಲ್ಲ. ಇದೇ ಸಮಯದಲ್ಲಿ ದಕ್ಷಿಣದಲ್ಲಿ ಶಾತವಾಹನರೆಂಬ ಆಂಧ್ರಭೃತ್ಯರು ರಾಜಕೀಯ ಸಂಘಟನೆ ಮಾಡಿದರು. ಹಾಗೆಯೇ ದಕ್ಷಿಣ ಭಾರತದಲ್ಲಿ ಮೊದಲ ರಾಜಮನೆತನ ಶಾತವಾಹನರದಾಗಿದೆ. ಶಾತವಾಹನರು ಆಂಧ್ರರು, ಆಂಧ್ರಭೃತ್ಯರು ಅಥವಾ ಶಾತಕರ್ಣಿಗಳು ಎಂದು ತಮ್ಮನ್ನು ಉಲ್ಲೇಖಿಸಿಕೊಂಡಿದ್ದಾರೆ ಇವರು ಕ್ರಿ.ಶ. ೧೨೧ರಿಂದ ಕ್ರಿ.ಶ. ೧೭೪ವರೆಗೆ ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದರು (ಕರ್ನಾಟಕ ಪರಂಪರೆ–ಸಂಪುಟ ೧, ಆದಿಕಾಲ). ಈ ಆಂಧ್ರಭೃತ್ಯರ ಆಳ್ವಿಕೆ ಭಾಗವನ್ನು ಶಾತವಾಹನೀ ಹಾರ, ಮತ್ತು ಶಾತವಾಹನೀ ರಾಷ್ಟ್ರವೆಂದು ಕರೆಯಲಾಗುತ್ತದೆ. ಹಾಗಾದರೆ ಆ ಶಾತವಾಹನೀ ಪ್ರದೇಶ ಯಾವುದೆಂದರೆ ಆಂಧ್ರದ ಸ್ವಲ್ಪ ಭಾಗ ಸೇರಿದಂತೆ ಬಳ್ಳಾರಿ ಪ್ರದೇಶವನ್ನು ಒಳಗೊಂಡಿತ್ತು (ಕರ್ನಾಟಕ ಚರಿತ್ರೆ, ಸಂಪುಟ ೧, ಅ ಸುಂದರ, ಪುಟ ೩೦೧). ದಕ್ಷಿಣದ ದ್ರಾವಿಡರ ಮಾತೃ ಪ್ರಧಾನ ಅಂಶಗಳನ್ನು ಶಾತವಾಹನರು ಅಗತ್ಯವಿದ್ದಲ್ಲಿ, ಪೂಜ್ಯನೀಯವೆನಿಸುವ ಸ್ಥಾನಗಳಲ್ಲಿ ಉಳಿಸಿಕೊಂಡು ಬಂದಿದ್ದರು. ಸ್ತ್ರೀಯರಿಗೆ ಪ್ರಧಾನ್ಯವಿರಲಿಲ್ಲ, ಆದರೂ ತಮ್ಮ ಹುಟ್ಟಿನ ಬಗ್ಗೆ ಜನ್ಮದಾತನಿಗಿಂತಲೂ ಜನ್ಮದಾತೆಗೆ ಹೆಚ್ಚು ಮಹತ್ವ ಕೊಡುವುದನ್ನು ಉಳಿಸಿಕೊಂಡಂತಿತ್ತು. ಹಾಗಾಗಿ ಅವರು ತಾಯಿಯಿಂದಲೇ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದರು. ಗೌತಮೀ ಪುತ್ರ ಸಾತಕರ್ಣಿ, ವಾಸಿಷ್ಠೀ ಪುತ್ರ ಪುಲಮಾಯಿ, ಹಾರಿತೀ ಪುತ್ರ ಶಾತಕರ್ಣಿ, ಹೀಗೆ ಸ್ತ್ರೀಯರು ಹಕ್ಕು ಕಳೆದುಕೊಂಡಿದ್ದರೂ ಕೂಡ ತಮ್ಮ ಗುರುತಿಸುವಿಕೆಯನ್ನು ಹೊಂದಿದ್ದರು, ಅದೂ ಅವರ ತಾಯ್ತನದ ಕಾರಣಕ್ಕೆ ಎಂಬುದನ್ನು ಮರೆಯುವಂತಿಲ್ಲ.

ಇಲ್ಲಿ ಪ್ರಸ್ತಾಪಿಸಲಾಗುವ ವಿಚಾರ ಮಾತೃಪ್ರಧಾನ ಸಂಸ್ಕೃತಿ ಪೂರ್ಣ ಮರೆಯಾಗಿದ್ದರೂ ಕೆಲವು ಲಕ್ಷಣ ಅಥವಾ ಅಂಶಗಳನ್ನು ಉಳಿಸಿಕೊಂಡು ಬಂದಿತೆನ್ನುವುದು ಅಷ್ಟೇ ಸತ್ಯ. ಹಲವಾರು ಸಂಸ್ಕೃತಿಗಳ ದಾಳಿ ಮತ್ತು ಪುರುಷ ಪ್ರಧಾನ್ಯದ ಮಧ್ಯೆಯೂ ತನ್ನ ಮೂಲ ಅಂಶಗಳು ಉಳಿಸಿಕೊಂಡಿರುವುದು ದ್ರಾವಿಡರು ಮಾತೃಪ್ರಧಾನರಾಗಿದ್ದ ಕಾರಣಕ್ಕೆ ಇರಬಹುದು. ಅವಕಾಶ ದೊರೆತ ಕಡೆಯಲೆಲ್ಲ ಅವರ ಸ್ವತಂತ್ರ ಅಸ್ತಿತ್ವ ಗುರುತಿಸುವಿಕೆ ಇದೆ. ಡಾ॥ ಕೆ. ಗೋಪಾಲಾಚಾರಿಯವರ ವಿವರಣೆಯಂತೆ ಅಮರಾವತಿಯ ೧೪೫ ಶಾಸನಗಳಲ್ಲಿ ೭೨, ಕುಡಾದಲ್ಲಿನ ೩೦ರಲ್ಲಿ ೧೩, ನಾಸಿಕದಲ್ಲಿನ ೨೯ರಲ್ಲಿ ೧೬ ಶಾಸನಗಳಲ್ಲಿ ಹೆಚ್ಚಿನವು ಸ್ತ್ರೀಯರು ಸ್ವತಃ ದಾನ ಮಾಡಿದ ಕುರಿತು ಮತ್ತು ಹಲವು ಸ್ತ್ರೀಯರು ಸೇರಿ ದಾನ ಮಾಡಿದ ಕುರಿತಾದ ಸಂಗತಿಗಳಿವೆ. ಗೌತಮಿ ಪುತ್ರ ಶಾತಕರ್ಣಿಯ ತಾಯಿಯು ಭದ್ರಯಾನೀಯ ಪಂಗಡಕ್ಕೆ ನಾಸಿಕದ ಮೂರನೆ ಗುಹೆಯನ್ನು ಕೊಟ್ಟಿದ್ದಳು (ಕರ್ನಾಟಕದ ಪರಂಪರೆ–ಸಂಪುಟ–೧, ಆದಿಕಾಲ, ಪುಟ ೧೨೭). ಅಂದರೆ ಈ ಕಾಲದಲ್ಲಿ ಸ್ತ್ರೀಯರು ಅಲ್ಪಮಟ್ಟಿಗೆ ಆರ್ಥಿಕ ಸ್ವಾತಂತ್ರ್ಯ ಹೊಂದಿದ್ದರು ಎನ್ನಬಹುದು. ಶಾತಕರ್ಣಿಯ ಮಗಳು ಶಿವಸ್ಕಂದ ನಾಗಸಿರಿ ಬನವಾಸಿಯಲ್ಲಿ ಒಂದು ಕೆರೆಯನ್ನು ಕಟ್ಟಿಸಿದಳೆಂದು ಮಾಹಿತಿ ಇದೆ (ಕರ್ನಾಟಕ ಚರಿತ್ರೆ, ಸಂಪುಟ ೧, ಅ. ಸುಂದರ, ಪುಟ ೩೦೭). ಸ್ತ್ರೀಯರು ದಾನ ದತ್ತಿ ಕೊಡುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಯಾವ ಕಾಲಕ್ಕೂ ಇದೆ, ಶಾಸನೋಕ್ತವಾಗಿ ಅಧ್ಯಯನ ಮಾಡುವ ಆರಂಭಿಕ ಹಂತದ ಈ ಕಾಲಾವಧಿಯಲ್ಲಿ ದಾನ ಮತ್ತು ಧಾರ್ಮಿಕ ಕಾರ್ಯದಲ್ಲಿ ಸ್ತ್ರೀಯರು ಅಲ್ಪಮಟ್ಟಿಗೆ ಸ್ವತಂತ್ರ ಹೊಂದಿದ್ದರೆನ್ನಬಹುದು. ಇಲ್ಲಿ ಧರ್ಮ ಪ್ರಸಾರವೆನ್ನುವುದು ಸ್ಮಾರಕ ಮತ್ತು ಗುಹಾಲಯಗಳಲ್ಲಿ ಬುದ್ಧ ಮತ್ತು ಹಿಂದೂ ದೇವರ ಮೂರ್ತಿಗಳ ನಿರ್ಮಾಣ ಮಾಡುವುದು, ಅವುಗಳ ವೀಕ್ಷಿಸುತ್ತಿದ್ದ ಸಾರ್ವಜನಿಕರಿಗೆ ಅವುಗಳು ಎಷ್ಟು ಪ್ರಮಾಣದಲ್ಲಿ ಪ್ರಭಾವ ಬೀರುತ್ತಿದ್ದವೋ ಅಷ್ಟಕ್ಕೆ ಮಾತ್ರ ಸೀಮಿತವಾಗಿತ್ತು. ಸಮಾಜಕ್ಕೆ ತಲುಪಿಸುವಿಕೆ ಇತ್ತು. ಒತ್ತಡ ಇರಲಿಲ್ಲ, ಇಲ್ಲಿ ಆಮಿಷಗಳಾಗಲಿ, ಪಾಪ–ಪುಣ್ಯಗಳ ಭಯವನ್ನಾಗಲಿ ಜನರಿಗೆ ಒಡ್ಡಿ ತಮ್ಮ ಧರ್ಮವನ್ನು ವೃದ್ಧಿಗೊಳಿಸುವ ಯಾವುದೇ ಒತ್ತಡದ ಅಂಶಗಳು ಕಂಡುಬರುವುದಿಲ್ಲ. ಪೌರೋಹಿತ್ಯ ಶಾಹಿಯ ಪ್ರಭಾವವಾಗಲಿ, ಜಮೀನ್ದಾರಿಕೆ ದಬ್ಬಾಳಿಕೆಯಾಗಲಿ, ರಾಜಕೀಯ ಒತ್ತಡವಾಗಲಿ ಇವೆಲ್ಲವುಗಳ ಪ್ರಭಾವವಿತ್ತೇ ಹೊರತು, ಹೇರುವಿಕೆ ಇರಲಿಲ್ಲ, ಹಾಗಾಗಿ ಸ್ತ್ರೀಯರು ಅಲ್ಪಮಟ್ಟಿಗೆ ಧಾರ್ಮಿಕ ಕಾರ್ಯಗಳಲ್ಲಿ ಸ್ವತಂತ್ರರಾಗಿದ್ದರು.

ಈ ಕಾಲಾವಧಿಯಲ್ಲಿ ಭೂಮಿಯನ್ನು ಒಂದು ಸಂಪತ್ತೆಂದು ಇನ್ನೂ ಪರಿಗಣಿಸಿರಲಿಲ್ಲವೆಂದು ಭಾವಿಸಬಹುದು. ಇಲ್ಲದಿದ್ದರೆ ಧರ್ಮ ಪ್ರಸಾರ, ಶಾಸನ ಮತ್ತು ಸ್ಮಾರಕಗಳ ನಿರ್ಮಾಣ ಮಾಡುವುದಕ್ಕೆ ಮಾತ್ರ ಸೀಮಿತವಾಗಿರಿಸುತ್ತಿರಲಿಲ್ಲ. ಧರ್ಮವನ್ನು ಪ್ರಚಾರ ಮಾಡುವುದಕ್ಕಾಗಿ ಭೂಮಿಯನ್ನು ನೀಡುವ ಮತ್ತು ಆ ಮೂಲಕ ದೇವಾಲಯಗಳನ್ನು, ಪುರೋಹಿತರನ್ನು ಬಲಿಷ್ಠಪಡಿಸುವ ಮೇಲ್ ವರ್ಗದವರ ಅತಿಯಾದ ಔದಾರ್ಯತೆ ಇನ್ನು ಜಾರಿ ಬಂದಿರಲಿಲ್ಲ. ಅಂದರೆ ಜಮೀನುದಾರಿಕೆ ವ್ಯವಸ್ಥೆ ಪೂರ್ಣ

ಜಾರಿಗೆ ಬಂದಿರಲಿಲ್ಲವೆನ್ನಬಹುದು. ಭೂಮಿ ಒಡೆತನ ಸ್ತ್ರೀಯಿಂದ ಪುರುಷನ ಕೈಗೆ ಹಸ್ತಾಂತರವಾಗಿ ಹಲವು ಕಾಲಗಳೇ ಗತಿಸಿದ್ದವು ಆದರೆ ಅದು ಒಂದು ಸಂಪತ್ತೆಂದು ಪರಿಗಣಿಸುವ ಮನೋಭಾವವನ್ನು ಪುರುಷ ಬೆಳೆಸಿಕೊಂಡಿರಲಿಲ್ಲ. ಏಕೆಂದರೆ ಭೂಮಿ ದತ್ತಿ ಕೊಡುವ ಮೂಲಕ ಧರ್ಮಪ್ರಸಾರ ಮಾಡುವುದಾಗಲಿ, ಪೌರೋಹಿತ್ಯ ವರ್ಗವನ್ನು ಬಲಿಷ್ಠಪಡಿಸುವುದಾಗಲಿ, ಅಥವಾ ಕೆಳವರ್ಗದವರಿಂದ ಸೇವೆಯನ್ನು ಬಯಸಿ ಜಮೀನನ್ನು ನೀಡುವ ಯಾವುದೇ ಆಧಾರಗಳು ನಮಗೆ ದೊರೆತಿರುವುದಿಲ್ಲ. ಹಾಗಾಗಿ ಇದರಿಂದ ಸಮಾಜದಲ್ಲಿ ಇನ್ನೂ ಸ್ತ್ರೀಯರ ಸ್ಥಾನಗಳು ಅಲ್ಪಮಟ್ಟಿಗೆ ಉಳಿದುಕೊಂಡಿದ್ದವೆನ್ನಬಹುದು. ರಾಜರುಗಳ ವಿಚಾರಕ್ಕೆ ಬಂದಾಗ ಯುದ್ಧ, ಸಾಮ್ರಾಜ್ಯಗಳ ವಿಸ್ತರಣೆ ಇದಕ್ಕೆಲ್ಲ ಭೂಮಿಯೇ ಮೂಲವಾಗಿರುತ್ತದೆ. ಆದರೆ ಈ ಕಾಲಘಟ್ಟದಲ್ಲಿ ಭೂಮಿ ಒಂದು ಸಂಪತ್ತೆಂದು ಭಾವಿಸಿದ್ದಕ್ಕಿಂತ ಹೆಚ್ಚಾಗಿ ಧರ್ಮಪ್ರಸಾರ ಮೊದಲ ಆದ್ಯತೆ ಆಗಿತ್ತು. ನಂತರ ರಾಜ್ಯ ವಶ ಅಥವಾ ವಿಸ್ತರಣೆಯಾಗಿತ್ತು. ಅನ್ಯ ರಾಜ್ಯದ ಮೇಲೆ ನಿರಂತರ ಹಿಡಿತವೇ ದಾಳಿಕೋರರ ಉದ್ದೇಶವಾಗಿದ್ದರೆ ಆಡಳಿತ, ಮತ್ತು ಆ ಪ್ರದೇಶದ ಅಭಿವೃದ್ಧಿ ಅವರ ಆದ್ಯತೆ ಆಗಿರುತ್ತಿತ್ತು. ಆದರೆ ಇಲ್ಲಿ ಅವರ ಉದ್ದೇಶ ಅದಾಗಿರಲಿಲ್ಲ, ಹಾಗಾಗಿ ರಾಜರಿಂದ ಹಿಡಿದು ಜನಸಾಮಾನ್ಯರ ಅಥವಾ ಸ್ಥಳೀಯ ಮಟ್ಟದಲ್ಲೂ ಭೂಮಿಯಾಗಲೀ, ಹೆಣ್ಣಾಗಲಿ, ಹೊನ್ನಾಗಲಿ ಮೂರನ್ನೂ ಅಮೂಲ್ಯ ಸಂಪತ್ತೆಂದು ಭಾವಿಸಿರಲಿಲ್ಲ. ಮುಂದೆ ಕದಂಬರ ಕಾಲದಲ್ಲಿ ಭೂಮಿ ದಾನ ಕೊಡುವುದನ್ನು ಅದೂ ಬ್ರಾಹ್ಮಣ ವರ್ಗಕ್ಕೆ ಮಾತ್ರ ಅಧಿಕ ದಾನ ಕೊಟ್ಟಿರುವುದನ್ನು ಕಾಣಬಹುದು. ಅಂದರೆ ಪುರುಷ ಆಂತರಿಕ ಮತ್ತು ಬಾಹ್ಯ ಎರಡೂ ರೀತಿಯಿಂದಲೂ ಭೂಮಿಯ ಮೇಲೆ ಹಕ್ಕು ಪಡೆದು, ಒಡೆತನ ಹೊಂದುವ ಮೂಲಕ ಜಮೀನ್ದಾರನಾಗಿ ತನ್ನ ಅನುಕೂಲತೆಯಂತೆ ವ್ಯವಸ್ಥೆಯನ್ನು ರೂಪಿಸಿಕೊಳ್ಳುತ್ತ ಮುಂದುವರಿದನು.

ಅನ್ಯ ಸಂಸ್ಕೃತಿ ದಾಳಿಗೆ ದಕ್ಷಿಣ ಭಾರತ ಒಳಗಾಯಿತೆಂದ ಮಾತ್ರಕ್ಕೆ ಒಮ್ಮೆಲೆ ವ್ಯವಸ್ಥೆ ಬದಲಾಗಲಿಲ್ಲ. ಇಲ್ಲಿ ಸ್ತ್ರೀಯರು ಇನ್ನು ಪೂಜನೀಯ ಸ್ಥಾನವನ್ನು ಕಳೆದುಕೊಂಡಿರಲಿಲ್ಲ. ಬೌದ್ಧ ಧರ್ಮದ ಅಷ್ಟೊಂದು ಪ್ರಭಾವದ ಮಧ್ಯೆಯೂ ತಮ್ಮ ಮೂಲ ಮಾತೃ ದೇವತಾ ಆರಾಧನೆ ಹಾಗೆಯೇ ಮುಂದುವರಿಸಿದ್ದಾರೆ ಎನ್ನುವುದಕ್ಕೆ ಸ್ತ್ರೀ ದೈವಗಳ ಆರಾಧನೆಗೆ ನೀಡಿದ ಪ್ರಾಧಾನ್ಯತೆ ನೋಡಬಹುದು. ಸನ್ನತ್ತಿಯ ಗಜಲಕ್ಷ್ಮಿ ವಿಗ್ರಹ, ಆನೆ ತನ್ನ ಸೊಂಡಿಲಿನಿಂದ ಅಮೃತ ಕಲಶಗಳನ್ನು ಎತ್ತಿ ಲಕ್ಷ್ಮಿಗೆ ಅಭಿಷೇಕ ಮಾಡುತ್ತಿದೆ. ವಿಶೇಷವಾದ ಇಂಥ ವಿಗ್ರಹ ದೊರೆತಿರುವುದು ಇದೇ ಮೊದಲನೆಯದು. ಇದು ದೊರೆತಿರುವುದು ಶಾತವಾಹನರ ಕಾಲಾವಧಿಯಲ್ಲಿ ಮುಂದೆ ಬಾದಾಮಿ ಚಾಲುಕ್ಯರ ಕಾಲಕ್ಕೆ ಇದೇ ರೀತಿಯ ಗಜಲಕ್ಷ್ಮಿ ವಿಗ್ರಹಗಳನ್ನು ಗುಹಾಲಯದಲ್ಲಿ ನಿರ್ಮಿಸಲು ಶಾತವಾಹನ ಕಾಲದ ಈ ಮೂರ್ತಿ ಶಿಲ್ಪವೇ ಸ್ಫೂರ್ತಿಯಾಗಿವೆ. ಈ ಎಲ್ಲ ಅಂಶಗಳಿಂದ ನಮಗೆ ತಿಳಿದುಬರುವುದು ಶಾತವಾಹನರ ಕಾಲದಲ್ಲಿ ಸ್ತ್ರೀಯರನ್ನು ಎಲ್ಲೋ ಕೆಲವೊಂದು ಕಡೆಗಳಲ್ಲಿ ಮಾತೃಸಂಸ್ಕೃತಿಯ ಹಿನ್ನೆಲೆಯಲ್ಲಿ ಭಾವಿಸಿದ್ದಿರಬೇಕೆನಿಸುತ್ತದೆ. ಉತ್ತರದ ಆರ್ಯರಿಗೆ ಹೋಲಿಸಿಕೊಂಡಾಗ, ದಕ್ಷಿಣದಲ್ಲಿ ದ್ರಾವಿಡ ಸ್ತ್ರೀಯರಿಗೆ ಹಿಂದೆ ಇದ್ದ

ಉತ್ತಮ ಸ್ಥಾನವನ್ನು ಕೆಲವು ಸಂದರ್ಭಗಳಲ್ಲಿ ಹಾಗೇ ಮುಂದುವರಿಸಿಕೊಂಡು ಬಂದಿದ್ದಾರೆನ್ನುವುದು ನಿಜವೆನಿಸುತ್ತದೆ. ಮಾತೃಮೂಲ ವಂಶೀಯತೆಯಿಂದ ಗುರುತಿಸಿಕೊಳ್ಳುವ ಹಲವರು ಬುಡಕಟ್ಟು ಸಮುದಾಯಗಳು ಇಲ್ಲಿ ಇನ್ನೂ ಅಸ್ತಿತ್ವದಲ್ಲಿವೆ. ಅಂದರೆ ಶಾತವಾಹನರ ಕಾಲಕ್ಕೆ ಇಂಥ ಬುಡಕಟ್ಟು ಸಮುದಾಯಗಳು ಇನ್ನು ಹೆಚ್ಚು ಪ್ರಚಲಿತದಲ್ಲಿರಲೇಬೇಕು, ಅರಸು ಮನೆತನದವರೇ (ಶಾತವಾಹನ) ತಮ್ಮನ್ನು ಮಾತೃ ವಂಶೀಯತೆಯಿಂದ ಗುರುತಿಸಿಕೊಂಡಿದ್ದಾರೆಂದರೆ ಸಮಾಜದಲ್ಲಿ ಜಾರಿಯಿರುವುದರ ಬಗ್ಗೆ ಖಚಿತ ಅಭಿಪ್ರಾಯ ವ್ಯಕ್ತಪಡಿಸಬಹುದು. ಮತ್ತೊಂದು ವೈಶಿಷ್ಟವಾದ ಸ್ತ್ರೀ ದೈವಗಳ ಆರಾಧನೆ ದಕ್ಷಿಣದಲ್ಲಿ ಕಂಡುಬಂದಿತು. ಅದು ಮಾತೃದೇವತಾ ಆರಾಧನೆ ಸಪ್ತ ಮಾತೃಕೆಯರ ರೂಪದಲ್ಲಿ ಹುಟ್ಟಿಕೊಂಡಿದ್ದು ಮತ್ತೊಂದು ಲಜ್ಜಾ ಗೌರಿ ಆರಾಧನೆ ಇವೆರಡೂ ಮಾತೃ ಪ್ರಧಾನತೆಯನ್ನು ಎತ್ತಿ ತೋರಿಸುವ ಪ್ರಮುಖ ಆಧಾರಗಳು. ಕ್ರಿ.ಶ. ೨ ಮತ್ತು ೩ನೇ ಶತಮಾನಕ್ಕೆ ಸೇರಿದ್ದವೆನ್ನಲಾಗುವ ಲಜ್ಜಾಗೌರಿ ಮೂರ್ತಿ ಶಿಲ್ಪಗಳು ಮಜತಿ ಮತ್ತು ಬನವಾಸಿಯಲ್ಲಿ ದೊರೆತಿವೆ (ಕರ್ನಾಟಕ ಚರಿತ್ರೆ ಸಂಪುಟ ೧, ಅ, ಸುಂದರ್).

ಶಾತವಾಹನ ದೊರೆ ಹಾಲನ ಗಾಥಾಸಪ್ತಸತಿಯಲ್ಲಿ, ಕಾವ್ಯ ಆರಂಭವಾಗುವುದೇ ಪಶುಪತಿ ಮತ್ತು ಪತ್ನಿ ಗೌರಿಯರ ಸ್ತೋತ್ರದೊಂದಿಗೆ. ಶೈವ ಧರ್ಮ ಆಚರಣೆಯಲ್ಲಿದ್ದು, ಗೌರಿ ದೇವಾಲಯಗಳ ಉಲ್ಲೇಖವಿದ್ದು, ಬೂದಿ ಬಳಿದುಕೊಂಡು ಕಪಾಲಗಳನ್ನು ಹಿಡಿದ ಕಪಾಲೀಸ್ತ್ರೀಯರ ವಿಚಾರ ಆ ಕಾಲದ ಗ್ರಂಥಗಳಲ್ಲಿ ಬಂದಿದೆ. ಇವನ್ನೆಲ್ಲ ಗಮನಿಸಿದಾಗ ಸ್ತ್ರೀದೈವಗಳು ದ್ರಾವಿಡರಲ್ಲಿ ಯಾವ ಕಾಲಕ್ಕೂ ಪ್ರಧಾನ್ಯವನ್ನು ಕಳೆದುಕೊಂಡಿಲ್ಲ. ಅದು ಇಂದಿನ ಆಧುನಿಕ ಕಾಲಕ್ಕೂ ಅನ್ವಯಿಸುತ್ತದೆ. ಆದರೆ ಧರ್ಮಸಾಧಕ ಸ್ತ್ರೀಯರಿಗೆ ಧರ್ಮದಲ್ಲಿ ನಿರ್ಬಂಧಗಳಿರುವವು. ಇಂಥ ನಿರ್ಬಂಧಗಳು ಶಾತವಾಹನ ಕಾಲಕ್ಕೆ ಶೈವ ಧರ್ಮದಲ್ಲಿ ವಿಧಿಸಿರಲಿಕ್ಕಿಲ್ಲ. ಶೈವ ಧರ್ಮದಲ್ಲಿ ಇನ್ನೂ ಮಡಿವಂತಿಕೆ ಪ್ರವೇಶಿಸಿರಲಿಲ್ಲವೆಂದು ಈ ಆಧಾರದಿಂದ ವ್ಯಕ್ತವಾಗುತ್ತದೆ. ಶೈವ ಸಾಧಕರಂತೆ ಇವರು ಸಾಧಕಿಯರಾಗಿ ಶೈವಧರ್ಮದಲ್ಲಿ ಉಳಿದುಕೊಂಡಿರುವ ಸಾಧ್ಯತೆ ಇದೆ. ಇಂಥ ಅವಕಾಶ ಆಗ ಹೆಚ್ಚು ಪ್ರಚಲಿತದಲ್ಲಿದ್ದ ಬೌದ್ಧ ಧರ್ಮದಲ್ಲಿರಲಿಲ್ಲ. ಬುದ್ಧನೇ ಸ್ತ್ರೀಯರು ಬೌದ್ಧ ಸಂಘಗಳನ್ನು ಸೇರುವುದಕ್ಕೆ ನಿರಾಕರಿಸುತ್ತಾನೆ. ಅನಂತರ ಹಲವಾರು ನಿರ್ಬಂಧಗಳ ನಡುವೆ ಬೌದ್ಧ ಧರ್ಮದಲ್ಲಿ ಸ್ತ್ರೀಯರಿಗೆ ಅವಕಾಶ ದೊರೆತರೂ ಭಿಕ್ಷುಗಳಷ್ಟು ಪ್ರಧಾನ್ಯ ದೊರೆಯಲಿಲ್ಲ. ಕೆಳ ವರ್ಗದ ಪುರುಷರಿಗೆ ಬೌದ್ಧ ಧರ್ಮದಲ್ಲಿ ಮುಕ್ತ ಅವಕಾಶ ದೊರೆಯುತ್ತಿತ್ತು. ಆದರೆ ಸ್ತ್ರೀಯರಿಗೆ ಅವಕಾಶವನ್ನು ನಿರಾಕರಿಸುತ್ತಿದ್ದರೆಂದರೆ, ಬೌದ್ಧ ಧರ್ಮದ ಪ್ರಕಾರ ಸ್ತ್ರೀ ಅಷ್ಟೊಂದು ನಿಕೃಷ್ಟಳೇ ? ಅನಂತರದ ಕಾಲದಲ್ಲಿ ಎಲ್ಲ ಧರ್ಮಗಳ ಪ್ರಭಾವದಿಂದ ಶೈವ ಧರ್ಮದಲ್ಲೂ ಕೂಡ ಸ್ತ್ರೀಯರನ್ನು ಧಾರ್ಮಿಕ ಆಚರಣೆಗಳಲ್ಲಿ ಮಾತ್ರ ಇರಿಸಿ ಧರ್ಮ, ಧಾರ್ಮಿಕ ಸಾಧನೆಯಲ್ಲಿ ಪುರುಷರೇ ಸ್ವಾಮಿತ್ವವನ್ನು ಹೊಂದಿದ್ದು ತಿಳಿದ ವಿಚಾರವಾಗಿದೆ. ಒಂದು ಕಾಲಕ್ಕೆ ದೇವತೆ ಮತ್ತು ಪೂಜಾರಿಣಿ ಇಬ್ಬರೂ ಸ್ತ್ರೀಯರಾಗಿ ಪ್ರಧಾನ್ಯತೆ ಪಡೆದವರು, ಆದರೆ ಮನುಷ್ಯ ನಾಗರಿಕನಾದಂತೆ

ಧರ್ಮ, ದೇವರು, ಪೂಜೆ ಎಂದರೆ ಸ್ತ್ರೀಯರಿಗೆ ಸಲ್ಲದ ವಿಚಾರಗಳು, ಪೂಜೆ ದೇವರು ಪವಿತ್ರವಾದವು ಸ್ತ್ರೀ ಅಪವಿತ್ರಳು ಹಾಗಾಗಿ ಅವಳು ಇದಕ್ಕೆ ಅರ್ಹಳಲ್ಲ, ಎಂದು ತೀರ್ಮಾನಿಸಲಾಯಿತು.

ಶಾತವಾಹನ ಕಾಲದ ಸ್ತ್ರೀಯರ ಸಾಮಾಜಿಕ ಸಹಭಾಗಿತ್ವವನ್ನು ಅಧ್ಯಯನ ಮಾಡಬೇಕೆಂದರೆ ನಮಗೆ ಪ್ರತ್ಯಕ್ಷವಾದ ಯಾವುದೇ ಆಧಾರಗಳು ದೊರೆಯುವುದಿಲ್ಲ, ನಾವು ಇಲ್ಲಿಯವರೆಗೂ ವಿಮರ್ಶೆಗೊಳಪಡಿಸಿರುವ ಮಾತೃಪ್ರಧಾನ ಅಂಶಗಳು ಯಾವ ಯಾವ ನೆಲೆಯಲ್ಲಿ ಇನ್ನು ಉಳಿದುಕೊಂಡಿದ್ದಿರುವ ಸಾಧ್ಯತೆ ಇತ್ತು ಎಂಬ ಒಂದು ಸಣ್ಣ ಆಧಾರದ ಮೂಲಕ, ಈ ಕಾಲಕ್ಕಾಗಲೇ ಪುರುಷ ಪ್ರಧಾನ ಸಮಾಜವನ್ನು ಜಾರಿಯಲ್ಲಿದ್ದು, ಪುರುಷ ಸಮಾಜವನ್ನು ಅಧ್ಯಯನ ಮಾಡುವುದರ ಮೂಲಕ ಸ್ತ್ರೀಯರ ಬಗೆಗೆ ತಿಳಿದುಕೊಳ್ಳುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ವೃತ್ತಿಗಳ ವಿಚಾರಕ್ಕೆ ಬಂದಾಗ ಪುರುಷ ಸೂಚಕ ಪದಗಳನ್ನೇ ಬಳಸಿ ವೃತ್ತಿವರ್ಗಗಳಿದ್ದವು, ಉದಾಹರಣೆಗೆ ಮಾಲಾಕಾರ, ಕೋಲಿಕಾ (ನೇಕಾರ), ತಲಪಿಸಿಕ (ಗಾಣದವನು), ಕಾಸಕಾರ (ಕಂಚುಗಾರ), ಚಮ್ಮಕಾರ, ಗಾಂಧಿಕ (ಸುಗಂಧಕಾರ), ಸುವರ್ಣಕಾರ (ಅಕ್ಕಸಾಲಿಗ) (ಕರ್ನಾಟಕದ ಪರಂಪರೆ, ಸಂಪುಟ ೧, ಆದಿಕಾಲ). ಹೀಗೆ ವೃತ್ತಿಗಳ ಯಜಮಾನಿಕೆ ಪುರುಷನದಾಗಿತ್ತು. ಗೃಹ ಕೈಗಾರಿಕಾ ವಲಯಕ್ಕೆ ಸೀಮಿತವಾದ ಈ ವೃತ್ತಿಗಳು ಸ್ತ್ರೀಯರ ಶ್ರಮವಿಲ್ಲದೆ ಉತ್ಪಾದನೆ ಯಶಸ್ವಿಯಾಗಲು ಸಾಧ್ಯವಿಲ್ಲ. ನಾವೆಲ್ಲ ಗ್ರಾಮೀಣ ಪ್ರದೇಶದ ಮೂಲವನ್ನೇ ಹೊಂದಿರುವುದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಅವಿದ್ಯಾವಂತ ಹೆಣ್ಣುಮಕ್ಕಳು ತಮ್ಮ ಕುಟುಂಬದ ವೃತ್ತಿ, ಉಪಕಸುಬುಗಳಲ್ಲಿ ಗಂಡಸರಿಗಿಂತ ಹೆಣ್ಣು ಮಕ್ಕಳು ಗಂಭೀರವಾಗಿ ತೊಡಗಿರುತ್ತಾರೆ. ಕುಟುಂಬದ ಆರ್ಥಿಕ ಕೊರತೆ ನೀಗಿಸಲು ಗೃಹ ಕೈಗಾರಿಕೆಗಳಲ್ಲಿ ಸಕ್ರಿಯವಾದ ಪಾತ್ರ ನಿರ್ವಹಿಸುವುದು ನಮ್ಮ ಗಮನಕ್ಕೆ ಬರದೇ ಇರದು. ಆದರೆ ಅವರು ಉತ್ಪಾದನೆ ಮಾಡಿದ ವಸ್ತುವನ್ನು ಮಾರಾಟ ಮತ್ತು ಅದರ ಉಸ್ತುವಾರಿ ಕುಟುಂಬದ ಆಚೆ ಸಮಾಜಕ್ಕೆ ಅನ್ವಯಿಸುವುದರಿಂದ ಅದು ಮನೆಯ ಯಜಮಾನನ ಹೊಣೆಗಾರಿಕೆಗೆ ಬರುತ್ತದೆ. ಇಂಥ ವ್ಯವಸ್ಥೆ ಶಾತವಾಹನ ಕಾಲಕ್ಕೆ ಏಕೆ ಜಾರಿಯಿರಲು ಸಾಧ್ಯವಿಲ್ಲ ? ಅಂದರೆ ಅವರದು ಶ್ರಮವಷ್ಟೇ, ಅದರಿಂದ ಆದ ಉತ್ಪಾದನಾ ವಸ್ತುವಿನ ಮೇಲೆ ಅವರಿಗೆ ಯಾಜಮಾನ್ಯವಿರಲಿಲ್ಲವೆಂಬುದು ಆ ಕಾಲದಿಂದ ಇಂದಿನವರೆಗೂ ಇದೇ ಸತ್ಯ. ಸ್ತ್ರೀ ಉತ್ಪಾದನಾ ವಲಯದಲ್ಲಿ ಯಜಮಾನಳಾಗಿರು ವವರೆಗೂ ವೃತ್ತಿಯಾಧಾರಿತ ಸಂಘಗಳಿರಲಿಲ್ಲವೆಂದು ಹೇಳಬಹುದು. ಅವರ ಉತ್ಪಾದನೆ ವ್ಯಾಪಾರಿ ಸಂಸ್ಕೃತಿಯದಾಗಿರಲಿಲ್ಲ. ಬದಲಾಗೆ ವಿನಿಮಯವಿರುವ ಸಾಧ್ಯತೆ ಇದೆ. ಶಾತವಾಹನರ ಕಾಲಕ್ಕೆ ವೃತ್ತಿ ಸಂಘಗಳು ಇದ್ದವೆಂದು ಉಲ್ಲೇಖಿಸಲಾಗಿದೆ. ಕೋಲಿಕಾ ನಿಕಾಯ (ನೇಕಾರ ಸಂಘ) ಶಿಲಾಲೇಖದಲ್ಲಿ, ಕುಲುಕಾರಿಕ ಶ್ರೇಣಿ (ಕುಂಬಾರ ಸಂಘ) ಜುನ್ನಾರಿನ ದಾಖಲೆ, ಧನ್ನಿಕ ಶ್ರೇಣಿ (ಧಾನ್ಯವರ್ತಕರ ಸಂಘ), (ಕರ್ನಾಟಕ ಪರಂಪರೆ, ಸಂಪುಟ ೧, ಆದಿಕಾಲ). ರೋಂನೊಂದಿಗೆ ವ್ಯಾಪಾರ ಸಂಪರ್ಕ ಹೊಂದಿದ್ದ ಇವರಿಗೆ ಈ ರೀತಿ ವೃತ್ತಿಯಲ್ಲಿ ಸಂಘಟನಾತ್ಮಕ ಮನೋಭಾವನೆ ಬೆಳೆದಿರುವ ಸಾಧ್ಯತೆ ಇದೆ.

ಆಡಳಿತ ಇಲ್ಲವೆ ಅಧಿಕಾರ ವಲಯದಲ್ಲಿ ಸ್ತ್ರೀಯರಿಗೆ ಅವಕಾಶವಿರಲಿಲ್ಲ. ಅವರು ಅಧಿಕಾರದಲ್ಲಿದ್ದುದರ ಬಗ್ಗೆ ನಮಗೆ ಮಾಹಿತಿ ದೊರೆಯುವುದಿಲ್ಲ. ವೃತ್ತಿ ಕ್ಷೇತ್ರದಲ್ಲಿ ಅವಳು ಯಜಮಾನಳಲ್ಲ. ಹಾಗಾಗಿ ಅವಳಿಗೆ ಯಾವುದೇ ಆರ್ಥಿಕ ಸ್ವಾತಂತ್ರ್ಯವಿರಲಿಲ್ಲ. ಸ್ತ್ರೀಯರಿಗೆ ಆರ್ಥಿಕ ಸ್ವತಂತ್ರವಿಲ್ಲವೆಂದ ಮೇಲೆ ಅಧಿಕಾರಗಳು ಅವರ ಕೈಯಲ್ಲಿರಲಿಲ್ಲ. ಆಡಳಿತದ ಎಲ್ಲ ವಿಭಾಗಗಳಲ್ಲೂ ಪುರುಷರೇ ಅಧಿಕಾರ ನಿರ್ವಹಿಸುತ್ತಿದ್ದರು. ಗುಮಿಕ (ಗಾಮಿಕ), ಮಹಾತಾರರ (ದರಬಾರ್ ಭಕ್ಷಿ), ಭಂಡಾರಗಾರಿಕ (ಉಗ್ರಾಣದ ಅಧಿಕಾರಿ), ಹೇರಾಣಿಕ (ಖಜಾಂಚಿ), ಮಹಾಮಾತ್ರ (ಬೌದ್ಧ ಸನ್ಯಾಸಿಗಳನ್ನು ನೋಡಿಕೊಳ್ಳುವ ಅಧಿಕಾರಿ) (ಕರ್ನಾಟಕ ಪರಂಪರೆ ಸಂಪುಟ-೧, ಆದಿಕಾಲ) ಇಲ್ಲೆಲ್ಲ ಪುರುಷರೇ ಇರುವರು. ರಾಜ್ಯ ವ್ಯವಸ್ಥೆ ಜಾರಿ ಬರುವುದಕ್ಕಿಂತ ಮೊದಲೇ ಸ್ತ್ರೀಯರ ಅಧಿಕಾರಗಳು ಪುರುಷನಿಗೆ ಹಸ್ತಾಂತರವಾಗಿದ್ದವು. ಅಂದ ಮೇಲೆ ಅಧಿಕಾರದಲ್ಲಿರುವುದಾಗಲಿ, ಅಧಿಕಾರ ಹೊಂದುವುದಾಗಲಿ ಅಸಾಧ್ಯವಾಗಿತ್ತು. ಇಂದಿನ ಪ್ರಸ್ತುತ ಪ್ರಜಾಪ್ರಭುತ್ವವೆಂದು ಹೇಳುವ ರಾಜಕೀಯ ವ್ಯವಸ್ಥೆಯಲ್ಲಿ, ಸ್ತ್ರೀಯರು ತಮ್ಮ ಅಧಿಕಾರಕ್ಕಾಗಿ ಹೋರಾಟ ಮಾಡಿದರೂ ದೊರೆಯದ ಸ್ಥಾನ ಸಮ್ಮಾನಗಳು ರಾಜರ ನಿರಂಕುಶ ಆಳ್ವಿಕೆಯಲ್ಲಿ ಹೇಗೆ ದೊರೆಯಲು ಸಾಧ್ಯ ? ಹಾಗಾಗಿ ಆಡಳಿತದ ಯಾವುದೇ ವಿಭಾಗದಲ್ಲಿ ಶಾತವಾಹನ ಕಾಲದ ಮಹಿಳೆಯರು ಭಾಗವಹಿಸಿದಂತೆ ನಮಗೆ ಮಾಹಿತಿ ದೊರೆತಿರುವುದಿಲ್ಲ.

ಶಾತವಾಹನರು ರೋಂನೊಂದಿಗೆ ವ್ಯಾಪಾರ ಹೊಂದಿದ್ದರ ಬಗ್ಗೆ ನಮಗೆ ಮಾಹಿತಿ ದೊರೆಯುತ್ತದೆ. ಪ್ರಾಚೀನ ಇತಿಹಾಸದ ಕಾಲಘಟ್ಟದಲ್ಲಿ ಬರುವ ಈ ರಾಜಪ್ರಭುತ್ವ ವಿದೇಶದೊಂದಿಗೆ ವ್ಯಾಪಾರ ಸಂಪರ್ಕ ಹೊಂದಿದ್ದರೆಂದು ನಾವು ಇತಿಹಾಸದಲ್ಲಿ ನೋಡುತ್ತೇವೆ, ಆದರೆ ಸಿಂಧು ನದಿ ನಾಗರಿಕತೆಯಲ್ಲಿ ಹಡಗು ಕಟ್ಟೆ ಎಂದು ಹೇಳಲಾಗುವ ಅವಶೇಷ ದೊರೆತಿರುವುದರಿಂದ ಶಾತವಾಹನರು ಹೊಂದಿದ್ದ ವಿದೇಶಿ ವ್ಯಾಪಾರದ ಬಗ್ಗೆ ನಮಗೆ ಅಂಥ ವಿಶೇಷವೇನೂ ಎನಿಸುವುದಿಲ್ಲ. ಆದರೆ ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಕೃಷಿ ಸಂಸ್ಕೃತಿಯ ದ್ರಾವಿಡರು ಆ ಕಾಲದಲ್ಲಿ ಕೃಷಿಯನ್ನು ದ್ವಿತೀಯ ದರ್ಜೆಗೆ ಇಳಿಸಿ ವಿದೇಶಿ ವ್ಯಾಪಾರಕ್ಕೆ ಮೊದಲ ಆದ್ಯತೆಯನ್ನು ನೀಡಿರುವ ಸಾಧ್ಯತೆ ಇದೆ ಎನಿಸುತ್ತದೆ. ಇದು ಒಂದು ರೀತಿ ಪ್ರಸ್ತುತ ಭಾರತಕ್ಕೆ ಇರುವ ವಿದೇಶಿ ವಸ್ತುಗಳ ಮೇಲಿನ ಸೆಳೆತವಿದ್ದಂತೆ, ಶಾತವಾಹನರಿಗೂ ಇರಬಹುದೆನಿಸುತ್ತದೆ. ರೋಮಿನ ವಸ್ತುಗಳು ಬಹುವಾಗಿ ಆಕರ್ಷಿಸಿದಂತೆ ಕಾಣುತ್ತದೆ, ಹಾಗೆ ಆ ಕಾಲದಲ್ಲಿ ರೋಮ್‌ಗೂ ಇದು ಅನ್ವಯಿಸುತ್ತದೆ. ಅವರನ್ನು ಸೆಳೆದ ವಿಷಯ, ವಸ್ತು ಕುರಿತು ಶಾತವಾಹನರ ಕಾಲದ ಆಧಾರಗಳೇ ಹೇಳುತ್ತವೆ. ಪಾನಾಸಕ್ತ ಕುಟುಂಬಗಳು, ಮನರಂಜನೆ, ಅವರ ಭೋಗ ಜೀವನ ಶಿಲ್ಪಗಳು, ಇಂಥ ಹಲವು ಶಿಲಾಫಲಕಗಳು, ಇವೆಲ್ಲ ನಮಗೆ ಅನ್ಯ ಸಂಸ್ಕೃತಿಯೊಂದು ದಕ್ಷಿಣಕ್ಕೆ ಕಾಲಿಟ್ಟ ಪ್ರಭಾವದಿಂದಿರಬಹುದೇ ಎನಿಸುತ್ತದೆ.

ಶಾತವಾಹನ ಕಾಲದಲ್ಲಿ ಮೇಲುವರ್ಗದಲ್ಲಿ ರಾಜಮನೆತನದವರನ್ನು ಹೊರತುಪಡಿಸಿ ಶ್ರೀಮಂತ ವರ್ಗದವರು ಇದ್ದರು, ಮಧ್ಯಮ ವರ್ಗವಿರಲೇಬೇಕು, ಕೆಳವರ್ಗದವರು, ಸೇವಕ ವರ್ಗದವರೆಂದು ಸಮಾಜದಲ್ಲಿ ವರ್ಗ ನಿರ್ಮಾಣವಾಗಿತ್ತು. ಶ್ರೀಮಂತ

ದಂಪತಿಗಳಿಗೆ ಮದಿರಾ ಪಾತ್ರೆಯಿಂದ ಯಜಮಾನತಿ ಬಟ್ಟಲಿಗೆ ಪೇಯವನ್ನು ಹಾಕಲು ಸಿದ್ಧವಾಗಿರುವ ದೃಶ್ಯಗಳು ಸನ್ನತಿ ಕೆಲವು ಚಿತ್ರ ಫಲಕಗಳು, ಸ್ತಂಭಗಳ ಮೇಲಿವೆ. ಒಬ್ಬ ಸೇವಕಿ ಚಾಮರದಿಂದ ಗಾಳಿ ಬೀಸುತ್ತಿರುವ, ಮತ್ತೊಬ್ಬ ಸೇವಕಿ ತಂತುವಾದ್ಯ ಮೀಟುತ್ತಿರುವ ದೃಶ್ಯ ಇದೆ. ಪಾನಾಸಕ್ತ ಶ್ರೀಮಂತ ಕುಟುಂಬದ ಕೆಳಗೆ ಸೇವಕಿಯರ ಚಿತ್ರ ಸನ್ನತಿಯಲ್ಲಿದೆ (ಕರ್ನಾಟಕ ಚರಿತ್ರೆ ಸಂಪುಟ–೧, ಅ ಸುಂದರ, ಪುಟ ೩೦೯). ಸನ್ನತಿಯ ಸ್ತಂಭ ಪೇಟ–ಸ್ತಂಭದ ಮಾದರಿ ದೊರೆತಿದ್ದು, ಇದರ ಮೇಲಿನ ಶಾಸನವು ಬೌದ್ಧ ವರ್ಗಕ್ಕೆ ಸೇರಿದ ನಡಿಯ ಗುಡ ಎಂಬುವನ ಪುತ್ರಿ ಹಾಗೂ ನರ್ತಕಿ ಗೋವಿದಾಸಿ ಅಲ್ಲಿಯ ಮಹಾಸ್ತೂಪದ ಪ್ರಕಾರ ನಿರ್ಮಾಣಕ್ಕೆ ದಾನ ಮಾಡಿದ್ದಾಳೆ ಹಾಗೂ ನರ್ತಕಿ ಆರ್ಯವಾಸಿ, ಮತ್ತು ನಟಿ ವಾಲುಕಿಯರು ಉನ್ನತದ್ವಾರ ಮತ್ತು ಸಭಾಂಗಣ ಕಟ್ಟಿಸಿದರೆಂದಿದೆ (ಮಾರ್ಯ ಶಾತವಾಹನ ಯುಗ, ಲಕ್ಷ್ಮಣ್ ತೆಲಗಾವಿ, ಪುಟ ೧೧೬). ಅಂದರೆ ಸಮಾಜದಲ್ಲಿ ಮೇಲ್ ವರ್ಗದವರ ಸೇವೆಗೆ ಒಂದು ದಾಸೀವರ್ಗದವರಿದ್ದರು, ಮತ್ತು ಅವರು ಬಯಸುವ ಮನರಂಜನೆಗೆ ಸಂಗೀತ ನೃತ್ಯ ಸೇವೆ ಮಾಡುವ ಒಂದು ವರ್ಗವಿತ್ತೆಂಬುದು ಖಚಿತವಾಗುತ್ತದೆ.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ನೃತ್ಯ ಮಾಡುವ ಗಣಿಕೆಯರ ವಿಚಾರ ಮತ್ತು ವೇಶ್ಯೆಯರ ವಿಚಾರಗಳು ಸ್ಪಷ್ಟವಾಗಿ ಉಲ್ಲೇಖವಾಗಿವೆ. ಇವೆಲ್ಲ ಜಾರಿಯಲ್ಲಿದ್ದ ಆಧಾರಗಳಾಗಿವೆ.

Has obliged us by preserving a demonstration fo the manner in the Saranath danceruse might have put on drawers, A ladies orchestrar and dance from paways (204) shows a tall lanky lady dancing dress in such drowers. (INDIAN COSTUME, writin by G.S. Ghurye, figure 204)

ನೃತ್ಯ ಮಾಡುವವರ ಬಗ್ಗೆ ಮಾತ್ರ ಮಾಹಿತಿ ದೊರಕುವುದಿಲ್ಲ, ಅವರ ಉಡುಗೆಗಳ ಕುರಿತು ಮಾಹಿತಿ ನೀಡುವ ಪ್ರತ್ಯಕ್ಷ ಶಿಲ್ಪ ಆಧಾರಗಳಾಗಿವೆ.

ಪ್ರಾಚೀನ ಕಾಲಕ್ಕೆ ಸೇರಿದ ಇಂಥಹದೇ ಹಲವಾರು ಆಧಾರಗಳು ನಮಗೆ ದೊರೆಯುತ್ತವೆ. ಈ ಮೇಲೆ ಉಲ್ಲೇಖಿಸಿದ ಇಂಡಿಯನ್ ಕಾಸ್ಟ್ಯೂಮ್ ಗ್ರಂಥದ ಚಿತ್ರ ೭೩ರಲ್ಲಿ ಸ್ತ್ರೀಯರು ಗುಂಪಾಗಿ ನೃತ್ಯ ಮಾಡುತ್ತಿದ್ದು ಅದರಲ್ಲಿ ಕೆಲವರು ಕುಳಿತಿದ್ದು ಕೆಲವರು ನೃತ್ಯ ಮಾಡುವ ದೃಶ್ಯಗಳು ದೊರೆಯುತ್ತವೆ. ಅವರ ಉಡುಗೆಗಳ ಬಗ್ಗೆ ಉಲ್ಲೇಖಿಸುವುದಾದರೆ ಗೃಹಿಣಿಯರಾಗಲಿ ಅಥವಾ ಮೇಲ್ವರ್ಗದವರು ಧರಿಸುವ ಉಡುಗೆಗಳಂತೆ ತೋರುವುದಿಲ್ಲ. ಹಾಗೆ ಶಿಲ್ಪ ೫೯ರಲ್ಲಿ ನೃತ್ಯ ಮಾಡುವ ಒಬ್ಬ ಸ್ತ್ರೀ ಶಿಲ್ಪವಿರುವುದು. ಹಾಗೆ ೨೦೪ರಲ್ಲಿ ಜಾನಪದ ನೃತ್ಯ ಮಾಡುವ ಸ್ತ್ರೀಯರ ದೃಶ್ಯವಿದ್ದು ಅದರಲ್ಲೇ ಕೆಲವರು ವಿವಿಧ ವಾದ್ಯಗಳನ್ನು ನುಡಿಸುತ್ತಿರುವ ಹಾಗೆ ಕಾಣಿಸುತ್ತದೆ. (INDIAN COSTUME, G.S. Ghurye)

ಆರ್ಯರು ಸೆರೆ ಹಿಡಿದು ತರುತ್ತಿದ್ದ ದಸ್ಯು ಎಂದು ಉಲ್ಲೇಖಿತವಾಗುವ ಈ ದಾಸೀ ಸಂಪ್ರದಾಯದಂತೆ, ದಕ್ಷಿಣದಲ್ಲಿ ಸೇವಕ ವರ್ಗವನ್ನು ಹುಟ್ಟುಹಾಕಿ ಅವರಿಗೆ ದಾಸಿಯರೆಂದು ಉಲ್ಲೇಖಿಸಿರಬಹುದು. ಇವೆಲ್ಲ ಅಂಶಗಳನ್ನು ನಾವು ಗಮನಿಸಿದಾಗ ಇಲ್ಲೆಲ್ಲೋ ತನ್ನದಲ್ಲದ ಸಂಸ್ಕೃತಿಗೆ ದ್ರಾವಿಡರು ಮಾರು ಹೋದಂತಿದೆ ಅಥವಾ ಅದರ ಪ್ರಭಾವಕ್ಕೆ ಒಳಗಾದಂತಿದೆ, ಈ ರೀತಿ ಪಾನಮತ್ತ ವಿಲಾಸಿ ಜೀವನ ಮಾಡುತ್ತಿದ್ದವರಾದರೂ ಯಾರು? ಅವರೆಲ್ಲ ಶ್ರೀಮಂತ ಕುಟುಂಬದವರು. ಆದರೂ ಇವರ ಈ ರೀತಿ ಜೀವನ ಮತ್ತೊಂದು ಶೋಷಿತ (ದಾಸಿ) ವರ್ಗವನ್ನು ಹುಟ್ಟು ಹಾಕಿತು. ಇದಕ್ಕೆಲ್ಲ ಅವರ ವಿದೇಶಿ ವ್ಯಾಪಾರದಿಂದ ಬಂದ ಹಣ, ಅದರ ಜೊತೆಗೆ ಉಚಿತವಾಗಿ ಬಂದ ಅವರ ಸಂಸ್ಕೃತಿ ಕೂಡ ಇರಬಹುದು. ಹಾಗೇ ಇದಕ್ಕಿಂತ ಮೊದಲು ಇದ್ದ ಉತ್ತರದ ರಾಜ್ಯಗಳ ಹಿಡಿತ ಮತ್ತು ಅವರ ಪ್ರಭಾವವೂ ಇರಬಹುದು.

ಸಮಾಜದ ಗತಿಚಲನೆಯಲಿ ಸ್ತ್ರೀಯರ ಬಗ್ಗೆ ಅಧ್ಯಯನ ಮಾಡುವಾಗ ನೃತ್ಯವನ್ನು ವೃತ್ತಿಯನ್ನಾಗಿ ಮಾಡಿಕೊಂಡಿದ್ದ ನರ್ತಕಿಯರ ಬಗ್ಗೆಯೂ ಉಲ್ಲೇಖವಿದ್ದು ಅವರ ವಿಷಯವನ್ನು ದೇವಾಲಯಕ್ಕೆ ಸಂಬಂಧಪಟ್ಟಂತೆ ಮಾಹಿತಿ ದಾಖಲಿಸುವ ಸಂದರ್ಭದಲ್ಲಿ ದಾಖಲಿಸಿದೆ. ಇವರು ಹತ್ತನೆ ಶತಮಾನದಿಂದ ಹದಿನೈದನೆ ಶತಮಾನದವರೆಗೆ ಬರುವ ಪಾತ್ರ ಅಥವಾ ಪಾತರದವರಿದ್ದಂತೆ. ಶಾತವಾಹನ ಕಾಲದಲ್ಲಿ ನೃತ್ಯಗಾರ್ತಿಯರಿದ್ದ ಬಗ್ಗೆ ಮಾಹಿತಿ ಇದೆ. ಈ ಕಾಲದಲ್ಲಿ ಇವರು ಬರೀ ನೃತ್ಯಗಾತಿಯರು ಮಾತ್ರ ಆಗಿದ್ದರು. ಇವರು ಆರ್ಥಿಕವಾಗಿ ಬಲಿಷ್ಠರಾಗಿದ್ದು ಉತ್ತಮ ಸ್ಥಾನ ಮತ್ತು ಗೌರವವನ್ನು ಹೊಂದಿದ್ದರೆನಿಸುತ್ತದೆ. ಇವರ ಸ್ಥಾನ ಮತ್ತು ಗೌರವಗಳು ಬಾದಾಮಿ ಚಾಲುಕ್ಯರ ಅಧಿಕಾರದ ಅವಧಿವರೆಗೂ ಹಾಗೇ ಮುಂದುವರಿದು ನಂತರದ ಕಾಲದಲ್ಲಿ ಇವರಿಗೂ, ವೇಶ್ಯೆಯರಿಗೂ, ದಾಸಿಯರಿಗೂ ರಾಜಪ್ರಭುತ್ವ ಮತ್ತು ಪುರೋಹಿತಶಾಹಿಗಳ ಕೈಯಲ್ಲಿ ವ್ಯತ್ಯಾಸವಿಲ್ಲದೆ, ವಿಜಯನಗರ ಸಾಮ್ರಾಜ್ಯದ ಆಳ್ವಿಕೆ ಕಾಲಕ್ಕೆ ಸರಿಪಡಿಸಲಾಗದ ಹೀನ ಸ್ಥಿತಿಯನ್ನು ತಲುಪಿತು. ಇವೆಲ್ಲ ಕಾಲದ ಗತಿಯಲ್ಲಿ ಪುರುಷ ಹಿತಾಸಕ್ತಿಗೆ ತಕ್ಕಂತೆ ಸಮಾಜ ಸಂರಚನೆಯಾದ ಬಗೆಯಾಗಿದೆ.

ಕುಟುಂಬದಲ್ಲಿ ಯಜಮಾನ ಗೃಹಪತಿಯಾಗಿದ್ದರೆ, ಆತನ ಪತ್ನಿಯನ್ನು ಗೃಹಿಣಿ ಎಂದು ಉಲ್ಲೇಖಿಸಲಾಗಿದೆ, ಬರಹದಲ್ಲಿ ಗೃಹಿಣಿ ಸಿಹಾಡಿ ಮತ್ತು ಹೇಮಾನಂದ ಎಂದು ದಾಖಲಿಸಲಾಗಿದೆ. ಅಹಿಮಾರಿಕಾದ ಗೃಹಿಣಿ ಎಂದಷ್ಟೇ ಇದೆ. ಶಾಸನೋಕ್ತವಾಗಿ ಸಮಯಾ, ಯಖಾ ಇವರೀರ್ವರು ಗೃಹಿಣಿಯರು, ಗೃಹಪತಿ ಸೂಲ ಎಂಬುವನ ಹೆಸರಿದೆ (ಮೌರ್ಯ ಮತ್ತು ಶಾತವಾಹನ ಯುಗ, ಲಕ್ಷ್ಮಣ್ ತೆಲಗಾವಿ, ಪುಟ ೧೬೬). ಇಲ್ಲಿ ಗೃಹಿಣಿ ಕುಟಂಬದ ಪಾಲಕಿ, ಪೋಷಕಿಯಾಗಿ ಜವಾಬ್ದಾರಿ ನಿರ್ವಹಿಸುತ್ತಿದ್ದಳು, ಇವರು ಶಾಸನದಲ್ಲಿ ಉಕ್ತವಾಗಿರುವುದಕ್ಕೆ ಅವರು ಸಮಾಜದ ಉಳಿದ ಗೃಹಿಣಿಯರಿಗಿಂತ ಮಿಗಿಲಾದ ತ್ಯಾಗ, ಅಥವಾ ಏನಾದರೂ ಸಾಧನೆ ಮಾಡಿದವರಾಗಿದ್ದರೆ ಮಾತ್ರ ಅವರ ಹೆಸರು ಸಮೇತ ಉಲ್ಲೇಖಿತವಾಗಲೂ ಸಾಧ್ಯ, ಶಾತವಾಹನ ಕಾಲದಲ್ಲಿ ಗಂಡಸರು ಹಲವು ಪತ್ನಿಯರನ್ನು ಹೊಂದಿದ್ದರ ಬಗ್ಗೆ ಆಧಾರಗಳು ದೊರಕದೇ ಹೋದರು,

ಬಹುಪತ್ನಿತ್ವ ಜಾರಿ ಇರುವುದನ್ನು ಅಲ್ಲಗಳೆಯುವಂತಿಲ್ಲ, ರಾಜರು ಅನೇಕ ರಾಣಿಯರನ್ನು ಹೊಂದುವುದು ಸಹಜವಾಗಿತ್ತು. ಗೌತಮಿ ಪುತ್ರ ಶಾತಕರ್ಣಿ ಅಂತ್ಯದ ಕಾಲದಲ್ಲಿ ಆತನ ಸುತ್ತಲೂ ಕುಳಿತ ಸ್ತ್ರೀಯರು ಸಾಮಾನ್ಯ ಹೆಣ್ಣುಮಕ್ಕಳೆಂದು ಹೇಳುವಂತಿಲ್ಲ, ಅವರ ಅರಮನೆಯ ಅಲಂಕಾರಿಕ ಉಡುಗೆಗಳು ವಿವಿಧ ಭಂಗಿಗಳಲ್ಲಿ ಕುಳಿತಿರುವ ಅವರೆಲ್ಲ ಪತ್ನಿಯರೆ ಇರಬಹುದು. ರಾಜರ ರಾಜಕೀಯ ವಿಚಾರಗಳು ಶಾಸನದಲ್ಲಿ ದಾಖಲಾಗುವುದು ಸಾಮಾನ್ಯವಾಗಿತ್ತು. ಹಾಗಾಗಿ ಅವರು ಬಹುಪತ್ನಿಯರನ್ನು ಹೊಂದಿದ್ದರೆನ್ನುವುದಕ್ಕೆ ಆಧಾರಗಳು ದೊರೆಯುತ್ತವೆ. ಅದೇ ಸಾಮಾನ್ಯರ ವಿಚಾರಕ್ಕೆ ಬಂದರೆ ಹಾಗಾಗುವುದಿಲ್ಲ. ಅವರ ಯಾವುದೇ ವಿಷಯಗಳು ಮುಖ್ಯವಲ್ಲದ ಕಾರಣಕ್ಕೆ ದಾಖಲಾಗುವುದಿಲ್ಲ. ಮಾಹಿತಿ ದೊರಕುವುದಿಲ್ಲ, ಹಾಗೆಂದು ಸಾಮಾನ್ಯರು ಬಹುಪತ್ನಿಯರನ್ನು ಹೊಂದುವುದರ ಬಗ್ಗೆ ಅಲ್ಲಗಳೆಯುವಂತಿಲ್ಲ. ಏಕೆಂದರೆ ಒಂದು ಸಣ್ಣ ಕಾರಣ ಸಾಕಾಗಿತ್ತು ಮತ್ತೊಂದು ವಿವಾಹಕ್ಕೆ, ಅದಕ್ಕೆ ಪುಷ್ಟಿಯಾಗಿ ನಿಂತಿದ್ದು ಶಾಸ್ತ್ರ ಗ್ರಂಥಗಳು.

ಶಾತವಾಹನರು ಇತಿಹಾಸದಲ್ಲಿ ಹಲವು ಕಾರಣಗಳಿಂದ ಪ್ರಧಾನವಾಗಿದ್ದಾರೆ, ದಕ್ಷಿಣದಲ್ಲಿ ಸ್ವತಂತ್ರ ಆಡಳಿತ ವ್ಯವಸ್ಥೆಗೆ ನಾಂದಿ ಹಾಡಿದರು. ಇವರು ಕರ್ನಾಟಕ ಆಂಧ್ರದ ಭಾಗಗಳಲ್ಲಿ ಆಡಳಿತ ನಿರ್ವಹಿಸಿದರು, ಇವರ ನಂತರ ದಕ್ಷಿಣದಲ್ಲಿ ದ್ರಾವಿಡ ಪ್ರಧಾನ ಭಾಷಾವಾರು ರಾಜ್ಯಗಳಾದ ಆಂಧ್ರ, ತಮಿಳುನಾಡು, ಕರ್ನಾಟಕದಲ್ಲಿ ಏಕಕಾಲಕ್ಕೆ ಹಲವಾರು ರಾಜಮನೆತನಗಳು ಆಡಳಿತ ಆರಂಭಿಸಿದರು, ಇದರಿಂದ ಅವರದೇ ಆದ ಪ್ರತ್ಯೇಕ ಸಂಸ್ಕೃತಿಗಳು ಆಚರಣೆಯಲ್ಲಿ ಜಾರಿ ಬಂದವು. ಹಾಗಾಗಿ ಶಾತವಾಹನ ಕಾಲಾವಧಿಯ ಅಧ್ಯಯನ ಹಲವಾರು ಕಾರಣಗಳಿಂದ ಬಹು ಮುಖ್ಯವೆನಿಸುತ್ತದೆ, ಏಕೆಂದರೆ ಇದು ಅನ್ಯ ಸಂಸ್ಕೃತಿ ಮತ್ತು ಪ್ರಭಾವದ ಮಧ್ಯೆ ಮೂಲ ದ್ರಾವಿಡ ಸಂಸ್ಕೃತಿಯನ್ನು ಗುರುತಿಸುವ ಪ್ರಮುಖ ಕಾಲಘಟ್ಟವಾಗಿದೆ.

ಆಧಾರ ಗ್ರಂಥಗಳು

೧. ಕರ್ನಾಟಕ ಪರಂಪರೆ, (ಆದಿಕಾಲ) ಸಂಪುಟ–೧, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

೨. ಚರಿತ್ರೆಯ ಸಂಪುಟ ೧, ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೩. ಮೌರ್ಯ ಶಾತವಾಹನ ಯುಗ, ಲಕ್ಷ್ಮಣ ತೆಲಗಾವಿ.

೪. Indian costume, G.S. Ghurye, Popular Prakashan, Bombay.

ಈ ಸಂಚಿಕೆಯ ಲೇಖಕರು

* **ಸೀತಾರಾಮ ಜಾಗೀರ್‌ದಾರ್**, ೪೦೬/ಬಿ.೧, 'ಕಲ್ಪ', ೩ನೇ ಮೇನ್, ೭ನೇ ಕ್ರಾಸ್, ಸರಸ್ವತಿಪುರಂ, ಮೈಸೂರು-೫೭೦೦೦೯ ದೂ : ೦೮೨೧-೨೫೪೬೨೭೩
* **ಎಸ್. ಬಿಳಿಗಿರಿ ವಾಸನ್**, # ೭೮ 'ಶ್ರೀ ಶ್ವೇತಾದ್ರಿ', ನ್ಯಾನಪ್ಪನ ಹಳ್ಳಿ, ಬೇಗೂರು ಹೋಬಳಿ, ಡಿ.ಎಲ್.ಎಫ್. ಟೌನ್ ಹತ್ತಿರ, ಬೆಂಗಳೂರು-೫೬೦೦೬೮. ದೂ: ೦೮೨೧-೦೨೫೪೬೨೭೩
* **ಡಾ. ಸುರೇಶ ಪಾಟೀಲ**, # ೩/೧೮೭, ನೇಸರ, ಗಟ್ಟಿಗೆರೆ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-೯೮. ದೂ: ೯೪೪೮೭೦೦೩೧೫
* **ಡಾ. ವೀರೇಶ ಬಡಿಗೇರ**, ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೯೩೨೭೬.
* **ಡಾ. ಪ್ರಮೀಳಾ ಮಾಧವ್**, ಶ್ರೀಸದನ, ೮೮/ಎ, ವಿಠ್ಠಲ್ ನಗರ, ಬೆಂಗಳೂರು-೫೬೦೦೭೮. ದೂ: ೯೮೪೫೯೨೧೬೧೦
* **ಡಾ. ಎಂ.ಜಿ. ವಾರಿ**, ಚಾಲುಕ್ಯನಗರ, ೫ನೇ ತಿರುವು, ಬಾದಾಮಿ-೫೮೭೨೦೧. ಜಿ. ಬಾಗಲಕೋಟೆ. ದೂ: ೯೮೪೪೬೬೨೪೨೯
* **ಬಸವರಾಜ ಕೋಡಗುಂಟಿ**, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಟಿ, ಕಲಬುರಗಿ-೫೮೩೩೬೭. ದೂ: ೯೯೧೬೦೫೩೦೫೭
* **ಶಿವಲಿಂಗಪ್ಪ.ಸಿ. ಬಸವಣ್ಣೋರ್**, ಸಂಶೋಧನಾ ವಿದ್ಯಾರ್ಥಿ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕನ್ನಡ ವಿಭಾಗ, ಕಡಗಂಚಿ, ಕಲ್ಬುರ್ಗಿ-೫೮೫೧೦೬ ದೂ: ೮೮೮೪೭೧೯೫೩೫
* **ಡಾ. ಅಪ್ಪಣ್ಣ ಎನ್. ಹಂಜೆ**, ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಕೈಗಾರಿಕಾ ಪ್ರದೇಶ, ನಾಗಸಮುದ್ರ ರಸ್ತೆ, ಗದಗ-೫೮೨೧೦೨. ದೂ: ೯೮೮೬೫೯೨೯೨೭
* **ಡಾ. ಕೆಳದಿ ವೆಂಕಟೇಶ್ ಜೋಯಿಸ್**, ಕ್ಯೂರೇಟರ್, ಕೆಳದಿ ವಸ್ತುಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನ ಕೇಂದ್ರ, ಸಾಗರ ತಾಲ್ಲೂಕು, ಕೆಳದಿ-೫೭೭೪೦೧.
* **ಗುರುಮೂರ್ತಿ ಪೆಂಡಕೂರು**, ಬಾಲಾಜಿ ಎಲೈಟ್, ೨೪ನೇ ಮುಖ್ಯರಸ್ತೆ, ಹೆಚ್.ಎಸ್.ಆರ್. ಬಡಾವಣೆ, ಸೆಕ್ಟರ್ ೨, ಪರಂಗಿಪಾಳ್ಯ, ಬೆಂಗಳೂರು-೫೪೦೧೦೨. ದೂ: ೯೬೧೧೨೧೩೫೮೪
* **ಶೋಭನಾ ಸಿಡಗನಾಳ್**, ಪಿಎಚ್‌ಡಿ., ಸಂಶೋಧನಾ ವಿದ್ಯಾರ್ಥಿ, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ. ದೂ: ೯೮೪೪೮೭೦೫೩೫

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

'ಕನ್ನಡದ ಕಣ್ವ' ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರು ಹೊಸಗನ್ನಡದ ಯುಗಪುರುಷರು; ಇಂತಹ ಆಚಾರ್ಯಪುರುಷರ ಹೆಸರಿನ ಈ ಸಂಸ್ಥೆ ಸೃಜನ ಮತ್ತು ಸಂಶೋಧನ ಎರಡೂ ಸಾಹಿತ್ಯ ಕ್ಷೇತ್ರಗಳಲ್ಲಿ ದುಡಿಯುತ್ತಿದೆ. ಒಂದು, ಪ್ರಾಚೀನ ಸಾಹಿತ್ಯದ ಪರಿಷ್ಕರಣ; ಇನ್ನೊಂದು, ಆಧುನಿಕ ಸಾಹಿತ್ಯದ ಪುರಸ್ಕರಣ. ಈ ಸಂಸ್ಥೆಯನ್ನು ೧೯೭೯ರಲ್ಲಿ ಪ್ರೊ. ಎಂ.ವಿ. ಸೀತಾರಾಮಯ್ಯನವರು ಸ್ಥಾಪಿಸಿದ್ದು, ಇದು ಯಶಸ್ವೀ ಮೂವತ್ತನಾಲ್ಕು ವರ್ಷಗಳನ್ನು ಪೂರೈಸಿ ೨೦೦೪ರಲ್ಲಿ ರಜತೋತ್ಸವವನ್ನು ಆಚರಿಸಿದೆ.

ಈಗಾಗಲೇ ಈ ಸಂಸ್ಥೆಯು ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದೆ. ಕರ್ನಾಟಕದಲ್ಲಿ ಸಂಶೋಧನೆ ಮತ್ತು ಪಾಂಡಿತ್ಯ ಸಂವರ್ಧನೆಗಳಿಗೆ ಮೀಸಲಾದ ಪ್ರತಿಷ್ಠಿತ ಸಂಶೋಧನಾ ಕೇಂದ್ರವಾಗಿದೆ. ಈವರೆಗೆ ಸುಮಾರು ೧೮೫ ಗ್ರಂಥಗಳನ್ನು ಹೊರತಂದಿದೆ. ಸಂಶೋಧನ ಕಾರ್ಯಕ್ಕೆ ಅನುಕೂಲವಾಗುವಂತೆ ಹದಿನೈದು ಸಾವಿರಕ್ಕೂ ಅಧಿಕ ಅಮೂಲ್ಯ ಗ್ರಂಥಗಳ ಆಕರಗ್ರಂಥಾಲಯವನ್ನೂ ಸುಮಾರು ಒಂದು ಸಾವಿರಕ್ಕೂ ಅಧಿಕ ಪ್ರಾಚೀನ ಓಲೆಗರಿ ಗ್ರಂಥಗಳ ಹಸ್ತಪ್ರತಿ ಭಂಡಾರವನ್ನೂ ಹೊಂದಿರುವ ಪ್ರತಿಷ್ಠಾನ, ಸದಸ್ಯರು, ಉದಾರ ದಾನಿಗಳು ಮತ್ತು ಅಭಿಮಾನಿಗಳಿಂದಲೇ ಬೆಳೆಯುತ್ತಿದೆ.

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿರುವ ಸ್ನಾತಕೋತ್ತರ ಸಂಶೋಧನ ಕೇಂದ್ರವಾಗಿರುವ ಪ್ರತಿಷ್ಠಾನದಲ್ಲಿ ಗಣ್ಯ ವಿದ್ವಾಂಸರ ಮಾರ್ಗದರ್ಶನದಲ್ಲಿ ಅನೇಕರು ಪಿಎಚ್.ಡಿ. ಪದವಿ ಮತ್ತು ಎಂ.ಫಿಲ್. ಪದವಿ ಪಡೆದಿರುತ್ತಾರೆ. ನುರಿತ ಮಾರ್ಗದರ್ಶಕರ ಸಹಕಾರದಿಂದ ಈ ಅಧ್ಯಯನ ಕೇಂದ್ರವನ್ನು ನಡೆಸಲಾಗುತ್ತಿದೆ.

ರಾಷ್ಟ್ರೀಯ ಹಸ್ತಪ್ರತಿ ಮಿಷನ್‌ನ ಮಾನ್ಯತೆಯ ಕೇಂದ್ರ

ರಾಷ್ಟ್ರೀಯ ಹಸ್ತಪ್ರತಿ ಮಿಷನ್‌ನಿಂದ ಮಾನ್ಯತೆ ಪಡೆದಿರುವ ಪ್ರತಿಷ್ಠಾನವು ರಾಷ್ಟ್ರದ ಪ್ರತಿಷ್ಠಿತ ಹಸ್ತಪ್ರತಿ ಅಧ್ಯಯನ ಕೇಂದ್ರವಾಗಿದ್ದು ಅಮೂಲ್ಯ ಓಲೆಗರಿ ಗ್ರಂಥಗಳು, ಕಾಗದಪತ್ರಗಳು, ನಮ್ಮ ತಲೆಮಾರಿನ ಸಾಹಿತಿ-ಗಣ್ಯರ ಪತ್ರಗಳು ಮತ್ತು ಹಸ್ತಪ್ರತಿಗಳನ್ನು ಸಂರಕ್ಷಿಸುತ್ತ ನಾಡಿನ ಆಸ್ತಿಯನ್ನು ಉಳಿಸಲು ಶ್ರಮಿಸುತ್ತಿರುವ ಸೇವಾಸಂಸ್ಥೆಯಾಗಿದೆ.

ಬಿ.ಎಂ.ಶ್ರೀ. ಕಲಾಭವನ

ಮೂರು ಮಹಡಿಗಳ ಭವ್ಯ ಬಿ.ಎಂ.ಶ್ರೀ. ಕಲಾಭವನವನ್ನು ಸಂಸದರ ನಿಧಿ ಮತ್ತು ದಾನಿಗಳ ನೆರವಿನಿಂದ ಕಟ್ಟಲಾಗಿದೆ. 'ಎಂ.ವಿ.ಸೀ. ಸಭಾಂಗಣ', ಗ್ರಂಥಾಲಯ, ವಸ್ತು-ಹಸ್ತಪ್ರತಿ ಸಂಗ್ರಹಾಲಯ, ಉಪನ್ಯಾಸ ಕೊಠಡಿಗಳು ನಿರ್ಮಾಣವಾಗಿವೆ.

ಚಟುವಟಿಕೆಗಳು

'ಕರ್ನಾಟಕ ಲೋಚನ' ವಿದ್ವತ್ ಪತ್ರಿಕೆ ಹಾಗೂ 'ಹೊಂಗನಸು' ವಾರ್ತಾಪತ್ರದ ಪ್ರಕಟಣೆ, ಸಹೃದಯ ಗೋಷ್ಠಿಯ ಆಯೋಜನೆ, ಹಸ್ತಪ್ರತಿ ಶಾಸ್ತ್ರ ಮತ್ತು ಹಸ್ತಪ್ರತಿ ಅಧ್ಯಯನ ತರಗತಿಗಳು, ಹಸ್ತಪ್ರತಿ ಸಮಾವೇಶ, 'ಸಿರಿಕಂಟ' ವಿದ್ಯಾರ್ಥಿಗೋಷ್ಠಿ, ಹಳಗನ್ನಡ ಕಾವ್ಯಾಭ್ಯಾಸ ಶಿಬಿರ ಮೊದಲಾದುವು ಪ್ರತಿಷ್ಠಾನದ ಮುಖ್ಯ ಚಟುವಟಿಕೆಗಳಾಗಿವೆ.